ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದಿನಿಂದ ಭಾರತ-ಕಿವೀಸ್ ಹಣಾಹಣಿ

ಭಾರತ-ನ್ಯೂಜಿಲೆಂಡ್ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಪಂದ್ಯ ಇಂದು ವಡೋದರದಲ್ಲಿ ನಡೆಯಲಿದೆ. ಶುಭ್‌ಮನ್ ಗಿಲ್ ಟೀಮ್ ಇಂಡಿಯಾವನ್ನು, ಮೈಕಲ್ ಬ್ರೇಸ್‌ವೆಲ್ ಕಿವೀಸ್ ತಂಡವನ್ನು ಮುನ್ನಡೆಸಲಿದ್ದಾರೆ. ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಏಕದಿನ ಸರಣಿಯ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಸೊಂಪಾದ ಪುಟಗಳು

ಮರುಭೂಮಿಯಲ್ಲೂ ಮೀನುಗಾರಿಕೆ: ಇದು ಇಸ್ರೇಲ್ ಮಾದರಿ
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್ 6

ದಿನರಾತ್ರಿಯಲಿ ಏಕಾಂತದಲಿ ಏಕೋ ಹೇನೋ ನೋವಾಗುವುದು
ತಿಳಿರು ತೋರಣ
ಶ್ರೀವತ್ಸ ಜೋಶಿ 7

ದಾರಿದೀಪೋಕ್ತಿ

ಸೋಲು ಮತ್ತು ಸವಾಲುಗಳು ಬದುಕಿನ ಅಂತ್ಯವಲ್ಲ, ಅವು ನಿಮ್ಮೊಳಗಿನ ಶಕ್ತಿಯನ್ನು ಪರೀಕ್ಷಿಸುವ ಮೈಲಿಗಲ್ಲುಗಳು ಮಾತ್ರ. ನೀವು ಹಾಕುವ ಪ್ರತಿ ಹೆಜ್ಜೆಯೂ ಆತ್ಮವಿಶ್ವಾಸದಿಂದ ಕೂಡಿದ್ದರೆ, ಮರುಭೂಮಿಯಂಥ ಬದುಕಿನಲ್ಲೂ ಯಶಸ್ಸಿನ ನಂದನವನವನ್ನು ಸೃಷ್ಟಿಸಬಹುದು.

ವಕ್ರತುಂಡೋಕ್ತಿ

ಮೇಕಪ್ ಎನ್ನುವುದು ಮಣ್ಣಿನ ಗೋಡೆಗೆ ಸುಣ್ಣ ಬಳಿದಂತೆ. ಎಲ್ಲಿಯವರೆಗೆ ಮಳೆ ಬರುವುದಿಲ್ಲವೋ ಅಲ್ಲಿಯವರೆಗೆ ಎಲ್ಲವೂ ಚೆಂದವೇ.

ಖಮೇನಿ ಸರಕಾರದ ವಿರುದ್ಧ 14ನೇ ದಿನಕ್ಕೆ ಕಾಲಿಟ್ಟ ಜೆನ್‌ಜಿ ಹೋರಾಟ

ಇರಾನ್‌ನಲ್ಲಿ ಪ್ರತಿಭಟನೆ ತಾರಕಕ್ಕೆ: 220 ಜನ ಬಲಿ

ಟೆಹರಾನ್: ಇಸ್ಲಾಮಿಕ್ ಗಣರಾಜ್ಯ ಇರಾನ್‌ನಲ್ಲಿ ಅಯತೊಲ್ಲಾ ಖಮೇನಿ ಸರಕಾರದ ವಿರುದ್ಧ ಯುವ ಸಮೂಹ ನಡೆಸುತ್ತಿರುವ ಪ್ರತಿಭಟನೆ 14ನೇ ದಿನಕ್ಕೆ ಕಾಲಿಟ್ಟಿದ್ದು, ಹಿಂಸಾಚಾರಕ್ಕೆ 220ಕ್ಕೂ ಹೆಚ್ಚು ಮಂದಿ ಬಲಿಯಾಗಿದ್ದಾರೆ.

ಪ್ರತಿಭಟನೆಯನ್ನು ಹತ್ತಿಕ್ಕಲು ಸರಕಾರದ ಸೂಚನೆ ಮೇರೆಗೆ ಭದ್ರತಾಪಡೆಗಳು ಹಲವು ಸ್ಥಳಗಳಲ್ಲಿ ಗುಂಡು ಹಾರಿಸಿದ್ದು, ನೂರಾರು ಮಂದಿ ಸಾವನ್ನಪ್ಪಿದ್ದಾರೆ. ರಾಜಧಾನಿ ಟೆಹರಾನ್‌ನಲ್ಲಿರುವ ಆರು ಆಸ್ಪತ್ರೆಗಳಲ್ಲಿ ಕನಿಷ್ಠ 220 ಪ್ರತಿಭಟನಾಕಾರರು ಸಾವನ್ನಪ್ಪಿದ್ದಾರೆ. ಉತ್ತರ ಟೆಹರಾನ್‌ನಲ್ಲಿ ಪ್ರತಿಭಟನೆ ನಡೆಸು ತ್ತಿದ್ದ ಜೆನ್‌ಜಿ ಸಮೂಹದ ಮೇಲೆ ಏಕಾಏಕಿ ಗುಂಡಿನ ಮಳೆಗರೆದಿದ್ದು, 30ಕ್ಕೂ ಹೆಚ್ಚು ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಖಮೇನಿ ಸರ್ಕಾರದ ವಿರುದ್ಧ 2025ರ ಡಿ.28 ರಂದು ಆರಂಭವಾದ ಪ್ರತಿಭಟನೆಗಳು ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ದೇಶಾದ್ಯಂತ ಇಂಟರ್‌ನೆಟ್ ಮತ್ತು ಫೋನ್ ಸಂಪರ್ಕ ಗಳನ್ನು ಸ್ಥಗಿತಗೊಳಿಸಲಾಗಿದೆ. ಇರಾನ್‌ನಿಂದ ಗಡಿಪಾರು ಆಗಿ ರುವ ಯುವರಾಜ ರೇಜಾ ಪಹ್ಲವಿ, ಶುಕ್ರವಾರ ಸಾಮೂಹಿಕ ಪ್ರತಿಭಟನೆಗೆ ಕರೆ ನೀಡಿದ ಬೆನ್ನಲ್ಲೇ ತಡರಾತ್ರಿ ಟೆಹರಾನ್ ಮತ್ತು ಇತರ ನಗರಗಳಲ್ಲಿ ಸಾವಿರಾರು ಜನರು ಬೀದಿಗಿಳಿದು ಖಮೇನಿ ವಿರುದ್ಧ ಘೋಷಣೆ ಕೂಗಲಾರಂಭಿಸಿದ್ದಾರೆ. ''ಮುಲ್ಲಾಗಳೇ ದೇಶ ಬಿಟ್ಟು ತೊಲಗಿ'' ಎಂದು ಜನರು ಘೋಷಣೆ ಕೂಗಿ ಟೆಹರಾನ್‌ನಲ್ಲಿರುವ ಸರಕಾರಿ ಕಚೇರಿಗೆ ಬೆಂಕಿ ಹಾಕಿ ಆಕ್ರೋಶ ಹೊರಹಾಕಿದ್ದಾರೆ.

ಇಸ್ಲಾಮಿಕ್ ಗಣರಾಜ್ಯದ 47 ವರ್ಷಗಳ ಇತಿಹಾಸದಲ್ಲಿ ಅತಿ ದೊಡ್ಡ ಆಡಳಿತ ವಿರೋಧಿ ಪ್ರತಿಭಟನೆ ಇದಾಗಿದೆ. ಸಾವು-ನೋವಿನ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲ್ ಖಮೇನಿ, ಇಸ್ಲಾಮಿಕ್ ಗಣರಾಜ್ಯವು ದಂಗೆಕೋರರಿಗೆ ತಲೆಬಾಗುವುದಿಲ್ಲ ಎಂದು ಹೇಳಿಕೆ ನೀಡಿದ್ದಾರೆ.

''ನಿಮ್ಮ ದೇಶದ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿ, ಬೇರೆ ದೇಶಗಳ ಆಡಳಿತದಲ್ಲಿ ಕೈಹಾಕದಿರಿ'' ಎಂದು ಖಮೇನಿ, ಟ್ರಂಪ್‌ಗೆ ನೇರ ಎಚ್ಚರಿಕೆ ನೀಡಿದ್ದಾರೆ. → 4

ನೆಲ ಕಚ್ಚಿದ ರಿಯಾಲ್

ಇರಾನಿನ ಕರೆನ್ಸಿ ರಿಯಾಲ್ ನೆಲಕಚ್ಚಿದ್ದು, ಒಂದು ಅಮೆರಿಕನ್ ಡಾಲರ್ ಎದುರು ಇರಾನಿನ ರಿಯಾಲ್ ಮೌಲ್ಯ ಬರೋಬ್ಬರಿ 14.7 ಲಕ್ಷಕ್ಕೆ ಕುಸಿದಿದೆ.

ಹಿಂಸಾಗ್ರಸ್ತ ಟೆಹರಾನ್‌ನ ಒಂದು ದೃಶ್ಯ.

ಅಮೆರಿಕ ದಾಳಿಯ ಭೀತಿ

ಇರಾನ್ ಪ್ರತಿಭಟನಾಕಾರರನ್ನು ಹಿಂಸಾತ್ಮಕವಾಗಿ ಕೊಂದರೆ ಅಮೆರಿಕಾ ಮಧ್ಯಪ್ರವೇಶಿಸಿ ಅವರ ರಕ್ಷಣೆಗೆ ಮುಂದಾಗಲಿದೆ ಎಂದು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿಕೆಯನ್ನು ನೀಡಿದ್ದು, ಯುದ್ಧಕ್ಕೆ ಸಿದ್ಧ ಎಂಬ ಸಂದೇಶ ನೀಡಿದ್ದಾರೆ. ವೆನಿಜುವೆಲಾ ಮೇಲೆ ದಾಳಿ ನಡೆಸಿ ಇಡೀ ದೇಶದ ಚುಕ್ಕಾಣಿಯನ್ನು ವಶಕ್ಕೆ ಪಡೆದಂತೆ ಅಮೆರಿಕವು ಇರಾನ್ ಮೇಲೂ ದಾಳಿ ನಡೆಸುವ ಸಾಧ್ಯತೆ ಬಗ್ಗೆ ಚರ್ಚೆ ಆರಂಭವಾಗಿದೆ. ಇದಕ್ಕೆ ಕುಮ್ಮಕ್ಕು ಎಂಬಂತೆ ಗಡಿಪಾರಾಗಿ ಅಮೆರಿಕದಲ್ಲಿ ವಾಸ್ತವ್ಯದಲ್ಲಿರುವ ಇರಾನಿನ ಕೊನೆಯ ಅಧ್ಯಕ್ಷ ಶಾಹ್ ಮೊಹಮ್ಮದ್ ರೆಝಾ ಪಹ್ಲವಿ ಅವರ ಪುತ್ರ ರೆಝಾ ಪಹ್ಲವಿ,ಇರಾನ್‌ನಲ್ಲಿ ನಡೆಯುತ್ತಿರುವ ವ್ಯಾಪಕ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಅಮೆರಿಕ ತಕ್ಷಣ ಮಧ್ಯಪ್ರವೇಶಿಸಬೇಕೆಂದು ಮನವಿ ಮಾಡಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಟ್ರಂಪ್ ಅವರ ತುರ್ತು ಗಮನ, ಬೆಂಬಲ ಹಾಗೂ ಕ್ರಮಕ್ಕೆ ಮನವಿ ಮಾಡಿದ್ದಾರೆ. ರೆಝಾ ಪೋಸ್ಟ್ ಬೆನ್ನಿಗೇ ಇರಾನ್ ಪ್ರತಿಭಟನೆ ಮತ್ತಷ್ಟು ಹೆಚ್ಚಿದೆ.

ವಿಬಿ ಜಿ ರಾಮ್ ಜಿ ಕುರಿತ ಚರ್ಚೆಗೆ ಸಿದ್ಧ ಎಂದ ಬಿಜೆಪಿ, ಜೆಡಿಎಸ್

ವಿಶೇಷ ಅಧಿವೇಶನ ಮಿತ್ರಕೂಟ ಸ್ವಾಗತ

ಬೆಂಗಳೂರು: ಕೇಂದ್ರ ಸರಕಾರ ಜಾರಿಗೆ ತರುತ್ತಿರುವ ವಿಕಸಿತ್ ಭಾರತ್ - ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಮಸೂದೆ, 2025(ವಿಬಿ-ಜಿ ರಾಮ್ ಜಿ ಮಸೂದೆ) ಕುರಿತು ಚರ್ಚಿಸಲು ಎರಡು ದಿನಗಳ ವಿಶೇಷ ಅಧಿವೇಶನ ಕರೆದಿರುವ ರಾಜ್ಯ ಸರಕಾರದ ನಿರ್ಧಾರವನ್ನು ಸ್ವಾಗತಿಸಿರುವ ವಿರೋಧ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ , ಕಾಂಗ್ರೆಸ್ ಸರಕಾರದ ವಿರುದ್ಧ ಟೀಕಾ ಪ್ರಹಾರ ನಡೆಸಿದೆ.

ಖಾಸಗಿ ಹೊಟೇಲ್‌ನಲ್ಲಿ ನಡೆದ ಸಭೆಯ ನಂತರ ಜಂಟಿ ಸುದ್ದಿಗೋಷ್ಠಿಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ ವಿಜಯೇಂದ್ರ ಮಾತನಾಡಿ ವಿಬಿ-ಜಿ ರಾಮ್ ಜಿ ಕುರಿತು ಕಾಂಗ್ರೆಸ್ ಹಾಗೂ ರಾಜ್ಯ ಸರಕಾರ ಸುಳ್ಳು ಆರೋಪ ಮಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಕುರಿತು ವಿಶೇಷ ಅಧಿವೇಶನ ಕರೆಯಲು ಬಯಸಿದ್ದಾರೆ. ನಾವು ಈ ನಿರ್ಧಾರವನ್ನು ಸ್ವಾಗತಿಸುತ್ತೇವೆ ಎಂದು ಹೇಳಿದರು. ಯುಪಿಎ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವು ನರೇಗಾ ಮೂಲಕ ದೇಶಕ್ಕೆ ಏನು ಮಾಡಿದೆ ಮತ್ತು ಕಳೆದ 11 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಏನು ಮಾಡಿದೆ ಎಂಬುದನ್ನು ನಾವು ಸದನದಲ್ಲಿ ಚರ್ಚಿಸುತ್ತೇವೆ. ಕೆಲಸದ ದಿನಗಳ ಸಂಖ್ಯೆಯನ್ನು 100 ರಿಂದ 120 ದಿನಗಳಿಗೆ ಹೆಚ್ಚಿಸಿದಾಗ, ವ್ಯವಸ್ಥೆಯಲ್ಲಿ ಹೊಣೆಗಾರಿಕೆ ಇರಬೇಕು ಮತ್ತು ಹಣ ವ್ಯರ್ಥವಾಗಬಾರದು ಎಂದರು.

ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿ, ಕೇಂದ್ರವು ಗ್ರಾಮೀಣ ಜೀವನೋಪಾಯವನ್ನು ಬಲಪಡಿಸಲು ಮತ್ತು ಮೂಲಸೌಕರ್ಯವನ್ನು ಸುಧಾರಿಸಲು ನರೇಗಾ ಅನ್ನು ಪರಿಷ್ಕರಿಸಿದೆ. ಆದರೆ ಕಾಂಗ್ರೆಸ್ ಸುಧಾರಣಾಪರ ಕಲ್ಯಾಣ ಕಾಯಿದೆಯ ವಿರುದ್ಧ ಅಪಪ್ರಚಾರ ಮಾಡುತ್ತಿದೆ. ಪಾರದರ್ಶಕತೆ, ದಕ್ಷತೆ ಮತ್ತು ದೀರ್ಘಕಾಲೀನ ಪರಿಣಾಮವನ್ನು ತರಲು ವಿಬಿ ಜಿ ರಾಮ್ ಎಂದು ಮರುನಾಮಕರಣ ಮಾಡಲಾಗಿದೆ ಎಂದರು.

ಮೈತ್ರಿ ಸಮನ್ವಯ ಸಭೆ

ಸಭೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಸ್ಥಳೀಯ ಸಂಸ್ಥೆ ಮೈತ್ರಿಯ ಬಗ್ಗೆ ಗೊಂದಲ ಸೃಷ್ಟಿಯಾಗಿರುವ ಬಗ್ಗೆ ಚರ್ಚಿಸಲಾಗಿದೆ. ಈ ಗೊಂದಲವನ್ನು ಮೈತ್ರಿಯ ಉಸ್ತುವಾರಿ ವಹಿಸಿಕೊಂಡು ಬಿಜೆಪಿ-ಜೆಡಿಎಸ್ ನಾಯಕರನ್ನು ಒಗ್ಗೂಡಿಸಿ ಎಲ್ಲರನ್ನೂ ಕರೆದುಕೊಂಡು ಹೋಗುವ ಹೊಣೆಯನ್ನು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಅವರಿಗೆ ವಹಿಸಲಾಗಿದೆ. ಬಿಜೆಪಿ ಹೈಕಮಾಂಡ್ ಈಗ ಎರಡು ಪಕ್ಷಗಳ ನಡುವೆ ಸ್ಥಳೀಯ ಸಂಸ್ಥೆ ಚುನಾವಣಾ ಮೈತ್ರಿ ಗೊಂದಲ ಬಗೆಹರಿಸುವ ಹೊಣೆಯನ್ನು ಕುಮಾರಸ್ವಾಮಿ ಅವರಿಗೆ ವಹಿಸಿದೆ ಎನ್ನಲಾಗಿದೆ. ಸಭೆಯಲ್ಲಿ ಈ ಸಂಬಂಧ ಒಂದು ಹಂತದ ಚರ್ಚೆ ನಡೆದಿದ್ದು ಗೊಂದಲದ ಬಗ್ಗೆ ತಮ್ಮ ಪಕ್ಷದ ನಾಯಕರ ಜೊತೆಗೆ ಚರ್ಚಿಸಿ ಕುಮಾರಸ್ವಾಮಿ ಅವರು ಗೊಂದಲ ಬಗೆಹರಿಸಿ ಎರಡೂ ಪಕ್ಷಗಳ ಕಾರ್ಯಕರ್ತರಿಗೂ ಒಂದು ಸ್ಪಷ್ಟತೆ ನೀಡಬೇಕಾಗಿದೆ. ಸ್ಥಳೀಯ ಸಂಸ್ಥೆಗಳಲ್ಲೂ ಬಿಜೆಪಿ- ಜೆಡಿಎಸ್ ಮೈತ್ರಿ ಮುಂದುವರಿಸುವುದಾದರೇ, ಸೀಟು ಹಂಚಿಕೆಯ ಬಗ್ಗೆಯೂ ಮಾತುಕತೆ ನಡೆಸಿ ತೀರ್ಮಾನ ಕೈಗೊಳ್ಳಬೇಕಾಗಿದೆ.

ಬಾಂಗ್ಲಾದಲ್ಲಿ ವಿಷ ಕುಡಿಸಿ ಮತ್ತೊಬ್ಬ ವ್ಯಕ್ತಿಯ ಹತ್ಯೆ

ಢಾಕಾ: ಬಾಂಗ್ಲಾದೇಶದಲ್ಲಿ ಮತ್ತೊಬ್ಬ ಹಿಂದೂ ವ್ಯಕ್ತಿಯನ್ನು ಥಳಿಸಿ, ವಿಷ ಕುಡಿಸಿ ಕೊಲ್ಲಲಾಗಿದೆ.

ಗುರುವಾರ ಸುನಾಮಗಂಜ್ ಜಿಲ್ಲೆಯಲ್ಲಿ ಜಾಯ್ ಮಹಾಪಾತ್ರೋ ಎಂಬ ಹಿಂದೂ ಯುವಕನ ಮೇಲೆ ದಾಳಿ ಮಾಡಿದ್ದ ದುಷ್ಕರ್ಮಿಗಳು, ಥಳಿಸಿ ಆತನಿಗೆ ವಿಷ ಕುಡಿಸಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ ಆತ ಸಾವನ್ನಪ್ಪಿದ್ದಾನೆ.

ರೂರ್ಕೆಲಾ ಬಳಿ ಸಣ್ಣ ವಿಮಾನ ಪತನ

ರೂರ್ಕೆಲಾ: ಒಡಿಶಾದ ರೂರ್ಕೆಲಾದಿಂದ ಭುವನೇಶ್ವರಕ್ಕೆ ಹಾರುತ್ತಿದ್ದ ಇಂಡಿಯಾ ಒನ್ ಏರ್ ವಿಮಾನದ ಒಂಬತ್ತು ಆಸನಗಳ ಸಣ್ಣ ವಿಮಾನ ಶನಿವಾರ ಪತನಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಭ್ಯ ವಿರುವ ಮಾಹಿತಿಯ ಪ್ರಕಾರ, ವಿಮಾನ ದಲ್ಲಿ ಆರು ಪ್ರಯಾಣಿಕರು ಮತ್ತು ಒಬ್ಬ ಪೈಲಟ್ ಸೇರಿದಂತೆ ಏಳು ಜನ ಇದ್ದರು. ರೂರ್ಕೆಲಾದಿಂದ ಸುಮಾರು 1015 ಕಿಲೋಮೀಟರ್ ದೂರದಲ್ಲಿ ಈ ವಿಮಾನ ಪತನಗೊಂಡಿದೆ ಎಂದು ವರದಿಯಾಗಿದೆ. ಘಟನೆಯಲ್ಲಿ ಪೈಲಟ್ ಸೇರಿದಂತೆ ಆರು ಜನರಿಗೆ ಗಂಭೀರ ಗಾಯಳಾಗಿವೆ. ರಕ್ಷಣಾ ತಂಡ, ಅಪಘಾತದ ಸ್ಥಳಕ್ಕೆ ತಲುಪಿ ಗಾಯಗೊಂಡ ಪ್ರಯಾಣಿಕರನ್ನು ವೈದ್ಯಕೀಯ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ.

ಮಂಗಳೂರಿನಲ್ಲಿ ಕರಾವಳಿ ಕರ್ನಾಟಕ ಪ್ರವಾಸೋದ್ಯಮ ಸಮಾವೇಶವನ್ನು ಸಿಎಂ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು.

320 ಕಿ.ಮೀ. ಉದ್ದದ ಕರಾವಳಿ ತೀರದಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ

ಕರಾವಳಿ ಟೂರಿಸಂಗೆ ಕಾಯಕಲ್ಪ: ಸಿಎಂ

ಮಂಗಳೂರು: ರಾಜ್ಯದ 320 ಕಿ.ಮೀ. ಉದ್ದದ ಸುಂದರ ಕರಾವಳಿಯನ್ನು ಸಮರ್ಪಕವಾಗಿ ಬಳಸಿಕೊಂಡರೆ, ಪ್ರವಾಸೋದ್ಯಮ ಕ್ಷೇತ್ರದಲ್ಲಿ ಕರ್ನಾಟಕವು ಮಹಾರಾಷ್ಟ್ರವನ್ನೂ ಮೀರಿಸಿ ದೇಶದಲ್ಲೇ ನಂಬರ್ 1 ಸ್ಥಾನಕ್ಕೇರಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ನಡೆದ 'ಕರಾವಳಿ ಕರ್ನಾಟಕ ಪ್ರವಾಸೋದ್ಯಮ ಸಮಾವೇಶ'ದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಅಭಿವೃದ್ಧಿಗೆ ಪ್ರವಾಸೋದ್ಯಮವೇ ಇಂಧನವಾಗಲಿದೆ. ಬೆಂಗಳೂರಿನ ನಂತರ ಮಂಗಳೂರು ರಾಜ್ಯದ ಪ್ರಮುಖ ಆರ್ಥಿಕ ಕೇಂದ್ರವಾಗಿದೆ. ಕರಾವಳಿಯ ನಿಸರ್ಗದತ್ತ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡರೆ ಆರ್ಥಿಕವಾಗಿ ನಾವು ಮತ್ತಷ್ಟು ಎತ್ತರಕ್ಕೆ ಬೆಳೆಯಬಹುದು ಎಂದು ಸಿಎಂ ಹೇಳಿದರು.

ಸ್ಥಳೀಯ ಉದ್ಯೋಗ ಸೃಷ್ಟಿಗೆ ಆದ್ಯತೆ: ಕರಾವಳಿ ಜಿಲ್ಲೆಗಳ ಸಾಕ್ಷರತೆ ಮತ್ತು ಶೈಕ್ಷಣಿಕ ಗುಣಮಟ್ಟವನ್ನು ಶ್ಲಾಘಿಸಿದ ಸಿಎಂ, ಇಲ್ಲಿಗೆ ಜಗತ್ತಿನಾದ್ಯಂತ ವಿದ್ಯಾರ್ಥಿಗಳು ಬರುತ್ತಾರೆ. ಆದರೆ ಇಲ್ಲಿನ ಯುವಕರು ಉದ್ಯೋಗಕ್ಕಾಗಿ ಬೇರೆಡೆಗೆ ವಲಸೆ ಹೋಗುತ್ತಿದ್ದಾರೆ. ಈ ಪರಿಸ್ಥಿತಿ ಬದಲಾಗಬೇಕು. ಪ್ರವಾಸೋದ್ಯಮದ ಮೂಲಕ ಸ್ಥಳೀಯವಾಗಿಯೇ ಸಾವಿರಾರು ಉದ್ಯೋಗ ಸೃಷ್ಟಿಸುವ ಅಗತ್ಯವಿದೆ. → 4

ಪ್ರವಾಸಿ ಪ್ರಪಂಚಕ್ಕೆ ಸಿಎಂ ಮೆಚ್ಚುಗೆ

ಪ್ರವಾಸೋದ್ಯಮ ಪ್ರಚಾರದಲ್ಲಿ ಮಾಧ್ಯಮಗಳ ಪಾತ್ರವನ್ನು ಸಿಎಂ ಸಿದ್ದರಾಮಯ್ಯ ವಿಶೇಷವಾಗಿ ಸ್ಮರಿಸಿದರು. ವಿಶ್ವೇಶ್ವರ ಭಟ್ಟರ ಸಂಪಾದಕತ್ವದ 'ವಿಶ್ವವಾಣಿ' ಪತ್ರಿಕೆ ಮತ್ತು ಪ್ರವಾಸೋದ್ಯಮಕ್ಕಾಗಿಯೇ ಮೀಸಲಾದ 'ಪ್ರವಾಸಿ ಪ್ರಪಂಚ' ಪತ್ರಿಕೆಗಳು ಈ ಕ್ಷೇತ್ರದಲ್ಲಿ ಶ್ಲಾಘನೀಯ ಕೆಲಸ ಮಾಡುತ್ತಿವೆ. ಇಂತಹ ಪ್ರಯತ್ನಗಳು ಪ್ರವಾಸೋದ್ಯಮಕ್ಕೆ ದೊಡ್ಡ ಉತ್ತೇಜನ ನೀಡುತ್ತವೆ. ಕನ್ನಡದ ಎಲ್ಲಾ ದಿನಪತ್ರಿಕೆಗಳು ಪ್ರವಾಸೋದ್ಯಮಕ್ಕೆ ಸಹಕಾರ ನೀಡಬೇಕು ಎಂದು ಸಿಎಂ ಕರೆ ನೀಡಿದರು.

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ

ಶೀತಗಾಳಿಗೆ ಕರುನಾಡು ಗಡಗಡ

ಬೆಂಗಳೂರು: ಬಂಗಾಳಕೊಲ್ಲಿಯಲ್ಲಿ ತೀವ್ರ ವಾಯುಭಾರ ಕುಸಿತ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಶನಿವಾರ ತುಂತುರು ಮಳೆಯಾಗಿದ್ದು, ಮುಂದಿನ 24 ಗಂಟೆಗಳಲ್ಲಿ ಕರ್ನಾಟಕ ಒಳನಾಡಿನ ಕೆಲವು ಭಾಗಗಳಲ್ಲಿ ಶೀತಗಾಳಿ ಬೀಸುವ ಸಾಧ್ಯತೆ ಇದೆ ಎಂದು ಭಾರತ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಸಿದೆ.

ಕರ್ನಾಟಕದ ಒಳನಾಡಿನ ಕೆಲವು ಸ್ಥಳಗಳಲ್ಲಿ ಕನಿಷ್ಠ ತಾಪಮಾನವು ಮೂರರಿಂದ ಆರು ಡಿಗ್ರಿ ಸೆಲ್ಸಿಯಸ್ ಗಿಂತ ಕಡಿಮೆಯಿದ್ದರೆ, ಇನ್ನು ಕೆಲ ಪ್ರದೇಶಗಳಲ್ಲಿ ಮಂಜು ಕವಿದ ವಾತಾವರಣವಿರಲಿದೆ. ಕಳೆದ 24 ಗಂಟೆಗಳಲ್ಲಿ ವಿಜಯಪುರದಲ್ಲಿ ಶೀತಗಾಳಿ ವಾತಾವರಣ ಕಂಡುಬಂದಿದೆ. ಭಾರತ ಹವಾಮಾನ ಇಲಾಖೆಯ ಪ್ರಕಾರ, ಶೀತಗಾಳಿ ಪಶ್ಚಿಮ ವಾಯುವ್ಯ ದಿಕ್ಕಿಗೆ ಸಾಗಿದ್ದು, ಉತ್ತರ ಶ್ರೀಲಂಕಾ ಕರಾವಳಿಯತ್ತ ಚಲಿಸಿದೆ. ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾನುವಾರ ಹಗುರ ಮಳೆಯಾಗುವ ಸಾಧ್ಯತೆಯಿದೆ. ಬಳ್ಳಾರಿ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಶಿವಮೊಗ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಒಣ ಹವಾಮಾನ ಮುಂದುವರಿಯುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ. ಮುಂದಿನ ದಿನಗಳಲ್ಲಿ ಕರ್ನಾಟಕದ ಹೆಚ್ಚಿನ ಪ್ರದೇಶಗಳಲ್ಲಿ ಹೆಚ್ಚಾಗಿ ಒಣ ಹವಾಮಾನವಿರುತ್ತದೆ ಎಂದು ಐಎಂಡಿ ತಿಳಿಸಿದೆ.

ಜ.21ಕ್ಕೆ ಉಪರಾಷ್ಟ್ರಪತಿ ಸಿದ್ಧಗಂಗಾ ಕ್ಷೇತ್ರಕ್ಕೆ ಭೇಟಿ

ತುಮಕೂರು: ಸಿದ್ಧಗಂಗಾ ಮಠದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 7ನೇ ವರ್ಷದ ಪುಣ್ಯ ಸಂಸ್ಮರಣೋತ್ಸವದಲ್ಲಿ ಭಾಗವಹಿಸಲು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಜ.21 ರಂದು ಸಿದ್ಧಗಂಗಾ ಮಠಕ್ಕೆ ಆಗಮಿಸಿ, ಸಮಾರಂಭವನ್ನು ಉದ್ಘಾಟಿಸಲಿದ್ದಾರೆ.

ಇದೇ ಮೊದಲ ಬಾರಿಗೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಶ್ರೀಮಠಕ್ಕೆ ಭೇಟಿ ನೀಡುತ್ತಿರುವುದಾಗಿದೆ. ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಹಲವಾರು ಇತರ ಗಣ್ಯರೂ ಪಾಲ್ಗೊಳ್ಳಲಿದ್ದಾರೆ.

ಕಬ್ಬು ಟ್ರ್ಯಾಕ್ಟರ್ ಪಲ್ಟಿ: ಮೂವರ ಸಾವು

ಬಾಗಲಕೋಟೆ: ಕಬ್ಬು ಟ್ರ್ಯಾಕ್ಟರ್ ಪಲ್ಟಿಯಾಗಿ ಮೂವರು ದುರ್ಮರಣ ಹೊಂದಿರುವ ಘಟನೆ ಹುನಗುಂದ ತಾಲೂಕಿನ ಕಮತಗಿ ಪಟ್ಟಣ ಬಳಿ ನಡೆದಿದೆ. ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಆನೇಕಲ್ ತಾಂಡಾದ ರುಕ್ಮಿಣಿಬಾಯಿ ನಾಯಕ್ (36), ಪುತ್ರಿ ಶಿವಾನಿ (6) ಹಾಗೂ ರೋಷನ್ (4) ಸ್ಥಳದಲ್ಲಿ ಮೃತರಾಗಿದ್ದು, ಗಾಯಗೊಂಡಿದ್ದ ಇಬ್ಬರನ್ನು ಆಸ್ಪತ್ರೆಗೆ ದಾಖಲಾಗಿದ್ದಾರೆ. ಕಬ್ಬು ಕಟಾವು ಮಾಡುವ ಕಾರ್ಮಿಕರನ್ನು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ಟ್ರೇಲರ್‌ನ ಹುಕ್ ಕಟ್ ಆಗಿ ದುರ್ಘಟನೆ ನಡೆದಿದೆ. ಸ್ಥಳಕ್ಕೆ ಅಮೀನಗಡ ಪೊಲೀಸರ ಭೇಟಿ ಪರಿಶೀಲನೆ ನಡೆಸಿದರು.

ಫನ್‌ತರಂಗ
- ರಘುಪತಿ ಶೃಂಗೇರಿ -

ಇನ್ಸ್ಟಾಗ್ರಾಂನಲ್ಲಿ ಎಸ್ಸೆಸ್ಸೆಲ್ಸಿ ಪ್ರಶ್ನೆಪತ್ರಿಕೆ ಸೋರಿಕೆ
ಸುದ್ದಿ



ಗ್ರೀನ್‌ಲ್ಯಾಂಡ್ ವಶ ಖಚಿತವೆಂದ ಟ್ರಂಪ್

ವಾಷಿಂಗ್ಟನ್: ಡೆನ್ಮಾರ್ಕ್‌ನ ಸ್ವಾಯತ್ತ ಪ್ರದೇಶವಾಗಿರುವ ಗ್ರೀನ್‌ಲ್ಯಾಂಡ್ ಅನ್ನು ಪಡೆದೇ ತೀರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಠಕ್ಕೆ ಬಿದ್ದಿದ್ದು, ಒಂದು ವೇಳೆ ಅಮೆರಿಕದ ವಶವಾಗದಿದ್ದರೆ ರಷ್ಯಾ ಹಾಗೂ ಚೀನಾ ಈ ಪ್ರದೇಶವನ್ನು ಸ್ವಾಧೀನ ಮಾಡಿಕೊಳ್ಳುವ ಸಾಧ್ಯತೆಯಿದೆ ಎಂದು ಹೊಸ ಗುಮ್ಮನನ್ನು ಮುಂದಿಟ್ಟಿದ್ದಾರೆ.



ಶುಕ್ರವಾರ ರಾತ್ರಿ ತೈಲ ಮತ್ತು ಗ್ಯಾಸ್ ಉದ್ಯಮದ ಪ್ರಮುಖರೊಂದಿಗಿನ ಸಭೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಟ್ರಂಪ್, ಗ್ರೀನ್ ಲ್ಯಾಂಡ್ ಮೇಲೆ ಡೆನ್ಮಾರ್ಕ್‌ನ ಹಕ್ಕನ್ನು ಪ್ರಶ್ನಿಸಿದ್ದು, ಸುಮಾರು 500 ವರ್ಷಗಳ ಹಿಂದೆ ಅವರು ಅಲ್ಲಿಗೆ ಹೋಗಿ ಹಡಗಿನ ಮೂಲಕ ತಲುಪಿದ್ದಾರೆಂಬ ಒಂದೇ ಕಾರಣಕ್ಕೆ ಅದರ ಭೂ ಮಾಲೀಕತ್ವವನ್ನು ಡೆನ್ಮಾರ್ಕ್ ಗೆ ನೀಡಲು ಸಾಧ್ಯವಿಲ್ಲ ಎಂದರು. ನಾವು ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಏನೂ ಬೇಕಾದರೂ ಮಾಡುತ್ತೇವೆ. ಅದು ಅವರಿಗೆ ಇಷ್ಟವಿರಲಿ ಅಥವಾ ಇಲ್ಲದಿರಲಿ. ನಾವು ಹಾಗೆ ಮಾಡದಿದ್ದರೆ, ರಷ್ಯಾ ಅಥವಾ ಚೀನಾ ಗ್ರೀನ್‌ಲ್ಯಾಂಡ್ ಅನ್ನು ವಶಪಡಿಸಿಕೊಳ್ಳುತ್ತವೆ. → 4

ಪಾಕ್, ಚೀನಾ, ಅಮೆರಿಕ ದೇಶಗಳ ಧೋರಣೆಗಳ ಕುರಿತು ಬೆಳಕು ಚೆಲ್ಲಿದ ರಾ ಮಾಜಿ ಮುಖ್ಯಸ್ಥ

ಪಾಕ್ ಜತೆ ಶಾಂತಿ ಅಸಾಧ್ಯ: ವಿಕ್ರಮ್ ಸೂದ್

ಲಿಟ್ ಫೆಸ್ಟ್ ವೇದಿಕೆ, ಮಂಗಳೂರು

ಪಾಕಿಸ್ತಾನ, ಚೀನಾ ಹಾಗೂ ಭಾರತ ನಡುವೆ ಸಮಸ್ಯೆ ಇರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಪಾಕಿಸ್ತಾನದ ಜೊತೆ ರಾಜಿ, ಸಂಧಾನ ಮಾಡಿ ಪ್ರಯೋಜನವಿಲ್ಲ. ಅವರ ಜೊತೆ ಶಾಂತಿ ಅಸಾಧ್ಯ' ಎಂದು ಭಾರತದ ಗುಪ್ತಚರ ಸಂಸ್ಥೆ 'ರಾ'ದ ಮಾಜಿ ಮುಖ್ಯಸ್ಥ ವಿಕ್ರಮ್ ಸೂದ್ ಹೇಳಿದರು.

ಮಂಗಳೂರಿನ ಟಿಎಂಎ ಪೈ ಇಂಟರ್‌ನ್ಯಾಷನಲ್ ಕನ್ವೆನ್ಶನ್ ಸೆಂಟರ್‌ನಲ್ಲಿ ನಡೆಯುತ್ತಿರುವ ಮಂಗಳೂರು ಲಿಟ್ ಫೆಸ್ಟ್ 8ನೇ ಆವೃತ್ತಿಯ 'ಗ್ರೇಟ್ ಪವರ್ ಗೇಮ್ಸ್' ಎಂಬ ಗೋಷ್ಠಿಯಲ್ಲಿ ಮಾತನಾಡಿದ ಅವರು ಪಾಕಿಸ್ತಾನ ಯಾವತ್ತೂ ಬದಲಾಗಲ್ಲ ಎಂದು ಅಭಿಪ್ರಾಯಪಟ್ಟರು.

ಭಾರತ ಮತ್ತು ನೆರೆ ದೇಶಗಳ ಜೊತೆಗಿನ ಸ್ನೇಹದ ಕುರಿತು ಮಾತನಾಡಿದ ಅವರು, ಈ ಹಿಂದೆ ಲಂಕಾ ಅಥವಾ ಬಾಂಗ್ಲಾದೇಶ ಕಷ್ಟದಲ್ಲಿದೆ ಎಂದಾಗ ಭಾರತ ಅವರ ಸಹಾಯಕ್ಕೆ ನಿಂತಿತ್ತು. ಆದರೆ, 'ಭಾರತಕ್ಕೆ ಸಂಕಷ್ಟ ಬಂದಾಗ ಯಾರೂ ಜೊತೆ ನಿಲ್ಲುವುದಿಲ್ಲ' ಎಂದು ಹೇಳಿದರು.

ಉತ್ತಮ ಆಡಳಿತಕ್ಕೆ ಶಕ್ತಿ, ಸೇನೆ ಹಾಗೂ ಅಧಿಕಾರ ಬಹಳ ಮುಖ್ಯ. ದೇಶ ಪ್ರಬಲಗೊಳ್ಳಲು ಈ ವಿಷಯಗಳ ಬಗ್ಗೆ ಗಮನ ಹರಿಸಬೇಕು. ಈ ಹಿಂದೆ ಚೀನಾ ಸ್ವದೇಶಿ ಉತ್ಪನ್ನಗಳ ಮೂಲಕ ಅಮೆರಿಕಕ್ಕೆ ಆರ್ಥಿಕ ಹೊಡೆತ ನೀಡಲು ಸಾಧ್ಯವಾಯಿತು. ಅಮೆರಿಕಾದ ಬಳಿ ಬೃಹತ್ ಸೇನೆ, ಪರಮಾಣು ಶಕ್ತಿ ಎಲ್ಲವೂ ಇದ್ದರೂ ಯಾವ ಯುದ್ಧವನ್ನು ನೇರವಾಗಿ ಗೆದ್ದಿಲ್ಲ. 1945ರಲ್ಲಿ ನಾಗಸಾಕಿ, ಹಿರೋಶಿಮಾ ಮೇಲೆ ದಾಳಿ ಮಾಡಿದ ಘಟನೆಯಿಂದಲೇ ಅವರ ಪತನ ಶುರುವಾಗಿದೆ ಎಂದರು. ಅಮೆರಿಕ ಮತ್ತು ಚೀನಾ ಜೊತೆ ಯಾವ ರೀತಿಯ ತಂತ್ರಗಳನ್ನು ಮಾಡಬಹುದು ಎಂಬ ವಿಷಯದ ಕುರಿತು ಮಾತನಾಡಿದ ವಿಕ್ರಮ್, ಅಮೆರಿಕಾ ಹಾಗೂ ಚೀನಾ ಯಾವತ್ತೂ ಭಾರತದ ಸಹಾಯಕ್ಕೆ ನಿಂತಿಲ್ಲ. → 4

ಎಲ್ಲವನ್ನೂ ಸರಿಪಡಿಸುವ ಭ್ರಮೆ

ಪ್ರಸ್ತುತ ನಡೆಯುತ್ತಿರುವ ಅಮೆರಿಕ ಹಾಗೂ ವೆನೆಜುವೆಲಾ ಯುದ್ಧದ ಬಗ್ಗೆ ಮಾತನಾಡಿದ ಅವರು, ಮೊದಲಿಗೆ ಅಮೆರಿಕ ಉಕ್ರೇನ್ ವಿಷಯದಲ್ಲಿ ಅಮೆರಿಕ ತಲೆ ಹಾಕಿತು, ಬಳಿಕ ಇಸ್ರೇಲ್ ಈಗ ವೆನೆಜುವೆಲಾ. ಜಗತ್ತಿನೆಲ್ಲೆಡೆ ಸಮಸ್ಯೆ ಮಾಡುವ ಉದ್ದೇಶ ಹೊಂದಿರುವ ದೇಶವದು. ಈ ಸಮಸ್ಯೆಗೆ ಯಾರು ಕಾರಣ ಎಂದು ಬಹಿರಂಗವಾಗಿ ಗೊತ್ತಾಗದಿರಬಹುದು ಆದರೆ, ಎಲ್ಲವನ್ನೂ ಸರಿ ಮಾಡುವ ಅಧ್ಯಕ್ಷ ನಮ್ಮ ದೇಶದಲ್ಲಿದ್ದಾರೆ ಎಂಬ ಮನೋಭಾವ ಹೊಂದಿರುವ ದೇಶವದು. ಸ್ವತಃ ನಾನೇ ಕಾನೂನು ಎಂಬ ಮನೋಭಾವ ಹೊಂದಿರುವ ಅಧ್ಯಕ್ಷ ಅಲ್ಲಿದ್ದಾರೆ ಎಂದರು.

ಸಮಾಚಾರ ಸಣ್ಣದಲ್ಲ

ಕಾನ್‌ಸ್ಟೇಬಲ್‌ಗೆ ಸೇವಾ ರತ್ನ ಪ್ರಶಸ್ತಿ

ಕುಮಟಾ: ಇಲ್ಲಿನ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್ಸ್‌ಟೆಬಲ್ ಆಗಿರುವ ಲೋಕೇಶ ಅರಿಷಿಣಗುಪ್ಪಿ ಅವರು ಇಲಾಖೆ ಹಾಗೂ ಸಮಾಜಕ್ಕೆ ಸಲ್ಲಿಸಿದ ಉತ್ತಮ

ಸೇವೆಯನ್ನು ಪರಿಗಣಿಸಿ ಕರ್ನಾಟಕ ಪ್ರೆಸ್, ಬೆಂಗಳೂರು ಇವರು ನೀಡುವ ಕರ್ನಾಟಕ ಸೇವಾ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೆಂಗಳೂರಿನ ಕಲಾಗ್ರಾಮದಲ್ಲಿ ಜ.13ರ ಸಂಜೆ 4 ಗಂಟೆಗೆ ನಡೆಯಲಿರುವ ಸಮಾರಂಭದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ ಈ ಪ್ರಶಸ್ತಿಯನ್ನು ಲೋಕೇಶ ಅರಿಷಿಣಗುಪ್ಪಿ ಅವರಿಗೆ ನೀಡಿ ಗೌರವಿಸಲಿದೆ. ಲೋಕೇಶ ಅರಿಷಿಣಗುಪ್ಪಿ ಅವರು ಇಲಾಖೆಗೆ ನೀಡಿದ ಉತ್ತಮ ಸೇವೆಗಾಗಿ ಡಿ.ಜಿ ಹಾಗೂ ಐಜಿ ಅವರಿಂದ ಪದಕಗಳನ್ನು ಪಡೆದಿದ್ದರಲ್ಲದೆ, ಮುಖ್ಯಮಂತ್ರಿಗಳಿಂದ ಬಂಗಾರದ ಪದಕ ಪಡೆದುಕೊಂಡಿದ್ದನ್ನು ಈಗ ಇಲ್ಲಿ ಸ್ಮರಿಸಬಹುದಾಗಿದೆ.

ಯುವತಿ ಕಾಣೆ: ಪತ್ತೆಗೆ ಮನವಿ

ಕಾರವಾರ: ಸ್ಫೂರ್ತಿ ಹನಮಂತ ಜಾಲಗಾರ(19), ಸಾ.ಮುಗದಕೊಪ್ಪ ತಾ: ಹಳಿಯಾಳ ಇವರು 2025ರ ಡಿ.27 ರಂದು ಬೆಳಗ್ಗೆ 9 ಗಂಟೆಗೆ ಕಂಪ್ಯೂಟರ್‌ಕ್ಲಾಸಿಗೆ

ಹೋಗುತ್ತೇನೆ ಎಂದು ಮನೆಯಲ್ಲಿ ಹೇಳಿ ಹೋದವಳು ಕ್ಲಾಸಿಗೂ ಹೋಗದೇ ಸಂಬಂಧಿಕರ ಮನೆಗೂ ಹೋಗದೇ ಮನೆಗೂ ಬಾರದೇ ಎಲ್ಲಿಗೋ ಹೋಗಿ ಕಾಣೆಯಾಗಿ ರುತ್ತಾರೆ. ಕಾಣೆಯಾದ ಯುವತಿಯ ಚಹರೆ ಗೋಧಿ ಮೈ ಬಣ್ಣ, 5 ಅಡಿ ಎತ್ತರ, ಕನ್ನಡ ಭಾಷೆ ಮಾತ ನಾಡುತ್ತಾಳೆ. ಹಳದಿ ಬಣ್ಣದ ಟಾಪ್ ಮತ್ತು ಪ್ಯಾಂಟ್ ಧರಿಸಿದ್ದಾಳೆ. ಇವರು ಸಾರ್ವಜನಿಕರಿಗೆ ಕಂಡು ಬಂದಲ್ಲಿ ಹಳಿಯಾಳ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08284-220133, ಮೊಬೈಲ್ ಸಂ:9480805265 ನ್ನು ಸಂಪರ್ಕಿಸುವಂತೆ ಹಳಿಯಾಳ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಣಿಗೆ ನೀಡಲು ಸೊಸೈಟಿ ಮನವಿ

ಕಾರವಾರ: 14 ವರ್ಷದೊಳಗಿನ ಬಾಲ ಕಾರ್ಮಿಕ ಮಕ್ಕಳನ್ನು ಹಾಗೂ 18 ವರ್ಷದೊಳಗಿನ ಕಿಶೋರ ಕಾರ್ಮಿಕ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ, ಸಾರ್ವಜನಿಕರಲ್ಲಿ, ವಿವಿಧ ಸಂಘ ಸಂಸ್ಥೆಗಳಲ್ಲಿ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರಲ್ಲಿ ಅರಿವು ಕಾರ್ಯಕ್ರಮ, ಜನಜಾಗೃತಿ ಮೂಡಿಸಲು (ಕೇಂದ್ರ/ರಾಜ್ಯ), ಎಸ್.ಒ.ಪಿ.(ಕೇಂದ್ರ/ರಾಜ್ಯ) 2017ಗಳ ಅನುಷ್ಠಾನ, ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳು, ಸಮೀಕ್ಷೆ, ಕಾರ್ಯಾಗಾರ, ಇತರೆ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಅನಿವಾರ್ಯವಾಗಿದೆ. ಕರ್ನಾಟಕವನ್ನು ಬಾಲ ಹಾಗೂ ಕಿಶೋರ ಕಾರ್ಮಿಕ ಮುಕ್ತ ರಾಜ್ಯವನ್ನಾಗಿಸಲು ಹಾಗೂ ಈ ಕೆಟ್ಟ ಪದ್ಧತಿಯನ್ನು ಸಮಾಜದಿಂದ ತೊಲಗಿಸಲು ವ್ಯಾಪಕ ಪ್ರಚಾರ ಮಾಡಲು ಸಾರ್ವಜನಿಕರು, ಉದ್ಯೋಗದಾತರು ಹಾಗೂ ಸ್ಥಳೀಯ ಸಂಸ್ಥೆಯವರು ದೇಣಿಗೆ ನೀಡಲು ಇಚ್ಛಿಸಿದಲ್ಲಿ ರಾಜ್ಯ ಬಾಲ ಕಾರ್ಮಿಕ ಯೋಜನಾ ಸೊಸೈಟಿಯ ಖಾತೆ ಸಂಖ್ಯೆ Canara Bank Account Number: 110058103941, IFSC Code: CNRB0007295, Bangalore workers welfare Board Branch, Bangalore ಗೆ ಜಮಾ ಮಾಡಿ ಸಹಕರಿಸುವಂತೆ ಜಿಲ್ಲಾ ಕಾರ್ಮಿಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆ ಕಾಣೆ: ಪತ್ತೆ ನೆರವಿಗೆ ಮನವಿ

ಕಾರವಾರ: ಸೋನಾಲ ನಾರಾಯಣ ಸಾಳುಂಕೆ (25), ಸಾ: ಗುಂಡೊಳ್ಳಿ ತಾ: ಹಳಿಯಾಳ ಇವರು 2025ರ ನ.7ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1

ಗಂಟೆಯ ನಡುವಿನ ಅವಧಿಯಲ್ಲಿ ಮನೆಯಿಂದ ಯಾರಿಗೂ ಹೇಳದೇ ಕೇಳದೇ ಹೋದವರು ಸಂಬಂಧಿಕರ ಮನೆಗೂ ಹೋಗದೇ ಮನೆಗೂ ಬಾರದೇ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾರೆ.

ಕಾಣೆಯಾದ ಮಹಿಳೆಯ ಚಹರೆ: ಸಾಧಾರಣ ಮೈ ಬಣ್ಣ, 5 ಅಡಿ ಎತ್ತರ, ಕನ್ನಡ, ಮರಾಠಿ ಭಾಷೆ ಮಾತನಾಡುತ್ತಾಳೆ. ಹಸಿರು ಬಣ್ಣದ ಟಾಪ್, ಬಿಳಿ ಬಣ್ಣದ ವೇಲ್ ಮತ್ತು ಪ್ಯಾಂಟ್ ಧರಿಸಿದ್ದಾಳೆ. ಇವರು ಸರ್ವಜನಿಕರಿಗೆಕಂಡು ಬಂದಲ್ಲಿ ಹಳಿಯಾಳ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08284-220133, ಮೊಬೈಲ್ ಸಂ: 9480805265 ನ್ನು ಸಂರ್ಕಿಸುವಂತೆ ಹಳಿಯಾಳ ಪೊಲೀಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ ಎಚ್.ಡಿ. ಕುಮಾರಸ್ವಾಮಿ } ಕೇಂದ್ರ ಸಚಿವ

ರಾಜ್ಯ ಹಾಗೂ ರಾಷ್ಟ್ರದಲ್ಲಿ ಕೇಂದ್ರ ಸರಕಾರ ಪ್ರಮುಖ ನಿರ್ಣಯ ಕೈಗೊಂಡಿದೆ. ವಿಬಿ ಜಿ. ರಾಮ್.ಜಿ ಕಾಯಿದೆ ಜಾರಿ ಮಾಡಿದೆ. ರಾಜ್ಯದಲ್ಲಿ ಈ ಬಗ್ಗೆ ದೊಡ್ಡ ಮಡ್ಡದ ಅಪಪ್ರಚಾರ ನಡೆಯುತ್ತಿದೆ. 2005ರಲ್ಲಿ ಆರಂಭವಾದ ಮನರೇಗಾ ಯೋಜನೆಯಲ್ಲಿ ಕೆಲ ಬದಲಾವಣೆ ಮಾಡಲಾಗಿದೆ.

ನದಿ ಉಳಿವಿಗಾಗಿ ಸಮಾವೇಶ ಇಂದು

ಬೇಡ್ತಿ ಯೋಜನೆಯಿಂದ ಅಪರೂಪದ ಮರಗಿಡಗಳು, ಔಷಧೀಯ ಸಸ್ಯಗಳು ನಾಶ

ವಿನುತಾ ಹೆಗಡೆ ಶಿರಸಿ

ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯ ಮೇಲೆ ನಡೆಯುತ್ತಿರುವ ನಿರಂತರ ಆಕ್ರಮಣವನ್ನು ತಡೆಯಲು ಮತ್ತು ಉತ್ತರ ಕನ್ನಡದ ಜೀವನಾಡಿಗಳಾದ ಬೇಡ್ತಿ-ಅಘನಾಶಿನಿ ನದಿಗಳನ್ನು ಉಳಿಸಿಕೊಳ್ಳಲು ಇಂದು ಶಿರಸಿಯಲ್ಲಿ ಬೃಹತ್ ''ಜನ ಜಾಗೃತಿ ಸಮಾವೇಶ'' ಹಮ್ಮಿಕೊಳ್ಳಲಾಗಿದೆ. ನದಿ ತಿರುವು ಮತ್ತು ಜಲವಿದ್ಯುತ್ ಯೋಜನೆಗಳ ಕರಾಳ ನೆರಳಿನಿಂದ ಮಲೆನಾಡಿನ ಪರಿಸರವನ್ನು ಮುಕ್ತಗೊಳಿಸಲು ಪರಿಸರ ಪ್ರೇಮಿಗಳು, ರೈತರು ಮತ್ತು ನಾಗರಿಕರು ಒಂದೇ ವೇದಿಕೆಯಲ್ಲಿ ಸಮಾಲೋಚನೆ ನಡೆಸಲಿದ್ದಾರೆ.

ಹೋರಾಟದ ಅಗತ್ಯವೇಕೆ? ಕಳೆದ ಕೆಲವು ದಶಕಗಳಿಂದ ಬೇಡ್ತಿ ಮತ್ತು ಅಘನಾಶಿನಿ ನದಿಗಳಿಗೆ ಅಣೆಕಟ್ಟು ನಿರ್ಮಿಸುವ ಅಥವಾ ಹರಿವನ್ನು ಬದಲಿಸುವ ಪ್ರಸ್ತಾವನೆಗಳು ಸರ್ಕಾರಿ ಮಟ್ಟದಲ್ಲಿ ಕೇಳಿಬರುತ್ತಿವೆ. ಈ ಯೋಜನೆಗಳು ಜಾರಿಯಾದಲ್ಲಿ:

ಸಹಸ್ರಾರು ಎಕರೆ ಕಾಡು ನಾಶ: ಅಪರೂಪದ ಮರಗಿಡಗಳು ಮತ್ತು ಔಷಧೀಯ ಸಸ್ಯಗಳು ಜಲಸಮಾಧಿಯಾಗಲಿವೆ.

ಜೀವವೈವಿಧ್ಯಕ್ಕೆ ಧಕ್ಕೆ: ಪಶ್ಚಿಮ ಘಟ್ಟದ ಸೂಕ್ಷ್ಮ ಪರಿಸರ ವಲಯದಲ್ಲಿರುವ ವನ್ಯಜೀವಿಗಳ ಆವಾಸಸ್ಥಾನಕ್ಕೆ ಶಾಶ್ವತ ಹಾನಿಯಾಗಲಿದೆ.

ಭೂಕುಸಿತದ ಭೀತಿ: ಈಗಾಗಲೇ ಮಲೆನಾಡು ಭಾಗದಲ್ಲಿ ಭೂಕುಸಿತಗಳು ಹೆಚ್ಚುತ್ತಿದ್ದು, ನದಿ ತಿರುವಿನಂತಹ ಬೃಹತ್ ಹಸ್ತಕ್ಷೇಪಗಳು ಪ್ರಕೃತಿ ವಿಕೋಪಕ್ಕೆ ಆಹ್ವಾನ ನೀಡಲಿವೆ.

ಸಮಾವೇಶದ ಪ್ರಮುಖ ಆಶಯಗಳು ಇಂದು ನಡೆಯಲಿರುವ ಸಮಾವೇಶವು ಕೇವಲ ಪ್ರತಿಭಟನೆಯಾಗದೆ, ವೈಜ್ಞಾನಿಕ ಮತ್ತು ತಾಂತ್ರಿಕ ನೆಲೆಯಲ್ಲಿ ನದಿಗಳ ಪ್ರಾಮುಖ್ಯತೆಯನ್ನು ಸಾರುವ ವೇದಿಕೆಯಾಗಲಿದೆ.

ಅಘನಾಶಿನಿ ''ಸೌಂದರ್ಯ''ದ ರಕ್ಷಣೆ: ಅಘನಾಶಿನಿ ಭಾರತದ ಅತ್ಯಂತ ಅಪರೂಪದ ''ಅನಿರ್ಬಂಧಿತ'' ನದಿಗಳಲ್ಲಿ ಒಂದು. ಇದರ ನೈಸರ್ಗಿಕ ಹರಿವನ್ನು ಉಳಿಸಿಕೊಳ್ಳುವುದು ಈ ಹೋರಾಟದ ಆದ್ಯತೆ.

ರೈತರ ಬದುಕಿನ ಪ್ರಶ್ನೆ: ಅಡಿಕೆ, ಮೆಣಸು ಮತ್ತು ಏಲಕ್ಕಿ ಬೆಳೆಯುವ ಮಲೆನಾಡಿನ ರೈತರಿಗೆ ನದಿಗಳೇ ಆಧಾರ.

ತಜ್ಞರ ಎಚ್ಚರಿಕೆ

ಪಶ್ಚಿಮ ಘಟ್ಟಗಳು ಜಗತ್ತಿನ ಎಂಟು ಅತೀ ಸೂಕ್ಷ್ಮ ಪರಿಸರ ತಾಣಗಳಲ್ಲಿ ಒಂದು. ಇಲ್ಲಿನ ನದಿಗಳನ್ನು ತಡೆಯುವುದು ಎಂದರೆ ನಮ್ಮ ಕೈಯಾರೆ ನಾವು ವಿನಾಶವನ್ನು ಆಮಂತ್ರಿಸಿದಂತೆ. ಅಭಿವೃದ್ಧಿಯು ಪರಿಸರ ಪೂರಕವಾಗಿರಬೇಕೇ ಹೊರತು ಪರಿಸರ ಮಾರಕವಾಗಬಾರದು.' ಎಂದು ಪರಿ ಸರ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇಂದು ನಗರದ ಎಂ ಇ ಎಸ್ ಕ್ರೀಡಾಂಗಣದಲ್ಲಿ ಸಮಾವೇಶ ಮಧ್ಯಾಹ್ನದ ಮೇಲೆ ನಡೆಯಲಿದೆ. ನಾಡಿನ ಖ್ಯಾತ ಪರಿಸರ ಹೋರಾಟಗಾರರು, ಧಾರ್ಮಿಕ ಮುಖಂಡರು, ವಿಜ್ಞಾನಿಗಳು ಮತ್ತು ಸಾವಿರಾರು ನದಿ ಪ್ರೇಮಿಗಳು.

ಅಂತರ್ಜಲ ಕುಸಿತದ ಭೀತಿಯನ್ನು ಹೋಗಲಾಡಿಸಲು ನದಿಗಳ ಸಂರಕ್ಷಣೆ ಅನಿವಾರ್ಯ.

ಮೀನುಗಾರರ ಹಿತರಕ್ಷಣೆ: ಅಘನಾಶಿನಿ ನದಿ ಸಮುದ್ರ ಸೇರುವ ಅಳಿವೆ ಭಾಗದಲ್ಲಿ ಸಾವಿರಾರು ಕುಟುಂಬಗಳು ಮೀನುಗಾರಿಕೆಯನ್ನು ನಂಬಿವೆ. ಅಣೆಕಟ್ಟು ನಿರ್ಮಾಣದಿಂದ ಉಪ್ಪುನೀರಿನ ಸಮತೋಲನ ತಪ್ಪಿ ಅವರ ಜೀವನೋಪಾಯಕ್ಕೆ ಹೊಡೆತ ಬೀಳಲಿದೆ.

ಸಾರ್ವಜನಿಕರಿಗೆ ಕರೆ: ಈ ಸಮಾವೇಶವು ಕೇವಲ ಒಂದು ಸಂಘಟನೆಯ ಹೋರಾಟವಲ್ಲ, ಇದು ಈ ಮಣ್ಣಿನ ಉಳಿವಿಗಾಗಿ ನಡೆಯುತ್ತಿರುವ ಸಮರ. ಭವಿಷ್ಯದ ಪೀಳಿಗೆಗೆ ಶುದ್ಧ ಗಾಳಿ ಮತ್ತು ನೀರನ್ನು ಉಳಿಸಿಕೊಡಲು ಪ್ರತಿಯೊಬ್ಬ ನಾಗರಿಕನೂ ಈ ಸಮಾವೇಶದಲ್ಲಿ ಭಾಗವಹಿಸುವುದು ಇಂದಿನ ಅಗತ್ಯವಾಗಿದೆ.

ಅರಣ್ಯ ಭೂಮಿ ಹಕ್ಕು ಪತ್ರ ವಿಳಂಬಕ್ಕೆ ರಾಜಕೀಯ ಇಚ್ಛಾಶಕ್ತಿ ಕೊರತೆ

ಹೊನ್ನಾವರ: ಜನಪ್ರತಿನಿಧಿಗಳಿಗೆ ಅರಣ್ಯವಾಸಿಗಳ ಬಗ್ಗೆ ಕೇವಲ ಭಾಷಣ ಮಾಡುವ ಕಾಳಜಿ ಇದೆಯೇ ಹೊರತು, ಅವರಿಗೆ ಭೂಮಿ ಹಕ್ಕು ಪತ್ರ ನೀಡಬೇಕೆನ್ನುವ ನಿಜವಾದ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶಾಂತಾರಾಮ ನಾಯಕ ಗಂಭೀರವಾಗಿ ಆರೋಪಿಸಿದ್ದಾರೆ.

ಹೊನ್ನಾವರದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲೂಕು ಮಟ್ಟದ ರೈತ ಸಮ್ಮೇಳನವನ್ನು ಉದ್ದೇಶಿಸಿ ಅವರು ಮಾತನಾಡಿದರು. ಸಮ್ಮೇಳನದಲ್ಲಿ ಜನಪ್ರತಿನಿಧಿಗಳ ಧೋರಣೆಯನ್ನು ತೀವ್ರವಾಗಿ ಖಂಡಿಸಿದ ಅವರು, ಶಾಸಕರು, ಸಂಸದರು ಮತ್ತು ಸಚಿವರು ಬಡ ರೈತರ ದಶಕಗಳ ಬೇಡಿಕೆಯನ್ನು ಈಡೇರಿಸುವಲ್ಲಿ ವಿಫಲರಾಗಿದ್ದಾರೆ. ರೈತರ ಈ ವಿರೋಧಿ ಧೋರಣೆಯು ಬಡ ಅರಣ್ಯವಾಸಿಗಳನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳುತ್ತಿದೆ. ಅರಣ್ಯವಾಸಿಗಳ ಹಕ್ಕುಗಳಿಗಾಗಿ ರೈತ ಸಂಘವು ನಿರಂತರವಾಗಿ ಹೋರಾಟ ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ವಿದ್ಯುತ್ ಖಾಸಗೀಕರಣದ ವಿರುದ್ಧ, ಅಡಿಕೆ ಬೆಳೆಗಾರರ ಹಿತರಕ್ಷಣೆಗಾಗಿ ಹಾಗೂ ಆದಿವಾಸಿ ಬುಡಕಟ್ಟು ಜನರ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಾಲೂಕು ಸಮಿತಿ ಅಧ್ಯಕ್ಷ ತಿಮ್ಮಪ್ಪ ಗೌಡ ಅವರು ಮಾತನಾಡಿ, ರೈತರು ಸಂಘಟಿತರಾದಾಗ ಮಾತ್ರ ಸರ್ಕಾರಗಳ ಮೇಲೆ ಒತ್ತಡ ಹೇರಲು ಸಾಧ್ಯ, ಆದ್ದರಿಂದ ತಾಲೂಕಿನ ಪ್ರತಿಯೊಬ್ಬ ರೈತರು ಒಗ್ಗೂಡಬೇಕು ಎಂದು ಕರೆ ನೀಡಿದರು. ಇದೇ ಸಂದರ್ಭದಲ್ಲಿ ಮಾಲಿನಿ ಅಂಬಿಗ ಅವರು ಸಂಘದ ಕಾರ್ಯಚಟುವಟಿಕೆಗಳ ವರದಿಯನ್ನು ಮಂಡಿಸಿದರು. ವೇದಿಕೆಯ ಮೇಲೆ ಪ್ರಮುಖರಾದ ಟಿ.ಎಸ್. ನಾಯ್ಕ, ಎಂ.ಎಸ್. ಶೆಟ್ಟಿ ಹಾಗೂ ಸರಸ್ವತಿ ಪಿ. ಭಟ್ ಉಪಸ್ಥಿತರಿದ್ದರು. ಸಮಾವೇಶದಲ್ಲಿ ರೈತ ಮುಖಂಡರಾದ ರಾಮ ಎಂ. ಗೌಡ, ಗೋವಿಂದ ಮುಕ್ರಿ, ಕಾವ್ಯ ಮುಕ್ರಿ ಸೇರಿದಂತೆ ನೂರಾರು ರೈತ ಕಾರ್ಯಕರ್ತರು ಭಾಗವಹಿಸಿದ್ದರು.

ರಜತಗಿರಿ ನಿವಾಸಿಗಳ ಸ್ನೇಹ ಸಮ್ಮಿಲನ

ಹೊನ್ನಾವರ: ಪಟ್ಟಣದ ರಜತಗಿರಿ ವಿಕಾಸ ಸಮಿತಿ ಆಶ್ರಯದಲ್ಲಿ ರಜತಗಿರಿ ನಿವಾಸಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮ ಜರುಗಿತು.

ಶರಾವತಿ ನೀರು ಸರಬುರಾಜು ಯೋಜನೆಯ ಎಂಜಿನಿಯರ್ ಕಲ್ಯಾಣ ಕುಮಾರ್ ಇವರಿಗೆ ಸನ್ಮಾನಿಸಲಾಯಿತು. ಅತಿಥಿ ಲೋಕಾಯುಕ್ತ ಡಿ.ವೈ.ಎಸ್.ಪಿ ಮಂಜುನಾಥ ಗೌಡ ಮಾತನಾಡಿ, ನಗರೀಕರಣದಿಂದ ಮಾನವೀಯ ಸಂಬಂಧಗಲು ಕಡಿಮೆಯಾಗುತ್ತಿರು ಈ ಸಮಯದಲ್ಲಿ ಮಾನವ ಸಂಬಂಧಗಳನ್ನು ಬೆಸೆಯಲು ಸ್ನೇಹ ಸಮ್ಮಿಲನ ಕಾರ್ಯಕ್ರಮ ಆಯೋಜಿಸಿದ್ದು ತುಂಬಾ ಅರ್ಥಪೂರ್ಣವಾಗಿದೆ. ಮಕ್ಕಳಿಂದ ದೂರವಿರುವ ತಂದೆ-ತಾಯಿ, ನೆರೆಹೊರೆಯವರೊಂದಿಗೆ ಅನ್ಯೋನ್ಯ ಸಂಬಂಧ ಹೊಂದುವುದು ಇಂದು ಅಗತ್ಯವಾಗಿದೆ.

ದೀಪಾ ಕಾಮತ ಮಾತನಾಡಿ, ಗುರು ಹಿರಿಯರನ್ನು ಗೌರವಿಸುವ ಗುಣವನ್ನು ಮಕ್ಕಳಿಗೆ ಪಾಲಕರು ತಿಳಿಹೇಳಬೇಕು ಎಂದರು. ಸಮಿತಿ ಅಧ್ಯಕ್ಷ ದಿನೇಶ ಕಾಮತ ಅಧ್ಯಕ್ಷತೆವಹಿಸಿದ್ದರು. ಕಾರ್ಯದರ್ಶಿ ಎಸ್.ಎನ್.ಹೆಗಡೆ ವರದಿವಾಚಿಸಿದರು. ಪಿ.ಎಸ್.ನಾಯ್ಕ ವಂದಿಸಿದರು. ಜಿ.ಪಿ.ಹೆಗಡೆ ಎಸ್.ಸುರೇಶ ಕಾರ್ಯಕ್ರಮ ನಿರ್ವಹಿಸಿದರು.

ರಂಜಿತಾ ಹತ್ಯೆ ಪ್ರಕರಣ ಎನ್‌ಐಎಗೆ ನೀಡಿ

ಮೃತ ಕುಟುಂಬಕ್ಕೆ 50 ಲಕ್ಷ ರು. ಪರಿಹಾರಕ್ಕೆ ವಿಶ್ವ ಹಿಂದೂ ಪರಿಷತ್ ಆಗ್ರಹ

ಯಲ್ಲಾಪುರ: ಯಲ್ಲಾಪುರದಲ್ಲಿ ನಡೆದ ರಂಜಿತಾ ಹತ್ಯೆ ಪ್ರಕರಣ ಗಂಭೀರ ಸ್ವರೂಪದ್ದಾಗಿದ್ದು, ಕೊಲೆಗಾರ ಮೃತಪಟ್ಟಿದ್ದರೂ ಈ ಪ್ರಕರಣದ ತನಿಖೆಯನ್ನು ಇಲ್ಲಿಗೇ ಸ್ಥಗಿತಗೊಳಿಸಬಾರದು ಎಂದು ವಿಶ್ವ ಹಿಂದು ಪರಿಷತ್ ರಾಜ್ಯ ಉಪಾಧ್ಯಕ್ಷ ಗಂಗಾಧರ ಹೆಗಡೆ ಒತ್ತಾಯಿಸಿದ್ದಾರೆ.

ಶನಿವಾರ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹೇಯ ಕೃತ್ಯಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕುಮ್ಮಕ್ಕು ನೀಡಿರುವ ಮತಾಂಧ ಶಕ್ತಿಗಳನ್ನು ತಕ್ಷಣವೇ ಬಂಧಿಸಬೇಕು ಎಂದು ಆಗ್ರಹಿಸಿದರು.

ತನ್ನನ್ನು ವಿವಾಹವಾಗಿ ಧರ್ಮ ಬದಲಿಸಲು ಒಪ್ಪದ ಕಾರಣಕ್ಕೆ ರಂಜಿತಾರನ್ನು ಹತ್ಯೆ ಮಾಡಿದ ರಫೀಕ್‌ನಂತಹ ಜಿಹಾದಿ ಮಾನಸಿಕತೆಯನ್ನು ಸರ್ಕಾರ ಮಟ್ಟಹಾಕಬೇಕು. ಇದು ಕೇವಲ ಒಬ್ಬ ವ್ಯಕ್ತಿಯಿಂದ ನಡೆದ ಕೃತ್ಯವಲ್ಲ, ಇದರ ಹಿಂದೆ ಆತನ ಕುಟುಂಬದವರು ಹಾಗೂ ಆತ ಹೋಗುತ್ತಿದ್ದ ಮಸೀದಿಯ ಪ್ರಚೋದನೆಯೂ ಇರುವ ಸಾಧ್ಯತೆಯಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ರಫೀಕ್ ಕುಟುಂಬದವರ ಮೇಲೆ ಜಾತಿ ನಿಂದನೆ ಪ್ರಕರಣ ದಾಖಲಿಸಬೇಕು ಹಾಗೂ ಕೊಲೆಗೆ ಸಹಕರಿಸಿದ ಹಿನ್ನೆಲೆಯಲ್ಲಿ ಅವರನ್ನು ತಕ್ಷಣ ಬಂಧಿಸಬೇಕು. ರಾಜ್ಯ ಸರ್ಕಾರದ ತನಿಖಾ ಸಂಸ್ಥೆಗಳ ಮೇಲೆ ನಮಗೆ ವಿಶ್ವಾಸವಿಲ್ಲದ ಕಾರಣ, ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ ಒಪ್ಪಿಸಬೇಕು ಎಂದು ಅವರು ಒತ್ತಾಯಿಸಿದರು.

ಮೃತ ಮಹಿಳೆಯ ಕುಟುಂಬಕ್ಕೆ ಸರ್ಕಾರವು ತಕ್ಷಣವೇ 50 ಲಕ್ಷ ರೂಪಾಯಿ ಪರಿಹಾರ ಘೋಷಿಸಬೇಕು ಎಂದು ಆಗ್ರಹಿಸಿದ ಗಂಗಾಧರ ಹೆಗಡೆ, ಮೃತಳ ಪುಟ್ಟ ಮಗನ ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದು ತಿಳಿಸಿದರು. ಅತ್ಯಂತ ಬಡತನದಲ್ಲಿರುವ ಆ ಕುಟುಂಬಕ್ಕೆ ಸರ್ಕಾರದಿಂದ

ಸುಸಜ್ಜಿತವಾದ ಮನೆಯನ್ನು ನಿರ್ಮಿಸಿಕೊಡಬೇಕು ಎಂದು ಅವರು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದ ವಿಶ್ವ ಹಿಂದು ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಪುಂಡಲಿಕ ದಳವಾಯಿ ಮಾತನಾಡಿ, ಸರ್ಕಾರದ ಹಿಂದೂ ವಿರೋಧಿ ಧೋರಣೆಯೇ ಇಂತಹ ಹತ್ಯೆಗಳಿಗೆ ಪ್ರೇರಣೆಯಾಗುತ್ತಿದೆ. ಮುಂಬರುವ ಯಲ್ಲಾಪುರ ಗ್ರಾಮದೇವಿ ಜಾತ್ರೆಯಲ್ಲಿ ಜಿಹಾದಿ ಮನಸ್ಥಿತಿಯ ಮುಸ್ಲಿಮರಿಗೆ ವ್ಯಾಪಾರ ಮಾಡಲು ಅವಕಾಶ ನೀಡಬಾರದು. ಒಂದು ವೇಳೆ ಆಡಳಿತ ಮಂಡಳಿ ಅವಕಾಶ ನೀಡಿದ್ದೇ ಆದಲ್ಲಿ ವಿಶ್ವ ಹಿಂದು ಪರಿಷತ್ ವತಿಯಿಂದ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಗೋಷ್ಠಿಯಲ್ಲಿ ಬಜರಂಗ ದಳದ ಸಂಯೋಜಕ ಬಸವರಾಜ ಸೂಗೂರು, ವಿಭಾಗ ಸಂಯೋಜಕ ಅಮಿತ್ ಶೇಟ್, ಜಿಲ್ಲಾ ಉಪಾಧ್ಯಕ್ಷ ನಾರಾಯಣ ನಾಯಕ, ತಾಲೂಕು ಅಧ್ಯಕ್ಷ ಗಜಾನನ ನಾಯಕ, ಸಂತೋಷ ಮಾದಿಗರ್ ಹಾಗೂ ಮಂಜುನಾಥ ಹಿರೇಮಠ ಪಾಲ್ಗೊಂಡಿದ್ದರು.

ಒಂದೇ ತಿಂಗಳಲ್ಲಿ ಎರಡು ವಾಹನಗಳು ಕಳವು

ಹೊನ್ನಾವರ: ತಾಲೂಕಿನ ಕಾಸರಕೋಡ ವ್ಯಾಪ್ತಿಯಲ್ಲಿ ಇತ್ತೀಚೆಗೆ ವಾಹನ ಕಳ್ಳರ ಜಾಲವೊಂದು ಸಕ್ರಿಯವಾಗಿದ್ದು, ಸಾರ್ವಜನಿಕರು ಹಾಗೂ ವಾಹನ ಮಾಲೀಕರಲ್ಲಿ ತೀವ್ರ ಆತಂಕದ ವಾತಾವರಣ ನಿರ್ಮಾಣವಾಗಿದೆ. ಕೇವಲ ಒಂದು ತಿಂಗಳ ಅಂತರದಲ್ಲಿ ಈ ಭಾಗದಲ್ಲಿ ಎರಡು ಪ್ರಮುಖ ವಾಹನಗಳು ಕಳ್ಳತನವಾಗಿದ್ದು, ವಾಹನಗಳನ್ನು ರಸ್ತೆ ಬದಿ ಅಥವಾ ಅಂಗಡಿಗಳ ಮುಂದೆ ನಿಲ್ಲಿಸಲು ಮಾಲೀಕರು ಭಯಪಡುವಂತಾಗಿದೆ.

ಕಳೆದ ಡಿಸೆಂಬರ್ 7ರ ಸಂಜೆಯಿಂದ 8ರ ರಾತ್ರಿಯ ಅವಧಿಯಲ್ಲಿ ಕಾಸರಕೋಡ ಹಿರೇಮಠದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ನಿಲ್ಲಿಸಿದ್ದ ಸುಮಾರು 2 ಲಕ್ಷ ರೂಪಾಯಿ ಮೌಲ್ಯದ ಸುಜುಕಿ ಕಂಪನಿಯ ಇಕೋ ವಾಹನ ಕಳ್ಳತನವಾಗಿದೆ. ಇದರ ಮಾಲೀಕ ಸಂತೋಷ ಶೇಷಗಿರಿ ತಾಂಡೇಲ ಅವರು ವಾಹನದ ಪತ್ತೆಗಾಗಿ ಹೊನ್ನಾವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಇದಾದ ಕೆಲವೇ ದಿನಗಳಲ್ಲಿ, ಅಂದರೆ ಜನವರಿ 6ರ ರಾತ್ರಿಯಿಂದ 7ರ ಬೆಳಿಗ್ಗೆಯ ಅವಧಿಯಲ್ಲಿ ಕಾಸರಕೋಡಿನ ಫಾತಿಮಾ ಕಾಂಪ್ಲೆಕ್ಸ್‌ನ ಸೆಬಾಸ್ಟಿಯನ್ ಅಂಗಡಿಯ ಮುಂದೆ ನಿಲ್ಲಿಸಿದ್ದ ಅಶೋಕ ಲೈಲೆಂಡ್ ಕಂಪನಿಯ 'ದೋಸ್ತ್' ವಾಹನವು ಕಳುವಾಗಿದೆ. ಸುಮಾರು 7 ಲಕ್ಷದ 20 ಸಾವಿರ ರೂಪಾಯಿ ಮೌಲ್ಯದ ಈ ವಾಹನದ ಮಾಲೀಕ ಬೋನಿ ಸಾಂತಾ ಫರ್ನಾಂಡಿಸ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಕಳ್ಳರು ವ್ಯವಸ್ಥಿತವಾಗಿ ಸಂಚು ರೂಪಿಸಿ ಈ ಕೃತ್ಯ ಎಸಗುತ್ತಿರುವುದು ಮಾಲೀಕರ ಆತಂಕಕ್ಕೆ ಕಾರಣವಾಗಿದೆ.

ಈ ಎರಡೂ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೊನ್ನಾವರ ಪೊಲೀಸರು ಈಗಾಗಲೇ ಎಫ್‌ಐಆರ್ ದಾಖಲಿಸಿಕೊಂಡಿದ್ದು, ಕಳ್ಳರನ್ನು ಪತ್ತೆಹಚ್ಚಲು ವಿಶೇಷ ಜಾಲ ಬೀಸಿದ್ದಾರೆ. ರಾತ್ರಿ ವೇಳೆಯ ಗಸ್ತನ್ನು ಬಿಗಿಗೊಳಿಸುವಂತೆ ಮತ್ತು ವಾಹನ ಕಳ್ಳತನ ತಡೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಪೊಲೀಸ್ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಶ್ರೀಧರ ಶೇಟ್‌ಗೆ ಕರ್ನಾಟಕ ಸೇವಾರತ್ನ ಪ್ರಶಸ್ತಿ

ಭಟ್ಕಳ: ಬೆಂಗಳೂರಿನ ಕರ್ನಾಟಕ ಪ್ರೆಸ್ ಕ್ಲಬ್ ನ 2026 ನೇ ಸಾಲಿನ ರಾಜ್ಯದ ಶ್ರೇಷ್ಠ ನಾಗರಿಕ ಸೇವಾ ಪ್ರಶಸ್ತಿಯಾದ ಕರ್ನಾಟಕ ಸೇವಾರತ್ನ ಪ್ರಶಸ್ತಿಗೆ ಕವಿ,ಸಾಹಿತಿ,ಶಿಕ್ಷಕ ಶ್ರೀಧರ ಶೇಟ್ ಶಿರಾಲಿ ಆಯ್ಕೆಯಾಗಿದ್ದಾರೆ.

ಕರ್ನಾಟಕ ಪ್ರೆಸ್ ಕ್ಲಬ್ 2026ರ ಹೊಸ ವರ್ಷದ ಸುವರ್ಣ ಸಮಯದಲ್ಲಿ ಕನ್ನಡ ನಾಡು, ನುಡಿ ಮತ್ತು ಕರ್ನಾಟಕದ ಅಭಿವೃದ್ಧಿಗಾಗಿ ಶ್ರಮಿಸುತ್ತಾ ವಿವಿಧ ಕ್ಷೇತ್ರಗಳಲ್ಲಿ ಅಮೂಲ್ಯ ಸೇವೆ ಸಲ್ಲಿಸಿ, ಸಮಾಜಕ್ಕೂ ಮತ್ತು ಈ ನಾಡಿಗೆ ಮಾದರಿ ಆಗಿರುವ ಕೆಲ ಸಾಧಕರನ್ನು ಸನ್ಮಾನಿಸಿ, ಅಭಿನಂಧಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಬಂದಿದ್ದು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದ ಅಸಾಧಾರಣ ಸೇವೆಗಾಗಿ ಶ್ರೀಧರ ಶೇಟ್ ಶಿರಾಲಿ ಇವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿರುವುದಾಗಿ ಪ್ರೆಸ್ ಕ್ಲಬ್ ನ ರಾಜ್ಯಾಧ್ಯಕ್ಷ ಎಸ್. ರಾಮಸ್ವಾಮಿ ಮತ್ತು ಪ್ರಧಾನ ಕಾರ್ಯದರ್ಶಿ ರಮೇಶ ಎಸ್.ಜಿ. ತಿಳಿಸಿದ್ದಾರೆ.

ಭಟ್ಕಳ ತಾಲೂಕಿನ ಜಾಲಿ ಸರಕಾರಿ ಪ್ರೌಢ ಶಾಲೆಯಲ್ಲಿ ಆಂಗ್ಲ ಭಾಷಾ ಶಿಕ್ಷಕರಾಗಿರುವ ಇವರು ಕವಿ, ಲೇಖಕ, ಅಂಕಣಕಾರ,ಚಿತ್ರ ಕಲಾವಿದ, ವಾಗ್ಮಿ, ವ್ಯಂಗ್ಯಚಿತ್ರಕಾರ, ಕಾರ್ಯಕ್ರಮ ನಿರೂಪಕ, ಸಂಘಟನಾಕಾರ, ವ್ಯಕ್ತಿತ್ವ ವಿಕಸನ ಮಾರ್ಗದರ್ಶಕ, ಸಂಪನ್ಮೂಲ ವ್ಯಕ್ತಿ ಹೀಗೆ ಬಹುಮುಖ ಪ್ರತಿಭೆಯ ಸಂಗಮವಾಗಿ ಜನಮನ್ನಣೆ ಗಳಿಸಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ವಿಭಾಗಗಳಲ್ಲಿ ಒಟ್ಟು 33 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದಾರೆ.ಇವರು ನಿರಂತರ ಎಂಟು ವರ್ಷಗಳಿಂದ ಎಸ್. ಎಸ್. ಎಲ್. ಸಿ. ವಾರ್ಷಿಕ ಪರೀಕ್ಷೆಯಲ್ಲಿ ಶೇಕಡಾ ನೂರಕ್ಕೆ ನೂರರಷ್ಟು ಫಲಿತಾಂಶ ಸಾಧಿಸುತ್ತಾ ಬಂದಿದ್ದಾರೆ. ಇವರ ವಿದ್ಯಾರ್ಥಿಗಳು ಇಂಗ್ಲಿಷ್ ವಿಷಯದಲ್ಲಿ ತಾಲೂಕಿನಲ್ಲಿಯೇ ಅತಿ ಹೆಚ್ಚು ಸರಾಸರಿ ಅಂಕ ಗಳಿಸುವ ಹಾಗೆ ಬೋಧಿಸಿರುವುದಕ್ಕಾಗಿ ಎರಡು ಬಾರಿ ಧಾರವಾಡದ ಡಾ.ಎಚ್. ಎಫ್.ಕಟ್ಟೀಮನಿ ಪ್ರತಿಷ್ಠಾನದ 'ಶಿಕ್ಷಕ ಪರಿಶ್ರಮ ಹಿರಿಮೆಗೆ ಗೌರವ' ಪ್ರಶಸ್ತಿಯಿಂದ ಪುರಸ್ಕರಿಸಲ್ಪಟ್ಟಿದ್ದಾರೆ.

ಶಿಕ್ಷಣ ಇಲಾಖೆಯ ಹಲವು ತರಬೇತಿಗಳ ರಾಜ್ಯ - ಜಿಲ್ಲೆ- ತಾಲೂಕು ಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ, ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಮಾಸ್ಟರ್ ಟ್ರೇನರ್ ಆಗಿ ಸೇವೆ ಸಲ್ಲಿಸಿದ್ದಾರೆ. ಇವರ ಶೈಕ್ಷಣಿಕ ಸಾಧನೆಗಾಗಿ ಕರ್ನಾಟಕ ಸರ್ಕಾರವು 2025ನೇ ಸಾಲಿನ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಪುರಸ್ಕರಿಸಿರುವುದನ್ನು ಸ್ಮರಿಸಿಕೊಳ್ಳಬಹುದು.

ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿರುವ ಇವರು ಹಸಿವು ಸಾಯುವುದಿಲ್ಲ, ಬೇಲಿಯ ಹೂವು, ಬೆರಳ ಸಂಧಿಯಿಂದ, ಕಾವ್ಯ ಜ್ಯೋತಿ ಇತ್ಯಾದಿ ಕವನ ಸಂಕಲಗಳು ಸೇರಿದಂತೆ ಒಟ್ಟು ಏಳು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಭಟ್ಕಳ ತಾಲೂಕಿನ ಒಂಭತ್ತನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗಿದೆ.

ಹಾವೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ, ಬನವಾಸಿಯಲ್ಲಿ ನಡೆದ ರಾಜ್ಯಮಟ್ಟದ ಕದಂಬೋತ್ಸವ ಕವಿಗೋಷ್ಠಿ ಹಾಗೂ ರಾಜ್ಯಮಟ್ಟದ ಕವಿಗೋಷ್ಠಿಗಳಲ್ಲಿ ಕವನ ವಾಚನ ಮಾಡಿ ಸನ್ಮಾನಿಸಲ್ಪಟ್ಟಿದ್ದಾರೆ. ಇವರ 'ಬೇಲಿಯ ಹೂವು' ಎಂಬ ಪ್ರಖ್ಯಾತ ಮಕ್ಕಳ ಕವನವು ಐಸಿಎಸ್‌ಸಿ ಪಠ್ಯಕ್ರಮದ ಐದನೇ ತರಗತಿಯ ಕನ್ನಡ ಚಂದನ ಪಠ್ಯಪುಸ್ತಕದಲ್ಲಿ ಪ್ರಕಟಿತವಾಗಿ ಅಪಾರ ಜನ ಮೆಚ್ಚುಗೆ ಗಳಿಸಿದೆ.ಕರಾವಳಿ ಪ್ರಭ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿರುವ ವ್ಯಕ್ತಿತ್ವ ವಿಕಸನ ಲೇಖನಗಳ ಕಾವ್ಯ ಜ್ಯೋತಿ ಎಂಬ ಅಂಕಣ ಜನಪ್ರಿಯತೆ ಗಳಿಸಿದೆ.ತಮ್ಮ ಕವನಗಳಿಗಾಗಿ ಎರಡು ಬಾರಿ ರಾಜ್ಯಮಟ್ಟದ 'ಸಂಕ್ರಮಣ ಕಾವ್ಯ ಪ್ರಶಸ್ತಿ'ಯಿಂದ ಪುರಸ್ಕರಿಸಲ್ಪಟ್ಟಿರುವ, ಇವರ ಸಾಹಿತ್ಯ ಸೇವೆಯನ್ನು ಪರಿಗಣಿಸಿ ಭಟ್ಕಳ ತಾಲೂಕ ಆಡಳಿತವು 'ರಾಜ್ಯೋತ್ಸವ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಮಾಸ್ಕೇರಿ ಸಾಹಿತ್ಯಾರಾಧನಾ ವೇದಿಕೆ ಮತ್ತು ಸಾಹಿತ್ಯ ಸಂಚಯ ಶಿರಸಿಯವರು ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದ್ದಾರೆ.

ಪ್ರಶಸ್ತಿ ಪ್ರದಾನ ಕಾರ್ಯಕ್ರಮವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಬೆಂಗಳೂರಿನ ಜ್ಞಾನ ಭಾರತಿಯ ಕಲಾಗ್ರಾಮದಲ್ಲಿ ಇದೇ ಜನವರಿಯ 13 ನೇ ತಾರೀಕಿನ ಮಂಗಳವಾರ ಸಂಜೆ 4.00 ಗಂಟೆಗೆ ಜರುಗಲಿದೆ. ಇವರಿಗೆ ಈ ಪ್ರಶಸ್ತಿ ಸಂದಿರುವುದಕ್ಕೆ ತಾಲೂಕಿನ ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ಮತ್ತು ಗಣ್ಯರು ಶುಭ ಹಾರೈಸಿದ್ದಾರೆ.

ಚದುರಂಗ ಪಂದ್ಯಾವಳಿ ವಿಜೇತರು

ಶಿರಸಿ: ಉತ್ತರಕನ್ನಡ ಜಿಲ್ಲಾಚದುರಂಗ ಸಂಘ ಹಾಗೂ ಕರ್ನಾಟಕ ರಾಜ್ಯಚದುರಂಗ ಸಂಘದ ಶುಭ ಚಿಹ್ನೆಯೊಂದಿಗೆ ಜ.4ರಂದು, ನಗರದ ಕಡವೆ ಶ್ರೀಪಾದಹೆಗಡೆ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಚದುರಂಗ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು ದೀಕ್ಷಿತ್ ಜೆ. ರೂ. 10,000ನಗದುಮತ್ತು ಟ್ರೋಫಿ, ದ್ವಿತೀಯ ನಿತೀಶ್ ಭಟ್ ರೂ.9,000ಮತ್ತು ಟ್ರೋಫಿ, ತೃತೀಯ ನಿತಿನ್ ಗಣೇಶ್ ಟಿ. ರೂ.8,000ಮತ್ತು ಟ್ರೋಫಿಗಳನ್ನು ತಮ್ಮದಾಗಿಸಿಕೊಂಡರು.

ನಾಲ್ಕರಿಂದ 20ನೇಯ ಸ್ಥಾನವನ್ನು ವಿಲಾಸ್ ಅಂಡ್ರಡೆ, ವರ್ಧನಎಮ್.ಹೆಗಡೆ, ಚಿರಾಂತ್ ಎಮ್.ಡಿ.,ಸುಮೀತ್ ಕುಮಾರ್ ಎಮ್. ಎಸ್., ಸಮರ್ಥಜೆ.ರಾವ್, ಸಚಿನ್ ಪಿ. ಎಸ್., ವಿರಾಜ್ ಪಿ.ಶೆಟ್ಟಿ, ಭಾಸ್ಕರ ರಮೇಶ್, ಕಿಶನ್ ಕುಮಾರ್ ಎನ್. ಎನ್., ಗುರುರಾಜ್ ಶೆಟ್ಟಿ, ವಿಶ್ವೇಶ್ವರ್ ಸಭಾಹಿತ್, ಮಹಾಲಿಂಗಪ್ಪ ಎನ್. ಸಿ.,ವಿಶ್ವೇಶ್ವರಯ್ಯ,ಗುರುಮಠ, ಅಮೋಘ ಆರ್.ಭಟ್, ವಿಜಯೀಂದ್ರ, ಪ್ರಣವ್ ಯು. ನಾಯ್ಕ, ಮಹೇಶ್ ಬೆಂಕಟವಳ್ಳಿಎಮ್., ರೂ.45,000 ದೊಂದಿಗೆ ಕ್ರಮವಾಗಿ ಪಡೆದು ಕೊಂಡರು. ಉತ್ತಮ ಆಟಗಾರ್ತಿ ಪ್ರಥಮ ಸ್ಥಾನವನ್ನು ಪ್ರಿಯಾಂಕ ಎ. ಎಸ್. ರೂ.2,000 ಮತ್ತು ಟ್ರೋಫಿ, ದ್ವಿತೀಯ ಕವಿತಾ ಗಜಾನನ ಗೌಡ ರೂ.1,000 ಮತ್ತು ಟ್ರೋಫಿಯೊಂದಿಗೆ ಹಂಚಿಕೊಂಡರು.

ಉತ್ತಮ ಉತ್ತರಕನ್ನಡ ಜಿಲ್ಲಾಆಟಗಾರ ಪ್ರಥಮ ಸ್ಥಾನವನ್ನು ನವೀನಹೆಗಡೆ ರೂ.2,000ಮತ್ತು ಟ್ರೋಫಿ, ದ್ವಿತೀಯ ಭೂಮಿಕಾ ಪ್ರದೀಪಹೆಗಡೆ ರೂ.1,000 ಮತ್ತು ಟ್ರೋಫಿಯೊಂದಿಗೆ ಹಂಚಿಕೊಂಡರು. ಉತ್ತಮ ಹಿರಿಯ ಆಟಗಾರ ಪ್ರಶಸ್ತಿ(45 ವರ್ಷ ಮೇಲ್ಪಟ್ಟ ವಿಭಾಗ)ಪ್ರಥಮ ಶ್ರೀಮತಿ ಶಾಂತರಾಮ ಕೆ ರೂ.2,000 ಮತ್ತು ಟ್ರೋಫಿ, ದ್ವಿತೀಯಚಂದ್ರಕುಮಾರ್ ಸಿ.(65 ವರ್ಷ ಮೇಲ್ಪಟ್ಟ ವಿಭಾಗ)ಪ್ರಥಮಮುನಿರಾಜು .ಕೆ ರೂ.1,000 ಮತ್ತು ಟ್ರೋಫಿ, ದ್ವಿತೀಯಮದನ ಎನ್ ತಾಲೇಕರ್ (60 ವರ್ಷ ಮೇಲ್ಪಟ್ಟ ವಿಭಾಗ) ಪ್ರಥಮ ತುಲಸಿರಾಜ. ರೂ.2,000ಮತ್ತು ಟ್ರೋಫಿ, ದ್ವಿತೀಯ ಮಂಜುನಾಥ ಪ್ರಸಾದ ರೂ.1,000 ಮತ್ತು ಟ್ರೋಫಿಗಳೊಂದಿಗೆ ಹಂಚಿಕೊಂಡರು.

ಉತ್ತಮ ವಿಕಲಾಂಗ ಪ್ರಶಸ್ತಿ, ಪ್ರಥಮ ಉತ್ಸವ ಬಿ.ಪಿ. ರೂ.2,000ಮತ್ತು ಟ್ರೋಫಿ, ದ್ವಿತೀಯ ಮುನಿರಾಜು ಕೆ. ರೂ.1,000ಮತ್ತು ಟ್ರೋಫಿಯೊಂದಿಗೆ ಹಂಚಿಕೊಂಡರು. ಉತ್ತಮ ಆಟಗಾರರು ಎಲ್ಲೋ ರೇಟಿಂಗ್ 1800 ಮತ್ತು ಕೆಳಗಿನ ವಿಭಾಗ ಪ್ರಥಮರಾಮಚಂದ್ರ ಭಟ್ ರೂ.2,000 ಮತ್ತು ಟ್ರೋಫಿ, ದ್ವಿತೀಯ ಯೋಗೀಶ್ ಭಟ್ ರೂ.1,500 ಮತ್ತು ಟ್ರೋಫಿ, ಚಿರಾಗ್ ಜಿ ರೂ.1,000 ಮತ್ತು ಟ್ರೋಫಿಯನ್ನು ಗೆದ್ದರು.

ಉತ್ತಮ ಆಟಗಾರರು ಎಲ್ಲೋರೇಟಿಂಗ್ ರೂ. 1600 ಮತ್ತು ಕೆಳಗಿನ ವಿಭಾಗ ಪ್ರಥಮ ಮಂಜುನಾಥ ಡಿ. ನಾಯ್ಕ ರೂ.2,000ಮತ್ತು ಟ್ರೋಫಿ ದ್ವಿತೀಯಜಯಂತ ಎಸ್. ರೂ.1,500ಮತ್ತು ಟ್ರೋಫಿ, ತೃತೀಯ ಶ್ರವಣ ಹೆಗಡೆ ರೂ.1,000ಮತ್ತು ಟ್ರೋಫಿ, ಚತುರ್ಥ ಗಗನ ಆರ್. ಕರ್ಜಗಿ ರೂ.500 ಮತ್ತು ಟ್ರೋಫಿಗಳೊಂದಿಗೆ ಕ್ರಮವಾಗಿ ಪಡೆದರು. ಉತ್ತಮ ರೇಟಿಂಗ್ ರಹಿತ ಆಟಗಾರರ ವಿಭಾಗ ಪ್ರಥಮ ರಾಜೇಶ್ ಎಸ್.ಕುಬ್ಬಲ್ ರೂ.2000 ಮತ್ತು ಟ್ರೋಫಿ, ದ್ವಿತೀಯ ಮಹೇಶ್ ದತ್ತಾತ್ರಯ ಭಟ್ ರೂ.1,000ಮತ್ತು ಟ್ರೋಫಿಯೊಂದಿಗೆ ಕ್ರಮವಾಗಿ ವಿಜೇತರಾಗಿದ್ದಾರೆ.

8 ವರ್ಷದೊಳಗಿನವರ ವಿಭಾಗದಲ್ಲಿ ರುತ್ವಿಕ್ ಎಮ್. ರಾಯ್ಕರ(ಪ್ರಥಮ),ನಮನ್ ಎನ್. ಜಿ. (ದ್ವಿತೀಯ), ಮಿರರಾಠೋರ್ (ತೃತೀಯ), ಸಮರ್ಥ್ ಎಸ್. ಪೂಜಾರ್ (ಚತುರ್ಥ), ವಿಭವಸುಕೆ. ಎನ್. (ಐದನೇಯ) ಮತ್ತು 10 ವರ್ಷದೊಳಗಿನ ವಿಭಾಗದಲ್ಲಿ ಅನಿಶ್ ಸೀತಾರಾಮಶೆಟ್ಟಿ (ಪ್ರಥಮ) ಪ್ರಭಾತ ಭಟ್ (ದ್ವಿತೀಯ), ಪ್ರಯಾಗ್ ರಾಘವೇಂದ್ರ ಕಣಗಿಲ್(ತೃತೀಯ), ರಿಶಾಂಕ್ ಎಮ್ .ನಾಯ್ಕ (ಚತುರ್ಥ) ಸಂಕಲ್ಪ ಶೆಟ್ಟರ್(ಐದನೇಯ) ಸ್ಥಾನವನ್ನು ಕ್ರಮವಾಗಿ ಗಳಿಸಿಕೊಂಡಿದ್ದಾರೆ.

12 ವರ್ಷದೊಳಗಿನ ವಿಭಾಗದಲ್ಲಿ ದೀಪಿಕಾ ಪ್ರದೀಪ್ ಹೆಗಡೆ (ಪ್ರಥಮ), ಅಭಿರಾಮ ಎಚ್ ಪಿ (ದ್ವಿತೀಯ), ಕೀರ್ತನಎಮ್. (ತೃತೀಯ), ಅನ್ಶ್ ಜಿ.ಬಳ್ಕುರ್ (ಚತುರ್ಥ) ಚಿಂತನ ಬಿ.ಭಟ್ (ಐದನೇಯ) ಸ್ಥಾನಗಳನ್ನು ಕ್ರಮವಾಗಿ ಹಂಚಿಕೊಂಡರು. 14 ವರ್ಷದೊಳಗಿನವರ ವಿಭಾಗದಲ್ಲಿ ಪ್ರಣಾವ್ ಕುಮಾರ (ಪ್ರಥಮ), ಶ್ರೇಯಾ ಆರ್ ಹೆಗಡೆ (ದ್ವಿತೀಯ), ಮಾಧವ್ ಭಟ್ (ತೃತೀಯ)ರಾಹುಲ್ ಶೇಡಬಾಳ (ಚತುರ್ಥ), ಆರುಶ್ ಎಸ್. ನಾಯ್ಕ (ಐದನೇಯ) ಸ್ಥಾನಗಳನ್ನು ಕ್ರಮವಾಗಿ ತಮ್ಮದಾಗಿಸಿ ಕೊಂಡರು. 16 ವರ್ಷದೊಳಗಿನ ವಿಭಾಗದಲ್ಲಿ ಚಿರಾಗರೋಹಿತ್ ಹೆಗಡೆ (ಪ್ರಥಮ), ಯಶಸ್ ಎಚ್. ಎಸ್.(ದ್ವಿತೀಯ), ಲಿಖಿತಾಎಚ್. ಪಿ. (ತೃತೀಯ), ಅಭಿನವ್ ಆರ್.ಗಾಂವ್ಕರ್ (ಚತುರ್ಥ), ಶ್ರೇಯ ಭಟ್ (ಐದನೇಯ) ಸ್ಥಾನಗಳನ್ನು ಕ್ರಮವಾಗಿ ಪಡೆದಿದ್ದಾರೆ. ಉತ್ತಮ ಕಿರಿಯ ಆಟಗಾರ ಪ್ರಶಸ್ತಿಯನ್ನು ಜಿಶ್ನು ಎಚ್. ಆರ್. ಪಡೆದರು. ಪಂದ್ಯಾವಳಿಯಲ್ಲಿ ಒಟ್ಟೂ 143 ಆಟಗಾರರು ಭಾಗವಹಿಸಿದ್ದರು.

ಮುಖ್ಯ ತೀರ್ಪುಗಾರರಾಗಿ ಮಂಜುನಾಥ.ಎಮ್ (ಆಯ್.ಎ)ಆಗಮಿಸಿದ್ದರು ಮತ್ತು ಮುಖ್ಯ ಅಥಿತಿಯಾಗಿ ವಸುಮತಿ ಭಟ್ (ಟಿ.ಎಸ್. ಎಸ್. ನಿರ್ದೇಶಕರು) ಹಾಗೂಡಾ. ರಾಮಚಂದ್ರ ಭಟ್ (ಉಪಾಧ್ಯಕ್ಷರು, ಉ.ಕ ಜಿಲ್ಲಾ ಚದುರಂಗ ಸಂಘ ಹಾಗೂ ಅಂತಾರಾಷ್ಟ್ರೀಯ ಚದುರಂಗ ಆಟಗಾರರು) ಪ್ರಶಸ್ತಿಗಳನ್ನು ವಿತರಿಸಿದರು. ನವೀನಶ್ರೀ. ಹೆಗಡೆ (ಸಹ ಕಾರ್ಯದರ್ಶಿ ಕರ್ನಾಟಕ ರಾಜ್ಯ.ಚದುರಂಗಸಂಘ) ಪಂದ್ಯಾವಳಿಗೆ ಆಯೋಜಕರಾಗಿ ಕಾರ್ಯ ನಿರ್ವಹಿಸಿದರು. ಪಂದ್ಯಾವಳಿಯು ಒಟ್ಟೂ ರೂ. 1,00,000 ನಗದು ಹಾಗು 49 ಟ್ರೋಫಿಗಳನ್ನೊಳಗೊಂಡಿತ್ತು.

ಸಮಾಚಾರ ಸಣ್ಣದಲ್ಲ

ಟೈಪಿಂಗ್ ಪರೀಕ್ಷೆ ಜ.12ರಿಂದ ಆರಂಭ

ಧಾರವಾಡ: ಶಾಲಾ ಶಿಕ್ಷಣ ಇಲಾಖೆಯ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಬೆರಳಚ್ಚು(ಟೈಪಿಂಗ್) ಪರೀಕ್ಷೆಗಳು ಜ.12ರಂದು ರಾಜ್ಯವ್ಯಾಪಿ ಆರಂಭಗೊಳ್ಳಲಿವೆ. ಜ.16ರಿಂದ ಇಂಗ್ಲಿಷ್ ಭಾಷೆಯ ಶೀಘ್ರಲಿಪಿ (ಶಾರ್ಟ್‌ಹ್ಯಾಂಡ್) ಮತ್ತು ಜ.19 ರಿಂದ ಕನ್ನಡ ಭಾಷೆಯ ಶೀಘ್ರ ಲಿಪಿ ಪರೀಕ್ಷೆಗಳು ನಡೆಯಲಿವೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ರಾಜ್ಯ ನಿರ್ದೇಶಕ ಎಚ್. ಎನ್. ಗೋಪಾಲಕೃಷ್ಣ ಆದೇಶ ಹೊರಡಿಸಿ, ಎಲ್ಲ ಪರೀಕ್ಷೆಗಳನ್ನು ನಿಯಮಾನುಸಾರ ವ್ಯವಸ್ಥಿತವಾಗಿ ಜರುಗಿಸಲು ಸೂಚನೆ ನೀಡಿ, ಅಧಿಕೃತ ವೇಳಾಪಟ್ಟಿ ಪ್ರಕಟಿಸಿದ್ದಾರೆ. ಅಭ್ಯರ್ಥಿಗಳು ಧಾರವಾಡ ಜಿಲ್ಲೆಯ ವ್ಯಾಪ್ತಿಯ ಕನ್ನಡ ಮತ್ತು ಆಂಗ್ಲ ಭಾಷೆಯ ಬೆರಳಚ್ಚು ಮತ್ತು ಶೀಘ್ರಲಿಪಿ ಪರೀಕ್ಷೆಗಳ ಸಮಗ್ರ ಮಾಹಿತಿಗಾಗಿ ನಗರದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಚೇರಿ ಅಥವಾ ನವನಗರದ ಅನ್ನಪೂರ್ಣ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ ಸಂಸ್ಥೆಗೆ ಖುದ್ದಾಗಿ ಭೇಟಿ ನೀಡಬಹುದು. ಜ.15 ಮಕರ ಸಂಕ್ರಾಂತಿ ಹಾಗೂ ಜ.18 ರಂದು ರಜೆ ಇರುವುದರಿಂದ ಈ ದಿನಗಳಂದು ಪರೀಕ್ಷೆಗಳು ನಡೆಯುವದಿಲ್ಲ. ಹೆಚ್ಚಿನ ಮಾಹಿತಿಗಾಗಿ ಮೊ. 9972952929 ಸಂಪರ್ಕಿಸುವಂತೆ ಜಿಲ್ಲಾ ಬೆರಳಚ್ಚು ಮತ್ತು ಶೀಘ್ರಲಿಪಿ ಸಂಸ್ಥೆಗಳ ಸಂಘದ ಅಧ್ಯಕ್ಷ ಅನಿಲಕುಮಾರ ಉಳ್ಳಾಗಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಸ್ತೆ ಸುರಕ್ಷತಾ ಮಾಸಾಚರಣೆ

ಹುಬ್ಬಳ್ಳಿ: ಪ್ರಾದೇಶಿಕ ಸಾರಿಗೆ ಕಚೇರಿಯ ವ್ಯಾಪ್ತಿಯಲ್ಲಿನ ಎಲ್ಲಾ ವಾಹನ ಡೀಲರ್‌ಗಳ ಮುಖ್ಯಸ್ಥರು ಹಾಗೂ ಅವರ ಸಿಬ್ಬಂದಿಗಳಿಗೆ ಗಬ್ಬೂರಿನ ಪ್ರಾದೇಶಿಕ ಸಾರಿಗೆ ಕಚೇರಿಯ ಸಭಾಂಗಣದಲ್ಲಿ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ-2026ರ ಅಂಗವಾಗಿ ಉಪನ್ಯಾಸ ಶಿಬಿರ ನಡೆಯಿತು. ಅಧ್ಯಕ್ಷತೆ ವಹಿಸಿದ್ದ ಪ್ರಾದೇಶಿಕ ಸಾರಿಗೆ ಅಧಿಕಾರಿ ಶ್ರೀಕಾಂತ ಬಡಿಗೇರ ಮಾತನಾಡಿ, ಸುರಕ್ಷಿತ ವಾಹನ ಚಾಲನೆ, ಉಚಿತವಾಗಿ ಹೆಲ್ಮೆಟ್ಗಳನ್ನು ವಿತರಿಸಲು, ಸೇಫ್ಟಿ ಹಾರ್ನೆಸ್ ಸಾಧನಗಳ ಕುರಿತು ಅಗತ್ಯ ಪ್ರಚಾರ ಮಾಡಬೇಕು ಎಂದರು. ಹಿರಿಯ ಮೋಟಾರು ವಾಹನ ನಿರೀಕ್ಷಕ ಬಾಲಚಂದ್ರ, ತೊದಲಬಾಗಿ, ಅಧೀಕ್ಷಕ ನಿಂಗಪ್ಪ ಬಿಳ್ಳೂರ, ಕೆ. ಎಂ.ಗೀತಾ ಭಾಗವಹಿಸಿದ್ದರು. ಜೆ.ವಿ. ದಿನಮಣಿ ನಿರೂಪಿಸಿದರು. ನಿಂಗಪ್ಪ ಬಿಳ್ಳೂರ ವಂದಿಸಿದರು.

ವ್ಯಕ್ತಿಯ ನಿಗೂಢ ಸಾವು: ಕೇಸ್ ದಾಖಲು

ಧಾರವಾಡ: ನಗರದ ಸಾಯಿ ದರ್ಶನಿ ಲೇಔಟ್‌ನಲ್ಲಿ ನೇಪಾಳ ಮೂಲದ ವ್ಯಕ್ತಿಯೊಬ್ಬರು ನಿಗೂಢವಾಗಿ ಸಾವನ್ನಪ್ಪಿದ್ದು, ಅವರೊಂದಿಗೆ ಉಳಿದುಕೊಂಡಿದ್ದ ಇತರ ಆರು ಮಂದಿ ಅಸ್ವಸ್ಥಗೊಂಡಿರುವ ಘಟನೆ ಶನಿವಾರ ನಡೆದಿದ್ದು ಬೆಳಕಿಗೆ ಬಂದಿದೆ. ಮೃತ ವ್ಯಕ್ತಿಯನ್ನು ನೇಪಾಳ ಮೂಲದ ಬಿಬೇಕ್ (40) ಎಂದು ಗುರುತಿಸಲಾಗಿದೆ. ನಗರದ ಕೆ.ಸಿ. ಪಾರ್ಕ್ ಬಳಿ ಇರುವ 'ಚಿಂಗ್ಸ್‌ಚ್ವಾಂಗ್ ಮೊಮೋಸ್' ಫಾಸ್ಟ್ ಫುಡ್ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ರಾತ್ರಿ ಮನೆಗೆ ಮರಳಿದ್ದ ಏಳು ಜನರ ತಂಡ ಊಟ ಮಾಡಿ ಮಲಗಿತ್ತು. ಶನಿವಾರ ಬೆಳಗ್ಗೆ ನೋಡಿದಾಗ ಬಿಬೇಕ್ ಮೃತಪಟ್ಟಿರುವುದು ಬೆಳಕಿಗೆ ಬಂದಿದೆ. ಬಿಬೇಕ್ ಜತೆಗಿದ್ದ ಉಳಿದ ಆರು ಮಂದಿಯೂ ಅಸ್ವಸ್ಥಗೊಂಡಿದ್ದು, ತಕ್ಷಣ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಚಿಕಿತ್ಸೆ ಪಡೆಯುತ್ತಿರುವವರ ಪೈಕಿ ಮೂವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ. ಸ್ಥಳಕ್ಕೆ ಕಮೀಷನರ್ ಎನ್.ಶಶಿಕುಮಾರ್, ಡಿಸಿಪಿ ಮಹಾನಿಂಗ ನಂದಗಾವಿ, ಎಸಿಪಿ ಪ್ರಶಾಂತ ಸಿದ್ದನಗೌಡರ ಹಾಗೂ ವಿದ್ಯಾಗಿರಿ ಠಾಣೆಯ ಇನ್ಸ್‌ಪೆಕ್ಟರ್‌ತಹಸೀಲ್ದಾರ್‌ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇದು ಆಹಾರ ವಿಷಪೂರಿತವಾಗಿ ಸಂಭವಿಸಿದ ಘಟನೆಯೇ ಅಥವಾ ಕೊಠಡಿಯೊಳಗೆ ಉಸಿರುಗಟ್ಟಿ ನಡೆದ ಅನಾಹುತವೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.

ಅಗಲಿದ ಜೀವ

ಲಕ್ಷ್ಮೀಬಾಯಿ ಗೊರೆಬಾಳ(85)

ಧಾರವಾಡ: ನಗರದ ಗಾಂಧೀನಗರ ನಿವಾಸಿ, ಮೂಲತಃ

ರೋಣ ತಾಲೂಕಿನ ಬೆಳವಣಿಕಿ ಗ್ರಾಮದ ಲಕ್ಷ್ಮೀಬಾಯಿ ಲಿಂಗಬಸಪ್ಪ ಗೊರೆಬಾಳ(85) ಶುಕ್ರವಾರ ನಿಧನರಾದರು. ಅವರಿಗೆ ಇಬ್ಬರು ಗಂಡು ಮಕ್ಕಳು, ಮೂರು ಜನ ಹೆಣ್ಣು ಮಕ್ಕಳು, ಸೊಸೆಯಂದಿರು ಮೊಮ್ಮಕ್ಕಳು ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

{ಲಕ್ಷ್ಮಣ್ ಸವದಿ } ಶಾಸಕ

ಜಮಖಂಡಿ, ಅಥಣಿ, ಕಾಗವಾಡ, ಚಿಕ್ಕೋಡಿ ಮತ್ತು ರಾಯಬಾಗ ತಾಲೂಕುಗಳ ಸುಮಾರು 700 ಹಳ್ಳಿಗಳ ಕುಡಿಯುವ ನೀರು ಮತ್ತು 3 ಲಕ್ಷ ಹೆಕ್ಟೇರ್‌ಪ್ರದೇಶದ ನೀರಾವರಿಗೆ ಆತಂಕ ಎದುರಾಗಿತ್ತು. ಅಧಿಕಾರಿಗಳು ಮತ್ತು ತಜ್ಞರು ಹಗಲು ರಾತ್ರಿ ಶ್ರಮಿಸಿ ಎರಡು ದಿನಗಳಲ್ಲಿ ಗೇಟ್ ಅನ್ನು ಪುನಃ ಅಳವಡಿಸಿದ್ದಾರೆ.

ವಿದ್ಯಾವರ್ಧಕ ಸಂಘದಲ್ಲಿ ದಿ. ರೇಣವ್ವ ರುದ್ರಪ್ಪ ಅಂಗಡಿ-ದಿ. ರುದ್ರಪ್ಪ ಗುಂಡಪ್ಪ ಅಂಗಡಿ ಸಂಸ್ಮರಣೆ ದತ್ತಿ ಕಾರ್ಯಕ್ರಮ

ಪಾಶ್ಚಾತ್ಯ ಸಂಸ್ಕೃತಿಯಿಂದ ಮೌಲ್ಯಗಳು ಮರೆ

ಧಾರವಾಡ: ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಇಂದು ಭಾರತದಲ್ಲಿ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಾಗಿ ಹಿರಿಯರ ಬಗ್ಗೆ ನಿರ್ಲಕ್ಷ್ಯ ಭಾವನೆ ಉಂಟಾಗಿ ನಮ್ಮ ಸಾಂಪ್ರದಾಯಿಕ ಮೌಲ್ಯಗಳು ದೂರ ಸರಿಯುವಂತಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಆಯೋಜಿಸಲ್ಪಟ್ಟ ದಿ.ರೇಣವ್ವ ರುದ್ರಪ್ಪ ಅಂಗಡಿ ಮತ್ತು ದಿ. ರುದ್ರಪ್ಪ ಗುಂಡಪ್ಪ ಅಂಗಡಿ ಸಂಸ್ಮರಣೆ ದತ್ತಿ ಕಾರ್ಯಕ್ರಮದಲ್ಲಿ ಸವದತ್ತಿಯ ಖ್ಯಾತ ವೈದ್ಯರಾದ ಡಾ.ಸಿ.ಬಿ. ನಾವದಗಿ ಹಾಗೂ ಡಾ.ಅಭಿನಂದನ ಕಬ್ಬಿಣ ಅವರಿಗೆ 'ತಾಯಿ' ಪ್ರಶಸ್ತಿ ಪ್ರದಾನ ಮಾಡಿದರು.

ವಿದೇಶಗಳಿಗೆ ಮಕ್ಕಳನ್ನು ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ ಕಳಿಸುವುದು ತಪ್ಪಲ್ಲ. ಆದರೆ, ಷರತ್ತು ಹಾಕಿ ಅವರನ್ನು ವಿದೇಶಕ್ಕೆ ಕಳಿಸಬೇಕು. ಮರಳಿ ದೇಶಕ್ಕೆ ಬಂದು ನಾಡ ಸೇವೆ, ಪಾಲಕರ ಸೇವೆಗೂ ಆದ್ಯತೆ ನೀಡುವಂತಾಗಬೇಕು. ಇಲ್ಲದಿದ್ದರೆ ತಂದೆ ತಾಯಿ ನಿರ್ಲಕ್ಷಿತರಾಗಿ ಮಕ್ಕಳ ಪ್ರೀತಿಯಿಂದ ವಿಮುಖರಾಗಿ ವೃದ್ಧಾಶ್ರಮ ಸೇರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಪಾಶ್ಚಾತ್ಯದ ವೃದ್ಧಾಶ್ರಮ ಪದ್ಧತಿ ನಮ್ಮ ದೇಶದ ಸಂಸ್ಕೃತಿಗೆ ಸರಿ ಅಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ಪ್ರೊ. ಎಸ್.ವ್ಹಿ. ಸಂಕನೂರ ಮಾತನಾಡಿ, ನಮ್ಮ ವ್ಯಕ್ತಿಗತ ಜೀವನದಲ್ಲಿ ತಂದೆ ತಾಯಿ, ರೈತ ಹಾಗೂ ದೇಶದ ಗಡಿ ಕಾಯುವ ಯೋಧರಿಗೆ ಉಚ್ಚ ಮಟ್ಟದ ಗೌರವವಿದೆ. ಈ ಮೂರು ಜನರ ಋಣ ತೀರಿಸಲು ಎಂದಿಗೂ ಸಾಧ್ಯವಿಲ್ಲ. ತಂದೆ ತಾಯಿ ನಮ್ಮನ್ನು ಪಾಲನೆ ಪೋಷಣೆ ಮಾಡಿದರೆ ರೈತ ಸಕಲ ಜೀವಿಗಳಿಗೂ ಅನ್ನದಾತ. ಯೋಧರು ದೇಶದ ಗಡಿ ಕಾಯ್ದು ನಮ್ಮ ನೆಮ್ಮದಿಯ ಬದುಕಿಗೆ ಕಾರಣವಾಗಿದ್ದಾರೆ ಎಂದರು.

ಸವದತ್ತಿಯ ಖ್ಯಾತ ವೈದ್ಯರಾದ ಡಾ.ಸಿ.ಬಿ.ನಾವದಗಿ ಹಾಗೂ ಡಾ.ಅಭಿನಂದನ ಕಬ್ಬಿಣ ಅವರಿಗೆ 'ತಾಯಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಾಜಿ ಸಂಸದ ಪ್ರೊ.ಐ.ಜಿ.ಸನದಿ ಮಾತನಾಡಿ, ಜಗತ್ತಿನಲ್ಲಿ ಕೆಟ್ಟ ಮಕ್ಕಳು ಹುಟ್ಟಬಹುದು. ಆದರೆ, ಕೆಟ್ಟ ತಾಯಿ ಇರಲು ಸಾಧ್ಯವೇ ಇಲ್ಲ. ನಮ್ಮ ಸಂಸ್ಕೃತಿಯಲ್ಲಿ ತಂದೆ-ತಾಯಿ ಹಾಗೂ ಆಚಾರ್ಯರಿಗೆ ಉಚ್ಚ ಸ್ಥಾನ ನೀಡಲಾಗಿದೆ ಎಂದರು.

ಗದುಗಿನ ನಿವೃತ್ತ ಪ್ರಾಚಾರ್ಯ ಸಿದ್ದು ಯಾಪಲಪರವಿ ಅವರು, ತಾಯಿ ತಂದೆ ನಮ್ಮ ಜೀವನದಲ್ಲಿ ಹೇಗೆ ಅಮೂಲ್ಯ ಪಾತ್ರ ನಿರ್ವಹಿಸುತ್ತಾರೆ ಎಂಬುದನ್ನು ತಿಳಿಸಿ. ವಿದೇಶಿ ಸಂಸ್ಕೃತಿಯಲ್ಲಿ ಹಿರಿಯ ನಾಗರಿಕರನ್ನು, ವೃದ್ಧರನ್ನು ಹೇಗೆ ಗೌರವಿಸುತ್ತಾರೆ ಹಾಗೂ ನಮ್ಮ ದೇಶದ ವೃದ್ಧಾಶ್ರಮಗಳ ನಿರ್ಮಾಣದ ಸ್ಥಿತಿ ಕುರಿತು ಉಪನ್ಯಾಸ ನೀಡಿದರು.

ಮಾಜಿ ಶಾಸಕಿ ಸೀಮಾ ಮಸೂತಿ, ಶಿವಶಂಕರ ಹಂಪಣ್ಣವರ, ನಾಗೇಶ ಕಲಬುರ್ಗಿ,ದತ್ತಿ ದಾನಿಗಳಾದ ಸುಮಂಗಲಾ ಅಂಗಡಿ, ಶಂಕರ ಕುಂಬಿ ಮುಂತಾದವರು ಇದ್ದರು. ಅಕ್ಷಾ ಮುಲ್ಲಾ ಪ್ರಾರ್ಥಿಸಿದರು. ಸತೀಶ ತುರಮರಿ ಸ್ವಾಗತಿಸಿದರು. ಡಾ.ಲಿಂಗರಾಜ ಅಂಗಡಿ ಮಾತನಾಡಿದರು.

ಶಿವಾನಂದ ಭಾವಿಕಟ್ಟಿ ನಿರ್ವಹಿಸಿದರು. ಸುಚಿತ ಅಂಗಡಿ ವಂದಿಸಿದರು. ಡಾ.ಮಹೇಶ ಹೊರಕೇರಿ ಸನ್ಮಾನ ಪತ್ರ ವಾಚಿಸಿದರು.

ಡಾ. ಸಂಜೀವ ಕುಲಕರ್ಣಿ, ವೀರಣ್ಣ ಒಡ್ಡೀನ, ಡಾ. ಜಿನದತ್ತ ಹಡಗಲಿ, ಗುರು ಹಿರೇಮಠ, ಡಾ. ಧನವಂತ ಹಾಜವಗೋಳ ಸೇರಿದಂತೆ ಅಂಗಡಿ ಪರಿವಾರದವರು, ನಿವೃತ್ತ ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ವಿಜೇತರಿಗೆ ಅಭಿನಂದನಾ ಪತ್ರ ವಿತರಣೆ

ತಂದೆ ತಾಯಿ ಮಹತ್ವ ಕುರಿತು ಹಾಡಿನ ಸ್ಪರ್ಧೆಯಲ್ಲಿ ಪ್ರಥಮ ಮೈತ್ರಿ ಮಹಿಳಾ ಮಂಡಳ, ದ್ವಿತೀಯ ರಂಜನಿ ಮಹಿಳಾ ಮಂಡಳ, ತೃತೀಯ ವೀರಶೈವ ಮಹಿಳಾ ಮಂಡಳ, ಸಮಾಧಾನಕರ ಭೂಮಿಕಾ ಮಹಿಳಾ ಮಂಡಳ ಮತ್ತು ನಂದಿಕೋಲ ಯೋಗ ಮಹಿಳಾ ಮಂಡಳ ಬಹುಮಾನ ಪಡೆದ ವಿಜೇತರಿಗೆ ಅಭಿನಂದನಾ ಪತ್ರ ವಿತರಿಸಲಾಯಿತು. ಪ್ರಮೀಳಾ ಜಕ್ಕಣ್ಣವರ ನಿರ್ವಹಿಸಿದರು. ನಿರ್ಣಾಯಕರಾಗಿ ಬಸವರಾಜ ಗೋರವರ, ಉಮಾ ಬಾಗಲಕೋಟ ಕಾರ್ಯನಿರ್ವಹಿಸಿದರು.

> ಇಂದು ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಇಲ್ಲದ್ದಕ್ಕೆ ದಾರಿ ತಪ್ಪುವ ಸಾಧ್ಯತೆಯೇ ಹೆಚ್ಚು. ಎಳೆಯ ವಯಸ್ಸಿನಲ್ಲಿಯೇ ತಂದೆ-ತಾಯಿ ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಿ ಸುಸಂಸ್ಕೃತರನ್ನಾಗಿ ಮಾಡುವ ಜವಾಬ್ದಾರಿ ಅಗತ್ಯ. ಇದರಿಂದ ಮಕ್ಕಳು ಸನ್ಮಾರ್ಗದಲ್ಲಿ ನಡೆಯಬಹುದಾಗಿದೆ.
>
> - ಜಗದೀಶ ಶೆಟ್ಟರ್,ಮಾಜಿ ಮುಖ್ಯಮಂತ್ರಿ

ವಿದ್ಯಾರ್ಥಿ ಸಾಧನೆಯಲ್ಲಿ ಶಿಕ್ಷಕರ ಪಾತ್ರ ಮುಖ್ಯ

ಶಿಕ್ಷಕರ ಸಹಮಿಲನ ಕಾರ್ಯಕ್ರಮವನ್ನು ಜೆಎಸ್.ಎಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಉದ್ಘಾಟಿಸಿದರು.

ಧಾರವಾಡ: ಶಿಕ್ಷಣದ ವಿಚಾರ ಬಂದಾಗ ಅದರಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಪಾತ್ರ ಏನು ಮತ್ತು ಎಷ್ಟು ಎಂಬುದನ್ನು ಅರಿತಿರಬೇಕು. ನಾವು ನೀಡುತ್ತಿರುವ ಶಿಕ್ಷಣ ಮಕ್ಕಳಿಗೆ ಎಷ್ಟು ಅರ್ಥವಾಗುತ್ತಿದೆ. ಮಕ್ಕಳಿಗೆ ಅಗತ್ಯವಿರುವ ಶಿಕ್ಷಣ ಯಾವುದು ಎಂಬುದನ್ನು ತಿಳಿದಿರಬೇಕು, ಅಂದಾಗ ಮಾತ್ರ ವಿದ್ಯಾರ್ಥಿಗೆ ವಿದ್ಯಾರ್ಜನೆಯ ಮಹತ್ವ ಅರ್ಥವಾಗುತ್ತದೆ ಎಂದು ಜೆಎಸ್. ಎಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ನಗರದ ವಿದ್ಯಾಗಿರಿಯ ಜೆ.ಎಸ್.ಎಸ್ ಉತ್ಸವ ಸಭಾಭವನದಲ್ಲಿ ರಾಷ್ಟೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿ ಬೆಂಗಳೂರು ಮತ್ತು ಜನತಾ ಶಿಕ್ಷಣ ಸಮಿತಿ ಸಹಯೋಗದಲ್ಲಿ ಶನಿವಾರ ಆಯೋಜಿಸಲಾಗಿದ್ದ ಶಿಕ್ಷಕರ ಸಹಮಿಲನ ಕಾರ್ಯಕ್ರಮ ಉದ್ಘಾಟಿಸಿದರು.

ಶಿಕ್ಷಣ ಭಾರತಿ ಜಿಲ್ಲಾ ಸಂಚಾಲಕ ಡಾ.ಬಸವರಾಜ ತಲ್ಲೂರ ಮಾತನಾಡಿ, ಶಿಕ್ಷಕರಲ್ಲಿ ಉತ್ತಮ ಜ್ಞಾನ ಮತ್ತು ತರಬೇತಿಯ ಗುಣಮಟ್ಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಆರು ತಿಂಗಳಿಗೊಮ್ಮೆ ಇಂತಹ ಶಿಕ್ಷಕರ ಸಹಮಿಲನ ಕಾರ್ಯಕ್ರಮ ಜನತಾ ಶಿಕ್ಷಣ ಸಮಿತಿ ಆಯೋಜಿಸುತ್ತಿದೆ. ಅಲ್ಲದೇ ನೈತಿಕ ಶಿಕ್ಷಣಕ್ಕೆ ಹೆಸರು ವಾಸಿಯಾಗಿದೆ ಎಂದು ತಿಳಿಸಿದರು.

ಶಿಕ್ಷಕ ಅಶೋಕ ಹಂಚಲಿ ಮಾತನಾಡಿ, ಇಡೀ ವಿಶ್ವಕ್ಕೆ ವಿಶ್ವವೇ ಭಾರತ ದೇಶದ ಬಗ್ಗೆ ಕೊಂಡಾಡುತ್ತಿರುವಾಗ, ಒಳ್ಳೆಯ ವಿಚಾರಗಳನ್ನು ಹಂಚಿಕೊಂಡು ತಮ್ಮ ದಾಖಲೆಗಳಲ್ಲಿ ನಮೂದಿಸುತ್ತಿರುವಾಗ. ನಾವೆಷ್ಟು ನಮ್ಮ ಮಕ್ಕಳಲ್ಲಿ ನಮ್ಮ ಭಾರತ ದೇಶದ ಬಗ್ಗೆ ಒಳ್ಳೆಯ ವಿಚಾರಗಳನ್ನು ಬಿತ್ತಿದ್ದೇವೆ. ನಮ್ಮ ಸಂಸ್ಕೃತಿ ಬಗ್ಗೆ ಎಷ್ಟರಮಟ್ಟಿಗೆ ಅರಿವು ಮೂಡಿಸಿದ್ದೇವೆ ಎಂಬುದು ಮುಖ್ಯವಾಗುತ್ತದೆ ಎಂದರು.

ಪ್ರ ಶಿಕ್ಷಣಭಾರತಿ ಸಂಯೋಜಕ ವೀರೇಂದ್ರಗೌಡ ಪಾಟೀಲ್ ಸಮಾರೋಪ ನುಡಿಗಳನ್ನಾಡಿ, ವ್ಯಕ್ತಿ ಮೊದಲು ತಾನು ಒಳ್ಳೆಯವನಾಗಿ ಬದಲಾಗಬೇಕು. ನಂತರ ತಾನಾಗಿಯೇ ಕುಟುಂಬ, ಸಮಾಜ, ರಾಷ್ಟ್ರ ಮತ್ತು ವಿಶ್ವವನ್ನು ಬದಲಾಯಿಸಲು ಸಾಧ್ಯ.

ವ್ಯಕ್ತಿ ಬದಲಾಗಲು ಶಿಕ್ಷಣ ಮುಖ್ಯ, ಶಿಕ್ಷಣದ ಗುಣಮಟ್ಟ ಹೆಚ್ಚಲು ಶಿಕ್ಷಕರ ಗುಣಮಟ್ಟ ಹೆಚ್ಚಬೇಕು ಎಂದು ಸಲಹೆ ನೀಡಿದರು.

ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ ಸ್ವಾಗತಿಸಿದರು. ಸಂಧ್ಯಾರಾಣಿ ಪ್ರಾರ್ಥಿಸಿದರು. ಮಹೇಶ ಬಗಲಿ ವಂದಿಸಿದರು. ಪುಷ್ಪಾವತಿ ಬಡಿಗೇರ ನಿರೂಪಿಸಿದರು. ಪ್ರಾಚಾರ್ಯರಾದ ಸಾಧನಾ ಎಸ್, ತ್ರಿವೇಣಿ. ಆರ್,ರೇಣು ಪಾಟೀಲ್, ಸುಧಾಮಣಿ ರಾವ್ ಉಪಸ್ಥಿತರಿದ್ದರು.

> ಯಾವುದೇ ಕಾಯಿಲೆಗೆ ಸರಿಯಾದ ಔಷಧಿ ನೀಡಿದರೇ ಮಾತ್ರ ಹೇಗೆ ಗುಣಮುಖವಾಗುತ್ತದೇಯೊ ಅದೇ ರೀತಿ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಜ್ಞಾನಕ್ಕೆ ಸರಿಯಾದ ಭೋಧನೆ, ವಿಚಾರಗಳನ್ನು ತಿಳಿಸಿದಾಗ ಮಾತ್ರ ಆ ವಿದ್ಯಾರ್ಥಿ ಸರಿಯಾದ ಮಾರ್ಗದಲ್ಲಿ ವಿದ್ಯಾರ್ಜನೆ ಮಾಡಬಲ್ಲ. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಮಧ್ಯೆ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳಿರಬಾರದು.
>
> - ಡಾ.ಅಜಿತ ಪ್ರಸಾದ, ಜೆಎಸ್.ಎಸ್ ಕಾರ್ಯದರ್ಶಿ

ಆರ್.ಎ.ದೇಸಾಯಿ ಪ್ರತಿಮೆ ಅನಾವರಣ

ಅಣ್ಣಿಗೇರಿ: ಬಾಲ್ಯದಿಂದಲೆ ಗಟ್ಟಿತನ, ಪರಿಶುದ್ಧ ಮನಸ್ಸನ್ನು ಅಳವಡಿಸಿಕೊಂಡು ನಿಸ್ವಾರ್ಥವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆ ಹಾಗೂ ಸಮರ್ಪಣೆಯನ್ನು ಸಮಾಜಕ್ಕೆ ಧಾರೆ ಎಳೆಯುತ್ತಿರುವ ಆರ್.ಎ. ದೇಸಾಯಿ ಅವರ ಕಾರ್ಯ ಶ್ಲಾಘನೀಯ ಎಂದು ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ. ಆರ್.ಪಾಟೀಲ ಹೇಳಿದರು.

ಸ್ಥಳೀಯ ಅಣ್ಣಿಗೇರಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆರ್.ಎ.ದೇಸಾಯಿ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದರು.ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತ ನಾಡಿ,ಆರ್.ಎ.ದೇಸಾಯಿ ಸಂಘಟನೆಗಳ ಚತುರರಾಗಿ ಶೈಕ್ಷಣಿಕ ರಂಗಕ್ಕೆ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ ಎಂದರು.ಸಚಿವ ಎಚ್. ಕೆ.ಪಾಟೀಲ ಮಾತನಾಡಿ, ಆರ್.ಎ. ದೇಸಾಯಿ ಶಿಕ್ಷಕರು ನಮ್ಮ ಮನೆಯ ಒಬ್ಬ ಹಿರಿಯರಂತೆ ಮಾರ್ಗದರ್ಶಕರಾಗಿದ್ದಾರೆ. ಅವರ ಸಲಹೆ ಸೂಚನೆಗಳನ್ನು ಇಂದಿಗೂ ನಮ್ಮ ಪರಿವಾರ ಪಾಲನೆ ಮಾಡುತ್ತ ಬಂದಿರುತ್ತೇವೆ ಎಂದರು.ಶಿರಹಟ್ಟಿ ಫಕೀರ ಸಿದ್ಧರಾಮ ಸ್ವಾಮೀಜಿ ಪ್ರತಿಮೆ ಅನಾವರ ಣಗೊಳಿಸಿ ಆರ್.ಎ.ದೇಸಾಯಿ ಅವರ ಸೇವೆ ಶ್ಲಾಘಿಸಿದರು. ಶಾಸಕ ಎನ್.ಎಚ್.ಕೋನ ರಡ್ಡಿ, ವಿಧಾನ ಪರಿಷತ್ ಸದಸ್ಯ ಎಸ್ .ವಿ.ಸಂಕನೂರ, ಸಂಸ್ಥೆ ಅಧ್ಯಕ್ಷ ಆರ್.ಬಿ. ದೇಶಪಾಂಡೆ, ಎಂ.ಆರ್. ಮುಂಡರಗಿ, ಎಸ್.ಎಂ. ಬಳ್ಳೊಳ್ಳಿ, ಎನ್.ಎಸ್. ಮೇಲ್ಮರಿ ಉಪಸ್ಥಿತರಿದ್ದರು.

ಆರ್.ಎ.ದೇಸಾಯಿ ಅವರ ಪ್ರತಿಮೆ ಅನಾವರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಲಲಿತ ಕಲೆಗಳ ಉಳಿಸಲು ಕೈ ಜೋಡಿಸಿ

ಧಾರವಾಡ: ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ನೃತ್ಯ ಹಾಗೂ ಇತರ ಲಲಿತ ಕಲೆಗಳ ಉಳಿವು, ಬೆಳವಣಿಗೆಗಾಗಿ ನಮ್ಮೆಲ್ಲರ ಸಹಕಾರ ಅಗತ್ಯವಾಗಿದೆ ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪಂ. ಎಂ. ವೆಂಕಟೇಶ ಕುಮಾರ್‌ಹೇಳಿದರು.

ಹುಬ್ಬಳ್ಳಿಯ ಇನ್ಫೋಸಿಸ್ ಕ್ಯಾಂಪಸ್ನಲ್ಲಿ ಕುಮಾರೇಶ್ವರ ಕಲ್ಚರಲ್ ಸೊಸೈಟಿಯು ಇನ್ಫೋಸಿಸ್ ಫೌಂಡೇಶನ್ ಹಾಗೂ ಇನ್ಫೋಸಿಸ್ ಹುಬ್ಬಳ್ಳಿ ಡೆಲಿವರಿ ಸೆಂಟರ್ ಸಹಯೋಗದಲ್ಲಿ ಏರ್ಪಡಿಸಿದ್ದ ಸಂಗೀತೋತ್ಸವ ಉದ್ಘಾಟಿಸಿದರು.

ಖ್ಯಾತ ಹಿಂದೂಸ್ತಾನಿ ಗಾಯಕ ಪಂ.ಬಾಲಚಂದ್ರ ನಾಕೋಡ ಮಾತನಾಡಿ, ಶಾಸ್ತ್ರೀಯ ಸಂಗೀತವು ಮನಸ್ಸಿಗೆ ನೆಮ್ಮದಿ ನೀಡುತ್ತದೆ. ಇಂತಹ ಸಂಗೀತ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ಇನ್ಫೋಸಿಸ್ ನಂತಹ ಸಂಸ್ಥೆಯ ಸಹಕಾರ ಅಗತ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಮಾರೇಶ್ವರ ಕಲ್ಚರಲ್ ಸೊಸೈಟಿ ಅಧ್ಯಕ್ಷ ಮಲ್ಲಿಕಾರ್ಜುನ ಚಿಕ್ಕಮಠ ಮಾತನಾಡಿ, ಸಂಗೀತದಲ್ಲಿ ಸಾಹಿತ್ಯ ಇದೆ, ಮನರಂಜನೆ ಇದೆ, ಸಂಸ್ಕೃತಿ ಇದೆ. ಸಾಮಾಜಿಕ ವ್ಯತ್ಯಾಸ ಬೆಸೆಯುವ ಕೊಂಡಿ ಇದೆ, ಒತ್ತಡವನ್ನು ಕಡಿಮೆ ಮಾಡುವ ಶಕ್ತಿ ಸಂಗೀತಕ್ಕಿದೆ. ಯುವ ಪ್ರತಿಭಾನ್ವಿತ ಕಲಾವಿದರಿಗೆ ವೇದಿಕೆಯನ್ನು ಕಲ್ಪಿಸುವುದು ನಮ್ಮ ಪ್ರಮುಖ ಉದ್ದೇಶವಾಗಿದೆ ಎಂದರು.

ಅಲ್ಲಾಬಕ್ಷ ಅಸಾದುಲ್ಲಾ, ಗಣಪತಿ ಸಿ.ಪಿ, ಅಮರನಾಥ ಬಿಸ್ವಾಸ್, ರಾಘವೇಂದ್ರ ನಾಕೋಡ, ಪ್ರಕಾಶ ಬಾಳಿಕಾಯಿ ವೇದಿಕೆಯಲ್ಲಿದ್ದರು. ಪ್ರೇಮಾ ಹೆಗಡೆ, ಸಂಜನಾ ಶಿವಪೂರಮಠ ನಿರೂಪಿಸಿದರು. ಮ್ಯಾನೇಜರ ಶಿವಾನಂದ ಕೂಡ್ಲಮಠ ಸ್ವಾಗತಿಸಿದರು.

ರಶ್ಮಿ ಬ್ಯಾಹಟ್ಟಿ ವಂದಿಸಿದರು.ಪ್ರತಿಭಾನ್ವಿತ ವಿಶೇಷ ಚೇತನ ಕಲಾವಿದರಾದ ಪ್ರೇರಣಾ ಮತ್ತು ರೇಣುಶ್ರೀ ಕೊಡ್ಲಿ ಭಾವಗೀತೆಗಳನ್ನು ಪ್ರಸ್ತುತ ಪಡಿಸಿದರು. ಖ್ಯಾತ ಹಿಂದೂಸ್ತಾನಿ ಗಾಯಕ ಪದ್ಮಶ್ರೀ ಪಂ.ಎಂ. ವೆಂಕಟೇಶಕುಮಾರ ಗಾಯನದಲ್ಲಿ ಪ್ರಸ್ತುತಪಡಿಸಿದ ರಾಗ ಭೂಪ್ ಮತ್ತು ದಾಸವಾಣಿ ಹಾಗೂ ವಚನ ಗಾಯನವು ನೆರೆದಿದ್ದ ಪ್ರೇಕ್ಷಕರ ಹೃಣ್ಮನವನ್ನು ತಣಿಸಿತು. ತಬಲಾದಲ್ಲಿ ಶ್ರೀಧರ ಮಾಂಡ್ರೆ, ಡಾ.ನಾಗಲಿಂಗ ಮುರಗಿ, ರಾಘವೇಂದ್ರ ನಾಕೋಡ ಹಾಗೂ ಹಾರ್ಮೋನಿಯಂದಲ್ಲಿ ಬಸವರಾಜ ಹಿರೇಮಠ ಸಾಥ್ ಸಂಗತ ನೀಡಿದರು.

ಇನ್ಫೋಸಿಸ್ ಹುಬ್ಬಳ್ಳಿ ಡೆಲಿವರಿ ಸೆಂಟರ್‌ಸಹಯೋಗದಲ್ಲಿ ಸಂಗೀತೋತ್ಸವ ಕಾರ್ಯಕ್ರಮವನ್ನು ನಡೆಯಿತು

> ಭಾರತೀಯ ಕಲೆಗಳನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಕಾರ್ಯ ಅತ್ಯಗತ್ಯ. ಪಠ್ಯ ಶಿಕ್ಷಣದ ಜತೆಗೆ ಕಲೆಗಳನ್ನು ಅಳವಡಿಸಿಕೊಂಡಾಗ ಮಾತ್ರ ಲಲಿತ ಕಲೆಗಳ ಬೆಳವಣಿಗೆಯಿಂದ ನಮ್ಮ ಸಂಸ್ಕೃತಿ ಶ್ರೀಮಂತವಾಗಬಲ್ಲದು.
>
> - ಪಂ.ಎಂ.ವೆಂಕಟೇಶಕುಮಾರ್,ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ

ನರೇಗಾ ಯೋಜನೆಯಲ್ಲಿ ಭ್ರಷ್ಟಾಚಾರ: ಆರೋಪ

ಹಾವೇರಿ: ಮಹಾತ್ಮ ಗಾಂಧಿ ಅಂದರೆ ಕಾಂಗ್ರೆಸ್ ನವರಿಗೆ ಬಹಳ ಪ್ರೀತಿ ಗಾಂಧಿ ಹೆಸರು ಇದ್ದರೆ ಮಾತ್ರ ಸಂತಸ ಪಡುತ್ತಾರೆ. ನರೇಗಾ ಜಾರಿಗೆ ತಂದಿದ್ದು ಕಾಂಗ್ರೆಸ್ ನವರು ಇದರಲ್ಲಿ ಬಹಳಷ್ಟು ಲೋಪದೋಷಗಳು, ಅವ್ಯವಹಾರ, ಭ್ರಷ್ಟಾಚಾರ ನಡೆದುಕೊಂಡು ಬಂದಿರುವುದನ್ನು ಹೊಡೆದೋಡಿಸಲು ನರೇಗಾ ಹೆಸರನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಮರುನಾಮಕರಣ ಮಾಡಿದೆ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು.

ಶನಿವಾರ ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಎಂಜಿ ನರೇಗಾ ಸ್ಕೀಮ್ ನಲ್ಲಿ ಮಧ್ಯವರ್ತಿಗಳ ಹಾವಳಿಯಿಂದ ವ್ಯಾಪಕವಾಗಿ ಅವ್ಯವಹಾರ, ಭ್ರಷ್ಟಾಚಾರ ನಡೆದಿದೆ. ಕಾಂಗ್ರೆಸ್ ಅವಧಿಯಲ್ಲಿ ಎಂಜಿ ನರೇಗಾದಲ್ಲಿ 11ಲಕ್ಷ ಕೋಟಿ ಭ್ರಷ್ಟಾಚಾರ ಮಾಡಿದ್ದಾರೆ. 4.5 ಲಕ್ಷ ನಕಲಿ ಜಾಬ್ ಕಾರ್ಡ ಬಳಸಿ ಸರಕಾರದ ಹಣ ಲೂಟಿ ಮಾಡಿಕೊಂಡು ಬರಲಾಗಿತ್ತು. ಪ್ರಸ್ತುತ ಇದೆಲ್ಲದಕ್ಕೂ ಬ್ರೇಕ್ ಬೀಳಲಿದೆ. ಕೂಲಿ ಕಾರ್ಮಿಕರ ದಿನವನ್ನು 125 ದಿನಕ್ಕೆ ಹೆಚ್ಚಿಸಲಾಗಿದೆ. ರಾಜ್ಯ 40 ಕೇಂದ್ರ 60 ಅನುಪಾತದಡಿ ಯೋಜನೆ ಕಾರ್ಯನಿರ್ವಹಿಸಲಿದೆ ಎಂದರು. ಕಾಂಗ್ರೆಸ್ ನವರು ವಿಕಸಿತ್ ಭಾರತ್ ಜೀ ರಾಮ್ ಜೀ ಯೋಜನೆ ಬಗ್ಗೆ ಅಪಪ್ರಚಾರ ಮಾಡಲು ಬೀದಿಗಳಿದು ಹೋರಾಟ ನಡೆಸಿದ್ದಾರೆ. ಅವರ ಹೋರಾಟಕ್ಕೆ ಜನ ಮನ್ನಣೆ ನೀಡಬಾರದು ಯೋಜನೆಯಿಂದ ಗ್ರಾಮೀಣ ಜನರ ಬದುಕು ಇನ್ನಷ್ಟು ಹಸನಾಗಲಿದೆ ಎಂದರು.

ಸಂದರ್ಭದಲ್ಲಿ ಬಿಜೆಪಿ ಮಾಜಿ ಶಾಸಕ ಶಿವರಾಜ ಸಜ್ಜನರ, ಅರುಣಕುಮಾರ ಪೂಜಾರ, ಹಾವೇರಿ ವಿಧಾನಸಭಾ ಕ್ಷೇತ್ರದ ಮುಖಂಡ ಗವಿಸಿದ್ದಪ್ಪ ದ್ಯಾಮಣ್ಣನವರ, ಮಾಜಿ ಜಿ.ಪಂ ಸದಸ್ಯ ಸಿದ್ದರಾಜ ಕಲಕೋಟಿ, ನಾಗೇಂದ್ರ ಕಡಕೋಳ, ಸಂತೋಷ ಆಲದಕಟ್ಟಿ, ನಂಜುಂಡೇಶ ಕಳ್ಳೇರ, ರಾಜಶೇಖರ ಕಟ್ಟೇಗೌಡ್ರ ಹಾಜರಿದ್ದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿದರು.

6 ಜನ ಕಾಂಗ್ರೆಸ್ ಶಾಸಕರ ಅಭಿವೃದ್ಧಿ ಶೂನ್ಯ

ಹಗಲು- ರಾತ್ರಿ ಆಕ್ರಮ ಚಟುವಟಿಕೆಗಳನ್ನು ನಡೆಸಿ ಹಣ ಮಾಡಿಕೊಳ್ಳುವುದಕ್ಕಾಗಿ ಶ್ರಮ ವಹಿಸುತ್ತಿದ್ದಾರೆ. ಅವರಿಗೆ ಜಿಲ್ಲೆಯ ಅಭಿವೃದ್ಧಿಗಿಂತ ಹಣ ಮಾಡಿಕೊಳ್ಳುವ ಸ್ವಾರ್ಥದಲ್ಲಿ ಮುಳಗಿದ್ದಾರೆ ಬಿಜೆಪಿ ಜಿಲ್ಲಾಧ್ಯಕ್ಷ ವಿರುಪಾಕ್ಷಪ್ಪ ಬಳ್ಳಾರಿ ಎಂದು ಹೇಳಿದರು.

ಎಲ್ಲ ಭಾಗ್ಯಗಳಿಗಿಂತ ಆರೋಗ್ಯ ಭಾಗ್ಯ ಬಹಳ ಮುಖ್ಯ: ಗಾಜಿಗೌಡ್ರ

ಹಾವೇರಿ: ಎಲ್ಲ ಭಾಗ್ಯಗಳಿಗಿಂತ ಆರೋಗ್ಯ ಭಾಗ್ಯ ಬಹಳ ಮುಖ್ಯವಾಗಿದೆ. ಮನುಷ್ಯ ಎಷ್ಟೇ ಓದಿದ್ದರೂ ಹಾಗೂ ಹಣವಿದ್ದರೂ ಸಹಿತ ಆರೋಗ್ಯ ಉತ್ತಮವಾಗಿಲ್ಲವಾದರೆ ಏನು ಪ್ರಯೋಜವಿಲ್ಲ. ಹಾಗಾಗಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವುದು ಅವಶ್ಯವಾಗಿದೆ ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್.ಗಾಜಿಗೌಡ್ರ ಹೇಳಿದರು.

ಹಾವೇರಿ ನಗರದ ಹೊಸಮನಿ ಸಿದ್ದಪ್ಪ ಜಿಲ್ಲಾ ಕ್ರೀಡಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಹಾವೇರಿ ಜಿಲ್ಲಾ ಶಾಖೆ ಸಹಯೋಗದಲ್ಲಿ ಜರುಗಿದ 2025-26ನೇ ಸಾಲಿನ ಹಾವೇರಿ ಜಿಲ್ಲಾ ಮಟ್ಟದ ರಾಜ್ಯ ಸರಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮ ಉದ್ಘಾಟಿಸಿದರು.

ಕ್ರೀಡಾಧ್ವಜಾರೋಹಣ ನೆರವೇರಿಸಿದ ಜಿಲ್ಲಾಧಿಕಾರಿ ಡಾ.ವಿ.ಜಯ ಮಹಾಂತೇಶ ದಾನಮ್ಮನವರ ಮಾತನಾಡಿ, ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಸಹಕಾರಿಯಾಗಿದೆ.

ನಮ್ಮ ದೈನಂದಿನ ಕೆಲಸ ಕಾರ್ಯಗಳ ನಡುವೆ ನಮ್ಮ ಆರೋಗ್ಯ ಕಾಪಾಡಿಕೊಳುವುದು ಅಗತ್ಯವಾಗಿದೆ. ಕ್ರೀಡಾಕೂಟಗಳು ಹೊಸ ಚೈತನ್ಯ ಹಾಗೂ ಉತ್ಸಾಹ ತುಂಬುತ್ತವೆ. ಕ್ರೀಡಾಕೂಟದಲ್ಲಿ ಭಾಗವಹಿಸಲು ನೌಕರರಿಗೆ ಒಒಡಿ ಸೌಲಭ್ಯ ನೀಡಲಾಗಿದೆ. ಎಲ್ಲರೂ ಕ್ರೀಡಾಕೂಟದಲ್ಲಿ ಭಾಗವಹಿಸಬೇಕು ಹಾಗೂ ಸೋಲನ್ನು ಒಳ್ಳೆಯ ಮನಸ್ಥಿತಿಯಿಂದ ಸ್ವೀಕಾರ ಮಾಡುವ ಗುಣ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಳೆದ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಪರೀಕ್ಷೆ ಫಲಿತಾಂಶದಲ್ಲಿ ಸುಧಾರಣೆಯಾಗಿದೆ. ಎಸ್. ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಖಾಸಗಿ ಶಾಲೆಗಳಿಗಿಂತ ಸರಕಾರಿ ಶಾಲೆಗಳ ಫಲಿತಾಂಶ ಅಧಿಕವಾಗಿತ್ತು.

ಪರಿಶಿಷ್ಟ ಜಾತಿ ಸಮೀಕ್ಷೆ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆ, ಬೆಳೆಹಾನಿ ಸರ್ವೆದಲ್ಲಿ ಸಹ ಜಿಲ್ಲೆಯ ಕಂದಾಯ, ಶಿಕ್ಷಣ ಇಲಾಖೆ, ಕೃಷಿ, ತೋಟಗಾರಿಕೆ ಇಲಾಖೆಗಳು ಸೇರಿದಂತೆ ವಿವಿಧ ಇಲಾಖೆಗಳು ಅತ್ಯಂತ ಸಮನ್ವಯದಿಂದ ವೇಗವಾಗಿ ಕಾರ್ಯನಿರ್ವಹಿಸುವ ಮೂಲಕ ಕೈಗೊಂಡಿದ್ದರಿಂದ ರಾಜ್ಯದಲ್ಲಿ ಹಾವೇರಿ ಜಿಲ್ಲೆ ಹೆಸರು ಮಾಡಿದೆ. ಕ್ರೀಡಾ ಜ್ಯೋತಿ: ಜಿಪಂ ಸಿಇಒ ರುಚಿ ಬಿಂದಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಅವರು ಕ್ರೀಡಾಜ್ಯೋತಿ ಸ್ವೀಕರಿಸಿದರು.

ಪ್ರತಿಜ್ಞಾವಿಧಿ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಲತಾ ಬಿ.ಎಚ್. ಕ್ರೀಡಾ ಪ್ರತಿಜ್ಞಾವಿಧಿ ಬೋಧಿಸಿದರು.ಶಿಸ್ತುಬದ್ಧ ಪಥಸಂಚಲನ: ಕಂದಾಯ ಇಲಾಖೆ, ಹಾವೇರಿ ತಹಸೀಲ್ದಾರ ಕಚೇರಿ, ಸ್ಕೌಟ್ ಆಂಡ್ ಗೌಡ್ಸ್, ಬ್ಯಾಡಗಿ, ಹಾವೇರಿ, ರಾಣೇಬೆನ್ನೂರು, ಹಾನಗಲ್ ತಾಲೂಕು ಪಂಚಾಯತಿ ಸೇರಿದಂತೆ ಒಟ್ಟು ಏಳು ತಂಡಗಳಿಂದ ಶಿಸುಬದ್ಧ ಪಥಸಂಚಲನ ಜರುಗಿತು. ದೇವಗಿರಿ ಮಹಾತ್ಮಗಾಂಧಿ ಪ್ರೌಢಶಾಲೆ ವಿದ್ಯಾರ್ಥಿಗಳು ಅತ್ಯಂತ ಲಯಬದ್ಧವಾಗಿ ಬ್ಯಾಂಡ್‌ಸೆಟ್ ನುಡಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂಹಿರೇಮಠ, ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶ ಕರಿಗಾರ, ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ, ಜಿ.ಪಂ ಉಪ ಕಾರ್ಯದರ್ಶಿ ಡಾ.ಪುನಿತ್, ಎಲ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಮೋಹನ ದಂಡಿನ, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ಪಾಟೀಲ, ಪಿ.ಡಬ್ಲ್ಯೂ ಡಿ ಎಂಜನೀಯರ್‌ಎನ್.ಎನ್. ಪಾಟೀಲ, ಬೇವಿನ ಮರದ, ಕೆ.ಸಿ.ಸಿ.ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ನಗರಸಭೆ ಮಾಜಿ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ದರ್ಶನ ಲಮಾಣಿ, ರಮೇಶ ಆನವಟ್ಟಿ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವಿವಿಧ ತಾಲೂಕುಗಳ ಪದಾಧಿಕಾರಿಗಳಾದ ಗುರುನಾಥ ಗಾವಣೇಕರ, ಮೇಘರಾಜ ಮಾಳಗಿಮನಿ, ಬಸವರಾಜ ಹೊಸಮನಿ, ಮಂಜುನಾಥ ಕೆಂಚರಡ್ಡಿ, ಬಿ.ಪಿ.ಶಿಡೇನೂರ, ಶಂಕರಗೌಡ ನಿಸ್ಸಿಮಗೌಡ್ರ, ಮಣಿಯಾರ, ಕೆಂಚರಡ್ಡಿ, ಮಲ್ಲಿಕಾರ್ಜುನ ಶಾಂತಗಿರಿ ಉಪಸ್ಥಿತರಿದ್ದರು.

ರಾಜ್ಯ ಸರಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆ ಕಾರ್ಯಕ್ರಮವನ್ನು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್.ಗಾಜಿಗೌಡ್ರ ಉದ್ಘಾಟಿಸಿದರು.

> ಮಕ್ಕಳಿಗೆ ಕ್ರೀಡಾಕೂಟಗಳನ್ನು ಆಯೋಜಿಸುವುದು ಸಾಮಾನ್ಯವಾಗಿದೆ. ಆದರೆ ಇಂದು ಗುರುಗಳಿಗೆ ಕ್ರೀಡಾಕೂಟ ಆಯೋಜಿಸಲಾಗಿದೆ. ಮಕ್ಕಳ ಆರೋಗ್ಯದಂತೆ ಗುರುಗಳ ಆರೋಗ್ಯ ಸಹ ಚನ್ನಾಗಿರಬೇಕು. ಆಟದಲ್ಲಿ ಸೋಲು-ಗೆಲುವು ಸಾಮಾನ್ಯ, ಸೋಲಿನ ನಂತರ ಗೆಲುವು ಬರುತ್ತದೆ. ಹಾಗಾಗಿ ಎಲ್ಲರೂ ಕ್ರೀಡಾ ಮನೋಭಾವದಿಂದ ಶಿಸ್ತುಬದ್ಧರಾಗಿ ಕ್ರೀಡೆಯಲ್ಲಿ ಭಾಗವಹಿಸಬೇಕು.
>
> - ಎಸ್.ಎಫ್.ಎನ್.ಗಾಜಿಗೌಡ್ರ, ಪ್ರಾಧಿಕಾರದ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

ದ್ವಿತೀಯ ಪಿಯು ಪ್ರಶ್ನೆ ಪತ್ರಿಕೆ ಸೋರಿಕೆ

ಕಲಬುರಗಿ: ಜ.8ರಂದು ಜರುಗಿದ ದ್ವಿತೀಯ ಪಿಯು ಪೂರ್ವ ಸಿದ್ಧತಾ ಪರೀಕ್ಷೆ ಇಂಗ್ಲಿಷ್ ಭಾಷಾ ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದ ಮೇರೆಗೆ ಇಲ್ಲಿನ ಸ್ಟೇಷನ್ ಬಜಾರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರ ತನಕ ನಿಗದಿಯಾಗಿದ್ದ ಇಂಗ್ಲಿಷ್ ಭಾಷಾ ಪ್ರಶ್ನೆ ಪತ್ರಿಕೆ ಪರೀಕ್ಷೆ ಆರಂಭಕ್ಕೂ ಮೊದಲೇ ಅನಾಮಿಕ ವ್ಯಕ್ತಿಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಈ ಕುರಿತು ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿರುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ್ ಅಕ್ಕಣ್ಣ ಅವರು ಪೊಲೀಸರಿಗೆ ದೂರು ನೀಡಿದ್ದಾರೆ. ಸುರೇಶ್ ಅಕ್ಕಣ್ಣ ಅವರ ದೂರಿನ ಮೇರೆಗೆ ಸ್ಟೇಷನ್ ಬಝಾರ್ ಪೊಲೀಸರು, ಠಾಣೆ ಗುನ್ನೆ 02/2026 ಕಲಂ:03 ಪಬ್ಲಿಕ್ ಎಕ್ಸಾಮಿನೇಷನ್ (ಪ್ರಿವೆಂಶನ್ ಆಫ್ ಅನ್ಸರ್ ಮೀನ್ಸ್) ಎಕ್ಟ್ 805 ಮತ್ತು 324(2) ಬಿ.ಎನ್.ಎಸ್ ಮತ್ತು ಕಲಂ:24(ಎ) ದಿ ಕರ್ನಾಟಕ ಎಜುಕೇಶನ್ ಎಕ್ಟ್ 1983ನೇದ್ದರ ಪ್ರಕಾರ ಪ್ರಕರಣ ದಾಖಲಿಸಿಕೊಂಡು ತನಿಖೆ ಪ್ರಾರಂಭಿಸಿದ್ದಾರೆ.

ರಾಜ್ಯ ಬಿಜೆಪಿಗರ ಸಮರ್ಥನೆ ಸಲ್ಲ

ಬೆಂಗಳೂರು: ರಾಜ್ಯಕ್ಕೆ ಎಷ್ಟೇ ಅನ್ಯಾಯ ಮಾಡಿದರೂ ರಾಜ್ಯ ಬಿಜೆಪಿ ನಾಯಕರು ಕೇಂದ್ರ ಸರಕಾರವನ್ನು ಸಮರ್ಥಿಸಿಕೊಳ್ಳುವುದು ಮಹಾ ತಪ್ಪು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ರೇಸ್ ಕೋರ್ಸ್ ರಸ್ತೆಯ ಇಂಜಿನಿಯರ್ ಅಸೋಸಿಯೇಷನ್‌ನಲ್ಲಿ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕಕ್ಕೆ ಅನ್ಯಾಯವಾದದ್ದನ್ನೆಲ್ಲ ನ್ಯಾಯ ಎನ್ನುವುದು ಮಹಾ ಅಪರಾಧ ಎಂದರು. ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಅವರು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆ ಕುರಿತಂತೆ ಚರ್ಚೆಗೆ ಆಹ್ವಾನಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸಿಎಂ, ಚರ್ಚೆಗೆ ನಾವು ಸಿದ್ಧವಾಗಿದ್ದು, ದೊಡ್ಡ ಆಂದೋಲನವನ್ನೇ ಮಾಡುತ್ತೇವೆ. ಬಿಜೆಪಿ-ಜೆಡಿಎಸ್ ಅವರು ಕೇವಲ ಸುಳ್ಳು ಹೇಳುತ್ತಾರೆ ಎಂದರು. ಕೇರಳದ ಗಡಿ ಭಾಗಗಳ ಶಾಲೆಗಳಲ್ಲಿ ಮಲಯಾಳಂನ್ನು ಮೊದಲ ಭಾಷೆಯಾಗಿ ಕಲಿಯುವುದನ್ನು ಕಡ್ಡಾಯಗೊಳಿಸಿರುವ ಬಗ್ಗೆ ಕೇರಳ ಸಿಎಂಗೆ ಪತ್ರ ಬರೆದಿದ್ದು, ಹೋರಾಟವನ್ನೇ ಮಾಡುತ್ತೇವೆ ಎಂದರು.

ಮಂಡ್ಯದಲ್ಲಿ ಜಾಗತಿಕ ಮಟ್ಟದ ಕ್ರೀಡಾ ಸೌಲಭ್ಯ

ಕೇಂದ್ರದಿಂದ 14 ಕೋಟಿ ಮಂಜೂರು | ಎಚ್.ಡಿ. ಕುಮಾರಸ್ವಾಮಿ ಮನವಿಗೆ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಸ್ಪಂದನೆ

ದೆಹಲಿ: ಮಂಡ್ಯ ಲೋಕಸಭೆ ಕ್ಷೇತ್ರದಲ್ಲಿ ಜಾಗತಿಕ ಗುಣಮಟ್ಟದ ಕ್ರೀಡಾ ಮೂಲಸೌಕರ್ಯ ಕಲ್ಪಿಸುವ ಉದ್ದೇಶಕ್ಕಾಗಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಮನವಿ ಮೇರೆಗೆ ಕೇಂದ್ರ ಸರಕಾರ 14 ಕೋಟಿ ಮಂಜೂರು ಮಾಡಿದೆ.

ಜಿಲ್ಲೆಯಲ್ಲಿ ಕ್ರೀಡಾ ಸೌಕರ್ಯ ಉತ್ತಮಪಡಿಸುವ ನಿಟ್ಟಿನಲ್ಲಿ ಸಚಿವ ಕುಮಾರಸ್ವಾಮಿ ಅವರು ಕೇಂದ್ರದ ಕ್ರೀಡಾ ಮತ್ತು ಯುವಜನ ಸಬಲೀಕರಣ ಖಾತೆ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಪತ್ರ ಬರೆದು ವಿನಂತಿಸಿದ್ದರು. ಮನವಿಗೆ ತಕ್ಷಣ ಸ್ಪಂದಿಸಿರುವ ಕ್ರೀಡಾ ಸಚಿವರು, ಖೇಲೋ ಇಂಡಿಯಾ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಬಹುಪಯೋಗಿ ಕ್ರೀಡಾ ಸೌಲಭ್ಯ ನಿರ್ಮಾಣಕ್ಕೆ 14 ಕೋಟಿ ಮಂಜೂರು ಮಾಡಿದ್ದಾರೆ. ಅನುಮೋದಿತ ವೆಚ್ಚದಲ್ಲಿ ಮಂಡ್ಯದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ಬಹುಪಯೋಗಿ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಮಂಡ್ಯ ಜಿಲ್ಲೆಯ ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಮತ್ತು ರಾಷ್ಟ್ರವನ್ನು ಪ್ರತಿನಿಧಿಸಿದ್ದಾರೆ. ಅನೇಕ ಯುವ ಪ್ರತಿಭೆಗಳು ಜಿಲ್ಲೆಯಲ್ಲಿ ಅವಕಾಶ ಸಿಗದೆ ಹೊರ ಭಾಗಗಳಲ್ಲಿ ತರಬೇತಿಗೆ ಹೋಗುತ್ತಿದ್ದಾರೆ. ಅನೇಕ ಕ್ರೀಡಾಪಟುಗಳು ರಾಷ್ಟ್ರೀಯ ಶಿಬಿರಗಳಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಇಂತಹ ಸೌಕರ್ಯವನ್ನು ಮಂಡ್ಯದಲ್ಲಿಯೇ ಒದಗಿಸುವ ಉದ್ದೇಶದಿಂದ ಈ ಯೋಜನೆ ಅನುಷ್ಠಾನಕ್ಕೆ ತರಲಾಗುತ್ತಿದೆ. ಇದು ಉತ್ತಮ.ಯೋಜನೆಯಾಗಿದೆ. ನನ್ನ ಮನವಿಗೆ ಸ್ಪಂದಿಸಿದ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದು ಸಚಿವರು ಹೇಳಿದ್ದಾರೆ.

- ಖೇಲೋ ಇಂಡಿಯಾ ಮೂಲಕ ಮಂಡ್ಯದಲ್ಲಿ ಕ್ರೀಡೆಗೆ ಉತ್ತೇಜನ
- ಜಾಗತಿಕ ಗುಣಮಟ್ಟದ ಕ್ರೀಡಾ ಸೌಲಭ್ಯ ನಿರ್ಮಾಣ
- ಮಂಡ್ಯ ಕೃಷಿ ವಿಜ್ಞಾನ ಕಾಲೇಜಲ್ಲಿ ಕ್ರೀಡಾ ಸಭಾಂಗಣ

ಖೇಲೋ ಇಂಡಿಯಾ ಯೋಜನೆಯಡಿಯಲ್ಲಿ ಮಂಡ್ಯಕ್ಕೆ ಈ ಮಹತ್ವದ ಯೋಜನೆಯನ್ನು ಮಂಜೂರು ಮಾಡಿದ್ದಕ್ಕಾಗಿ ಮತ್ತು ತ್ವರಿತವಾಗಿ ನಿರ್ಧಾರ ಕೈಗೊಂಡಿದ್ದಕ್ಕಾಗಿ ಕೇಂದ್ರದ ಕ್ರೀಡಾ ಸಚಿವರಾದ ಡಾ. ಮನ್ಸುಖ್ ಮಾಂಡವಿಯ ಅವರಿಗೆ ನಾನು ಪ್ರಾಮಾಣಿಕವಾಗಿ ಧನ್ಯವಾದ ಅರ್ಪಿಸುತ್ತೇನೆ. ಆರೋಗ್ಯ, ಸಶಕ್ತ ಮಂಡ್ಯ ನಿರ್ಮಾಣಕ್ಕಾಗಿ ಇದು ಬಹುದೊಡ್ಡ ಯೋಗದಾನ ಆಗುತ್ತದೆ.

-ಎಚ್.ಡಿ. ಕುಮಾರಸ್ವಾಮಿ ಕೇಂದ್ರ ಕೈಗಾರಿಕಾ ಸಚಿವ

ಕೃಷಿ ಆಧರಿತವಾದ ಮಂಡ್ಯ ಜಿಲ್ಲೆಯೂ ಪ್ರತಿಭೆಗಳ ಆಗರ. ಅನೇಕ ಪ್ರತಿಭಾವಂತರು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದಾರೆ. ಈ ನಿಟ್ಟಿನಲ್ಲಿ ಕ್ರೀಡೆಯನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಆರೋಗ್ಯವಂತ ಸಶಕ್ತ ಮಂಡ್ಯ ಜಿಲ್ಲೆ ನಿರ್ಮಾಣಕ್ಕೆ ಈ ಯೋಜನೆ ಪೂರಕವಾಗಿದೆ. ಇದು ಪ್ರಧಾನಿ ಮೋದಿ ಅವರ ಕನಸು ಕೂಡ ಆಗಿದೆ ಎಂದು ಸಚಿವರು ಹೇಳಿದ್ದಾರೆ.

..ಟೂರಿಸಂಗೆ ಕಾಯಕಲ್ಪ: ಸಿಎಂ

← ಮೊದಲ ಪುಟದಿಂದ

ಬೇರೆ ನಗರಗಳಲ್ಲಿ ಪಂಚತಾರಾ ಹೊಟೇಲ್ ಸಮೂಹ ತೆರೆದಿರುವ ಇಲ್ಲಿನ ಉದ್ಯಮಿಗಳು ಮಂಗಳೂರಿನಲ್ಲೂ ಪಂಚತಾರಾ ಹೊಟೇಲ್ ಸೌಲಭ್ಯ ಆರಂಭಿಸಲು ಮುತುವರ್ಜಿ ವಹಿಸಬೇಕೆಂದು ಕರೆ ನೀಡಿದರು.

ಶಾಂತಿ ಇದ್ದರೆ ಮಾತ್ರ ಪ್ರಗತಿ: ಪ್ರವಾಸೋದ್ಯಮ ಬೆಳೆಯಲು ಕಾನೂನು ಸುವ್ಯವಸ್ಥೆ ಮತ್ತು ಶಾಂತಿ ಅತ್ಯಗತ್ಯ. ಪ್ರಸ್ತುತ ದಕ್ಷಿಣ ಕನ್ನಡದಲ್ಲಿ ಶಾಂತಿಯುತ ವಾತಾವರಣವಿದೆ. ಧರ್ಮ, ಜಾತಿ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಕೆಲಸ ಯಾರೂ ಮಾಡಬಾರದು. ಕುವೆಂಪು ಅವರ 'ವಿಶ್ವಮಾನವ' ಸಂದೇಶದಂತೆ ಶಾಂತಿಯುತ ಸಮಾಜ ನಿರ್ಮಾಣವಾಗಬೇಕು ಎಂದು ಕಿವಿಮಾತು ಹೇಳಿದರು.

ಪಾರದರ್ಶಕವಾಗಿ ಸಿಐಡಿ ತನಿಖೆ ನಡೆಸಲಿ: ಬಿ. ಶ್ರೀರಾಮುಲು

ಬಳ್ಳಾರಿ: ಸಿಐಡಿಗೆ ವಹಿಸಿರೋದು ಬಿಜೆಪಿ ನಾಯಕರು ಸ್ವಾಗತ ಮಾಡ್ತೇವೆ. ಆದರೆ ಪಾರದರ್ಶಕ ತನಿಖೆ ಮಾಡಬೇಕು ಎಂದು ಮಾಜಿ ಸಚಿವ ಶ್ರೀರಾಮುಲು ಒತ್ತಾಯಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಮೊದಲಿನಿಂದಲೂ ಗಲಾಟೆ ಕುರಿತು ದಾಖಲಾತಿ ಇದೆ ಎಂದು ಹೇಳಿದ್ದ ಅದಕ್ಕೆ ಪೂರಕವಾಗಿ ಸಾಕಷ್ಟು ವಿಡಿಯೋ ದಾಖಲೆಗಳಿವೆ. ಪ್ರಾರಂಭದಿಂದ ಹತ್ಯೆಯಾಗೋವರೆಗೂ ಎಲ್ಲ ಘಟನೆ ನಮ್ಮ ಕಣ್ಮುಂದೆ ನಡೆದಿದೆ. ಬ್ಯಾನರ್ ಹಾಕಿರೋದೇ ಪ್ರಚೋದನೆಗಾಗಿ ಎಂದು ಸ್ಪಷ್ಟವಾಗಿದೆ. ಯಾವುದೇ ತನಿಖಾ ಸಂಸ್ಥೆ ಕೇಳಿದ್ರೇ ಎಲ್ಲಾ ದಾಖಲಾತಿ ಕೊಡುವೆ. ಗಲಭೆಗೆ ಕಾರಣರಾದವರು ಭರತ್ ರೆಡ್ಡಿ ಅವರನ್ನು ರಕ್ಷಣೆ ಮಾಡಬಾರದು ಎಂದು ದೂರಿದರು.

ಬಿಜೆಪಿ-ಜೆಡಿಎಸ್ ಜಂಟಿ ಸುದ್ದಿಗೋಷ್ಠಿಯಲ್ಲಿ ಎಚ್‌ಡಿಕೆ ಆರೋಪ

ನರೇಗಾ ಹೆಸರಿನಲ್ಲಿ ನಕಲಿ ಬಿಲ್

ಬಿಜೆಪಿ-ಜೆಡಿಎಸ್‌ನಿಂದ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಎಚ್‌ಡಿಕೆ ಮಾತನಾಡಿದರು. ಬಿ.ವೈ.ವಿಜಯೇಂದ್ರ, ಆರ್. ಅಶೋಕ, ನಿಖಿಲ್ ಕುಮಾರಸ್ವಾಮಿ ಇದ್ದರು.

ಬೆಂಗಳೂರು: ಉದ್ಯೋಗ ಖಾತರಿ ಯೋಜನೆ ಹೆಸರಿನಲ್ಲಿ ನಕಲಿ ಬಿಲ್ ಸೃಷ್ಟಿಸಿ ಹಣ ಲೂಟಿ ಮಾಡಿದ ರಾಜ್ಯ ಸರಕಾರ ಈಗ ವಿಬಿ ಜಿ ರಾಮ್ ಜಿ ವಿರುದ್ಧ ಅಪಪ್ರಚಾರ ಮಾಡುತ್ತಾ ವಿಧಾನಸಭೆ ಅಧಿವೇಶನವನ್ನು ಕರೆಯಲು ಹೊರಟಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಖಾಸಗಿ ಹೊಟೇಲ್‌ನಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್ ನಾಯಕರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊರಗೆ ಅಪಪ್ರಚಾರ ಮಾಡುತ್ತಿರುವುದು ಸಾಲದು ಎಂಬಂತೆ ವಿಧಾನಸಭೆ ಅಧಿವೇಶನವನ್ನು ಬೇರೆ ಕರೆಯುತ್ತಿದ್ದಾರೆ. ಪಾದಯಾತ್ರೆಯನ್ನು ಕೂಡ ನಡೆಸುತ್ತಾರಂತೆ. ಯಾವ ಪುರುಷಾರ್ಥಕ್ಕೆ ಇದೆಲ್ಲವನ್ನೂ ಮಾಡುತ್ತಾರೆ? ನರೇಗಾ ಹೆಸರಿನಲ್ಲಿ ನಕಲಿ ಬಿಲ್'ಗಳನ್ನು ಸೃಷ್ಟಿಸಿ ಲೂಟಿ ಮಾಡಿದ್ದು ಸಾಲದೇ? ಕಾಂಗ್ರೆಸ್‌ನವರಿಂದ ಬಡ ಕೂಲಿ ಕಾರ್ಮಿಕರಿಗೆ ನ್ಯಾಯ ಸಿಕ್ಕುತ್ತದೆಯೇ? ಕಾರ್ಮಿಕರಿಗೆ ನ್ಯಾಯ ಮಾಡದೆ ಇವರು ಏನು ಮಾಡುತ್ತಿದ್ದರು? ನಕಲಿ ಬಿಲ್ಲುಗಳನ್ನು ತಡೆಯಲು, ನಕಲಿ ಕಾರ್ಡುಗಳನ್ನು ಪತ್ತೆ ಹಚ್ಚಲು ಇವರು ವಿಫಲವಾಗಿದ್ದು ಯಾಕೆ? ಎಂದು ಪ್ರಶ್ನಿಸಿದರು.

ನರೇಗಾ ಯೋಜನೆ ಸ್ಥಗಿತವಾಗಿಲ್ಲ. ಕಳೆದ ಅನೇಕ ವರ್ಷದಿಂದ ಈ ಯೋಜನೆಯಲ್ಲಿ ನಡೆದಿದ್ದ ಅಕ್ರಮಗಳನ್ನು ನರೇಂದ್ರ ಮೋದಿ ಸರಕಾರ ಸರಿಪಡಿಸಿ ಅದರಲ್ಲಿ ಅನೇಕ ಮಹತ್ವದ ಸುಧಾರಣೆಗಳನ್ನು ತಂದಿದೆ. ಲೋಪಗಳನ್ನು ಸರಿಪಡಿಸಿ ಸುಧಾರಣೆಗಳನ್ನು ಮಾಡುವುದು ತಪ್ಪು ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿರುವುದು ಸರಿಯಲ್ಲ. ಜಿ ರಾಮ್ ಜಿ ಯೋಜನೆಯಿಂದ ಗ್ರಾಮ ಪಂಚಾಯ್ತಿ ಅಧಿಕಾರಕ್ಕೆ ಆಗಲಿ ಅಥವಾ ರಾಜ್ಯ ಸರ್ಕಾರಗಳ ಅಧಿಕಾರಕ್ಕೆ ಯಾವುದೇ ಧಕ್ಕೆ ಆಗಲ್ಲ. ಈ ಯೋಜನೆಗೆ ಪೂರ್ಣ ಅನುದಾನ ನೀಡುತಿರುವುದು ಕೇಂದ್ರ ಸರಕಾರ. ಕೇಂದ್ರ ನೀಡಿರುವ ಅನುದಾನವನ್ನು ರಾಜ್ಯ ಸರಕಾರ ಸರಿಯಾಗಿ ಬಳಕೆ ಮಾಡುತ್ತಿಲ್ಲ. ಅದರಲ್ಲಿ ಪಾರದರ್ಶಕತೆ ಇಲ್ಲ. ಈ ಯೋಜನೆ ಹೆಸರಲ್ಲಿ ಕಳ್ಳಬಿಲ್ಲುಗಳನ್ನು ಮಾಡಿಕೊಂಡು ಲೂಟಿ ಮಾಡಲಾಗಿದೆ. ಇದು ಶುರು ಆದಾಗಿನಿಂದ ಆಗಿರುವ ಲೋಪಗಳನ್ನು ಸರಿಪಡಿಸಿ ಹೊಸ ಯೋಜನೆ ರೂಪಿಸಲಾಗಿದೆ. ಮನರೇಗಾದಲ್ಲಿ ಇದ್ದ ತಪ್ಪುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಯೋಜನೆ ಅನುಷ್ಠಾನಕ್ಕೆ ತರಲಾಗಿದೆ ಎಂದರು.

ಯೋಜನೆಯ ಬಗ್ಗೆ ಕಾಂಗ್ರೆಸ್ ಪಕ್ಷ ಸುಳ್ಳಿನ ಸಂಕಥನ ಸೃಷ್ಟಿ ಮಾಡುತ್ತಿದ್ದು, ಆ ಸುಳ್ಳನ್ನು ಎದುರಿಸಲು ನಾವು ದಾಖಲೆ ಸಮೇತ ಬಹಿರಂಗ ಚರ್ಚೆಗೆ ತಯಾರಿದ್ದೇವೆ.

– ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ಬಿಜೆಪಿ ಮತ್ತು ಜೆಡಿಎಸ್, ಸುಳ್ಳು-ಅಪಪ್ರಚಾರಕ್ಕೆ ಅವಕಾಶ ಕೊಡುವು ದಿಲ್ಲ. ಗ್ರಾಮ ಮಟ್ಟಕ್ಕೂ ನಾವು ತೆರಳಿ ಜನರಿಗೆ, ಕಾರ್ಮಿಕರಿಗೆ ಮನವರಿಕೆ ಮಾಡಲಿದ್ದೇವೆ. ಕಾಂಗ್ರೆಸ್ ಪಕ್ಷದ ಷಡ್ಯಂತ್ರ ಬಯಲಿಗೆ ಎಳೆಯುತ್ತೇವೆ.

– ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ವಿಬಿ ಜಿ ರಾಮ್ ಜಿ ಯೋಜನೆಗೆ ಹಣ ನೀಡಲು ಕೂಡ ಕಾಂಗ್ರೆಸ್ ಬಳಿ ಅನುದಾನವಿಲ್ಲ. ಆ ಮಟ್ಟಿಗೆ ಖಜಾನೆ ಖಾಲಿಯಾಗಿದೆ. ಕಾಂಗ್ರೆಸ್ ಇಷ್ಟು ದಿನ ಮನರೇಗಾ ಅಡಿಯಲ್ಲಿ ಹಣ ಕಳ್ಳತನ ಮಾಡುತ್ತಿತ್ತು. ಈಗ ಪ್ರಧಾನಿ ಮೋದಿ ವಿಬಿ ಜಿ ರಾಮ್ ಜಿ ಯೋಜನೆ ಜಾರಿ ಮಾಡಿ ಪಾರದರ್ಶಕತೆ ಹೆಚ್ಚಿಸಿದ್ದಾರೆ. ಈ ಹಿಂದೆ ಪೂರ್ಣ ಅನುದಾನ ಬರುತ್ತಿದ್ದರೆ, ಈಗ 60-40 ರಂತೆ ಅನುದಾನ ಹಂಚಿಕೆ ಮಾಡಬೇಕಿದೆ. ಆದರೆ 40% ಹಣ ನೀಡಲು ಕೂಡ ಕಾಂಗ್ರೆಸ್ ಬಳಿ ಅನುದಾನವಿಲ್ಲ.

– ಆರ್.ಅಶೋಕ ಪ್ರತಿಪಕ್ಷದ ನಾಯಕ

ಲೋಕೋಪಯೋಗಿ ಇಲಾಖೆ, ತುಮಕೂರು,

ಕ್ರ.ಸಂ:ಸ.ಕಾಇಂ/ಲೋಇವಿ/ತುಮ/ಕಿಇಂ-3/ಟೆಂಡರ್ 41/2025-26 ದಿನಾಂಕ: 03-01-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 41/2025-26 ದಿನಾಂಕ 03-01-2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **41/2025-26** ದಿನಾಂಕ **03-01-2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **ಲೆಕ್ಕಶೀರ್ಷಿಕೆ:-8443** ಠೇವಣಿ ವಂತಿಕೆ ಅಡಿಯಲ್ಲಿ **03 ಕಾಮಗಾರಿ**ಗಳಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 51.74 ಲಕ್ಷಗಳು** ಹಾಗೂ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ. 84.29 ಲಕ್ಷಗಳು,** ಕನಿಷ್ಠ ಇ.ಎಂ.ಡಿ ಮೊತ್ತ **ರೂ. 1,07,500/-** ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ **ರೂ. 1,68,570/-,** ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು **ಕಾಲಾವಧಿ: 06 ತಿಂಗಳುಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 14-01-2026 ರ 17-30 ಗಂಟೆಗೆ,** KPPP-Portal ಮೂಲಕ ಟೆಂಡರ್‌ಅನ್ನು **ದಿನಾಂಕ 07-01-2026 ರಿಂದ 16-01-2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 16-01-2026 ರ 16-00 ಗಂಟೆವರೆಗೆ** ತಾಂತ್ರಿಕ ಬಿಡ್ ಅನ್ನು ತೆರೆಯುವ **ದಿನಾಂಕ:-17-01-2026 ರ 16-30 ಗಂಟೆಗೆ** ಆರ್ಥಿಕ ಬಿಡ್ ಅನ್ನು ತೆರೆಯುವ **ದಿನಾಂಕ: 19-01-2026 ರ 11-30 ಗಂಟೆವರೆಗೆ** ಹಾಗೂ ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-219/25-26/Oysters

ಲೋಕೋಪಯೋಗಿ ಇಲಾಖೆ, ತುಮಕೂರು,

ಕ್ರ.ಸಂ:ಸ.ಕಾಇಂ:ಲೋಇವಿ:ತುಮ:ಸಇಂ-2/ಟೆಂಡರ್ 42/2025-26 ದಿನಾಂಕ: 05-01-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 42/2025-26 ದಿನಾಂಕ 05-01-2026

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **42/2025-26** ದಿನಾಂಕ **05-01-2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **4059-80-051-0-60-132 (ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ - CMIDP) ಲೆಕ್ಕ ಶೀರ್ಷಿಕೆ** ಅಡಿಯಲ್ಲಿ **16 ಕಾಮಗಾರಿ**ಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ. 757.18 ಲಕ್ಷಗಳು** ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 207.72 ಲಕ್ಷಗಳು** ಇ.ಎಂ.ಡಿ ಗರಿಷ್ಠ ಮೊತ್ತ **ರೂ. 11,35,771/-** ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ **ರೂ. 3,11,592/-,** ಅರ್ಹ ಗುತ್ತಿಗೆದಾರರು 1&2ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 06 ರಿಂದ 11 ತಿಂಗಳು**. ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ **ದಿನಾಂಕ ಮತ್ತು ವೇಳೆ: 19-01-2026 ರ 17-30 ಗಂಟೆಗೆ** KPPP-Portal ಮೂಲಕ ಟೆಂಡರ್‌ಅನ್ನು **ದಿನಾಂಕ 09-01-2026 ರಿಂದ 20-01-2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ವೇಳೆ: 20-01-2026 ರ 16-00 ಗಂಟೆವರೆಗೆ**. ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: 21-01-2026 ರ 16-30 ಗಂಟೆಗೆ, ಆರ್ಥಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 22-01-2026 ರ 17-00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-226/25-26/Oysters

ಲೇಖಕಿ, ಕಾದಂಬರಿಗಾರ್ತಿ ಆಶಾ ರಘು ಆತ್ಮಹತ್ಯೆ

ಬೆಂಗಳೂರು: ಕನ್ನಡದ ಲೇಖಕಿ, ಕಾದಂಬರಿಗಾರ್ತಿ, ಪ್ರಕಾಶಕಿ ಹಾಗೂ ಕಲಾವಿದೆ ಆಶಾ ರಘು (47) ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ತಮ್ಮ ನಿವಾಸದಲ್ಲಿ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಇವರ ಪತಿ, ಖ್ಯಾತ ಆಹಾರ ತಜ್ಞ ಹಾಗೂ ಲೇಖಕ ಕೆ.ಸಿ.ರಘು ಎರಡು ವರ್ಷಗಳ ಹಿಂದೆ ನಿಧನರಾಗಿದ್ದರು. ಆಶಾ ಅವರಿಗೆ ಪುತ್ರಿ ಇದ್ದಾರೆ. ಪತಿ ನಿಧನ ನಂತರ ಮಾನಸಿಕವಾಗಿ ಬಹಳ ನೊಂದಿದ್ದರು. ಶುಕ್ರವಾರ ರಾತ್ರಿ ಅವರು ಮನೆಯ ಕೊಠಡಿಯಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದರು. ಮನೆಯವರಿಗೆ ಗೊತ್ತಾಗಿ ಬಾಗಿಲು ಒಡೆದು ರಕ್ಷಿಸುವಷ್ಟರಲ್ಲಿ ಅವರ ಪ್ರಾಣಪಕ್ಷಿ ಹಾರಿಹೋಗಿತ್ತು ಎಂದು ತಿಳಿದುಬಂದಿದೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿ ಸಂಜೆ ಅಂತ್ಯಕ್ರಿಯೆ ನೆರವೇರಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಆಶಾ ರಘು ಅವರು ಕನ್ನಡದ ಪ್ರಮುಖ ಕಾದಂಬರಿಗಾರ್ತಿಯರಲ್ಲಿ ಒಬ್ಬರು. ಕೇಶವ ಅಯ್ಯಂಗಾರ್ ಹಾಗೂ ಸುಲೋಚನ ದಂಪತಿಯ ಹಿರಿಯ ಮಗಳಾಗಿ 1979ರ ಜೂನ್ 18ರಂದು ಬೆಂಗಳೂರಿನಲ್ಲಿ ಹುಟ್ಟಿದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಸ್ನಾತಕೋತ್ತರ ಪದವಿ ಪಡೆದು, ಉಪನ್ಯಾಸಕರಾಗಿ ಕೆಲಕಾಲ ಕಾರ್ಯ ನಿರ್ವಹಿಸಿದರು. ರಂಗಭೂಮಿ, ಕಿರುತೆರೆ, ಬೆಳ್ಳಿತೆರೆಗಳಲ್ಲಿಯೂ ಕಲಾವಿದೆಯಾಗಿ, ಸಂಭಾಷಣೆಕಾರರಾಗಿ, ಸಹಾಯಕ ನಿರ್ದೇಶಕರಾಗಿ ಕೂಡ ಕಾರ್ಯ ನಿರ್ವಹಿಸಿದ್ದಾರೆ. ಇತ್ತೀಚೆಗೆ ಉಪಾಸನಾ ಎಂಬ ಪ್ರಕಾಶನವನ್ನೂ ಆರಂಭಿಸಿ ಯುವ ಲೇಖಕ/ಲೇಖಕಿಯರ ಪುಸ್ತಕಗಳನ್ನು ಪ್ರಕಟಿಸಿದ್ದರು. ಆಶಾ ರಘು ಅವರ ನಿಧನಕ್ಕೆ ಕನ್ನಡ ಲೇಖಕರ ಮತ್ತು ಪ್ರಕಾಶಕರ ಒಕ್ಕೂಟ ಶ್ರದ್ಧಾಂಜಲಿ ಸಲ್ಲಿಸಿದೆ.

ಪತಿಯ ಬಗ್ಗೆ 10 ದಿನಗಳ ಹಿಂದೆ ಪೋಸ್ಟ್

ಆಶಾ ಅವರ ಪತಿ ರಘು ಅವರು ಎರಡು ವರ್ಷಗಳ ಹಿಂದೆ ನಿಧನರಾಗಿದ್ದರು. ರಘು ಅವರು ಕರ್ನಾಟಕದ ಆಹಾರ ತಜ್ಞರಾಗಿದ್ದರು. ಅವರಿಗೆ ಶ್ವಾಸಕೋಶದ ಕ್ಯಾನ್ಸರ್ ಉಂಟಾಗಿತ್ತು. ಕಳೆದ ಹತ್ತು ದಿನಗಳ ಹಿಂದೆ ಆಶಾ ಅವರು ಫೇಸ್ ಬುಕ್‌ನಲ್ಲಿ 'ಹೀಗೊಂದು ಕನಸಾಯಿತು, ಇಂದು ಬೆಳಗಿನ ಜಾವ ನನ್ನವರು ಕನಸಿನಲ್ಲಿ ಕಾಣಿಸಿಕೊಂಡರು. ಬಹಳ ಸಹಜವಾಗಿದ್ದರು. ನನಗೆ ಅವರು ತೀರಿಕೊಂಡ ಮೇಲೆ ನೋಡಲು ಬಂದಿದ್ದಾರೆಂಬ ಸಂಪೂರ್ಣ ಅರಿವಿತ್ತು. ಸಡಗರದಲ್ಲಿ ಮಾತನಾಡಿಸಿದೆ. ಉಳಿದವರನ್ನು ಕನಸಿನಲ್ಲೇ 'ಕಾಣ್ತಿದ್ದಾರಾ ನಿಮಗೆ?' ಅಂತೆಲ್ಲಾ ಕೇಳಿದೆ. ಅವರು ತಿಣುಕಾಡಿದರು' ಎಂದು ದೀರ್ಘವಾಗಿ ಬರೆದುಕೊಂಡಿದ್ದರು.

ಗ್ರೀನ್‌ಲ್ಯಾಂಡ್ ವಶ ಖಚಿತ: ಟ್ರಂಪ್

← ಮೊದಲ ಪುಟದಿಂದ

ಗ್ರೀನ್‌ಲ್ಯಾಂಡ್ ಸುತ್ತಮುತ್ತ ಈಗಾಗಲೇ ರಷ್ಯಾ ಮತ್ತು ಚೀನಾದ ಯುದ್ಧನೌಕೆಗಳು, ಜಲಾಂತರ್ಗಾಮಿಗಳಿವೆ. ನಾವು ರಷ್ಯಾ ಅಥವಾ ಚೀನಾವನ್ನು ನಮ್ಮ ನೆರೆಹೊರೆಯವರಾಗಿ ಹೊಂದಲು ಬಯಸುವುದಿಲ್ಲ. ಹಾಗಾಗಿ ನಾನು ಸುಲಭವಾದ ವಿಧಾನದಲ್ಲಿ ಒಪ್ಪಂದ ಮಾಡಿಕೊಳ್ಳಲು ಇಚ್ಛಿಸುತ್ತೇನೆ, ಒಂದು ವೇಳೆ ಅದು ಸಾಧ್ಯವಾಗದೆ ಹೋದರೆ ನಾವು ಕಠಿಣ ಮಾರ್ಗವನ್ನು ಆರಿಸಿಕೊಳ್ಳುತ್ತೇವೆ ಎಂದು ಡೆನ್ಮಾರ್ಕ್‌ಗೆ ಎಚ್ಚರಿಕೆ ನೀಡಿದರು.

ಗ್ರೀನ್‌ಲ್ಯಾಂಡ್‌ನಲ್ಲಿ ಈಗಾಗಲೇ ಅಮೆರಿಕ ಮಿಲಿಟರಿ ಉಪಸ್ಥಿತಿ ಹೊಂದಿದ್ದರೂ, ಅದನ್ನು ಸ್ವಾಧೀನಪಡಿಸಿಕೊಳ್ಳುವ ಅಗತ್ಯವಿದೆಯೇ ಎಂಬ ಪ್ರಶ್ನೆಗೆ, ಯಾವುದೇ ಪ್ರದೇಶವನ್ನು ರಕ್ಷಿಸಲು ಮಾಲೀಕತ್ವ ಅಗತ್ಯ ಎಂದು ಟ್ರಂಪ್ ತಿಳಿಸಿದರು. ನ್ಯಾಟೊ ಇದನ್ನು ಅರ್ಥಮಾಡಿಕೊಳ್ಳಬೇಕು. ನಾನು ನ್ಯಾಟೊ ಪರವಾಗಿದ್ದೇನೆ. ನಾನು ಅದನ್ನು ಉಳಿಸಿದ್ದೇನೆ. ನಾನಿಲ್ಲದಿದ್ದರೆ, ನ್ಯಾಟೊ ಇರುತ್ತಿರಲಿಲ್ಲ ಎಂದು ಟ್ರಂಪ್ ಹೇಳಿದರು.

ಭಾರತಕ್ಕೆ ವೆನೆಜುವೆಲಾ ತೈಲ!

ವೆನಿಜುವೆಲಾದ ತೈಲ ಸಂಪತ್ತಿನ ಮೇಲೆ ಒಡೆತನ ಸಾಧಿಸಲು ಹೊರಟಿರುವ ಅಮೆರಿಕ ಹೊಸ ಚೌಕಟ್ಟಿನಡಿಯಲ್ಲಿ ಭಾರತಕ್ಕೆ ವೆನೆಜುವೆಲಾದ ತೈಲವನ್ನು ಖರೀದಿಸಲು ಅವಕಾಶ ನೀಡಲು ಸಿದ್ಧ ಎಂದು ತಿಳಿಸಿದೆ. ಭಾರತಕ್ಕೆ ವೆನೆಜುವೆಲಾದ ಕಚ್ಚಾ ತೈಲ ಖರೀದಿಯನ್ನು ಪುನರಾರಂಭಿಸಲು ಅಮೆರಿಕ ಸಿದ್ಧವಾಗಿದೆಯೇ ಎಂಬ ಪ್ರಶ್ನೆಗೆ ವಾಷಿಂಗ್ಟನ್ ಬಹುತೇಕ ಎಲ್ಲಾ ದೇಶಗಳಿಗೆ ವೆನೆಜುವೆಲಾದ ತೈಲವನ್ನು ಮಾರಾಟ ಮಾಡಲು ಮುಕ್ತವಾಗಿದೆ ಎಂದು ಇಂಧನ ಕಾರ್ಯದರ್ಶಿ ಕ್ರಿಸ್ಟೋಫರ್ ರೈಟ್ ಅವರ ಹೇಳಿದ್ದಾರೆ. ಅಮೆರಿಕ ದಾಳಿಯ ಮೊದಲು ಭಾರತವು ವೆನೆಜುವೆಲಾದ ಅತಿದೊಡ್ಡ ಗ್ರಾಹಕರಲ್ಲಿ ಒಂದಾಗಿತ್ತು.

...ಪ್ರತಿಭಟನೆ ತಾರಕಕ್ಕೆ: 220 ಜನ ಬಲಿ

← ಮೊದಲ ಪುಟದಿಂದ

''ನಿಮ್ಮ ದೇಶದ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿ, ಬೇರೆ ದೇಶಗಳ ಆಡಳಿತದಲ್ಲಿ ಕೈಹಾಕದಿರಿ'' ಎಂದು ಖಮೇನಿ, ಟ್ರಂಪ್‌ಗೆ ನೇರ ಎಚ್ಚರಿಕೆ ನೀಡಿದ್ದಾರೆ. ಇರಾನ್‌ನಲ್ಲಿ ವಿದೇಶಿ ಬೆಂಬಲಿತ ಪ್ರತಿಭಟನೆ ಅಥವಾ ಭಯೋತ್ಪಾದಕ ಏಜೆಂಟ್‌ಗಳನ್ನು ಸಹಿಸುವುದಿಲ್ಲ. ಕೆಲವು ಗಲಭೆಕೋರರು ಸರಕಾರಿ ಆಸ್ತಿಗೆ ಹಾನಿ ಮಾಡುವ ಮೂಲಕ ಟ್ರಂಪ್ ಅವರನ್ನು ಸಮಾಧಾನ ಪಡಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಇರಾನ್ ವಿದೇಶಿ ಒತ್ತಡಕ್ಕೆ ಮಣಿಯುವುದಿಲ್ಲ ಎಂದು ಹೇಳಿದ್ದಾರೆ.

ಇರಾನ್ ಯುವಕರು ದೇಶದ ಪರವಾಗಿ ಒಂದಾಗಿ ನಿಲ್ಲಬೇಕು. ಬಾಹ್ಯ ಒತ್ತಡಗಳಿಗೆ ಮಣಿಯದೆ ಏಕತೆಯನ್ನು ಕಾಪಾಡಿಕೊಳ್ಳಿ. ಒಗ್ಗಟ್ಟಿನ ಬಲ ಹೊಂದಿರುವ ರಾಷ್ಟ್ರವು ಯಾವುದೇ ಶತ್ರು ದೇಶವನ್ನು ಸೋಲಿಸುವ ಶಕ್ತಿಯನ್ನು ಹೊಂದಿರುತ್ತದೆ ಎಂದು ಹೇಳುವ ಮೂಲಕ ಅವರು ಇರಾನಿನ ಯುವಕರನ್ನು ಒಗ್ಗೂಡಿಸಲು ಪ್ರಯತ್ನಿಸಿದ್ದಾರೆ.

ನೆಲ ಕಚ್ಚಿದ ರಿಯಾಲ್

ಪ್ರತಿಭಟನೆ ಮಧ್ಯೆ ಇರಾನಿನ ಕರೆನ್ಸಿ ರಿಯಾಲ್ ನೆಲಕಚ್ಚಿದೆ. ಒಂದು ಅಮೆರಿಕನ್ ಡಾಲರ್ ಎದುರು ಇರಾನಿನ ರಿಯಾಲ್ ಮೌಲ್ಯ ಬರೋಬ್ಬರಿ 14.7 ಲಕ್ಷಕ್ಕೆ ಕುಸಿದಿದೆ. ಹಸಿವು, ಹಣದುಬ್ಬರ ಮತ್ತು ಸರಕಾರದ ಭ್ರಷ್ಟಾಚಾರದಿಂದ ಬೇಸತ್ತ ಜನ ಈಗ 'ಸರ್ವಾಧಿಕಾರಿಗೆ ಸಾವು' ಎಂದು ಕೂಗುತ್ತಾ ಖಮೇನಿ ಸರಕಾರದ ವಿರುದ್ಧ ಬೀದಿಗೆ ಇಳಿದಿದ್ದಾರೆ. ಈ ಪ್ರತಿಭಟನೆ ಭಾರತದ ಮೇಲೂ ದೊಡ್ಡ ಪರಿಣಾಮ ಬೀರುತ್ತಿದ್ದು, ಭಾರತದ ತಂತ್ರಗಾರಿಕೆಗೆ ದೊಡ್ಡ ಪೆಟ್ಟು ಬೀಳುತ್ತಿದೆ.

ಪಾಕ್ ಜತೆ ಶಾಂತಿ ಅಸಾಧ್ಯ: ವಿಕ್ರಮ್ ಸೂದ್

← ಮೊದಲ ಪುಟದಿಂದ

ಎರಡೂ ದೇಶಗಳ ಜೊತೆ ತಾರ್ಕಿಕವಾಗಿ ವ್ಯವಹರಿಸುವ ದಾರಿಯನ್ನು ಭಾರತ ಆಯ್ಕೆ ಮಾಡಿಕೊಳ್ಳಬೇಕು. ಬಲಿಷ್ಠ ರಾಷ್ಟ್ರವಾಗಲು ಬಲಿಷ್ಠ ಸರಕಾರ ಬಹಳ ಅಗತ್ಯ. ಹೇಗೆ ಅಮೆರಿಕದ ಸರಕಾರದ ಪ್ರತಿನಿಧಿ ಭಾರತಕ್ಕೆ ಬಂದು ಸಹಾಯ ಕೇಳುವುದಿಲ್ಲವೋ ಅದೇ ರೀತಿ ಭಾರತ ಕೂಡ ಯಾರನ್ನೂ ಸಹಾಯ ಕೇಳದಿರುವಂತೆ ಆಗಬೇಕು. ಇತ್ತೀಚೆಗೆ ಅಂತಹ ಬೆಳವಣಿಗೆ ಕಾಣುತ್ತಿವೆ. ಬಾಲಾಕೋಟ್, ಉರಿ ಪ್ರತಿದಾಳಿ, ಹಾಗೂ ಆಪರೇಷನ್ ಸಿಂದೂರ್‌ನ ಉದಾಹರಣೆಗಳನ್ನು ಮುಂದಿಟ್ಟರು. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ನಿಲುವುಗಳನ್ನು ಇನ್ನೂ ಗಟ್ಟಿಯಾಗಿ ಸ್ಥಾಪಿಸಬೇಕು. ಈಗ ಅಲ್ಲದಿದ್ದರೆ ಇನ್ನೆಂದೂ ಮೇಲೆ ಹೋಗಲು ಸಾಧ್ಯವಿಲ್ಲ ಎಂದು ಹೇಳಿದರು. ಡಾ. ಶ್ರೀಪರ್ಣಾ ಪಾಠಕ್ ಸಂವಾದ ನಡೆಸಿಕೊಟ್ಟರು.

ರಾಹುಲ್ ವೋಟ್ ಚೋರಿ ಆರೋಪಕ್ಕೆ ವ್ಯತಿರಿಕ್ತವಾದ ಸಮೀಕ್ಷೆ

ರಾಜೇಶ್ ಶೆಟ್ಟಿ ಬೆಂಗಳೂರು

ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯವರ ಉಸ್ತುವಾರಿಯಲ್ಲಿ ನಡೆಸಲಾಗಿದ್ದ ಸಮೀಕ್ಷೆಯೊಂದು, ಸಾರ್ವಜನಿಕರಿಗೆ ಇವಿಎಂಗಳು, ವಿವಿಪಿಎಟಿ ಬಗ್ಗೆ ವಿಶ್ವಾಸ ಇರುವುದನ್ನು ಮತ್ತು ಭಾರತದಲ್ಲಿ ಚುನಾವಣಾ ಪ್ರಕ್ರಿಯೆ ನ್ಯಾಯಸಮ್ಮತವಾಗಿ ನಡೆಯುತ್ತಿರುವ ಬಗ್ಗೆ ಇರುವ ನಂಬಿಕೆಯನ್ನು ದೃಢಪಡಿಸಿದೆ.

ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿಗಳು, ಜನರಲ್ಲಿ ಇವಿಎಂ ಯಂತ್ರಗಳ ವಿಶ್ವಾಸಾರ್ಹತೆಯನ್ನು ಪರಿಶೀಲಿಸಲು ಸಮೀಕ್ಷೆಯೊಂದನ್ನು ನಡೆಸಿದ್ದರು. 'ಲೋಕಸಭಾ ಚುನಾವಣೆ 2024- ನಾಗರಿಕರ ತಿಳಿವಳಿಕೆ, ನಿಲುವು ಮತ್ತು ಅಭ್ಯಾಸ' ಎಂಬ ಶೀರ್ಷಿಕೆಯಲ್ಲಿ ಸಮೀಕ್ಷೆ ನಡೆಸಲಾಗಿತ್ತು. ಸಮೀಕ್ಷಾ ವರದಿಯನ್ನು ಕರ್ನಾಟಕ ಮಾನಿಟರಿಂಗ್ ಆ್ಯಂಡ್ ಇವಾಲ್ಯೂಷನ್ ಅಥಾರಿಟಿಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿತ್ತು. ಈ ಕೆಎಂಇಎ ಪ್ರಾಧಿಕಾರವು ರಾಜ್ಯ ಸರಕಾರದ ಯೋಜನೆ ಮತ್ತು ಅಂಕಿ ಅಂಶಗಳ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ಈ ವರದಿ ವೈರಲ್ ಆಗಿತ್ತು. ಇದರ ಬಗ್ಗೆ ಬಿಜೆಪಿ ಪ್ರಸ್ತಾಪಿಸುತ್ತಿದ್ದಂತೆ, ವಿವಾದ ರಾಜಕೀಯ ಸ್ವರೂಪ ಪಡೆಯುತ್ತಿದ್ದಂತೆ ಕೆಎಂಇಎ ವೆಬ್‌ಸೈಟ್‌ನಿಂದ ಸಮೀಕ್ಷೆಯ ವರದಿಯನ್ನು ತೆಗೆದು ಹಾಕಲಾಗಿದೆ. ಹಾಗಾದರೆ ಆ ಸಮೀಕ್ಷೆಯಲ್ಲಿ ಏನಿತ್ತು? ಇದು ಯಾವಾಗ ನಡೆದಿತ್ತು? ವಿವರಗಳನ್ನು ನೋಡೋಣ.



ರಾಜ್ಯ ಸರಕಾರದ ಪ್ಲಾನಿಂಗ್, ಪ್ರೋಗ್ರಾಮ್ ಮಾನಿಟರಿಂಗ್ ಮತ್ತು ಸ್ಟಾಟಿಸ್ಟಿಕ್ಸ್ ಇಲಾಖೆಯ ವ್ಯಾಪ್ತಿಗೆ ಬರುವ ಕೆಎಂಇಎಯು ಚುನಾವಣಾ ಆಯೋಗದ ಪರವಾಗಿ ಸಮೀಕ್ಷೆ ನಡೆಸಿತ್ತು. ಈ ಸಮೀಕ್ಷೆಯಲ್ಲಿ ಬಹುತೇಕ ಜನರು ಇವಿಎಂ ಮೇಲೆ ತಮಗೆ ವಿಶ್ವಾಸ ಹೆಚ್ಚಿದೆ ಎಂದೇ ಹೇಳಿದ್ದರು. ಕರ್ನಾಟಕದ ನಾನಾ ಜಿಲ್ಲೆಗಳಲ್ಲಿ 5,001 ಜನರನ್ನು ಸಮೀಕ್ಷೆಯಲ್ಲಿ ಸಂದರ್ಶಿಸಲಾಯಿತು. ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿಯಲ್ಲಿ ಸಮೀಕ್ಷೆ ನಡೆಯಿತು. ಗ್ರಾಮೀಣ, ನಗರ, ಪಟ್ಟಣಗಳಲ್ಲಿ ಸಮೀಕ್ಷೆ ಆಗಿತ್ತು. ವಯಸ್ಸು, ಲಿಂಗ, ಸಾಮಾಜಿಕ ಕೆಟಗರಿಯನ್ನು ಪರಿಗಣಿಸಲಾಗಿತ್ತು. ಈ ಸಮೀಕ್ಷೆಯು ಇಡೀ ವೋಟ್ ಚೋರಿ ನರೇಟಿವ್ ಅನ್ನು ನಿರಾಕರಿಸಿದೆ.

ಈ ಸಮೀಕ್ಷೆ ಪ್ರಕಾರ ಪ್ರತಿ ಐವರು ಮತದಾರರಲ್ಲಿ ನಾಲ್ವರು ಇವಿಎಂ ಯಂತ್ರಗಳ ಬಗ್ಗೆ ವಿಶ್ವಾಸ ಇದೆ ಎಂದು ಹೇಳಿದ್ದಾರೆ. ಅಂದರೆ 83.61%ಗೂ ಹೆಚ್ಚು ಜನ ಇವಿಎಂ ನೀಡುವ ಫಲಿತಾಂಶದ ಬಗ್ಗೆ ವಿಶ್ವಾಸ ಇಟ್ಟುಕೊಂಡಿದ್ದಾರೆ. 84.55% ಮಂದಿ 2024ರ ಲೋಕಸಭೆ ಚುನಾವಣೆಯು ನ್ಯಾಯ ಸಮ್ಮತವಾಗಿ ನಡೆದಿದೆ ಎಂದಿದ್ದಾರೆ. ಕಾಂಗ್ರೆಸ್ ನಾಯಕರು ಮತಗಳವು ಆರೋಪ ಮಾಡುತ್ತಿದ್ದರೂ, ಅವರದ್ದೇ ರಾಜ್ಯ ಸರಕಾರ ಪ್ರಕಟಿಸಿದ ಸಮೀಕ್ಷೆಯು ವಿಭಿನ್ನವಾದ ವಾಸ್ತವವನ್ನು ತಿಳಿಸಿದೆ.

ಶೇ.83.61ರಷ್ಟು ಜನರು ಬಹಳ ಸ್ಪಷ್ಟವಾಗಿ ಎಲೆಕ್ಟ್ರಾನಿಕ್ ವೋಟಿಂಗ್ ಮೆಶೀನ್‌ಗಳು ನಿಖರ ಫಲಿತಾಂಶವನ್ನು ನೀಡುತ್ತಿವೆ ಎಂದು ವಿಶ್ವಾಸ ವ್ಯಕ್ತಪಡಿಸಿರುವುದು ವಿಶೇಷ. ಕಲಬುರಗಿಯಲ್ಲಿ ಶೇ.94.86ರಷ್ಟು ಮಂದಿ ಇವಿಎಂ ನಿಖರತೆ ಬಗ್ಗೆ ನಂಬಿಕೆ ಹೊಂದಿರುವುದು ಗಮನಾರ್ಹ. ಕಲಬುರಗಿಯು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ತವರೂರು ಕೂಡ ಆಗಿದೆ. ಅಲ್ಲಿಯೇ ರಾಹುಲ್ ಗಾಂಧಿಯವರು ಮತಗಳವು ಆರೋಪಗಳನ್ನು ಮಾಡಿದ್ದರು. ಇವಿಎಂ ಯಂತ್ರದ ನಿಖರತೆ, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ಪ್ರಕ್ರಿಯೆ, ವಿವಿಪಿಎಟಿ ವೆರಿಫಿಕೇಷನ್ ಪ್ರಕ್ರಿಯೆ ಇರಬಹುದು, ಕಲಬುರಗಿ ಜಿಲ್ಲೆಯ ಜನರು ಚುನಾವಣಾ ಆಯೋಗ, ಇವಿಎಂ ಬಗ್ಗೆ ವಿಶ್ವಾಸ ಹೊಂದಿರುವುದನ್ನು ಗಮನಿಸಬಹುದು.

ಸಮೀಕ್ಷೆಯ ಪ್ರಕಾರ 84.55% ಮಂದಿ ಭಾರತದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ವಿಧಾನದಲ್ಲಿ ಚುನಾವಣೆಗಳು ನಡೆಯುತ್ತವೆ ಎಂದು ತಿಳಿಸಿದ್ದಾರೆ. ಇಲ್ಲೂ ಕಲಬುರಗಿಯಲ್ಲಿ 94.86% ಮಂದಿ ಇದನ್ನು ಒಪ್ಪಿದ್ದಾರೆ. ಮೈಸೂರು-ಬೆಳಗಾವಿಯಲ್ಲೂ ಇದೇ ರೀತಿ ಜನ ಸಮ್ಮತಿಸಿದ್ದಾರೆ. ತಂತ್ರಜ್ಞಾನದಿಂದ ಪಾರದರ್ಶಕತೆ ಬರುತ್ತದೆ ಎಂಬುದನ್ನು ಮತದಾರರು ಮನವರಿಕೆ ಮಾಡಿಕೊಂಡಿದ್ದರು.

ವೋಟರ್ ವೆರಿಫಿಯೆಬಲ್ ಪೇಪರ್ ಆಡಿಟ್ ಟ್ರಯಲ್ (ವಿವಿಪಿಎಟಿ) ಬಗ್ಗೆಯೂ ಜನರಲ್ಲಿ ಜಾಗೃತಿ ಇದೆ. 85.29 ಪರ್ಸೆಂಟ್ ಮಂದಿ ವಿವಿಪಿಎಟಿ ಬಗ್ಗೆ ಗೊತ್ತಿದೆ ಎಂದು ತಿಳಿಸಿದ್ದಾರೆ. ಇದು ಮತದಾರರಿಗೆ ಎಲೆಕ್ಟ್ರಾನಿಕ್ ವೋಟಿಂಗ್ ಸಿಸ್ಟಮ್‌ನಲ್ಲಿ ಫೀಡ್ ಬ್ಯಾಕ್ ಕೊಡುತ್ತದೆ. ತಾವು ಹಾಕಿದ ವೋಟ್ ಸರಿಯಾದ ಅಭ್ಯರ್ಥಿಗೆ ಹೋಗುತ್ತಿದೆ ಎಂಬುದನ್ನು ಖಾತರಿಪಡಿಸುತ್ತದೆ. 65.39% ಮಂದಿ ಮತ ಚಲಾಯಿಸುವಾಗ ವಿವಿಪಿಎಟಿಯನ್ನು ಪರಿಶೀಲಿಸಿದ್ದಾರೆ. ಕಲಬುರಗಿಯಲ್ಲಿ 82.38% ಮಂದಿ ಪರಿಶೀಲಿಸಿದ್ದಾರೆ.

ಕರ್ನಾಟಕದ ಮಹದೇವಪುರ ಮತ್ತು ಆಳಂದಾ ವಿಧಾನಸಭೆ ಕ್ಷೇತ್ರವನ್ನು ಉಲ್ಲೇಖಿಸಿ ರಾಹುಲ್ ಗಾಂಧಿ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ಪ್ರಶ್ನಿಸಿದ್ದರು. ಕಾಂಗ್ರೆಸ್ ಪ್ರಕಾರ, ಗ್ರಾಮೀಣ ಮತದಾರರು, ದಲಿತರು, ಹಿಂದುಳಿದ ವರ್ಗಗಳ ಮತದಾರರಿಗೆ ಚುನಾವಣೆ ಮೇಳೆ ದಿಕ್ಕು ತಪ್ಪಿಸಲಾಗುತ್ತದೆ. ವಾಸ್ತವವೇನೆಂದರೆ ಈ ವರ್ಗದ ಮತದಾರರು ಕೂಡ ಇವಿಎಂ ಬಗ್ಗೆ ವಿಶ್ವಾಸ ಹೊಂದಿದ್ದಾರೆ. ಶೇ.81.3 ಮಂದಿಯ ಪ್ರಕಾರ ಪ್ರತಿಯೊಂದು ಮತವೂ ಕೌಂಟ್ ಆಗುತ್ತದೆ. ಮತಗಟ್ಟೆ ಅಧಿಕಾರಿಗಳ ಸಮಗ್ರತೆ ಬಗ್ಗೆ ಕಾಂಗ್ರೆಸ್ ಪ್ರಶ್ನಿಸಿತ್ತು. ಆದರೆ ಸಮೀಕ್ಷೆಯಲ್ಲಿ 95% ಮಂದಿ ಮತಗಟ್ಟೆ ಸಿಬ್ಬಂದಿ ಬಗ್ಗೆ ಸಹಕಾರ ಪ್ರವೃತ್ತಿಯವರು ಎಂಬ ನಂಬಿಕೆ ಹೊಂದಿದ್ದಾರೆ. ಅವರು ರಾಜಕೀಯ ಪಕ್ಷದ ಪ್ರಭಾವಕ್ಕೆ ಒಳಗಾಗದೆ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನಂಬಿದ್ದಾರೆ.

ಸಮಾಚಾರ ಸಣ್ಣದಲ್ಲ

ಬೇಟೆಗೆ ನಾಡಬಾಂಬ್ ಇಟ್ಟಿದ್ದ ಮೂವರ ಸೆರೆ

ರಾಮನಗರ: ನಾಡಬಾಂಬ್ ಸ್ಫೋಟಗೊಂಡು ಹಸುವಿನ ಬಾಯಿ ಛಿದ್ರಗೊಂಡ ಪ್ರಕರಣ ಸಂಬಂಧ ಕಾಡುಹಂದಿ ಬೇಟೆಗಾಗಿ ನಾಡಬಾಂಬ್ ಇಟ್ಟಿದ್ದ ಮೂವರು ಆರೋಪಿಗಳನ್ನು ಬಂಧನ ಮಾಡಲಾಗಿದೆ. ಕೃಷ್ಣಮೂರ್ತಿ (45), ಶಿವಕುಮಾರ್ (23), ಶಿವನಪ್ಪ (46) ಬಂಧಿತ ಆರೋಪಿಗಳು. ಕನಕಪುರ ತಾಲೂಕಿನ ಆಲನಾಥ ಗ್ರಾಮದ ಬಳಿ ಜ.3ರಂದು ಈ ಘಟನೆ ನಡೆದಿತ್ತು. ರೈತ ಶಿವನೇಗೌಡ ಎಂಬುವವರು ಹಸುವನ್ನ ಮೇಯಲು ಬಿಟ್ಟಿದ್ದಾಗ ಬಾಯಿಗೆ ನಾಡಬಾಂಬ್ ಸಿಲುಕಿ ಸ್ಫೋಟಗೊಂಡು, ಹಸು ಬಾಯಿ ಛಿದ್ರಛಿದ್ರವಾಗಿತ್ತು. ಕಿಡಿಗೇಡಿಗಳ ಕೃತ್ಯಕ್ಕೆ ಹಸು ನರಳಾಡಿ ಎರಡು ದಿನಗಳ ಬಳಿಕ ಸಾವನ್ನಪ್ಪಿತ್ತು. ಈ ಸಂಬಂಧ ರೈತ ಶಿವನೇಗೌಡ ಕೋಡಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಕೋಡಿಹಳ್ಳಿ ಪೊಲೀಸರು, ಕಾಡು ಪ್ರಾಣಿಗಳ ಬೇಟೆಗೆ ನಾಡಬಾಂಬ್ ಇಟ್ಟಿದ್ದ ಮೂವರ ಬಂಧಿಸಿ, ಎರಡು ಜೀವಂತ ನಾಡಬಾಂಬ್‌ಗಳನ್ನ ವಶಕ್ಕೆ ಪಡೆದಿದ್ದಾರೆ.

ಮರ ಕೆಡವಿ, ರಸ್ತೆ ಬಂದ್ ಮಾಡಿದ ಸಲಗ

ಚಿಕ್ಕಮಗಳೂರು: ಚಾರ್ಮಾಡಿ ಘಾಟಿಯ 2 ಮತ್ತು 3ನೇ ತಿರುವಿನ ಬಳಿ ಒಂಟಿ ಸಲಗ ಕಾಣಿಸಿಕೊಂಡಿದೆ. ಶುಕ್ರವಾರ (ಜ.9) ರಾತ್ರಿ ರಸ್ತೆಗೆ ಮರ ಕೆಡವಿ, ರಸ್ತೆಯಲ್ಲೇ ನಿಂತಿದ್ದರಿಂದ ಚಿಕ್ಕಮಗಳೂರು ಮತ್ತು ಮಂಗಳೂರು ಕಡೆಗೆ ಸುಮಾರು 2 ಕಿಲೋ ಮೀಟರ್ ಟ್ರಾಫಿಕ್ ಜಾಮ್ ಉಂಟಾಗಿತ್ತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಟ್ರಾಫಿಕ್ ಜಾಮ್ ಉಂಟಾಗಿತ್ತು. ಮೊಬೈಲ್ ನೆಟ್‌ವರ್ಕ್ ಇಲ್ಲದೇ ಅರಣ್ಯ ಇಲಾಖೆಗೆ ಮಾಹಿತಿ ನೀಡಲು ಪ್ರವಾಸಿಗರು ಪರದಾಡಿದ್ದಾರೆ. ಕೆಲವರು ವಾಹನಗಳನ್ನು ವಾಪಸ್ ತಿರುಗಿಸಿಕೊಂಡು ತೆರಳಿದ್ದಾರೆ. ಕಾಡಾನೆ ಕಾಣಿಸಿಕೊಂಡ ಹಿನ್ನೆಲೆ, ರಾತ್ರಿ ವೇಳೆ ಈ ಮಾರ್ಗದಲ್ಲಿ ಸಂಚರಿಸುವವರು ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಈ ಹಿಂದೆಯೂ ಈ ಭಾಗದಲ್ಲಿ ಹಲವು ಬಾರಿ ಕಾಡಾನೆಗಳು ಕಾಣಿಸಿಕೊಂಡು ಆತಂಕ ಮೂಡಿಸಿದ್ದವು.

ವಿವಸ್ತ್ರ ಪ್ರಕರಣ: ಸಿಐಡಿ ವಿಚಾರಣೆ ಪ್ರಾರಂಭ

ಹುಬ್ಬಳ್ಳಿ: ಬಿಜೆಪಿ ಕಾರ್ಯಕರ್ತೆ ಸುಜಾತಾ ಹಂಡಿ ವಿವಸ್ತ್ರ ಮತ್ತು ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸಲು ಸಿಐಡಿ ತಂಡವು ಶನಿವಾರ ನಗರದಲ್ಲಿ ತನಿಖೆ ಆರಂಭಿಸಿದೆ. ಸಿಐಡಿ ವಿಶೇಷ ವಿಚಾರಣಾ ವಿಭಾಗದ ಎಸ್‌ಪಿ ಶಾಲೂ ನೇತೃತ್ವದಲ್ಲಿ ಡಿವೈಎಸ್‌ಪಿ ಪದ್ಮಶ್ರೀ, ಸಂತೋಷ ಕೆ., ಪಿಐ ಮಧುಸೂದನ್ ನೇತೃತ್ವದಲ್ಲಿ 8 ಜನರ ತಂಡ ತನಿಖೆ ಪ್ರಾರಂಭಿಸಿದೆ. ಬೆಳಗ್ಗೆ ಸಿಐಡಿ ಎಸ್‌ಪಿ ಶಾಲೂ ಅವರು ಹು-ಧಾ ಪೊಲೀಸ್ ಆಯುಕ್ತ ಎನ್.ಶಶಿಕುಮಾರ ಅವರನ್ನು ಭೇಟಿ ಮಾಡಿ, ಪ್ರಕರಣದ ಕುರಿತು ಮಾಹಿತಿ ಪಡೆದುಕೊಂಡರು. ಸಿಐಡಿ ತಂಡಕ್ಕೆ ಪ್ರಕರಣಗಳ ಕಡತಗಳನ್ನು ಹಸ್ತಾಂತರ ಮಾಡುವ ಕುರಿತಂತೆ ಸ್ಥಳೀಯ ಪೊಲೀಸರೊಂದಿಗೆ ಮಾತುಕತೆ ನಡೆಸಿದರು. ಕೇಶ್ವಾಪುರ ಠಾಣೆ ಇನ್‌ಸ್ಪೆಕ್ಟರ್ ಆಗಿದ್ದ ಕೆ.ಎಸ್. ಹಟ್ಟಿ ಅವರನ್ನು ಸಿಐಡಿ ಎಸ್‌ಪಿ ಶಾಲೂ ಪ್ರವಾಸಿ ಮಂದಿರಕ್ಕೆ ಕರೆಯಿಸಿ ಪ್ರಕರಣದ ಕುರಿತು ಮಾಹಿತಿ ಪಡೆದುಕೊಂಡರು. ಜನವರಿ 2ರಿಂದ ಇಲ್ಲಿಯವರೆಗೂ ಇದೇ ಪ್ರಕರಣಕ್ಕೆ ಸಂಬಂಧಿಸಿ 6 ಎಫ್‌ಐಆರ್ ದಾಖಲಾಗಿದ್ದು, ಅದರ ಸಂಪೂರ್ಣ ಮಾಹಿತಿ, ನಡೆದಂತಹ ಘಟನೆಗಳ ಬಗ್ಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ದಿನ ವಿಶೇಷ

11 ಜನವರಿ 2026 ಭಾನುವಾರ

- » ಸೂರ್ಯೋದಯ: 06-45
- » ಸೂರ್ಯಾಸ್ತ: 06-10
- » ತಿಥಿ: ಅಷ್ಟಮಿ
- » ನಕ್ಷತ್ರ: ಚಿತ್ತ
- » ಸಂವತ್ಸರ: ವಿಶ್ವಾವಸು
- » ಆಯನ: ಉತ್ತರಾಯಣ
- » ಋತು: ಶಿಶಿರ
- » ಮಾಸ: ಪುಷ್ಯ
- » ಪಕ್ಷ: ಕೃಷ್ಣ ಪಕ್ಷ

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಉಳ್ಳಾಲ, ದಕ್ಷಿಣ ಕನ್ನಡ ಜಿಲ್ಲೆ
- **ಸಮಸ್ಯೆಯೇನು:** ಬೀದಿ ದೀಪಗಳನ್ನು ದುರಸ್ತಿ ಮಾಡಿಸುವ ಕುರಿತು.
- **ಪರಿಹಾರ:** ಉಳ್ಳಾಲದ ದರ್ಗಾ ಬಳಿ ಬೀದಿ ದೀಪಗಳು ಕೆಟ್ಟು ಹೋಗಿದ್ದು, ದುರಸ್ತಿ ಮಾಡಿಸುವಂತೆ ಸ್ಥಳೀಯರೊಬ್ಬರು ದೂರು ಕೊಟ್ಟಿದ್ದರು. ಸ್ಥಳ ಪರಿಶೀಲನೆ ನಡೆಸಿದ ಸ್ಥಳೀಯ ಅಧಿಕಾರಿಗಳು ಬೀದಿ ದೀಪಗಳನ್ನು ದುರಸ್ತಿ ಮಾಡಿಸಿದ್ದಾರೆ.

ಯುವಕರ ಪ್ರತಿಭೆ ಕರಾವಳಿ ಅಭಿವೃದ್ಧಿಗೆ ಬಳಕೆ ಆಗಬೇಕು: ಡಿಸಿಎಂ ಡಿ.ಕೆ.ಶಿವಕುಮಾರ್

ಕರಾವಳಿ ಪ್ರಗತಿಯೇ ನಮ್ಮ ಸಂಕಲ್ಪ

ಮಂಗಳೂರು: ಕರಾವಳಿ ಎಂದರೆ ಸೌಂದರ್ಯ, ಜ್ಞಾನ, ಸಂಪತ್ತಿನ ಪರ್ವತ. ದೈವ, ದೇವಾಲಯ, ಶಕ್ತಿದೇವತೆಗಳ ಪ್ರವಾಸಿ ಕ್ಷೇತ್ರ. ವ್ಯಾಪಾರಿಗಳ ನಿಧಿ, ಪ್ರವಾಸಿಗರ ಸ್ವರ್ಗ. ಇಷ್ಟೆಲ್ಲಾ ವಿಶೇಷತೆ ಇರುವಾಗ ಈ ಭಾಗದ ಪ್ರವಾಸೋದ್ಯಮದಲ್ಲಿ ನಾವು ಯಾಕೆ ಹಿಂದುಳಿದಿದ್ದೇವೆ ಎಂಬುದು ಅರ್ಥವಾಗುತ್ತಿಲ್ಲ. ಈ ಭಾಗದ ಪ್ರವಾಸೋದ್ಯಮ ನೀತಿಗೆ ಜನಪ್ರತಿನಿಧಿಗಳು, ಉದ್ಯಮಿಗಳು, ಅಧಿಕಾರಿಗಳು ಸೇರಿದಂತೆ ಎಲ್ಲರ ಸಲಹೆಗಳನ್ನು ಸ್ವೀಕರಿಸಲು ನಮ್ಮ ಸರಕಾರ ಬದ್ಧವಾಗಿದೆ. ಈ ಭಾಗದ ಅಭಿವೃದ್ಧಿಯೇ ನಮ್ಮ ಸಂಕಲ್ಪ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

- ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗೆ ತಜ್ಞರ ಸಲಹೆ ಸ್ವೀಕಾರ
- ಬಂಡವಾಳ ಆಕರ್ಷಣೆ, ಪ್ರತ್ಯೇಕ ಪ್ರವಾಸೋದ್ಯಮ ನೀತಿ
- 320 ಕಿ.ಮೀ ಉದ್ದದ ಕರಾವಳಿ ಸಂಪತ್ತು ಬಳಕೆ ಆಗಿಲ್ಲ

ಮಂಗಳೂರಿನಲ್ಲಿ ನಡೆದ ಕರಾವಳಿ ಕರ್ನಾಟಕ ಪ್ರವಾಸೋದ್ಯಮ ಸಮಾವೇಶದಲ್ಲಿ ಮಾತನಾಡಿದ ಅವರು, ನಮ್ಮಲ್ಲಿ 320 ಕಿ.ಮೀ ಕರಾವಳಿ ಪ್ರದೇಶವಿದೆ. ಇಲ್ಲಿ ಪ್ರಕೃತಿ ಸಂಪತ್ತಿನ ಜತೆಗೆ ಈ ಭಾಗದ ಹಿರಿಯರು ದೇಶಕ್ಕೆ ಅನೇಕ ಬ್ಯಾಂಕುಗಳನ್ನು ಕೊಟ್ಟಿದ್ದಾರೆ. ಬ್ಯಾಂಕುಗಳಲ್ಲಿ ಶಿಸ್ತು ಕೊಟ್ಟ ಜನ ನೀವು. ಪ್ರಪಂಚದಾದ್ಯಂತ ಈ ಕರಾವಳಿ ಭಾಗದ ಜನ ಕೆಲಸ ಮಾಡುತ್ತಿದ್ದಾರೆ. ಇದು ಶೈಕ್ಷಣಿಕ ಕೇಂದ್ರವೂ ಆಗಿದೆ. ಇಲ್ಲಿರುವಷ್ಟು ಮೆಡಿಕಲ್, ಎಂಜಿನಿಯರ್, ಪಿಯುಸಿ ಕಾಲೇಜುಗಳು ಬೇರೆ ಯಾವುದೇ ಜಿಲ್ಲೆಯಲ್ಲಿ ಇಲ್ಲ. ನೀವು ಹೆಚ್ಚು ಮಾನವ ಸಂಪನ್ಮೂಲವನ್ನು ತಯಾರು ಮಾಡುತ್ತಿದ್ದೀರಿ. ಆದರೂ ಈ ಭಾಗದ ಪ್ರತಿಭಾವಂತ ಜನರು ಬೆಂಗಳೂರು, ಮುಂಬೈ ಸೇರಿದಂತೆ ಪ್ರಪಂಚದ ಮೂಲೆ ಮೂಲೆಗೆ ಹೋಗುತ್ತಿದ್ದಾರೆ ಎಂದು ತಿಳಿಸಿದರು.

ಏಳೆಂಟು ತಿಂಗಳ ಹಿಂದೆ ಸಚಿವ ಸಂಪುಟ ಸಭೆಯಲ್ಲಿ ಪ್ರವಾಸೋದ್ಯಮ ನೀತಿ ಬಗ್ಗೆ ಚರ್ಚೆ ಮಾಡಲಾಯಿತು. ಆಗ ಪ್ರವಾಸೋದ್ಯಮ ಅಂತಿಮ ನೀತಿಯನ್ನು ತಡೆ ಹಿಡಿಯುವಂತೆ ಹೇಳಿದೆ. ಕರಾವಳಿ ಭಾಗದಲ್ಲಿ ನಾವು ಪ್ರವಾಸೋದ್ಯಮ ನೀತಿ ರೂಪಿಸಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಣೆ ಮಾಡಬೇಕಾದರೆ ಇಲ್ಲಿರುವ ಅಡಚಣೆ ಹೇಗೆ ಸರಿಪಡಿಸಬಹುದು. ಕಾನೂನು ಚೌಕಟ್ಟಿನಲ್ಲಿ ನಿವಾರಣೆ ಮಾಡಿ ನೂತನ ನೀತಿ ತರಬೇಕು ಎಂದು ಹೇಳಿದ್ದೆ ಎಂದು ತಿಳಿಸಿದರು.

ಬಹಳಷ್ಟು ಮಂದಿ ವಿದೇಶದಲ್ಲಿ ಇರುವವರು, ಮುಂಬೈ, ಬೆಂಗಳೂರಿನಲ್ಲಿ ನೆಲೆಸಿರುವ ಉದ್ಯಮಿಗಳು ತಮ್ಮ ಸ್ವಂತ ಊರಲ್ಲಿ ಏನಾದರೂ ಮಾಡಬೇಕು ಎನ್ನುವ ಆಸಕ್ತಿ ಹೊಂದಿದ್ದಾರೆ. ಅವರುಗಳು ಸರಕಾರದಿಂದ ಅನುಕೂಲ ಮಾಡಿಕೊಟ್ಟರೆ ಬಂಡವಾಳ ಹೂಡುವುದಾಗಿ ತಿಳಿಸಿದ್ದಾರೆ. ಈ ಕಾರಣಕ್ಕೆ ನಾನು ವಿಧಾನಸಭೆ ಸೇರಿದಂತೆ ಹಲವಾರು ಕಡೆ ಇದರ ಬಗ್ಗೆ ಮಾತನಾಡಿದ್ದೇನೆ ಎಂದರು.

ಇಲ್ಲಿ ಖಾಸಗಿಯವರಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಿದೆ. ಸರಕಾರ ಒಂದಷ್ಟು ಮೂಲಸೌಕರ್ಯಗಳನ್ನು ಒದಗಿಸಿಕೊಡುತ್ತದೆ. ಜತೆಗೆ ಅನುಕೂಲತೆ, ಅನಾನುಕೂಲತೆ, ಸಮಸ್ಯೆಗಳನ್ನು ಚರ್ಚೆ ಮಾಡಬೇಕಿದೆ. ಈ ಭಾಗದ ಎಲ್ಲ ಶಾಸಕರ ಬಳಿ ಈ ಬಗ್ಗೆ ಮಾತನಾಡಿದ್ದೇನೆ. ಎಲ್ಲರೂ ಬಹಳ ಆಸಕ್ತಿ ತೋರಿದ್ದಾರೆ ಎಂದರು.

ಮಂಗಳೂರಿನಲ್ಲಿ ನಡೆದ ಕರಾವಳಿ ಕರ್ನಾಟಕ ಸಮಾವೇಶಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಸಸಿಗೆ ನೀರೆರೆದು ಚಾಲನೆ ನೀಡಿದರು. ಈ ವೇಳೆ ಸಚಿವರಾದ ದಿನೇಶ್ ಗುಂಡೂರಾವ್, ಲಕ್ಷ್ಮೀ ಹೆಬ್ಬಾಳ್ಕರ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಕ್ಯಾ.ಬ್ರಿಜೇಶ್ ಚೌಟ, ಶಾಸಕ ವೇದವ್ಯಾಸ್ ಕಾಮತ್, ಐವಾನ್ ಡಿಸೋಜಾ ಸೇರಿ ಹಲವರಿದ್ದರು.

ಈ ಭಾಗಕ್ಕೆ ಪ್ರತ್ಯೇಕ ಪ್ರವಾಸೋದ್ಯಮ ನೀತಿ ಅಗತ್ಯ

ಈ ಭಾಗಕ್ಕೆ ಮತ್ತೆ ಮರುಜೀವ ನೀಡಲು ಈ ಪ್ರತ್ಯೇಕ ಪ್ರವಾಸೋದ್ಯಮ ನೀತಿ ಅಗತ್ಯವಿದೆ. ಈ ಭಾಗ ರಾತ್ರಿ 7ರ ನಂತರ ಸ್ತಬ್ಧವಾಗುತ್ತದೆ ಎಂದು ನಾನು ಈ ಹಿಂದೆ ಹೇಳಿದ್ದೇನೆ. ಕೆಲವರು ಸ್ವಾಗತಿಸಿದರು, ಕೆಲವರು ಟೀಕಿಸಿದರು. ನನ್ನ ಮಾತನ್ನು ಸುಳ್ಳು ಮಾಡುವ ಛಲ ಬರಲಿ ಎಂದು ನಾನು ಟೀಕೆ ಮಾಡಿದ್ದೆ. ನಾನು ಎಲ್ಲ ಉದ್ಯಮದವರನ್ನು ಈ ಸಮಾವೇಶಕ್ಕೆ ಆಹ್ವಾನಿಸಿದ್ದೇನೆ. ನಿಮ್ಮ ಅಭಿಪ್ರಾಯ ಸ್ವೀಕರಿಸಲು ನಾವು ಬದ್ಧವಾಗಿದ್ದೇವೆ. ನೀವು ಮುಕ್ತವಾಗಿ ನಿಮ್ಮ ಸಲಹೆಗಳನ್ನು ನೀಡಿ, ನಿಮ್ಮ ಸಲಹೆ ಅಭಿಪ್ರಾಯಗಳನ್ನು ಒಟ್ಟು ಸೇರಿಸಿ ಹಣಕಾಸು ಸ್ಥಿತಿಗೆ ಅನುಗುಣವಾಗಿ ನಾವು, ಸಿಎಂ, ಪ್ರವಾಸೋದ್ಯಮ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು ಚರ್ಚೆ ಮಾಡಿ ಸಚಿವ ಸಂಪುಟದ ಮುಂದೆ ಪ್ರಸ್ತಾಪ ಮಾಡುತ್ತೇವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

> **ಈ ಭಾಗದಲ್ಲಿ ಸುಂದರ ಸಮುದ್ರ ತೀರವಿದೆ. ಗೋವಾ ಹಾಗೂ ನಮಗೆ ಇರುವ ವ್ಯತ್ಯಾಸವೇನು? ಅಲ್ಲಿರುವ ಸೌಂದರ್ಯ ನಮ್ಮಲ್ಲೂ ಇದೆ. ಆದರೆ ಅವುಗಳನ್ನು ಬಳಸಿಕೊಳ್ಳುವಲ್ಲಿ ನಾವು ಎಡವಿದ್ದೇವೆ.**
> – ಡಿ.ಕೆ.ಶಿವಕುಮಾರ್ ಡಿಸಿಎಂ

ವರಿಷ್ಠರಿಂದ ಶೀಘ್ರ ಸಿಹಿ ಸುದ್ದಿ ರವಾನೆ

ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಬಗ್ಗೆ ಕುಮಾರ ಬಂಗಾರಪ್ಪ ಮಾಹಿತಿ

ರಾಯಚೂರು: ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆಗೆ ಪಕ್ಷದ ವರಿಷ್ಠರ ಮುಂದೆ ಅಭಿಪ್ರಾಯ ತಿಳಿಸಲಾಗಿದೆ. ಶೀಘ್ರದಲ್ಲೇ ಸಿಹಿ ಸುದ್ದಿ ನೀಡುವ ಭರವಸೆಯಿದೆ. ಒಂದೊಮ್ಮೆ ಬದಲಾವಣೆಯಾಗದಿದ್ದರೆ, ವರಿಷ್ಠರ ನಿರ್ಧಾರವನ್ನು ಗೌರವಿಸಬೇಕಾಗುತ್ತದೆ ಎಂದು ಮಾಜಿ ಸಚಿವ ಕುಮಾರ ಬಂಗಾರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಾಧ್ಯಕ್ಷ ಬದಲಾವಣೆ ವಿಷಯದಲ್ಲಿ ಸೋತಿಲ್ಲ, ಎಲ್ಲರೂ ಒಟ್ಟಾಗಿ ಬದಲಾವಣೆ ಅವಶ್ಯಕತೆಯನ್ನು ಪ್ರತಿಪಾದಿಸಿದ್ದೇವೆ. ಪಕ್ಷ ಸಕಾಲದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಭರವಸೆಯಿದೆ. ಶಾಸಕ ಬಸನಗೌಡ ಯತ್ನಾಳ್ ಶೀಘ್ರದಲ್ಲಿ ಮರಳಿ ಪಕ್ಷಕ್ಕೆ ಬರುವ ವಿಶ್ವಾಸವಿದೆ ಎಂದರು.

ಜಿಎಸ್‌ಟಿಯಿಂದ ಬರಬೇಕಾದ ರಾಜ್ಯದ ಪಾಲಿನ ತೆರಿಗೆ ಹಣವನ್ನು ಕೇಂದ್ರ ಸರಕಾರ ನೀಡುತ್ತಿಲ್ಲ ಎಂದು ರಾಜ್ಯ ಸರಕಾರ ರಾಜಕೀಯಕ್ಕಾಗಿ ಆರೋಪಿಸುತ್ತಿದೆ. ಜಿಎಸ್‌ಟಿ ಮಂಡಳಿ ಸಮಿತಿ ಸಭೆಯಲ್ಲಿ ರಾಜ್ಯವೂ ಸದಸ್ಯತ್ವ ಹೊಂದಿದೆ. ಅಲ್ಲಿ ಬೇಡಿಕೆಯನ್ನು ಸಲ್ಲಿಸಬೇಕೇ ಹೊರತು, ರಾಜ್ಯದಲ್ಲಿ ಬಂದು ರಾಜಕೀಯ ಚರ್ಚೆ ಮಾಡುವುದು ಸರಿಯಲ್ಲ.

ವಿಬಿ ಜಿ ರಾಮ್ ಜಿ ಯೋಜನೆಯನ್ನು ಕಾಯ್ದೆಯಾಗಿ ಸಂಸತ್ತಿನಲ್ಲಿ ಅನುಮೋದನೆ ಪಡೆಯಲಾಗಿದೆ. ಸಂಸತ್ತಿನ ನಿರ್ಧಾರವನ್ನು ಗೌರವಿಸಬೇಕು. ಮಹಾತ್ಮ ಗಾಂಧಿ ಹೆಸರು ತೆಗೆದಿರುವುದನ್ನು ರಾಜಕೀಯವಾಗಿ ಬಳಸಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ರಾಮರಾಜ್ಯ ಕಟ್ಟುವುದು ಮಹಾತ್ಮ ಗಾಂಧಿ ಕನಸಾಗಿತ್ತು. ಜೀವನೋಪಾಯ ಯೋಜನೆ ಸೇರಿ ವಿಕಸಿತ ಭಾರತ ಒಗ್ಗೂಡಿಸಿ ಕಾಯ್ದೆ ರೂಪಿಸಲಾಗಿದೆ. ಮಹಾತ್ಮ ಗಾಂಧಿ ಎಂದಿಗೂ ಮಹಾತ್ಮರೇ, ಹೆಸರು ಬದಲಾದರೆ ಅವಮಾನ ಮಾಡಿದಂತಲ್ಲ ಎಂದರು.

> **ಕೇಂದ್ರ ಸರಕಾರ ಭದ್ರಾ ಯೋಜನೆಗೆ ಅನುದಾನ ಘೋಷಣೆ ಮಾಡಿತ್ತು. ಆದರೆ ರಾಜ್ಯ ಸರಕಾರ ಸೂಕ್ತ ದಾಖಲೆಗಳನ್ನು ನೀಡದೇ ಇರುವುದು ಅನುದಾನ ಬಿಡುಗಡೆಗೆ ಅಡ್ಡಿಯಾಗಿದೆ. ರಾಜ್ಯದ ಕಾಂಗ್ರೆಸ್ ಸರಕಾರ ಆರ್ಥಿಕ ಶಿಸ್ತುಪಾಲನೆ ಮಾಡುವಲ್ಲಿ ವಿಫಲವಾಗಿದೆ.**
> – ಕುಮಾರ್ ಬಂಗಾರಪ್ಪ ಮಾಜಿ ಸಚಿವ

ಮನೆ ಪಾಯ ಅಗೆಯುವ ವೇಳೆ ನಿಧಿ ಪತ್ತೆ

ಗದಗ: ಐತಿಹಾಸಿಕ ಹಿನ್ನೆಲೆಯುಳ್ಳ ಲಕ್ಕುಂಡಿ ಗ್ರಾಮದಲ್ಲಿ ತಳಪಾಯ ಅಗೆಯುವ ಸಂದರ್ಭದಲ್ಲಿ 1 ಕೆಜಿಯಷ್ಟು ನಿಧಿ ಸಿಕ್ಕ ಘಟನೆ ನಡೆದಿದೆ.

ಲಕ್ಕುಂಡಿ ಗ್ರಾಮದ ವಾರ್ಡ್ ಸಂಖ್ಯೆ 4ರಲ್ಲಿ ಗಂಗವ್ವ ಬಸವರಾಜ ರಿತ್ತಿ ಎಂಬುವರ ಮನೆಯಲ್ಲಿ ಹೊಸದಾಗಿ ಅಡಿಪಾಯ ಅಗೆಯುವ ಸಂದರ್ಭದಲ್ಲಿ ಅಂದಾಜು ಒಂದು ಕೆಜಿ ತೂಕದ ಚಿನ್ನಾಭರಣಗಳು ಸಿಕ್ಕಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿಧಿ ಸಿಕ್ಕ ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು, ಪುರಾತತ್ವ ಇಲಾಖೆಯ ಅಧಿಕಾರಿಗಳು ಮತ್ತು ಸಂಬಂಧಿತ ತಜ್ಞರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ದೊರೆತ ಈ ಚಿನ್ನಾಭರಣಗಳು ಯಾವ ಕಾಲಘಟ್ಟಕ್ಕೆ ಸೇರಿವೆ, ಯಾರ ಕಾಲದ್ದು ಎಂಬುದನ್ನು ವೈಜ್ಞಾನಿಕ ತನಿಖೆ ಮತ್ತು ಪರೀಕ್ಷೆಗಳ ನಂತರವಷ್ಟೇ ಖಚಿತಪಡಿಸಲಾಗುವುದು ಎಂದು ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಸಿದ್ದು ಪಾಟೀಲ್ ತಿಳಿಸಿದ್ದಾರೆ.



ಅಧಿಕಾರಿಗಳಲ್ಲಿ ಕುತೂಹಲ: ಲಕ್ಕುಂಡಿಯು ಕಲ್ಯಾಣ ಚಾಲುಕ್ಯರ ಕಾಲದ ಅದ್ಭುತ ದೇವಾಲಯಗಳು, ಮೆಟ್ಟಿಲು ಬಾವಿಗಳು, ಶಾಸನಗಳು ಮತ್ತು ಇತಿಹಾಸದ ಗುಪ್ತ ರತ್ನಗಳಿಂದ ಕೂಡಿದ ಸ್ಥಳವಾಗಿದ್ದು, ಇತ್ತೀಚೆಗೆ ಪ್ರಾಚ್ಯ ವಸ್ತುಗಳ ಸಂಗ್ರಹಣೆ, ಉತ್ಖನನ ಕಾರ್ಯಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಚಿನ್ನದ ನಿಧಿ ಸಿಗುವುದು ಇನ್ನಷ್ಟು ಆಸಕ್ತಿ ಕೆರಳಿಸಿದೆ.

ಅಡುಗೆ ಒಲೆ ಹೊಗೆಯಿಂದ ಒಬ್ಬ ಸಾವು

ಆರು ಮಂದಿ ಆಸ್ಪತ್ರೆಗೆ ದಾಖಲು, ಮೂವರ ಸ್ಥಿತಿ ಚಿಂತಾಜನಕ

ಧಾರವಾಡ: ಚಿಕನ್ ಬಾರ್ಬೆಕ್ಯೂ ಮಾಡಲು ಹಚ್ಚಿದ್ದ ಒಲೆಯ ಹೊಗೆ ರೂಮ್ ತುಂಬಾ ಆವರಿಸಿ ಒಬ್ಬ ಸಾವನ್ನಪ್ಪಿ, 6 ಮಂದಿ ಅಸ್ವಸ್ಥರಾದ ಘಟನೆ ಧಾರವಾಡದಲ್ಲಿ ನಡೆದಿದೆ. ಅಸ್ವಸ್ಥರಾದವರಲ್ಲಿ ಮೂವರ ಸ್ಥಿತಿ ಚಿಂತಾಜನಕವಾಗಿದೆ.

ಮೃತನನ್ನು ನೇಪಾಳ ಮೂಲದ ಬಿಬೇಕ್ ಎಂದು ಗುರುತಿಸಲಾಗಿದೆ. ಅಸ್ವಸ್ಥರಾದವರನ್ನು ನರೇಶ (45), ನಿತೇಶ್ (18), ಡಿಕೆಶಿ (40), ಸುಧನ್ (30), ಕುಮಾರ್ (50) ಮತ್ತು ಲಕ್ಷ್ಮಣ್ (30) ಎಂದು ಗುರುತಿಸಲಾಗಿದೆ. ಇವರೆಲ್ಲ ನೇಪಾಳ ಮೂಲದವರಾಗಿದ್ದು, ಧಾರವಾಡದ ಚಿಂಗ್ಸ್ ಚೌ ಎಂಬ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಎಲ್ಲರೂ ಧಾರವಾಡದ ಕೆಎಂಎಫ್ ಬಳಿಯ ನಂದಿನಿ ಲೇಔಟ್‌ನ ಮನೆಯೊಂದರಲ್ಲಿ ವಾಸವಿದ್ದರು.

ಶುಕ್ರವಾರ (ಜ.9) ರಾತ್ರಿ ಈ ಏಳೂ ಜನ ಕೆಲಸಗಾರರು ತಾವು ವಾಸವಿದ್ದ ಮನೆಯಲ್ಲಿ ಬಾರ್ಬೆಕ್ಯೂ ಮಾಡಲು ತಂದೂರಿ ರೊಟ್ಟಿ ಮಾಡುವ ಒಲೆ ಹೊತ್ತಿಸಿದ್ದರು. ರಾತ್ರಿ ಊಟ ಮಾಡಿ ಎಲ್ಲರೂ ಮಲಗಿದ್ದರು. ಆದರೆ, ಒಲೆಯಿಂದ ಹೊಗೆ ಆವರಿಸಿ ಏಳೂ ಜನರಿಗೆ ಉಸಿರಾಟದ ತೊಂದರೆಯಾಗಿದೆ. ಬೆಳಗಿನವರೆಗೂ ಏಳೂ ಜನ ಮಲಗಿದ ಜಾಗದಲ್ಲೇ ಮಲಗಿದ್ದರು. ಬೆಳಿಗ್ಗೆ ಕೆಲಸಗಾರರು ಬರದೇ ಇದ್ದಾಗ ಮಾಲೀಕರೇ ಸ್ಥಳಕ್ಕೆ ಹೋಗಿ ನೋಡಿದಾಗ ಈ ಅವಾಂತರ ನಡೆದಿದ್ದು ಗೊತ್ತಾಗಿದೆ. ಎಲ್ಲರನ್ನೂ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಸಾಗಿಸಲಾಗಿದ್ದು, ಚಿಕಿತ್ಸೆ ನೀಡಲಾಗುತ್ತಿದೆ. ಸ್ಥಳಕ್ಕೆ ವಿದ್ಯಾಗಿರಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಆಗಿದ್ದೇನು?

- ಧಾರವಾಡದಲ್ಲಿದ್ದ ನೇಪಾಳ ಮೂಲದ ಕಾರ್ಮಿಕರು
- ಹೋಟೇಲ್ ಕೆಲಸ ಮುಗಿಸಿಕೊಂಡು ರಾತ್ರಿ ಅಡುಗೆ ವೇಳೆ ದುರಂತ
- ಬಾರ್ಬೆಕ್ಯೂ ಚಿಕನ್, ತಂದೂರಿ ರೊಟ್ಟಿ ಮಾಡಲು ಹೊಲೆಗೆ ಬೆಂಕಿ
- ರಾತ್ರಿಯೆಲ್ಲ ಕೋಣೆತುಂಬಾ ಆವರಿಸಿದ್ದ ಒಲೆಯ ಹೊಗೆ
- ಉಸಿರುಗಟ್ಟಿ 6 ಮಂದಿ ಅಸ್ವಸ್ಥ, ಒಬ್ಬ ಸಾವು

ಸಿದ್ಧಗಂಗಾ ಮಠಕ್ಕೆ 21ರಂದು ಉಪರಾಷ್ಟ್ರಪತಿ ಭೇಟಿ

ಲಿಂ.ಡಾ. ಶ್ರೀ ಶಿವಕುಮಾರ ಸ್ವಾಮೀಜಿ 7ನೇ ಪುಣ್ಯ ಸಂಸ್ಮರಣೋತ್ಸವ

ತುಮಕೂರು: ಸಿದ್ಧಗಂಗಾ ಮಠದ ಹಿರಿಯ ಶ್ರೀ ಲಿಂಗೈಕ್ಯ ಡಾ.ಶ್ರೀ ಶಿವಕುಮಾರ ಸ್ವಾಮೀಜಿ 7ನೇ ವರ್ಷದ ಪುಣ್ಯ ಸಂಸ್ಮರಣೋತ್ಸವದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಜ.21ರಂದು ಸಿದ್ಧಗಂಗಾ ಮಠಕ್ಕೆ ಆಗಮಿಸಲಿದ್ದಾರೆ.

ಸಿದ್ಧಗಂಗಾ ಮಠದಲ್ಲಿ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ನಡೆದ ಶ್ರೀಗಳ 7ನೇ ವರ್ಷದ ಪುಣ್ಯ ಸಂಸ್ಮರಣೋತ್ಸವದ ಪೂರ್ವಭಾವಿ ಸಭೆಯಲ್ಲಿ ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರು ಮಾತನಾಡಿ, ಜ.21 ರಂದು ನಡೆಯಲಿರುವ ಶ್ರೀಗಳ ಪುಣ್ಯ ಸಂಸ್ಮರಣೋತ್ಸವದಲ್ಲಿ ದೇಶದ ಉಪರಾಷ್ಟ್ರಪತಿಗಳು ಭಾಗವಹಿಸಿ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಇದೇ ಮೊದಲ ಬಾರಿಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಶ್ರೀಮಠಕ್ಕೆ ಭೇಟಿ ನೀಡುತ್ತಿದ್ದಾರೆ. ಇವರು ಲೋಕಸಭಾ ಸದಸ್ಯರಾಗಿ, ರಾಜ್ಯಪಾಲರಾಗಿ ಅಪಾರ ಅನುಭವ ಹೊಂದಿದ್ದಾರೆ ಎಂದರು.

ಜ.21 ರಂದು ಬೆಳಗ್ಗೆ 11 ಗಂಟೆಗೆ ಶ್ರೀಮಠದ ಗೋಸಲ ಸಿದ್ದೇಶ್ವರ ವೇದಿಕೆಯಲ್ಲಿ ನಡೆಯಲಿರುವ ಲಿಂಗೈಕ್ಯ ಡಾ. ಶ್ರೀಶಿವಕುಮಾರ ಸ್ವಾಮೀಜಿ 7ನೇ ವರ್ಷದ ಸಂಸ್ಮರಣೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ವಹಿಸುವರು ಎಂದರು.

ಸಮಾರಂಭದ ದಿವ್ಯ ನೇತೃತ್ವವನ್ನು ಮಠಾಧ್ಯಕ್ಷ ಶ್ರೀಸಿದ್ದಲಿಂಗ ಸ್ವಾಮೀಜಿ ವಹಿಸುವರು. ದಿವ್ಯ ಸಾನ್ನಿಧ್ಯವನ್ನು ಸದ್ಗುರು ಮಧುಸೂದನ ಸಾಯಿ ಹಾಗೂ ಶ್ರೀಮಠದ ಕಿರಿಯಶ್ರೀಗಳಾದ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವ ವಿ. ಸೋಮಣ್ಣ, ಗೃಹ ಸಚಿವ ಡಾ. ಜಿ. ಪರಮೇಶ್ವರ, ಮಠಾಧೀಶರು, ಜಿಲ್ಲೆಯ ಸಂಸದರು, ಶಾಸಕರುಗಳು, ವಿಧಾನ ಪರಿಷತ್ ಸದಸ್ಯರು, ಗಣ್ಯರು ಭಾಗವಹಿಸಲಿದ್ದಾರೆ. ಶ್ರೀಗಳ 7ನೇ ವರ್ಷದ ಪುಣ್ಯ ಸಂಸ್ಮರಣೋತ್ಸವ ಕಾರ್ಯಕ್ರಮಕ್ಕೆ ಭದ್ರತೆ, ದಾಸೋಹ ವ್ಯವಸ್ಥೆ ಸಿದ್ಧತೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯಲ್ಲಿ ಶಾಸಕರಾದ ಬಿ. ಸುರೇಶ್‌ಗೌಡ, ಜ್ಯೋತಿಗಣೇಶ್, ಜಿಲ್ಲಾಧಿಕಾರಿ ಶುಭಕಲ್ಯಾಣ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಇದ್ದರು.

ರಾಜ್ಯಾದ್ಯಂತ ಕೈ ಕಚೇರಿಗಳ ಮುಂದೆ ಪ್ರತಿಭಟನೆ ಇಂದು

ಬೆಳಗಾವಿ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ನರೇಗಾ) ಬದಲಿಗೆ, ವಿಕಸಿತ ಭಾರತ-ಉದ್ಯೋಗ ಖಾತ್ರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) (ವಿಬಿ-ಜಿ ರಾಮ್ ಜಿ) ಕಾಯ್ದೆಯನ್ನು ಕೇಂದ್ರ ಸರಕಾರ ಜಾರಿಗೆ ತಂದಿದ್ದನ್ನು ವಿರೋಧಿಸಿ ಜನವರಿ 11ರಂದು ರಾಜ್ಯಾದ್ಯಂತ ಎಲ್ಲ ಕಾಂಗ್ರೆಸ್ ಕಚೇರಿಗಳ ಮುಂದೆ ಒಂದು ದಿನದ ಸಾಂಕೇತಿಕ ಪ್ರತಿಭಟನೆ ಮತ್ತು ಉಪವಾಸ ಸತ್ಯಾಗ್ರಹ ಮಾಡುತ್ತೇವೆ ಎಂದು ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಗೋಪಿನಾಥ ಪಳನಿಯಪ್ಪನ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೊಸ ಕಾಯ್ದೆ ರದ್ದುಪಡಿಸುವವರೆಗೆ ನಾವು ಹೋರಾಟ ಮಾಡುತ್ತೇವೆ. ನ್ಯಾಯಾಲಯದ ಮೊರೆ ಹೋಗುವ ಜತೆಗೆ ಜ.12ರಿಂದ 29ರವರೆಗೆ ದೇಶದಾದ್ಯಂತ ಗ್ರಾಮ ಪಂಚಾಯಿತಿ ಮಟ್ಟದ ಜನಸಂಪರ್ಕ ಕಾರ್ಯಕ್ರಮ ಆಯೋಜಿಸುತ್ತೇವೆ. ಜ.31ರಿಂದ ಫೆ.6ರವರೆಗೆ ಜಿಲ್ಲಾಮಟ್ಟದಲ್ಲಿ ಪ್ರತಿಭಟನೆ ಮತ್ತು ಫೆ.16ರಿಂದ 24ರವರೆಗೆ ವಿಭಾಗೀಯ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು. ರಾಜ್ಯದಲ್ಲಿ ಬಿಜೆಪಿ ಮತ್ತು ಕೇಂದ್ರ ಸರಕಾರದ ಕಚೇರಿಗಳ ಬಳಿ ಪ್ರತಿಭಟನೆ ನಡೆಸುತ್ತೇವೆ ಎಂದರು.

> **ನರೇಗಾ ಯೋಜನೆಯಲ್ಲಿ ನ್ಯೂನ್ಯತೆಗಳಿದ್ದರೆ ಸರಿಪಡಿಸಬಹುದಿತ್ತು. ಆದರೆ, ಹೊಸ ಕಾಯ್ದೆ ಜಾರಿಗೆ ತರುವ ಅಗತ್ಯವಿರಲಿಲ್ಲ. ಕೇಂದ್ರವು ರೈತ ವಿರೋಧಿ ಕಾಯ್ದೆ ಜಾರಿಗೆ ತಂದಾಗ ನಡೆದಿದ್ದ ಪ್ರತಿಭಟನೆಗಳ ಮಾದರಿಯಲ್ಲೇ ಈ ಹೋರಾಟವೂ ನಡೆಯುತ್ತದೆ.**
> – ಗೋಪಿನಾಥ ಪಳನಿಯಪ್ಪನ್ ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ

ಜಿ-ರಾಮ್ ಜಿ ನಾಥೂರಾಮ್ ಗೋಡ್ಸೆ ಕಾಯ್ದೆ

ಅಮಿತ್ ಶಾ ಅಸಮರ್ಥ ಗೃಹ ಸಚಿವ | ಕೇಂದ್ರದ ವಿರುದ್ಧ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ

ಕಲಬುರಗಿ: ಕೇಂದ್ರ ಸರಕಾರ ಜಾರಿಗೆ ತರಲು ಹೊರಟಿರುವ ವಿ.ಬಿ ಜಿ-ರಾಮ್-ಜಿ' ಕಾಯ್ದೆ ಸಂವಿಧಾನ ವಿರೋಧಿಯಾಗಿದ್ದು, ಇದು ಬಡವರ ಹಕ್ಕುಗಳನ್ನು ಕಸಿಯುವ ನಾಥೂ'ರಾಮ್' ಗೋಡ್ಸೆ ಕಾಯ್ದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಕಟುವಾಗಿ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿ-ರಾಮ್ ಜಿ ಕಾಯಿದೆ ಸೀತಾರಾಮನದ್ದೂ ಅಲ್ಲ, ದಶರಥ ರಾಮನದ್ದೂ ಅಲ್ಲ. ಇದು ಆರ್‌ಎಸ್‌ಎಸ್ ತತ್ವದ ನಾಥೂರಾಮನ ಕಾಯ್ದೆ. ಆರ್‌ಎಸ್‌ಎಸ್ ತತ್ವಗಳು ಯಾವಾಗಲೂ ಬಡವರ ವಿರುದ್ಧವಾಗಿರುತ್ತವೆ. ಜನರನ್ನು ಧರ್ಮದ ನಶೆಯಲ್ಲಿ ತೇಲಾಡಿಸಿ ಅವರ ಹೊಟ್ಟೆ ಹೊಡೆಯುವ ಕೆಲಸ ಇದಾಗಿದೆ. ಮೂರು ಕೃಷಿ ಕಾಯ್ದೆಗಳಂತೆ ಈ ಕಾಯ್ದೆಯೂ ಕೂಡ ವಾಪಸ್ ಆಗಲಿದೆ ಎಂದು ಭವಿಷ್ಯ ನುಡಿದರು.

ಈ ಕಾಯಿದೆಯ ವಿರುದ್ಧ ರಾಜ್ಯ ಸರಕಾರ ಈಗಾಗಲೇ, ನಿರ್ಣಯ ಕೈಗೊಂಡಿದ್ದು, ಬಲವಾದ ಕಾನೂನು ಹೋರಾಟ ರೂಪಿಸಲಿದೆ. ಈ ಬಗ್ಗೆ ಚರ್ಚಿಸಲು ಎರಡು ದಿನಗಳ ವಿಶೇಷ ಅಧಿವೇಶನ ಕರೆಯಲು ಸರಕಾರ ತೀರ್ಮಾನಿಸಿದೆ ಎಂದರು.

> **ಅಕ್ರಮ ಬಾಂಗ್ಲಾ ವಲಸೆ ತಡೆಯುವುದು ಕೇಂದ್ರದ ಹೊಣೆ. ಪಾಕಿಸ್ತಾನದ ಭಯೋತ್ಪಾದಕರು ಹಾಗೂ ಬಾಂಗ್ಲಾ ವಲಸಿಗರು ಗಡಿ ದಾಟಿ ಒಳಗೆ ಬಂದರೆ ಅದನ್ನು ತಡೆಯಬೇಕಾದವರು ಅಮಿತ್ ಶಾ. ಅದನ್ನು ಬಿಟ್ಟು ಚುನಾವಣೆ ಸಂದರ್ಭದಲ್ಲಿ ಮಾತ್ರ ಈ ಪ್ರಸ್ತಾಪ ಮಾಡುತ್ತಾರೆ. ನನ್ನ ಪ್ರಕಾರ ಅಮಿತ್ ಶಾ ಒಬ್ಬ ಅಸಮರ್ಥ ಗೃಹ ಸಚಿವ.**
> -ಪ್ರಿಯಾಂಕ್ ಖರ್ಗೆ ಸಚಿವ

ಸುದ್ದಿಗೋಷ್ಠಿಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು. ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಇದ್ದರು.

ನರೇಗಾ ಯೋಜನೆಯಲ್ಲಿನ ಭ್ರಷ್ಟಾಚಾರ ತಡೆಯಲು ಹೊಸ ಕಾಯ್ದೆ ಎಂಬ ಬಿಜೆಪಿ ವಾದಕ್ಕೆ ತಿರುಗೇಟು ನೀಡಿದ ಸಚಿವರು, ನೆಗಡಿ ಬಂದರೆ ಮೂಗನ್ನೇ ಕತ್ತರಿಸಿಕೊಳ್ಳಬೇಕೇ? ಪ್ರಧಾನ ಮಂತ್ರಿ ಕೌಶಲ ಯೋಜನೆಯಲ್ಲಿ 14,500 ಕೋಟಿ ಅವ್ಯವಹಾರವಾಗಿದೆ ಎಂದು ವರದಿ ಹೇಳುತ್ತಿದೆ, ಹಾಗಾದರೆ ಆ ಯೋಜನೆಯನ್ನು ಯಾಕೆ ರದ್ದು ಮಾಡಿಲ್ಲ? ಕಳೆದ 11 ವರ್ಷಗಳಿಂದ ಅಧಿಕಾರದಲ್ಲಿದ್ದ ಬಿಜೆಪಿಯವರು ನರೇಗಾದಲ್ಲಿ ಭ್ರಷ್ಟಾಚಾರ ನಡೆಯುತ್ತಿದ್ದರೆ ಕತ್ತೆ ಕಾಯುತ್ತಿದ್ದರಾ? ಎಂದು ಪ್ರಶ್ನಿಸಿದರು.

ರಾಜ್ಯಪಾಲರ ಬಿಲ್ ತಡೆಹಿಡಿಯಬಾರದು: ಒಳ ಮೀಸಲಾತಿ, ದ್ವೇಷ ಭಾಷಣ ಮಸೂದೆಯನ್ನು ರಾಜ್ಯಪಾಲರು ವಾಪಸ್ ಕಳುಹಿಸಿರುವುದು ಸರಿಯಲ್ಲ. ರಾಜ್ಯಪಾಲರು ಸ್ಪಷ್ಟನೆ ಕೇಳಿದರೆ ನೀಡಲು ನಾವು ಸಿದ್ಧ. ಆದರೆ, ರಾಜಕೀಯ ಉದ್ದೇಶದಿಂದ ಬಿಲ್ ತಡೆಹಿಡಿದರೆ ಸಹಿಸುವುದಿಲ್ಲ. ಸದನದಲ್ಲಿ ಬಿಲ್ ಮಂಡನೆಯಾದಾಗ ಸುಮ್ಮನಿದ್ದ ಬಿಜೆಪಿಯವರು, ಈಗ ಮೀಸಲಾತಿಯನ್ನೇ ಮುಗಿಸಲು ಸಂಚು ರೂಪಿಸುತ್ತಿದ್ದಾರೆ. ಬಿಜೆಪಿಯವರ ಮಾತು ಕೇಳಿ ರಾಜಕೀಯ ದುರುದ್ದೇಶದಿಂದ 2 ಮಸೂದೆಗಳನ್ನು ತಡೆಹಿಡಿಯಬಾರದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಈ ವೇಳೆ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್ ಸಿಂಗ್, ಶಾಸಕರಾದ ಖನೀಜ್ ಫಾತಿಮಾ, ಅಲ್ಲಮಪ್ರಭು ಪಾಟೀಲ್, ವಿಪ ಸದಸ್ಯ ತಿಪ್ಪಣ್ಣಪ್ಪ ಕಮಕನೂರ್, ಜಗದೇವ್ ಗುತ್ತೇದಾರ, ಮಾಜಿ ಸಚಿವ ಬಾಬುರಾವ ಚಿಂಚನಸೂರ್, ಅರುಣಕುಮಾರ್ ಪಾಟೀಲ್, ಮಜರ್ ಆಲಂ ಖಾನ್, ಪ್ರವೀಣ್ ಪಾಟೀಲ್ ಹರವಾಳ್, ಜಿಲ್ಲಾ ಪಂಚಾಯತ್ ಸಿಇಒ ಭಂವಾರ ಸಿಂಗ್ ಮೀನಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಇದ್ದರು.

ನಾಳೆ ವಿವಿಧ ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ ಚಾಲನೆ

ಜನವರಿ 12 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲೆಗೆ ಆಗಮಿಸುತ್ತಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಸಾಥ್ ನೀಡಲಿದ್ದಾರೆ. ಸೋಮವಾರ ಬೆಳಗ್ಗೆ 11ಕ್ಕೆ ಯಡ್ರಾಮಿಯಲ್ಲಿ 'ಪ್ರಜಾಸೌಧ'ಕ್ಕೆ ಶಿಲಾನ್ಯಾಸ ನೆರವೇರಿಸಿದ ಬಳಿಕ ಸೇಡಂನಲ್ಲಿ ನೀರಾವರಿ ಯೋಜನೆಗಳಿಗೂ ಸಿಎಂ ಅಡಿಗಲ್ಲು ಹಾಕಲಿದ್ದಾರೆ. ಒಟ್ಟು 907 ಕೋಟಿ ರು.ವೆಚ್ಚದಲ್ಲಿ ಕಲಬುರಗಿ ಜಿಲ್ಲೆಯ ವಿವಿಧೆಡೆ ಕೈಗೊಂಡಿರುವ 282 ಕಾಮಗಾರಿಗಳಿಗೆ ಚಾಲನೆ ದೊರೆಯಲಿದೆ ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಸಿಂಗ್ ಮಾಹಿತಿ ನೀಡಿದರು.

ಮರುಭೂಮಿಯಲ್ಲೂ ಮೀನುಗಾರಿಕೆ: ಇದು ಇಸ್ರೇಲ್ ಮಾದರಿ

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಇಸ್ರೇಲ್ ಹೇಳಿ-ಕೇಳಿ ಮರುಭೂಮಿ. ಅಲ್ಲಿ ಮೀನುಗಾರಿಕೆ ಮಾಡೋದು ಸಾಧ್ಯವೇ ಇಲ್ಲ. ಆದರೆ ಆ ದೇಶದ ಮೀನುಗಾರಿಕೆ ಮತ್ತು ಮೀನು ಸಾಕಾಣಿಕೆ ಚಟುವಟಿಕೆ ಜಗತ್ತಿಗೆ ಒಂದು ದೊಡ್ಡ ಸೋಜಿಗ. ಭೂಮಿಯ ಬಹುಪಾಲು ಭಾಗ ಮರುಭೂಮಿಯಿಂದ ಕೂಡಿದ್ದರೂ, ನೀರಿನ ತೀವ್ರ ಅಭಾವವಿದ್ದರೂ ಇಸ್ರೇಲ್ ಮೀನು ಸಾಕಾಣಿಕೆಯಲ್ಲಿ ಸಾಧಿಸಿರುವ ಪ್ರಗತಿ ಅದ್ಭುತ.

ಇಸ್ರೇಲ್‌ನಲ್ಲಿ ಮಳೆ ಕಡಿಮೆ, ನದಿಗಳೂ ಕಡಿಮೆ. ಹೀಗಿರುವಾಗ ಮೀನು ಸಾಕಾಣಿಕೆ ಹೇಗೆ ಸಾಧ್ಯ ಎಂಬ ಪ್ರಶ್ನೆ ಮೂಡುವುದು ಸಹಜ. ಅಲ್ಲಿನ ವಿಜ್ಞಾನಿಗಳು 'ಪ್ರತಿ ಹನಿ ನೀರಿಗೂ ಗರಿಷ್ಠ ಲಾಭ' ಎಂಬ ಮಂತ್ರವನ್ನು ಪಾಲಿಸುತ್ತಾರೆ. ಸಮುದ್ರದ ನೀರನ್ನು ಉಪ್ಪುಮುಕ್ತಗೊಳಿಸುವುದು (Desalination) ಮತ್ತು ಬಳಸಿದ ನೀರನ್ನು ಪುನಃ ಸಂಸ್ಕರಿಸಿ ಮೀನು ಸಾಕಾಣಿಕೆಗೆ ಬಳಸುವುದು ಅಲ್ಲಿನ ತಂತ್ರಜ್ಞಾನದ ವೈಶಿಷ್ಟ್ಯ.

ಇಸ್ರೇಲ್ ಅಭಿವೃದ್ಧಿಪಡಿಸಿದ ಈ ತಂತ್ರಜ್ಞಾನವು ಪ್ರಪಂಚಕ್ಕೆ ಮಾದರಿ. ಇಲ್ಲಿ ಮೀನುಗಳನ್ನು ದೊಡ್ಡ ಟ್ಯಾಂಕ್‌ಗಳಲ್ಲಿ ಸಾಕಲಾಗುತ್ತದೆ. ಮೀನಿನ ತ್ಯಾಜ್ಯದಿಂದ ಕಲುಷಿತಗೊಂಡ ನೀರನ್ನು ವಿಶೇಷ ಫಿಲ್ಟರ್‌ಗಳ ಮೂಲಕ ಶುದ್ಧೀಕರಿಸಿ, ಮತ್ತೆ ಅದೇ ಟ್ಯಾಂಕ್‌ಗೆ ಬಿಡಲಾಗುತ್ತದೆ. ಇದರಿಂದ ಕೇವಲ ಶೇ.1ರಷ್ಟು ನೀರು ಪೋಲಾಗುತ್ತದೆ. ಇಸ್ರೇಲ್‌ನ 'ನೆಗೆವ್' ಎಂಬ ಮರುಭೂಮಿಯ ಕೆಳಭಾಗದಲ್ಲಿ ಉಪ್ಪುನೀರಿನ ಸೆಲೆಗಳಿವೆ. ಈ ನೀರನ್ನು ಬಳಸಿ ಅಲ್ಲಿನ ರೈತರು ಅಟ್ಲಾಂಟಿಕ್ ಸಾಲ್ಮನ್ ಮತ್ತು ತಿಲಾಪಿಯಾ ಜಾತಿಯ ಮೀನುಗಳನ್ನು ಬೆಳೆಸುತ್ತಿದ್ದಾರೆ. ಮರುಭೂಮಿಯ ಸುಡುವ ಬಿಸಿಲಿನಲ್ಲಿ ಮೀನುಗಳನ್ನು ಬೆಳೆಸುವುದು ಜಗತ್ತಿಗೇ ಒಂದು ಸೋಜಿಗ!

ಇಸ್ರೇಲ್ ಬಯೋ-ಫ್ಲೋಕ್ (Bio-floc) ತಂತ್ರಜ್ಞಾನ ಪದ್ಧತಿಯನ್ನು ವ್ಯಾಪಕವಾಗಿ ಬಳಸುತ್ತಿದೆ. ಇದರಲ್ಲಿ ಮೀನಿನ ತ್ಯಾಜ್ಯವನ್ನೇ (ಅಮೋನಿಯಾ) ಉಪಯುಕ್ತ ಬ್ಯಾಕ್ಟೀರಿಯಾಗಳ ಸಹಾಯದಿಂದ ಪ್ರೋಟೀನ್ ಆಗಿ ಪರಿವರ್ತಿಸಲಾಗುತ್ತದೆ. ಆ ಪ್ರೋಟೀನ್ ಅನ್ನು ಮೀನುಗಳೇ ಆಹಾರವಾಗಿ ಸೇವಿಸುತ್ತವೆ. ಇದರಿಂದ ಆಹಾರದ ವೆಚ್ಚ ಕಡಿಮೆಯಾಗುವುದಲ್ಲದೇ, ನೀರು ಸ್ವಚ್ಛವಾಗಿಯೇ ಇರುತ್ತದೆ.

ಇಸ್ರೇಲ್ ಕೇವಲ ಕೆರೆ ಅಥವಾ ಟ್ಯಾಂಕ್‌ಗಳಿಗೆ ಸೀಮಿತವಾಗಿಲ್ಲ. ಮೆಡಿಟರೇನಿಯನ್ ಸಮುದ್ರದಲ್ಲಿ ಆಧುನಿಕ ಪಂಜರಗಳನ್ನು ಬಳಸಿ ಮೀನು ಹಿಡಿಯುತ್ತಾರೆ. ಜತೆಗೆ, 'ತಿಲಾಪಿಯಾ' ಮೀನಿನ ತಳಿಯಲ್ಲಿ ಇಸ್ರೇಲ್ ಮಾಡಿರುವ ಸಂಶೋಧನೆ ಅಪಾರ. ಇಂದು ಪ್ರಪಂಚದಾದ್ಯಂತ ತಿಲಾಪಿಯಾ ಮೀನನ್ನು 'ಇಸ್ರೇಲ್ ಕಾರ್ಪ್' ಎನ್ನುವಷ್ಟು ಜನಪ್ರಿಯಗೊಳಿಸಿದ್ದಾರೆ. ಇಸ್ರೇಲ್‌ನ ಮೀನು ಸಾಕಾಣಿಕೆ ಕೇಂದ್ರಗಳಲ್ಲಿ ಮೀನುಗಳಿಗೆ ಆಹಾರ ಹಾಕುವುದರಿಂದ ಹಿಡಿದು, ನೀರಿನ ಆಮ್ಲಜನಕದ ಮಟ್ಟ ತಪಾಸಣೆ ಮಾಡುವವರೆಗೆ ಎಲ್ಲವೂ ಕಂಪ್ಯೂಟರ್‌ಗಳ ಮೂಲಕ ನಡೆಯುತ್ತದೆ. ಸಂವೇದಕಗಳು (ಸೆನ್ಸರ್ಸ್) ನೀರಿನಲ್ಲಿ ಅಲ್ಪ ಬದಲಾವಣೆಯಾದರೂ ತಕ್ಷಣವೇ ಮಾಲೀಕರಿಗೆ ಅಲರ್ಟ್ ಕಳುಹಿಸುತ್ತವೆ. ಇದರಿಂದ ಮೀನುಗಳು ಸಾಯುವ ಸಾಧ್ಯತೆ ಕಮ್ಮಿ.

ಮೀನಿನ ಟ್ಯಾಂಕ್‌ನಿಂದ ಬಂದ ನೈಟ್ರೋಜನ್‌ಯುಕ್ತ ನೀರನ್ನು ಹಸಿರುಮನೆಗಳಲ್ಲಿ ಗಿಡಗಳಿಗೆ (ತರಕಾರಿಗಳಿಗೆ) ಬಳಸಲಾಗುತ್ತದೆ. ಗಿಡಗಳು ನೀರಿನಲ್ಲಿರುವ ಪೋಷಕಾಂಶಗಳನ್ನು ಹೀರಿಕೊಂಡು ನೀರನ್ನು ಶುದ್ಧೀಕರಿಸುತ್ತವೆ. ಆ ಶುದ್ಧ ನೀರು ಮತ್ತೆ ಮೀನಿನ ಟ್ಯಾಂಕ್‌ಗೆ ಹೋಗುತ್ತದೆ. ಇದು ಪ್ರಕೃತಿ ಮತ್ತು ತಂತ್ರಜ್ಞಾನದ ಸುಂದರ ಸಮನ್ವಯ.

ಇಸ್ರೇಲ್ ತಾನು ಬೆಳೆಸಿದ ಮೀನುಗಳನ್ನು ಅಮೆರಿಕ ಮತ್ತು ಯುರೋಪ್‌ಗೆ ರಫ್ತು ಮಾಡುತ್ತದೆ. ಸಮುದ್ರ ಮಟ್ಟಕ್ಕಿಂತ ಕೆಳಗಿರುವ 'ಡೆಡ್ ಸೀ' ಸಮೀಪವೂ ಅವರು ಮೀನು ಬೆಳೆಸಿ ತೋರಿಸಿದ್ದಾರೆ. ಅಲಂಕಾರಿಕ ಮೀನುಗಳ ಮಾರುಕಟ್ಟೆಯಲ್ಲೂ ಇಸ್ರೇಲ್ ದೊಡ್ಡ ಪಾಲು ಹೊಂದಿದೆ. ಇಸ್ರೇಲ್‌ನ ಮೀನುಗಾರಿಕೆ ನಮಗೆ ಒಂದು ಪಾಠ. 'ಸಂಪನ್ಮೂಲಗಳಿಲ್ಲದಿದ್ದರೂ ಬುದ್ಧಿವಂತಿಕೆಯಿಂದ ಏನನ್ನು ಬೇಕಾದರೂ ಸಾಧಿಸಬಹುದು' ಎಂಬುದಕ್ಕೆ ಇದು ಸಾಕ್ಷಿ. ನೀರಿನ ಸಂರಕ್ಷಣೆ ಮತ್ತು ತಂತ್ರಜ್ಞಾನದ ಬಳಕೆ ಹೇಗೆ ಒಂದು ದೇಶದ ಆರ್ಥಿಕತೆಯನ್ನು ಬದಲಿಸಬಹುದು ಎಂಬುದನ್ನು ಇಸ್ರೇಲ್ ತೋರಿಸಿಕೊಟ್ಟಿದೆ.

ಭೂಗತ ರಕ್ತನಾಳ

ಇಸ್ರೇಲ್ ದೇಶದ ನೀರಾವರಿ ಪದ್ಧತಿಯು ಕೇವಲ ಒಂದು ಎಂಜಿನಿಯರಿಂಗ್ ಸಾಧನೆಯಲ್ಲ, ಅದು ಮನುಷ್ಯನ ಅಪ್ರತಿಮ ಬುದ್ಧಿಶಕ್ತಿಯ ಸಂಕೇತ. ಮರುಭೂಮಿಯ ನಡುವೆ ಇರುವ ಒಂದು ಪುಟ್ಟ ರಾಷ್ಟ್ರವು ಇಡೀ ದೇಶಕ್ಕೆ ನೀರುಣಿಸಲು ಹರಡಿರುವ ಭೂಗತ ಜಾಲವು ನಿಜಕ್ಕೂ ವಿಸ್ಮಯಕಾರಿ. ಈ ವ್ಯವಸ್ಥೆಯನ್ನು 'ನ್ಯಾಷನಲ್ ವಾಟರ್ ಕ್ಯಾರಿಯರ್' (National Water Carrier) ಎಂದು ಕರೆಯಲಾಗುತ್ತದೆ.

ರಕ್ತನಾಳಗಳು ನಮ್ಮ ಇಡೀ ದೇಹಕ್ಕೆ ರಕ್ತವನ್ನು ಹರಿಸುವಂತೆ, ಈ ಕೊಳವೆಜಾಲವು ಇಸ್ರೇಲ್‌ನ ಪ್ರತಿಯೊಂದು ಹಳ್ಳಿ ಮತ್ತು ಕೃಷಿ ಭೂಮಿಗೆ ಜೀವಜಲವನ್ನು ಹರಿಸುತ್ತದೆ. ಇಸ್ರೇಲ್‌ನ ಉತ್ತರ ಭಾಗದಲ್ಲಿರುವ 'ಗಲಿಲೀ ಸಮುದ್ರ' ಅಥವಾ ಕಿನ್ನರೆಟ್ ಸರೋವರದಿಂದ ದಕ್ಷಿಣದ ಮರುಭೂಮಿ ಪ್ರದೇಶವಾದ ನೆಗೆವ್‌ವರೆಗೆ ಈ ಬೃಹತ್ ಜಾಲ ಹರಡಿದೆ. ಸುಮಾರು 130 ಕಿ.ಮೀ.ಗಳಿಗೂ ಹೆಚ್ಚು ಉದ್ದದ ಮುಖ್ಯ ಕೊಳವೆಮಾರ್ಗವಿದ್ದು, ಇದರೊಂದಿಗೆ ಸಾವಿರಾರು ಕಿ.ಮೀ. ಉದ್ದದ ಸಣ್ಣ ಕವಲು ಕೊಳವೆಗಳು ಕವಲೊಡೆದಿವೆ. ಇದು ಮಳೆ ಹೆಚ್ಚಿರುವ ಉತ್ತರದ ನೀರನ್ನು ಬಿಸಿಲಿನಿಂದ ಕೂಡಿದ ದಕ್ಷಿಣಕ್ಕೆ ಸಾಗಿಸುತ್ತದೆ.

ಇಸ್ರೇಲ್‌ನ ಈ ನೀರಾವರಿ ವ್ಯವಸ್ಥೆಯು ಕಣ್ಣು ಮಿಟುಕಿಸುವಷ್ಟರಲ್ಲಿ ಕೆಲಸ ಮಾಡುತ್ತದೆ. ಇದಕ್ಕೆ ಕಾರಣ SCADA (Supervisory Control and Data Acquisition) ಎಂಬ ಅತ್ಯಾಧುನಿಕ ಕಂಪ್ಯೂಟರ್ ತಂತ್ರಜ್ಞಾನ. ಟೆಲ್ ಅವಿವ್‌ನಲ್ಲಿರುವ ಕೇಂದ್ರ, ಕಚೇರಿಯಿಂದಲೇ ದೇಶದ ಯಾವುದೋ ಒಂದು ಮೂಲೆಯ ಹಳ್ಳಿಯ ನೀರಿನ ವಾಲ್ವ್ ಅನ್ನು ತೆರೆಯಬಹುದು ಅಥವಾ ಮುಚ್ಚಬಹುದು. ಯಾವ ಬೆಳೆಗೆ ಎಷ್ಟು ನೀರು ಬೇಕು, ಯಾವ ಹೊತ್ತಿಗೆ ಬೇಕು ಎಂಬುದನ್ನು ಮೊದಲೇ ಕಂಪ್ಯೂಟರ್‌ನಲ್ಲಿ ಪ್ರೋಗ್ರಾಂ ಮಾಡಲಾಗುತ್ತದೆ. ನಿಗದಿತ ಸಮಯಕ್ಕೆ ಸರಿಯಾಗಿ ನೀರು ಸರಬರಾಜು ಆರಂಭವಾಗುತ್ತದೆ ಮತ್ತು ಬೇಕಾದಷ್ಟು ನೀರು ಪೂರೈಕೆಯಾದ ತಕ್ಷಣ ತಾನಾಗಿಯೇ ಸ್ಥಗಿತಗೊಳ್ಳುತ್ತದೆ. ಕೊಳವೆಗಳಲ್ಲಿ ಎಲ್ಲಿಯಾದರೂ ಸಣ್ಣ ರಂಧ್ರವಾಗಿ ನೀರು ಸೋರುತ್ತಿದ್ದರೆ, ಒತ್ತಡದಲ್ಲಿನ ವ್ಯತ್ಯಾಸವನ್ನು ಕಂಪ್ಯೂಟರ್ ತಕ್ಷಣ ಪತ್ತೆಹಚ್ಚಿ ಎಂಜಿನಿಯರ್‌ಗಳಿಗೆ ಅಲರ್ಟ್ ಕಳುಹಿಸುತ್ತದೆ. ಇದರಿಂದ ಹನಿ ನೀರೂ ವ್ಯರ್ಥವಾಗುವುದಿಲ್ಲ.

ಇಸ್ರೇಲ್ ನೈಸರ್ಗಿಕ ನೀರನ್ನು ಮಾತ್ರ ಅವಲಂಬಿಸಿಲ್ಲ. ಈ ಭೂಗತ ಜಾಲಕ್ಕೆ ಮೂರು ಪ್ರಮುಖ ಮೂಲಗಳಿಂದ ನೀರು ಬರುತ್ತದೆ. ಮೊದಲನೆಯದು, ಸಮುದ್ರದ ನೀರು. ಸಮುದ್ರದ ಉಪ್ಪುನೀರನ್ನು ಕುಡಿಯುವ ನೀರಾಗಿ ಪರಿವರ್ತಿಸುವ (Desalination) ಬೃಹತ್ ಘಟಕಗಳು ಈ ಜಾಲಕ್ಕೆ ನೀರನ್ನು ಸೇರಿಸುತ್ತವೆ. ಎರಡನೆಯದು, ಸಂಸ್ಕರಿಸಿದ ನೀರು. ಬಳಸಿ ಬಿಟ್ಟ ಕೊಳಚೆ ನೀರನ್ನು ಶೇ.90ರಷ್ಟು ಶುದ್ಧೀಕರಿಸಿ ಕೃಷಿಗೆ ಬಳಸಲಾಗುತ್ತದೆ. ಇಸ್ರೇಲ್ ಜಗತ್ತಿನಲ್ಲೇ ಅತಿ ಹೆಚ್ಚು ನೀರು ಮರುಬಳಕೆ ಮಾಡುವ ದೇಶ. ಮೂರನೆಯದು, ಮಳೆ ನೀರು ಮತ್ತು ಸರೋವರದ ನೀರು ಅರ್ಥಾತ್ ಲಭ್ಯವಿರುವ ನೈಸರ್ಗಿಕ ಸಿಹಿನೀರು.

ಈ ಕೊಳವೆಜಾಲವು ನೇರವಾಗಿ ಹೊಲಗಳ ಬುಡದಲ್ಲಿರುವ 'ಹನಿ ನೀರಾವರಿ' ವ್ಯವಸ್ಥೆಗೆ ಸಂಪರ್ಕ ಹೊಂದಿದೆ. ಇಲ್ಲಿ ನೀರು ಹರಿಯುವುದಿಲ್ಲ, ಬದಲಿಗೆ ಸಸ್ಯದ ಬೇರುಗಳಿಗೆ ಹನಿಯಾಗಿ ತೊಟ್ಟಿಕ್ಕುತ್ತದೆ. ಕಂಪ್ಯೂಟರ್ ಸಿಸ್ಟಮ್ ಮಣ್ಣಿನಲ್ಲಿರುವ ತೇವಾಂಶವನ್ನು ಅಳೆದು, ಗಿಡಕ್ಕೆ ಬಾಯಾರಿಕೆಯಾದಾಗ ಮಾತ್ರ ನೀರನ್ನು ಹರಿಸುತ್ತದೆ.

ಈ ತಂತ್ರಜ್ಞಾನದ ಕಾರಣದಿಂದಲೇ ಇಸ್ರೇಲ್‌ನ ಮರುಭೂಮಿಯಲ್ಲಿ ಇಂದು ಹಸಿರುಮನೆಗಳು (ಗ್ರೀನ್ ಹೌಸ್) ತಲೆ ಎತ್ತಿವೆ. ಅಲ್ಲಿನ ಕೃಷಿಕರು ತಮ್ಮ ಸ್ಮಾರ್ಟ್‌ಫೋನ್ ಮೂಲಕವೇ, ತಮ್ಮ ಹೊಲಕ್ಕೆ ಎಷ್ಟು ನೀರು ಹೋಗುತ್ತಿದೆ ಎಂಬುದನ್ನು ಗಮನಿಸಬಹುದು. ಒಂದು ಊರಿಗೆ ರಾತ್ರಿ ಎರಡು ಗಂಟೆಗೆ ನೀರು ಬೇಕೆಂದರೆ, ಅಲ್ಲಿನ ರೈತ ಎದ್ದು ಹೋಗಿ ವಾಲ್ವ್ ತಿರುಗಿಸಬೇಕಿಲ್ಲ, ಕಂಪ್ಯೂಟರ್ ಅದನ್ನು ಮಾಡುತ್ತದೆ.

ಇಸ್ರೇಲ್ ತನ್ನ ನೀರಿನ ಒಟ್ಟು ಬೇಡಿಕೆಯ ಶೇ.50ಕ್ಕಿಂತ ಹೆಚ್ಚು ನೀರನ್ನು ಸಮುದ್ರ ಮತ್ತು ಸಂಸ್ಕರಿಸಿದ ಮೂಲಗಳಿಂದಲೇ ಪಡೆಯುತ್ತದೆ. ಅಲ್ಲಿನ ಪೈಪ್‌ಲೈನ್ ಮಾರ್ಗಗಳು ಕೇವಲ ನೀರನ್ನಷ್ಟೇ ಅಲ್ಲ, ದತ್ತಾಂಶವನ್ನೂ (Data) ಸಾಗಿಸುತ್ತವೆ. ನೀರಿನ ಪ್ರತಿ ಹನಿಗೂ ಬೆಲೆ ನಿಗದಿಪಡಿಸಲಾಗಿದ್ದು, ವ್ಯರ್ಥ ಮಾಡುವಂತೆಯೇ ಇಲ್ಲ. ಇಸ್ರೇಲ್ ತೋರಿಸಿಕೊಟ್ಟಿರುವ ಈ ಮಾದರಿಯು ಭಾರತದಂಥ ಕೃಷಿ ಪ್ರಧಾನ ದೇಶಗಳಿಗೆ ಅತ್ಯಂತ ಅವಶ್ಯಕವಾಗಿದೆ. ಕಡಿಮೆ ನೀರನ್ನು ಬಳಸಿ ಅತಿ ಹೆಚ್ಚು ಇಳುವರಿ ಪಡೆಯುವುದು ಹೇಗೆ ಎಂಬುದಕ್ಕೆ ಈ 'ಭೂಗತ ರಕ್ತನಾಳಗಳ' ಜಾಲವೇ ಸಾಕ್ಷಿ.

ಮರುಬಳಕೆಯ ಅಮೂಲ್ಯ ಸಂಪನ್ಮೂಲ

ಇಸ್ರೇಲ್ ದೇಶದ ನೀರಾವರಿ ಪವಾಡದ ಹಿಂದೆ ಇರುವ ಅತ್ಯಂತ ಪ್ರಮುಖ ಮಿದುಳು ಎಂದರೆ ಅದು 'ಜುಕರ್‌ಬರ್ಗ್ ಜಲ ಸಂಶೋಧನಾ ಸಂಸ್ಥೆ'. ಇದು ನೆಗೇವ್ ಮರುಭೂಮಿಯ ಬೆನ್-ಗುರಿಯನ್ ವಿಶ್ವವಿದ್ಯಾಲಯದ ಭಾಗವಾಗಿದ್ದು, ಎಸ್‌ಡೆ ಬೋಕರ್ ಎಂಬ ಪುಟ್ಟ ಪ್ರದೇಶದಲ್ಲಿದೆ. ಕಲುಷಿತ ನೀರು ಅಥವಾ ಕೊಳಚೆ ನೀರನ್ನು ಅಮೃತದಂಥ ಕೃಷಿ ಜಲವಾಗಿ ಪರಿವರ್ತಿಸುವ ಇವರ ಸಾಹಸಗಾಥೆ ನಿಜಕ್ಕೂ ರೋಚಕ.

ಸಾಮಾನ್ಯವಾಗಿ ಕೊಳಚೆ ನೀರಿನಲ್ಲಿ ಹಾನಿಕಾರಕ ಬ್ಯಾಕ್ಟೀರಿಯಾಗಳು, ರಾಸಾಯನಿಕಗಳು ಮತ್ತು ಲವಣಗಳಿರುತ್ತವೆ. ಇವುಗಳನ್ನು ನೇರವಾಗಿ ಕೃಷಿಗೆ ಬಳಸಿದರೆ ಮಣ್ಣು ಹಾಳಾಗುವುದಲ್ಲದೇ, ಬೆಳೆದ ಆಹಾರವೂ ವಿಷಕಾರಿಯಾಗಬಹುದು. ಜುಕರ್‌ಬರ್ಗ್ ಸಂಸ್ಥೆಯ ವಿಜ್ಞಾನಿಗಳು ಈ ನೀರನ್ನು 'ಅಪಾಯರಹಿತ'ವನ್ನಾಗಿ ಮಾಡಲು ಹೊಸ ಹಾದಿಗಳನ್ನು ಕಂಡುಕೊಂಡಿದ್ದಾರೆ. ಇಸ್ರೇಲ್ ತನ್ನ ದೇಶದ ಶೇ.90ರಷ್ಟು ಕೊಳಚೆ ನೀರನ್ನು ಸಂಸ್ಕರಿಸಿ ಮರುಬಳಕೆ ಮಾಡುತ್ತದೆ (ಜಗತ್ತಿನ ಎರಡನೇ ರಾಷ್ಟ್ರ ಸ್ಪೇನ್ ಕೇವಲ ಶೇ.20ರಷ್ಟು ಮಾಡುತ್ತದೆ).

ಈ ಅಗಾಧ ಯಶಸ್ಸಿನ ಹಿಂದೆ ಜುಕರ್‌ಬರ್ಗ್ ಸಂಸ್ಥೆಯ ನಿರಂತರ ಸಂಶೋಧನೆಯಿದೆ. ಅತ್ಯಂತ ಸೂಕ್ಷ್ಮವಾದ ಪೊರೆಗಳನ್ನು (Membranes) ಬಳಸಿ ನೀರಿನಲ್ಲಿರುವ ಕಲ್ಮಶಗಳನ್ನು ಬೇರ್ಪಡಿಸುವ ತಂತ್ರಜ್ಞಾನವನ್ನು ಇವರು ಅಭಿವೃದ್ಧಿಪಡಿಸಿದ್ದಾರೆ. ಹಾನಿಕಾರಕ ರಾಸಾಯನಿಕಗಳನ್ನು ತಿಂದು ಜೀರ್ಣಿಸಿಕೊಳ್ಳುವ ವಿಶೇಷ ಬ್ಯಾಕ್ಟೀರಿಯಾಗಳನ್ನು ನೀರಿನಲ್ಲಿ ಬಿಟ್ಟು, ನೀರನ್ನು ನೈಸರ್ಗಿಕವಾಗಿ ಶುದ್ಧೀಕರಿಸುವ ವಿಧಾನವನ್ನು ಇವರು ರೂಪಿಸಿದ್ದಾರೆ.

ಎಸ್‌ಡೆ ಬೋಕರ್‌ನಲ್ಲಿರುವ ಈ ಸಂಸ್ಥೆಯಲ್ಲಿ ಸಂಶೋಧನೆ ಎಂದೂ ನಿಲ್ಲುವುದಿಲ್ಲ. ಮಳೆ ಕಡಿಮೆಯಾದಾಗ ಅಥವಾ ತಾಪಮಾನ ಹೆಚ್ಚಾದಾಗ ನೀರಿನ ಗುಣಮಟ್ಟ ಹೇಗೆ ಬದಲಾಗುತ್ತದೆ ಮತ್ತು ಅದನ್ನು ಹೇಗೆ ಸರಿಪಡಿಸಬೇಕು ಎಂಬುದರ ಮೇಲೆ ಇಲ್ಲಿನ ವಿಜ್ಞಾನಿಗಳು ಹಗಲಿರುಳೂ ಕೆಲಸ ಮಾಡುತ್ತಾರೆ. ಸಂಸ್ಕರಿಸಿದ ನೀರಿನಲ್ಲಿ ಲವಣಾಂಶ (Salt content) ಹೆಚ್ಚಿದ್ದರೆ ಗಿಡಗಳು ಸಾಯುತ್ತವೆ. ಈ ಲವಣಾಂಶವನ್ನು ಕಡಿಮೆ ಮಾಡಲು 'ರಿವರ್ಸ್ ಆಸ್ಮೋಸಿಸ್' (RO) ತಂತ್ರಜ್ಞಾನದಲ್ಲಿ ಕಡಿಮೆ ಖರ್ಚಿನ ಹೊಸ ವಿಧಾನಗಳನ್ನು ಇವರು ಸೃಷ್ಟಿಸುತ್ತಿದ್ದಾರೆ.

ಇಸ್ರೇಲಿನಲ್ಲಿ ಸಂಸ್ಕರಿಸಿದ ನೀರನ್ನು ದೇಶದ ಬೃಹತ್ ಭೂಗತ ಪೈಪ್‌ಲೈನ್‌ಗಳ ಮೂಲಕ ಕೃಷಿ ಭೂಮಿಗೆ ಹರಿಸಲಾಗುತ್ತದೆ. ಈ ನೀರು ಎಷ್ಟು ಸುರಕ್ಷಿತವೆಂದರೆ, ಇಸ್ರೇಲ್ ಈ ನೀರನ್ನು ಬಳಸಿ ಬೆಳೆದ ತರಕಾರಿ ಮತ್ತು ಹಣ್ಣುಗಳನ್ನು ವಿಶ್ವದ ಅತ್ಯಂತ ಕಟ್ಟುನಿಟ್ಟಿನ ಗುಣಮಟ್ಟದ ಮಾನದಂಡಗಳಿರುವ ಯುರೋಪ್ ಮಾರುಕಟ್ಟೆಗೆ ರಫ್ತು ಮಾಡುತ್ತದೆ. ಜುಕರ್‌ಬರ್ಗ್ ಸಂಸ್ಥೆಯು ಪ್ರತಿ ಹನಿ ನೀರಿನ ಗುಣಮಟ್ಟವನ್ನು ಪ್ರಮಾಣೀಕರಿಸುತ್ತದೆ.

ಈ ಸಂಸ್ಥೆಯು ಇಸ್ರೇಲ್‌ಗಾಗಿ ಮಾತ್ರವಲ್ಲ, ಇಡೀ ಜಗತ್ತಿನ ನೀರಿನ ಸಮಸ್ಯೆಗೆ ಪರಿಹಾರ ಹುಡುಕುತ್ತಿದೆ. ಆಫ್ರಿಕಾದ ಹಳ್ಳಿಗಳಲ್ಲಿ ಕುಡಿಯುವ ನೀರಿನ ಶುದ್ಧೀಕರಣದಿಂದ ಹಿಡಿದು ಭಾರತದ ಗಂಗಾ ನದಿಯ ಸ್ವಚ್ಛತೆಯವರೆಗೆ ಇವರ ತಂತ್ರಜ್ಞಾನದ ಸಲಹೆಗಳನ್ನು ಪಡೆಯಲಾಗುತ್ತಿದೆ. ಎಸ್‌ಡೆ ಬೋಕರ್ ಎಂಬುದು ಒಂದು ಕಡು ಮರುಭೂಮಿ. ಅಂಥ ಸ್ಥಳದಲ್ಲಿ ಕುಳಿತು ಇಡೀ ದೇಶದ ನೀರಿನ ಭವಿಷ್ಯವನ್ನು ಬರೆಯುತ್ತಿರುವುದು ಜುಕರ್‌ಬರ್ಗ್ ಸಂಸ್ಥೆಯ ವಿಜ್ಞಾನಿಗಳ ಬದ್ಧತೆಗೆ ಸಾಕ್ಷಿ. ಇಲ್ಲಿ 'ತ್ಯಾಜ್ಯ ನೀರು' ಎಂಬ ಪದವೇ ಇಲ್ಲ, ಬದಲಿಗೆ ಅದನ್ನು 'ಮರುಬಳಕೆಯ ಅಮೂಲ್ಯ ಸಂಪನ್ಮೂಲ' ಎಂದು ಪರಿಗಣಿಸಲಾಗುತ್ತದೆ.

ರಕ್ತನಾಳಗಳಲ್ಲಿ ರಕ್ತ ಹರಿಯುವಂತೆ ದೇಶದ ಉದ್ದಗಲಕ್ಕೂ ಹರಿಯುವ ನೀರು ಶುದ್ಧವಾಗಿರಲು ಜುಕರ್‌ಬರ್ಗ್ ಜಲ ಸಂಶೋಧನಾ ಸಂಸ್ಥೆಯು 'ಕಿಡ್ನಿ'ಯಂತೆ ಕೆಲಸ ಮಾಡುತ್ತದೆ. ಕಲುಷಿತಗೊಂಡಿದ್ದನ್ನು ಶುದ್ಧೀಕರಿಸಿ ಮರುಜೀವ ನೀಡುವ ಇವರ ಕೆಲಸ ಮಾನವಕುಲಕ್ಕೆ ಮಾದರಿ.

ನಮ್ಮ ದೇಶ, ನಮ್ಮ ನೀರು

ಇಸ್ರೇಲ್ ದೇಶದಲ್ಲಿ ನೀರು ಎನ್ನುವುದು ಕೇವಲ ಒಂದು ನೈಸರ್ಗಿಕ ಮೂಲವಲ್ಲ, ಅದು ಆ ದೇಶದ ಅತ್ಯಂತ ಪವಿತ್ರವಾದ 'ರಾಷ್ಟ್ರೀಯ ಆಸ್ತಿ'. ಅಲ್ಲಿನ ಪ್ರತಿಯೊಂದು ಹನಿ ನೀರಿನ ಮೇಲೆ ಸರಕಾರದ ಸರ್ವೋಚ್ಚ ಅಧಿಕಾರವಿದೆ. 'ನೀರು ನಮ್ಮೆಲ್ಲರ ಆಸ್ತಿ, ಅದನ್ನು ಪೋಲು ಮಾಡುವ ಹಕ್ಕು ಯಾರಿಗೂ ಇಲ್ಲ' ಎಂಬ ತತ್ವದ ಮೇಲೆ ಇಸ್ರೇಲ್‌ನ ಜಲನೀತಿ ರೂಪಿತವಾಗಿದೆ. ಈ ವ್ಯವಸ್ಥೆಯು ಹೇಗೆ ಕಾರ್ಯನಿರ್ವಹಿಸುತ್ತದೆ ಮತ್ತು ರೈತರು ಸರಕಾರದೊಂದಿಗೆ ಮಾಡಿಕೊಳ್ಳುವ ಒಪ್ಪಂದಗಳ ಸ್ವರೂಪವೇನು?

ಇಸ್ರೇಲ್‌ನ 1959ರ 'ಜಲ ಕಾಯ್ದೆ' ಅಡಿಯಲ್ಲಿ ದೇಶದ ಎಲ್ಲ ನೀರಿನ ಮೂಲಗಳು- ಅದು ಮಳೆನೀರು ಇರಲಿ, ಅಂತರ್ಜಲವಿರಲಿ ಅಥವಾ ಸಮುದ್ರದ ನೀರಿರಲಿ- ಸಾರ್ವಜನಿಕ ಆಸ್ತಿಯೆಂದು ಘೋಷಿಸಲಾಯಿತು. ಭಾರತದಂತೆ ತನ್ನ ಜಮೀನಿನಲ್ಲಿ ಬೋರ್‌ವೆಲ್ ಕೊರೆಸಿ ತನಗೆ ಬೇಕಾದಷ್ಟು ನೀರು ಎತ್ತಿಕೊಳ್ಳುವ ಸ್ವಾತಂತ್ರ್ಯ ಇಸ್ರೇಲ್ ರೈತನಿಗಿಲ್ಲ. ಈ ಸಂಪತ್ತನ್ನು ನಿರ್ವಹಿಸಲು 'ಮೆಕೊರೊಟ್' ಎಂಬ ರಾಷ್ಟ್ರೀಯ ಜಲ ಕಂಪನಿಯಿದೆ. ಇದು ನೀರನ್ನು ಹೊರತೆಗೆದು, ಶುದ್ಧೀಕರಿಸಿ, ದೇಶದ ಉದ್ದಗಲಕ್ಕೂ ಇರುವ ಕೊಳವೆಜಾಲದ ಮೂಲಕ ವಿತರಿಸುತ್ತದೆ.

ನೀರು ಹಂಚಿಕೆಯ ಸಂಪೂರ್ಣ ಜವಾಬ್ದಾರಿಯನ್ನು 'ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವಾಲಯ' ಹೊತ್ತುಕೊಂಡಿದೆ. ಯಾವ ಪ್ರದೇಶಕ್ಕೆ ಎಷ್ಟು ನೀರು ಬೇಕು, ಯಾವ ಬೆಳೆಗೆ ಆದ್ಯತೆ ನೀಡಬೇಕು ಎಂಬುದನ್ನು ಈ ಸಚಿವಾಲಯವು ನಿರ್ಧರಿಸುತ್ತದೆ. ನೀರನ್ನು ಹಂಚುವ ಮುನ್ನ ಸಚಿವಾಲಯವು ಆ ವರ್ಷದ ಮಳೆ, ಜಲಾಶಯಗಳ ಮಟ್ಟ ಮತ್ತು ಮಣ್ಣಿನ ತೇವಾಂಶವನ್ನು ಕಂಪ್ಯೂಟರ್ ಮೂಲಕ ವಿಶ್ಲೇಷಿಸುತ್ತದೆ. ಪ್ರತಿಯೊಬ್ಬ ರೈತನಿಗೂ ಇಂತಿಷ್ಟು ಗ್ಯಾಲನ್ ನೀರು ಎಂದು ಕೋಟಾವನ್ನು ನಿಗದಿಪಡಿಸಲಾಗುತ್ತದೆ.

ಇಸ್ರೇಲ್‌ನಲ್ಲಿ ಕೃಷಿ ಮಾಡುವುದು ಒಂದು ದೊಡ್ಡ ಜವಾಬ್ದಾರಿ. ಒಬ್ಬ ರೈತ ಬೇಸಾಯ ಆರಂಭಿಸಬೇಕೆಂದರೆ ಸರಕಾರದೊಂದಿಗೆ ಹತ್ತು ವರ್ಷಗಳ ದೀರ್ಘಾವಧಿಯ ಒಪ್ಪಂದವನ್ನು ಮಾಡಿಕೊಳ್ಳಬೇಕು. ಸರಕಾರವು ಮುಂದಿನ ಹತ್ತು ವರ್ಷಗಳ ಕಾಲ ರೈತನಿಗೆ ದೊರೆಯುವ ನೀರಿನ ಪ್ರಮಾಣವನ್ನು ನಿಗದಿಪಡಿಸುತ್ತದೆ. ರೈತ ತನಗೆ ಇಷ್ಟ ಬಂದ ಬೆಳೆಯನ್ನು ಬೆಳೆಯುವಂತಿಲ್ಲ, ನೀರಿನ ಲಭ್ಯತೆ ಮತ್ತು ಮಣ್ಣಿನ ಗುಣಕ್ಕೆ ಅನುಗುಣವಾಗಿ ಸರಕಾರ ಸೂಚಿಸುವ ಅಥವಾ ಅನುಮೋದಿಸುವ ಬೆಳೆಗಳನ್ನೇ ಬೆಳೆಯಬೇಕು. ರೈತನು ಹನಿ ನೀರಾವರಿ ಮತ್ತು ಸ್ಮಾರ್ಟ್ ಸೆನ್ಸರ್‌ಗಳನ್ನು ಬಳಸುವುದಾಗಿ ಒಪ್ಪಂದದಲ್ಲಿ ಸಹಿ ಹಾಕಬೇಕು. ನೀರನ್ನು ವ್ಯರ್ಥ ಮಾಡಿದರೆ ಭಾರಿ ದಂಡ ತೆರಬೇಕಾಗುತ್ತದೆ.

ಇಸ್ರೇಲ್‌ನಲ್ಲಿ ನೀರು ಉಚಿತವಲ್ಲ. ರೈತರು ತಾವು ಬಳಸುವ ಪ್ರತಿಯೊಂದು ಹನಿ ನೀರಿಗೂ ಹಣ ನೀಡಬೇಕು. ನಿಗದಿತ ಕೋಟಾದೊಳಗೆ ಬಳಸುವ ನೀರಿಗೆ ಒಂದು ದರವಿದ್ದರೆ, ಕೋಟಾ ಮೀರಿ ಬಳಸುವ ನೀರಿಗೆ ಅತ್ಯಂತ ಹೆಚ್ಚಿನ ದರ ವಿಧಿಸಲಾಗುತ್ತದೆ. ಇದು ರೈತರು ನೀರನ್ನು ಮಿತವಾಗಿ ಬಳಸುವಂತೆ ಮಾಡುತ್ತದೆ. ಕುಡಿಯುವ ನೀರಿಗಿಂತ ಸಂಸ್ಕರಿಸಿದ ಕೊಳಚೆ ನೀರಿಗೆ ಕಡಿಮೆ ದರ ನಿಗದಿಪಡಿಸಲಾಗಿದೆ. ಹೀಗಾಗಿ ರೈತರು ಸಂಸ್ಕರಿಸಿದ ನೀರನ್ನೇ ಹೆಚ್ಚು ಬಳಸುತ್ತಾರೆ.

ರೈತರ ಒಪ್ಪಂದದಂತೆ ಅವರಿಗೆ ಬೇಕಾದ ನೀರನ್ನು ಕಂಪ್ಯೂಟರ್ ಪ್ರೋಗ್ರಾಂ ಮೂಲಕ ಅವರ ಹೊಲದ ಪೈಪ್‌ಗಳಿಗೆ ಬಿಡಲಾಗುತ್ತದೆ. ಪ್ರತಿಯೊಂದು ಹೊಲಕ್ಕೂ ಸ್ಮಾರ್ಟ್ ಮೀಟರ್ ಅಳವಡಿಸಲಾಗಿರುತ್ತದೆ. ರೈತ ತನ್ನ ಮೊಬೈಲ್ ಮೂಲಕವೇ ತನಗೆ ಸಿಕ್ಕ ನೀರಿನ ಪ್ರಮಾಣವನ್ನು ನೋಡಬಹುದು. ಪೈಪ್‌ಲೈನ್‌ನಲ್ಲಿ ಎಲ್ಲಿಯಾದರೂ ನೀರು ಪೋಲಾಗುತ್ತಿದ್ದರೆ ಕೇಂದ್ರ, ಕಚೇರಿಗೆ ತಕ್ಷಣ ಮಾಹಿತಿ ಹೋಗುತ್ತದೆ. ಇದರಿಂದ ರಾಷ್ಟ್ರೀಯ ಸಂಪತ್ತಾದ ನೀರು ಪೋಲಾಗುವುದು ತಪ್ಪುತ್ತದೆ.

'ನನ್ನ ಜಮೀನು, ನನ್ನ ನೀರು' ಎಂಬ ಸ್ವಾರ್ಥವನ್ನು ಬದಿಗಿಟ್ಟು 'ನಮ್ಮ ದೇಶ, ನಮ್ಮ ನೀರು' ಎಂಬ ಭಾವನೆಯನ್ನು ಇಸ್ರೇಲ್ ಬೆಳೆಸಿದೆ. ಸರಕಾರದ ಕಟ್ಟುನಿಟ್ಟಿನ ನಿಯಮಗಳು ಮತ್ತು ರೈತರ ಹತ್ತು ವರ್ಷಗಳ ಶಿಸ್ತಿನ ಒಪ್ಪಂದದಿಂದಾಗಿಯೇ ಇಂದು ಇಸ್ರೇಲ್ ಮರುಭೂಮಿಯಲ್ಲೂ ಹಣ್ಣು-ತರಕಾರಿಗಳನ್ನು ಬೆಳೆದು ಜಗತ್ತಿಗೆ ರಫ್ತು ಮಾಡಲು ಸಾಧ್ಯವಾಗಿದೆ. ನೀರಿನ ನಿರ್ವಹಣೆಯಲ್ಲಿ ಭಾರತದಂಥ ದೇಶಗಳು ಇಸ್ರೇಲ್‌ನ ಈ 'ಶಿಸ್ತು ಮತ್ತು ತಂತ್ರಜ್ಞಾನ'ದ ಮಾದರಿಯನ್ನು ಅಳವಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ.

ಜಲ ಸಂರಕ್ಷಣೆಯ ಹೊಸ ಕ್ರಾಂತಿ

ಇಸ್ರೇಲ್‌ನ ಜಲ ನಿರ್ವಹಣಾ ವ್ಯವಸ್ಥೆಯಲ್ಲಿ 'ಸ್ಮಾರ್ಟ್ ಮೀಟರ್'ಗಳು ಕೇವಲ ನೀರನ್ನು ಅಳೆಯುವ ಸಾಧನಗಳಲ್ಲ, ಅವು ಇಡೀ ವ್ಯವಸ್ಥೆಯ 'ಕಣ್ಣು ಮತ್ತು ಕಿವಿ'ಗಳಂತೆ ಕೆಲಸ ಮಾಡುತ್ತವೆ. ಇವುಗಳ ತಾಂತ್ರಿಕ ಕಾರ್ಯವೈಖರಿಯು ಅತ್ಯಂತ ನಿಖರ. ಹಳೆಯ ಕಾಲದ ಮೀಟರ್‌ಗಳಲ್ಲಿ ನೀರು ಹರಿಯುವಾಗ ಒಳಗಿನ ಚಕ್ರ ತಿರುಗುತ್ತಿತ್ತು. ಆದರೆ ಇಸ್ರೇಲ್‌ನ ಸ್ಮಾರ್ಟ್ ಮೀಟರ್‌ಗಳು ಅಲ್ಟ್ರಾಸಾನಿಕ್ ತರಂಗಗಳನ್ನು ಬಳಸುತ್ತವೆ. ಮೀಟರ್‌ನ ಒಳಗೆ ಶಬ್ದದ ತರಂಗಗಳನ್ನು ಕಳುಹಿಸಲಾಗುತ್ತದೆ. ನೀರಿನ ವೇಗಕ್ಕೆ ಅನುಗುಣವಾಗಿ ಈ ತರಂಗಗಳು ಚಲಿಸುವ ಸಮಯವನ್ನು ಲೆಕ್ಕ ಹಾಕಿ, ಹರಿಯುವ ನೀರಿನ ಪ್ರಮಾಣವನ್ನು ಮಿಲಿ-ಲೀಟರ್‌ಗಳಷ್ಟು ನಿಖರವಾಗಿ ಅಳೆಯಲಾಗುತ್ತದೆ. ಇದರಲ್ಲಿ ಚಲಿಸುವ ಭಾಗಗಳಿಲ್ಲದ ಕಾರಣ, ಸವೆತ ಉಂಟಾಗುವುದಿಲ್ಲ ಮತ್ತು ಹತ್ತು ವರ್ಷಗಳ ಕಾಲ ಯಾವುದೇ ತೊಂದರೆಯಿಲ್ಲದೆ ಕೆಲಸ ಮಾಡುತ್ತದೆ.

ಪ್ರತಿಯೊಂದು ಸ್ಮಾರ್ಟ್ ಮೀಟರ್ ಒಂದು ಸಣ್ಣ ಟ್ರಾನ್ಸ್‌ಮಿಟರ್ ಅನ್ನು ಹೊಂದಿರುತ್ತದೆ. ಇದು ಸಂಗ್ರಹಿಸಿದ ದತ್ತಾಂಶವನ್ನು ಸೆಲ್ಯುಲಾರ್ ನೆಟ್‌ವರ್ಕ್ ಅಥವಾ ರೇಡಿಯೋ ಫ್ರೀಕ್ವೆನ್ಸಿ ಮೂಲಕ ಕೇಂದ್ರ ಸರ್ವರ್‌ಗೆ ಕಳುಹಿಸುತ್ತದೆ. ರೈತರು ಮತ್ತು ಜಲ ಪ್ರಾಧಿಕಾರದ ಅಧಿಕಾರಿಗಳು ತಮ್ಮ ಸ್ಮಾರ್ಟ್‌ಫೋನ್ ಅಥವಾ ಕಂಪ್ಯೂಟರ್‌ನಲ್ಲಿ ಪ್ರತಿ ನಿಮಿಷ ಎಷ್ಟು ನೀರು ಬಳಕೆಯಾಗುತ್ತಿದೆ ಎಂಬುದನ್ನು ಲೈವ್ ಆಗಿ ನೋಡಬಹುದು.

ಸೋರಿಕೆ ಪತ್ತೆಹಚ್ಚುವುದು ಈ ಮೀಟರ್‌ಗಳ ವೈಶಿಷ್ಟ್ಯ. ನೀವು ನೀರನ್ನು ಬಳಸುತ್ತಿಲ್ಲದಿದ್ದರೂ ಮೀಟರ್‌ನಲ್ಲಿ ಸಣ್ಣ ಪ್ರಮಾಣದ ಚಲನೆ ಕಂಡುಬಂದರೆ, ಅದು ತಕ್ಷಣ 'ಸೋರಿಕೆ ಇದೆ' ಎಂಬ ಸಂದೇಶವನ್ನು ಕಳುಹಿಸುತ್ತದೆ. ಒಂದು ವೇಳೆ ಸಾಮಾನ್ಯಕ್ಕಿಂತ ಅತಿ ವೇಗವಾಗಿ ನೀರು ಹರಿಯುತ್ತಿದ್ದರೆ (ಪೈಪ್ ಒಡೆದಿದ್ದರೆ), ಮೀಟರ್ ತಾನಾಗಿಯೇ ವಾಲ್ವ್ ಅನ್ನು ಮುಚ್ಚುವ ಸಾಮರ್ಥ್ಯವನ್ನೂ ಹೊಂದಿರುತ್ತದೆ.

ಈ ಮೀಟರ್‌ಗಳು ಕೇವಲ ಮಾಹಿತಿಯನ್ನು ನೀಡುವುದಿಲ್ಲ, ಬದಲಿಗೆ ಆದೇಶಗಳನ್ನೂ ಪಾಲಿಸುತ್ತವೆ. ರೈತನು ತನ್ನ ಒಪ್ಪಂದದ ಪ್ರಕಾರ ನಿಗದಿಪಡಿಸಿದ ನೀರಿನ ಕೋಟಾವನ್ನು ತಲುಪಿದ ತಕ್ಷಣ, ಕೇಂದ್ರ ಕಚೇರಿಯಿಂದಲೇ ಆ ಹೊಲದ ನೀರಿನ ಸಂಪರ್ಕವನ್ನು ಕಟ್ ಮಾಡಬಹುದು. ಇದರಿಂದ ಅಧಿಕಾರಿಗಳು ಪ್ರತಿ ಹೊಲಕ್ಕೂ ಹೋಗಿ ವಾಲ್ವ್ ತಿರುಗಿಸುವ ಅವಶ್ಯಕತೆ ಇರುವುದಿಲ್ಲ. ಈ ಮೀಟರ್‌ಗಳು ಅತ್ಯಂತ ಕಡಿಮೆ ವಿದ್ಯುತ್ ಬಳಸುತ್ತವೆ. ಇವುಗಳಲ್ಲಿ ಅಳವಡಿಸಲಾದ ಲಿಥಿಯಂ ಬ್ಯಾಟರಿಗಳು ಹವಾಮಾನದ ಏರುಪೇರುಗಳ ನಡುವೆಯೂ 10-12 ವರ್ಷಗಳ ಕಾಲ ನಿರಂತರವಾಗಿ ಕೆಲಸ ಮಾಡುತ್ತವೆ.

ಇಸ್ರೇಲ್‌ನ ಸ್ಮಾರ್ಟ್ ಮೀಟರ್‌ಗಳು ನೀರಿನ ಬಳಕೆಯನ್ನು ಪಾರದರ್ಶಕಗೊಳಿಸಿವೆ. ಇದರಿಂದಾಗಿ ನೀರಿನ ಕಳ್ಳತನ ಸಂಪೂರ್ಣವಾಗಿ ನಿಂತಿದೆ ಮತ್ತು ಪ್ರತಿ ಹನಿ ನೀರಿಗೂ ಸರಿಯಾದ ಲೆಕ್ಕ ಸಿಗುತ್ತಿದೆ. ಇದು ಕೃಷಿ ಕ್ಷೇತ್ರದಲ್ಲಿ ಜಲ ಸಂರಕ್ಷಣೆಯ ಹೊಸ ಕ್ರಾಂತಿಯಾಗಿದೆ.

ದಿನರಾತ್ರಿಯಲಿ ಏಕಾಂತದಲಿ ಏಕೋ ಹೇನೋ ನೋವಾಗುವುದು

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಪರೂಪಕ್ಕೊಮ್ಮೆ ಅಕಸ್ಮಾತ್ತಾಗಿ ಘಟಿಸಿದ ಉಚ್ಚಾರ ದೋಷವಿದು. ಎಸ್.ಪಿ ಬಾಲಸುಬ್ರಹ್ಮಣ್ಯಂ ಐದಾರು ದಶಕಗಳಲ್ಲಿ ಹಾಡಿರುವ ಸಾವಿರಾರು ಚಿತ್ರಗೀತೆಗಳಲ್ಲಿನ ಕನ್ನಡ ಉಚ್ಚಾರ ಶುದ್ಧಾನುಶುದ್ಧ ಸ್ಪಷ್ಟಾತಿಸ್ಪಷ್ಟವೇ ಆಗಿರುತ್ತಿತ್ತು. ಆಮೇಲೆ ಬಂದ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮ ನಿರೂಪಣೆಯ ವಿಷಯದಲ್ಲಿ ಹೀಗೆನ್ನಲಾರೆವಾದರೂ, ಅದರಲ್ಲಿ ತೆಲುಗು ಛಾಯೆ ಅಲ್ಲಲ್ಲಿ ಇಣುಕುತ್ತಿತ್ತಾದರೂ, ಕನ್ನಡ ಚಿತ್ರಗೀತೆ ಹಾಡುವಾಗಿನ ಅವರ ಉಚ್ಚಾರ ಮಾತ್ರ ಅಪರಂಜಿ ಚಿನ್ನವೇ. ಆದ್ದರಿಂದಲೇ ಅಪರೂಪಕ್ಕೊಮ್ಮೆ ಅಕಸ್ಮಾತ್ತಾಗಿ ಎಂದಿದ್ದು- 'ದೇವರಗುಡಿ' ಚಿತ್ರದ 'ಮಾಮರವೆಲ್ಲೋ ಕೋಗಿಲೆ ಯೆಲ್ಲೋ...' ಹಾಡಿನ ಎರಡನೆಯ ಚರಣದಲ್ಲಿ ಏನು 'ಹೇನು' ಆದದ್ದನ್ನು. ''ದಿನರಾತ್ರಿಯಲಿ ಏಕಾಂತದಲಿ ಏಕೋ ಹೇನೋ ನೋವಾಗುವುದು...'' ಬೇಕಿದ್ದರೆ ನೀವೂ ಈಗೊಮ್ಮೆ ಕೇಳಿ ಸೂಕ್ಷ್ಮವಾಗಿ ಗಮನಿಸಿ. ಹಾಡಿನ ರೇಡಿಯೊ ಆವೃತ್ತಿಯಲ್ಲೂ, ಸಿನಿಮಾದಲ್ಲಿರುವ ಆವೃತ್ತಿಯಲ್ಲೂ 'ಹೇನೋ' ಎಂದೇ ಇದೆ! ಸ್ವಾರಸ್ಯವೆಂದರೆ ಇದೇ ಹಾಡಿನಲ್ಲಿ ಬೇರೆಡೆ ಎಲ್ಲ ಏ-ಕಾರಗಳನ್ನು ಸರಿಯಾಗಿಯೇ ಉಚ್ಚರಿಸಿರುವ ಬಾಲು ಇದೊಂದು ಕಡೆ ಮಾತ್ರ ಹೇ-ಕಾರ ತಂದಿದ್ದಾರೆ.

ಇದು ನನ್ನಲ್ಲೊಂದು ಹೊಸ ಆಲೋಚನೆಯನ್ನು ಹುಟ್ಟುಹಾಕಿತು. ಚಿ.ಉದಯಶಂಕರ್ ಬರೆದ ಸಾಹಿತ್ಯದಲ್ಲೇ 'ಹೇನೋ' ಅಂತ ಇತ್ತೇ? ದಿನರಾತ್ರಿ ಹೇನಿನ ಕಾಟ (ತುರಿಕೆ, ನೋವು) ತಾಳಲಾರದ ಹೀರೋ ''ದಿನರಾತ್ರಿಯಲಿ ಏಕಾಂತದಲಿ ಏಕೋ ಹೇನೋ ನೋವಾಗುವುದು'' ಎಂದಿರಬಹುದೇ? ಆದರೆ ಅಲ್ಲೂ ಒಂದು ವಿರೋಧಾಭಾಸ ಉಂಟಾಗುತ್ತದೆ. ಹಗಲೂ ರಾತ್ರಿಯೂ ಏಕಾಂತದಲ್ಲೇ ಇದ್ದರೆ ತಲೆಯಲ್ಲಿ ಹೇನು ಎಲ್ಲಿಂದ ಬರಲು ಸಾಧ್ಯ? ಹಾಗಾಗಿ ಆ ತರ್ಕವನ್ನು ಅಲ್ಲಿಗೇ ಬಿಟ್ಟುಬಿಟ್ಟೆ. ಇನ್ನೊಂದು ಆಲೋಚನೆ ಹೊಳೆಯಿತು. ಯಾವುದಾದರೂ ಚಿತ್ರಗೀತೆಯಲ್ಲಿ ಹೇನಿನ ಉಲ್ಲೇಖ ಆಗಿದ್ದಿದೆಯೇ? ನನ್ನ ಸೀಮಿತ ತಿಳಿವಳಿಕೆಯ ಪ್ರಕಾರ ಇಲ್ಲ. ನಾಯಕಿಯ ಜಡೆಯನ್ನು, ಮುಂಗುರುಳನ್ನು, ಕೇಶರಾಶಿಯನ್ನು ನಾಯಕನು ಹೊಗಳುವ ಹಲವಾರು ಹಾಡುಗಳಿವೆ: ''ನಿಲ್ಲು ನೀ ನಿಲ್ಲು ನೀ ನೀಲವೇಣಿ...'' (ಅಮರಶಿಲ್ಪಿ ಜಕಣಾಚಾರಿ), ''ಅಡಿಯ ಮುಟ್ಟ ನೀಳ ಜಡೆ ಮುಡಿಯ ತುಂಬ ಹೂವು ಹೆಡೆ...'' (ಗೌರಿ), ''ಹರಡಲು ಮೋಡ ಹೆಣೆಯಲು ಹಾವು ಏನದು ಹೇಳು... ನಿನ್ನಯ ಜಡೆಯೇ ಹಾವಿನ ಹೆಡೆಯೂ ಮೋಡವೇ ಮುಂಗುರುಳು...'' (ತಂದೆಮಕ್ಕಳು), ''ಕಣ್ಣೆರಡು ಕಮಲಗಳಂತೆ ಮುಂಗುರುಳು ದುಂಬಿಗಳಂತೆ...'' (ಕವಿರತ್ನ ಕಾಳಿದಾಸ) ಇತ್ಯಾದಿ. ಹಿಂದಿಯಲ್ಲೂ ಬೇಕಾದಷ್ಟು ಇವೆ: ''ಯೇ ರೇಷ್‌ಮೀ ಜುಲ್ಫೇಂ...'' (ದೋ ರಾಸ್ತೇ), ''ಯೇ ಜುಲ್ಫ್ ಅಗರ್ ಖುಲ್‌ಕೇ ಬಿಖರ್ ಜಾಯೇ ತೋ ಅಚ್ಛಾ...'' (ಕಾಜಲ್) ವಗೈರಾ. ಅಂದರೆ, ಚಿತ್ರಗೀತೆಗಳಲ್ಲಿ ಉಲ್ಲೇಖಯೋಗವನ್ನು ಹೇನು ಕೂದಲೆಳೆಯಿಂದ ತಪ್ಪಿಸಿಕೊಂಡಿದೆ!

ಚಿತ್ರಸಾಹಿತ್ಯದಲ್ಲಿ ಇಲ್ಲದಿದ್ದರೂ ಒಟ್ಟಾರೆಯಾಗಿ ಸಾಹಿತ್ಯದಲ್ಲಿ ಹೇನು ಕಾಣಿಸಿಕೊಂಡಿದೆಯೇ? ಇದು ನನ್ನ ನೆಕ್ಸ್ಟ್ ಆಲೋಚನೆ. ಸಾಹಿತ್ಯವೆಂದರೆ ಯಾವ ರೀತಿಯದು? ಗೂಗಲ್‌ನಲ್ಲಿ 'ಹೇನು' ಎಂದು ಎರಡಕ್ಷರ ಟಂಕಿಸಿ ಹುಡುಕಿದಾಗ ದಬದಬನೆ ಬರುತ್ತವಲ್ಲಾ ಪುಟಗಳು- ''ತಲೆಯಲ್ಲಿ ಹೇನು ಇದ್ಯಾ? ಹೀಗೆ ಮಾಡಿದ್ರೆ ಸಾಕು!'', ''ತಲೆಹೇನು ಪರಿಹಾರ ಏನು?'', ''ಹೇನು-ಕೂರೆ: ಸಮಸ್ಯೆ ಮತ್ತು ಪರಿಹಾರ'', ''ಹೇನು ಸೀರು ಹೋಗಲು ಅದ್ಭುತ ಮನೆಮದ್ದು'' ರೀತಿಯ ಗೃಹಶೋಭಾ ಧಾಟಿಯ ಬರಹಗಳ ಬಗ್ಗೆಯಲ್ಲ ನಾನು ಹೇಳ್ತಿರೋದು. ಹೇನಿನ ಮೇಲೆಯೇ(ಹೇನನ್ನು ಮುಖ್ಯ ವಿಷಯವನ್ನಾಗಿಸಿ) ಬರೆದ ಕವನಗಳು, ಲಲಿತಪ್ರಬಂಧಗಳು, ಲಹರಿಗಳು, ಅಂಕಣಬರಹಗಳು ಇತ್ಯಾದಿ. ಅಂಕಣಬರಹಗಳು ಅಂತ ಮುದ್ದಾಂ ನೆನಪಿಸಿಕೊಂಡಿದ್ದೇಕೆಂದರೆ- ಇದೇ 'ವಿಶ್ವವಾಣಿ' ಪತ್ರಿಕೆಯ ಸಹ-ಅಂಕಣಕಾರ ಶಿಶಿರ ಹೆಗಡೆ ಎರಡು ವರ್ಷಗಳ ಹಿಂದೊಮ್ಮೆ ''ಕಿರಿಕಿರಿಯ ಹೇನು ಅವಸಾನದ ಅಂಚಿನಲ್ಲಿದೆಯೇ?'' ಎಂಬೊಂದು ಚಂದದ ಲೇಖನವನ್ನು 'ಶಿಶಿರಕಾಲ' ಅಂಕಣದಲ್ಲಿ ಬರೆದಿದ್ದಾರೆ. ಅದರಲ್ಲಿ ಹೇನು ಎಂಬ ಪರಾವಲಂಬಿ ಜೀವಿಯ ರೋಚಕ ಸಾಹಸಮಯ ಬದುಕು, ಜೀವವಿಕಾಸದಲ್ಲಿ ಹೇನು ಉಳಿದು ಬೆಳೆದು ಬಂದ ಬಗೆ, ಕ್ವೀನ್ ವಿಕ್ಟೋರಿಯಾ ಆಳ್ವಿಕೆಯ ಕಾಲದಲ್ಲಿ ಲಂಡನ್ನಿನ ಆಸ್ಪತ್ರೆಗಳಲ್ಲಿ ಹೇನುಗಳನ್ನು ನಿಯಂತ್ರಿಸಲಿಕ್ಕೆಂದೇ ಕೂಲಿಗಳ ನೇಮಕಾತಿ, ಅವರಿಗೆ ವೈದ್ಯರಿಗಿಂತಲೂ ಜಾಸ್ತಿ ಸಂಬಳ, ಹೇನೆಂದರೆ ಕಿರಿಕಿರಿಯ ದ್ಯೋತಕ, ಅದೊಂದು ಪಿಡುಗು, ತಲೆಯಲ್ಲಿ ಹೇನಾಗಿದೆಯೆಂದರೆ ಯಾವುದೋ ದೇವರ ಮುನಿಸು, ಕರ್ಮಫಲ ಎಂಬ ನಂಬಿಕೆ, ಮನುಷ್ಯನ ಹೋರಾಟದ ಬದುಕಿನ ರಂಜನೆಯ ವರ್ಣನೆಗೂ ಬಳಕೆ, ಗಲಿವರ್ಸ್ ಟ್ರಾವೆಲ್ಸ್ ಕಥೆಯ ಚಲನಚಿತ್ರದಲ್ಲಿ ಹೀರೋ ಅತಿ ಚಿಕ್ಕ ಗಾತ್ರದ ಮನುಷ್ಯರುಳ್ಳ ದ್ವೀಪಕ್ಕೆ ಹೋದಾಗ ಅವನ ತಲೆಯಲ್ಲಿದ್ದ ಹೇನುಗಳು ಅಲ್ಲಿನವರಿಗೆ ಸಾಕುಪ್ರಾಣಿಗಳ ಗಾತ್ರದಲ್ಲಿ ಕಾಣಿಸುವುದು, ಪಾಪ ಮಾಡಿದವರನ್ನು ಹೇನು ತುಂಬಿದ ಬಾವಿಗೆ ದೂಡುವ ಶಿಕ್ಷೆ, ಈಗ ರೋಹಿಂಗ್ಯಾಗಳ ಕ್ಯಾಂಪುಗಳಲ್ಲಿ ಹೇನು ಕಾಟ... ಮುಂತಾದ ವೆರಿ ವೆರಿ ಇಂಟರೆಸ್ಟಿಂಗ್ ವಿಚಾರಗಳನ್ನು ಪೋಣಿಸಿದ್ದಾರೆ.

ಅಂತೆಯೇ ವಿಶ್ವವಾಣಿ ಪತ್ರಿಕೆಯ ಇನ್ನೊಬ್ಬ ಅಂಕಣಕಾರ ಡಾ. ನಾ.ಸೋಮೇಶ್ವರ ಸಹ ''ನೆಪೋಲಿಯನ್‌ನನ್ನು ಸೋಲಿಸಿದ ಹೇನು!'' ಎಂಬ ಶೀರ್ಷಿಕೆಯ ಲೇಖನವನ್ನು 'ಹಿಂದಿರುಗಿ ನೋಡಿದಾಗ' ಅಂಕಣದಲ್ಲಿ ಮೂರು ವರ್ಷಗಳ ಹಿಂದೆ ಬರೆದಿದ್ದಾರೆ. ಲಕ್ಷಾಂತರ ವರ್ಷಗಳ ಹಿಂದಿನಿಂದಲೇ, ಮನುಷ್ಯ ಹುಟ್ಟುವುದಕ್ಕಿಂತ ಮೊದಲೇ ಈ ಭೂಮಿಯಲ್ಲಿ ಹೇನುಗಳು ಬೆಳೆದುಕೊಂಡು ಬಂದಿರುವುದು, ತಲೆಹೇನು ಒಡಲಹೇನು, ಜನನಾಂಗ ಹೇನು ಎಂದು ಪ್ರಭೇದಗಳು, ಸಾವಿರಾರು ವರ್ಷಗಳ ಹಿಂದೆಯೂ ಮನುಷ್ಯನ ತಲೆಯಲ್ಲಿ ಹೇನುಗಳಿರುತ್ತಿದ್ದುವು ಮತ್ತು ಅವುಗಳನ್ನು ತೆಗೆಯಲಿಕ್ಕಾಗುವ ಬಾಚಣಿಗೆಗಳ ಬಳಕೆ ಇತ್ತು ಎಂದು ಈಜಿಪ್ಟ್, ಇಸ್ರೇಲ್, ಬ್ರೆಝಿಲ್ ಮುಂತಾದ ದೇಶಗಳಲ್ಲಿ ಉತ್ಖನನದಿಂದ ತಿಳಿದುಬಂದಿರುವುದು, ಅಪ್ರತಿಮ ಸುಂದರಿ ರಾಣಿ ಕ್ಲಿಯೋಪಾತ್ರಳ ತಲೆಗೂದಲಲ್ಲೂ ಹೇನುಗಳಿದ್ದವು, ಪ್ರಾಚೀನ ಈಜಿಪ್ಟ್ ಸಂಸ್ಕೃತಿಯಲ್ಲಿ ಬಾಯಿತುಂಬ ಖರ್ಜೂರವನ್ನು ಜಗಿದು ಅದಕ್ಕೆ ಒಂದಷ್ಟು ನೀರನ್ನು ಸೇರಿಸಿ ಹೇನುಗಳಿದ್ದವರ ತಲೆಮೇಲೆ ಉಗಿಯುವ ಕ್ರಮ, ಪ್ರಾಚೀನ ಚೀನಾ ದೇಶದಲ್ಲಿ ಹೇನುಗಳನ್ನು ನಿವಾರಿಸಲು ಪಾದರಸ ಮತ್ತು ಶಂಖಪಾಷಾಣದ ಲವಣಗಳ ಬಳಕೆ, ಪೈರೆಥ್ರಮ್ ಎಂಬ ರಾಸಾಯನಿಕ ಪುಡಿ ಬಳಸಿ ಹೇನುಗಳ ನಿಯಂತ್ರಣ, ಮಾರ್ಕೊಪೋಲೊ ಅದೇ ಪುಡಿಯನ್ನು ಚೀನಾದಿಂದ ತಂದು ಯುರೋಪಿಯನ್ನರಿಗೆ ಪರಿಚಯಿಸಿದ್ದು, ಜನನಾಂಗ ಹೇನುಗಳು ಯುರೋಪಿಯನ್ನರಿಂದ ಭಾರತೀಯರಿಗೆ ಹರಡುವಂತಾದದ್ದು (ವಸುಧೇಂದ್ರರ 'ತೇಜೋತುಂಗಭದ್ರ' ಕಾದಂಬರಿಯಲ್ಲೂ ಇದರ ಪ್ರಸಂಗ ಇರುವುದು), ಒಡಲ ಹೇನುಗಳಿಂದ ಬರುವ ಟೈಫಸ್ ರೋಗ, ನೆಪೋಲಿಯನ್ ರಷ್ಯದ ಮೇಲೆ ಯುದ್ಧಕ್ಕೆ ಹೊರಟಾಗ ಟೈಫಸ್‌ನಿಂದಾಗಿ ಹಲವಾರು ಸೈನಿಕರ ಸಾವು, ಎರಡನೆಯ ಪ್ರಪಂಚಯುದ್ಧದಲ್ಲಿ ಬ್ರಿಟಿಷ್ ಮತ್ತು ಜರ್ಮನ್ ಸೈನಿಕರಲ್ಲನೇಕರು ಟೈಫಸ್‌ಗೆ ತುತ್ತಾದದ್ದು, ವಿಜ್ಞಾನಿಗಳು ಸೈನಿಕರ ಬರಿಮೈಮೇಲೆ ಡಿಡಿಟಿ ಸಿಂಪಡಿಸಿ ಹೇನುಗಳನ್ನು ಕೊಂದದ್ದು... ಇತ್ಯಾದಿ ಕುತೂಹಲಕಾರಿ ಅಂಶಗಳು ಆ ಅಂಕಣಬರಹದಲ್ಲಿವೆ.

'ಪ್ರಜಾವಾಣಿ'ಯಲ್ಲಿ ವಿಜ್ಞಾನವಿಶೇಷ ಅಂಕಣ ಬರೆಯುವ ನಾಗೇಶ ಹೆಗಡೆ, ಅಂಕಣಬರಹಗಳ ತಮ್ಮದೊಂದು ಪುಸ್ತಕಕ್ಕೆ 'ನ್ಯಾನೊ ಹೇನು' ಎಂದೇ ಹೆಸರಿಟ್ಟಿರುವುದನ್ನು ಕೂಡ ಇಲ್ಲಿ ಸ್ಮರಿಸಬಹುದು. ಹಾಗೆಯೇ ಅಂಕಣಬರಹವೆಂದಾಗ ಇದನ್ನೂ ನೆನಪಿಸಿಕೊಳ್ಳಲೇಬೇಕು. 15 ವರ್ಷಗಳ ಹಿಂದೆ 'ವಿಜಯ ಕರ್ನಾಟಕ' ಪತ್ರಿಕೆಯ 'ಪರಾಗಸ್ಪರ್ಶ' ಅಂಕಣದಲ್ಲಿ ನಾನೂ ಒಂದು ಹೇನು ಪುರಾಣ ಬರೆದಿದ್ದೆ. ''ಹೇನು ಹೆಕ್ಕೋ ಹೆಂಗಸಿಗೆ ಡಿಮಾಂಡಪ್ಪೊ ಡಿಮಾಂಡು'' ಎಂದು ಶೀರ್ಷಿಕೆ. ನಿಜವಾಗಿ ಅದು ಪುರಾಣವಲ್ಲ, ಅಮೆರಿಕದ ರಾಜಧಾನಿ ವಾಷಿಂಗ್ಟನ್ ಡಿಸಿಯಲ್ಲಿ ಹೇನುಗಾರಿಕೆ ಉದ್ಯಮ ನಡೆಸಿದ ಕೆರೆನ್ ಫ್ರಾಂಕೊ ಎಂಬ ಮಹಿಳೆಯ ಜೀವನಗಾಥೆ. ''ಆರ್ಟ್ ಟೀಚರ್ ವೃತ್ತಿಯಲ್ಲಿದ್ದ ಕೆರೆನ್ ತನ್ನ ಮಗಳ ಶಾಲೆಯಲ್ಲಿ ಹುಡುಗಿಯರಿಗೆ ಹೇನಿನ ಕಾಟ ವಿಪರೀತವಾದಾಗ ಶಾಲೆಯಿಂದ ಅನುಮತಿ ಪಡೆದು ಅವರೆಲ್ಲರ ತಲೆಯ ಹೇನು ನಾಶದ ದೀಕ್ಷೆ ತೊಟ್ಟಳು. ಅದರಲ್ಲಿ ಯಶಸ್ವಿಯಾಗಿ ನೆರೆಕೆರೆಯಲ್ಲೆಲ್ಲ ಪ್ರಸಿದ್ಧಳಾದಳು. ಹೇನು ನಿವಾರಣೆಗೆಂದು ಕೆರೆನ್‌ಗೆ ತಲೆ ಒಪ್ಪಿಸುವವರ ಸಂಖ್ಯೆ ಹೆಚ್ಚಾದಾಗ 'ತಲಾ' 18 ಡಾಲರ್ (ಯಹೂದ್ಯ ಸಂಪ್ರದಾಯದ ಕೆರೆನ್‌ಗೆ ಪವಿತ್ರಸಂಖ್ಯೆ) ಶುಲ್ಕ ವಸೂಲಿ ಮಾಡತೊಡಗಿದಳು. ಜಮೆಯಾದ ಹಣವನ್ನು ದತ್ತಿನಿಧಿಗೆ ದಾನಮಾಡಿದಳು. 'ವಾಷಿಂಗ್ಟನ್ ಪೋಸ್ಟ್' ಪತ್ರಿಕೆಯು ಆಕೆಯ ಬಗ್ಗೆ ಒಂದು ನುಡಿಚಿತ್ರ ಪ್ರಕಟಿಸಿತು. ಅವಳಿಗೆ ದೂರವಾಣಿ ಕರೆಗಳು ಇ-ಮೇಲ್‌ಗಳು ಪ್ರವಾಹದೋಪಾದಿ ಬರತೊಡಗಿದವು. ಒಂದೆರಡು ತಿಂಗಳಿಗೆಲ್ಲ ಕೆರೆನ್ ತನ್ನ ಆರ್ಟ್ ಟೀಚಿಂಗ್ ವೃತ್ತಿಯನ್ನು ಬಿಟ್ಟು ಪೂರ್ಣಾವಧಿ ಹೇನುಗಾರಿಕೆ ಆರಂಭಿಸಿದಳು. Lice and Advices ಎಂಬ ಕಂಪನಿ ಸ್ಥಾಪಿಸಿದಳು. ಪುಟ್ಟದೊಂದು ಆಫೀಸ್-ಕಮ್-ಕ್ಲಿನಿಕ್ ತೆರೆದಳು. ಸೆಕ್ರೆಟರಿ ಕೆಲಸಕ್ಕೆ ಅವಳ ಗಂಡನೇ ಮುಂದಾದನು. ಗಂಟೆಗೆ 85 ಡಾಲರ್ ಶುಲ್ಕ. ಮನೆಗೆ ಬಂದು ಸೇವೆ ಒದಗಿಸುವುದಾದರೆ ಗಂಟೆಗೆ 100 ಡಾಲರ್ ಮತ್ತು ಪ್ರಯಾಣವೆಚ್ಚ ಪ್ರತ್ಯೇಕ. ಪೀಕ್ ಸೀಸನ್‌ನಲ್ಲಿ ದಿನಕ್ಕೆ ಐದರಿಂದ ಆರು ಸೆಷನ್‌ಗಳು. ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ ಹೆಚ್ಚು ಡಿಮಾಂಡು. ಆಗಷ್ಟೇ ಬೇಸಿಗೆರಜೆ ಮುಗಿದು ಹೊಸ ಶೈಕ್ಷಣಿಕ ವರ್ಷ ಆರಂಭವಾಗಿರುತ್ತದೆ. ರಜೆಯಲ್ಲಿ ಸಮ್ಮರ್‌ಕ್ಯಾಂಪ್, ನೆಂಟರಮನೆ ಅಲ್ಲಿ ಇಲ್ಲಿ ಹೋಗಿಬಂದ ಮಕ್ಕಳ ತಲೆ ಹೇನುಗಳಿಗೆ ಅಭಯಾರಣ್ಯ ಆಗಿರುತ್ತದೆ; ಅದರಿಂದ ಮುಕ್ತಿಹೊಂದಲು ಹೆತ್ತವರು ಕೆರೆನ್ ಬಳಿಹೋಗುತ್ತಾರೆ. ಕೆರೆನ್‌ಳ ಯಶಸ್ಸಿನಿಂದ ಪ್ರೇರಿತರಾಗಿ ಈಗ ಅಮೆರಿಕದ ಬೇರೆ ನಗರಗಳಲ್ಲೂ ಹೇನುಗಾರಿಕೆ ಆರಂಭಿಸಿದವರಿದ್ದಾರೆ. Hairy fairies ಎಂಬ ಕಂಪನಿಯು ಪ್ರಮುಖ ನಗರಗಳಲ್ಲಿ ಶಾಖೆಗಳನ್ನೂ ಹೊಂದಿದೆ...'' ಹೀಗೆ ಸಾಗಿತ್ತು ಆ ಹೇನುಪುರಾಣ, ಅಲ್ಲ, ಹೇನುವರ್ತಮಾನ.

''ಹೇನು ಪದವೊಂದೇ ಸಾಕು, ಹಲವರಿಗೆ ಕೈಜಗ್ಗಿ ಹಿಡಿದೆಳೆದು ನೆನಪಿನಂಗಳಕ್ಕೆ ಒಯ್ದ ಅನುಭವವಾದೀತು. ಬಾಲ್ಯ ನೆನಪಾಗಿ ದುಃಖಮಿಶ್ರಿತ ಆನಂದದ ಕಣ್ಣೀರು ಹರಿದೀತು. ಫ್ರಾಕ್ ತೊಡುತ್ತಿದ್ದ ವಯಸ್ಸಿನಲ್ಲಿ ಪಕ್ಕಾ ಹೇನುಬುರುಕಿಯೊಬ್ಬಳು ಗೆಳತಿಯಾಗಿದ್ದದ್ದು, ಅವಳ ಮನೆಗೆ ಸ್ಲೀಪ್‌ಓವರ್‌ಗೆ ಹೋಗಿ ಹೇನುಗಳನ್ನು ರಖಂ ಆಗಿ ಆಮದುಮಾಡಿಕೊಂಡಿದ್ದು ನೆನಪಾದೀತು. ಕೆಲವರಿಗೆ ಅಮ್ಮನ ನೆನಪು ಒತ್ತರಿಸಿ ಬರಬಹುದು. ಕೂದಲು ಬಾಚುವಾಗ 'ಸ್...' ಎಂದು ಬಾಯಿಂದ ಶಬ್ದಹೊರಡಿಸಿ ಹೇನುಗಳಿಗೆ ಪಂಥಾಹ್ವಾನ ನೀಡಿ ಅವುಗಳನ್ನು ಹೊರಬರುವಂತೆ ಮಾಡುತ್ತಿದ್ದ ಅಮ್ಮ, ಬಾಚಣಿಗೆಯನ್ನು ನೆಲಕ್ಕೆ ಕೊಡವಿ ಉದುರಿದ ಹೇನುಗಳನ್ನು, ಮೊಟ್ಟೆಗಳನ್ನು ಉಗುರುಗಳಿಂದ 'ಚಟ್ ಚಟ್' ಎಂದು ಸಶಬ್ದವಾಗಿ ಸಂಹರಿಸುತ್ತಿದ್ದ ಅಕ್ಕ, ತುಳಸಿದಳದ ರಸವನ್ನು ಎಣ್ಣೆಯಲ್ಲಿ ಕಾಯಿಸಿ ತಲೆಗೆ ಹಚ್ಚಿಕೊಳ್ಳುವುದೇ ಮೊದಲಾದ ಮನೆಮದ್ದುಗಳನ್ನು ಉಪದೇಶಿಸುತ್ತಿದ್ದ ಅಜ್ಜಿ ನೆನಪಾಗಬಹುದು. ಶಾಲೆಯಲ್ಲಿ ಒಬ್ಬಿಬ್ಬರು ಹೇನುಬುರುಕಿ ಸಹಪಾಠಿಗಳಿದ್ದದ್ದು, 'ಜೇನು ಬೇಕೇ ಜೇನು?' ಕನ್ನಡ ಪಾಠದ ಶೀರ್ಷಿಕೆಯನ್ನು ಮಾಸ್ತರರು ಬೇಕಂತಲೇ 'ಹೇನು ಬೇಕೇ ಹೇನು?' ಎಂದು ಓದಿ ತಮಾಷೆಮಾಡಿದ್ದು. ನೆನಪುಗಳದು ಅದ್ಭುತಶಕ್ತಿ. ಅವುಗಳ ನಾಗಾಲೋಟಕ್ಕೆ ಕುದುರೆಗಳೇ ಬೇಕಂತಿಲ್ಲ. ಹೇನುಗಳ ಸಾರೋಟಿನಲ್ಲೂ ಅವು ಮೆರವಣಿಗೆ ಹೊರಡಬಲ್ಲವು. ನೀವು ಹೇನಂತೀರಿ?'' ಎಂದು ಆ ಅಂಕಣಬರಹದ ಮುಕ್ತಾಯ.

ಆದರೆ ಅಂಕಣಬರಹಗಳನ್ನು ಶುದ್ಧ-ಶಿಷ್ಟ ಸಾಹಿತ್ಯ ಎಂದು

ಕೆಲವರು ಒಪ್ಪುವುದಿಲ್ಲ. ಆದ್ದರಿಂದ ಬೇರೆ ಉದಾಹರಣೆಗಳಿವೆಯೇ ಹುಡುಕೋಣ. ಪಂಜೆ ಮಂಗೇಶರಾಯರು ಮಕ್ಕಳಿಗೆಂದು ಬರೆದ ಕಥೆಗಳಲ್ಲಿ 'ಹೇನು ಸತ್ತು ಕಾಗೆ ಬಡವಾಯಿತು' ಅಂತೊಂದು ಕಥೆ. ಮಠದ ಗೋಡೆಯಲ್ಲಿ ವಾಸವಾಗಿದ್ದ ಹೇನಿಗೂ ಅರಳಿಮರದ ಮೇಲೆ ವಾಸವಾಗಿದ್ದ ಕಾಗೆಗೂ ಸ್ನೇಹ. ಹಬ್ಬದೂಟಕ್ಕೆ ಹೇನಿನಿಂದ ಕಾಗೆಗೆ ಆಹ್ವಾನ. ಪಾಯಸ ತಯಾರಿಸುತ್ತಿದ್ದಾಗ ಅಕಸ್ಮಾತ್ತಾಗಿ ಅದರೊಳಗೆ ಬಿದ್ದು ಹೇನಿನ ಅಪಮೃತ್ಯು. ಕಾಗೆಗೆ ಬೇಸರ. ಮುಂದೆ ಅರಳಿಮರಕ್ಕೆ, ಬಸವನಿಗೆ, ಕೆರೆಗೆ, ಮುದುಕಿಗೆ, ಮುದುಕನಿಗೆ, ಮಗುವಿಗೂ ಬೇಸರ. ''ಹೇನು ಸತ್ತು ಕಾಗೆ ಬಡವಾಯಿತು; ಅರಳಿ ಎಲೆ ಉದುರಿಹೋಯಿತು; ಬಸವನ ಕೊಂಬು ಮುರಿದುಹೋಯಿತು; ಕೆರೆಯ ನೀರು ಬತ್ತಿಹೋಯಿತು; ಮುದುಕಿಯ ಸೊಂಟ ಬಗ್ಗಿಹೋಯಿತು; ಮುದುಕನ ತಲೆ ನರೆತುಹೋಯಿತು; ಮಗುವಿನ ಮಾತು ಉಗ್ಗಿಹೋಯಿತು; ಸೂರ್ಯನ ಬಿಂಬ ಕಂತಿಹೋಯಿತು'' ಎಂದು ಸರಣಿಘಟನೆಗಳು. ಮಾರನೆಯ ದಿನ ಸೂರ್ಯೋದಯವಾದಾಗ ಆಶ್ಚರ್ಯ! ''ಮಗುವಿನ ಮಾತು ಸರಿಯಾಯಿತು; ಮುದುಕನ ಕೂದಲು ಕಪ್ಪಗಾಯಿತು; ಮುದುಕಿಯ ಸೊಂಟ ನೆಟ್ಟಗಾಯಿತು; ಕೆರೆಯ ನೀರು ಉಕ್ಕಿಬಂದಿತು; ಬಸವನ ಕೊಂಬು ಉದ್ದವಾಯಿತು; ಅರಳಿ ಎಲೆ ಚಿಗುರಿತು; ಕಾಗೆಯ ಮೈ ತುಂಬಿಕೊಂಡಿತು; ಹೇನಿಗೆ ತಿರುಗಿ ಜೀವ ಬಂತು; ಆಮೇಲೆ ಎಲ್ಲರೂ ಸುಖದಲ್ಲಿ ಇದ್ದರು'' ಘಟನಾವಳಿಯ ಅವರೋಹಣ. ನನಗಿದರಲ್ಲಿ ತುಂಬ ಆಶ್ಚರ್ಯ ಎನಿಸುವುದು ಕಥೆಯ ಆರಂಭದಲ್ಲಿ ''ಹೇನು ಕಾಗೆಯನ್ನು ಊಟಕ್ಕೆ ಕರೆಯಿತು. ಬೆಳಗ್ಗೆ ಎದ್ದು, ಸೆಗಣಿ ಬಳಿದು, ಮುಸುರೆ ತೊಳೆದು, ಸ್ನಾನ ಮಾಡಿತು; ಒಲೆಯಲ್ಲಿ ಬೆಂಕಿ ಹೊತ್ತಿಸಿ, ನೀರು ಮೊಗೆದು ಅಡುಗೆ ಮಾಡಿತು. ಪಾಯಸಕ್ಕೆ ಪಾತ್ರೆಯನ್ನು ಒಲೆಯಮೇಲೆ ಇಟ್ಟು ಪಾತ್ರೆಯಲ್ಲಿ ಬೆಲ್ಲ ಹಾಕಿತು...'' ಎಂಬ ವಿವರಣೆಯ ಬಳಿಕ ''ಪಾಯಸವನ್ನು ಸಟ್ಟುಗದಿಂದ ಕೆದಕುವಾಗ ಆ ಹೇನು ಪಾಯಸದಲ್ಲಿ ಜಾರಿ ಬಿದ್ದು ಸತ್ತುಹೋಯಿತು'' ಎಂಬ ಭಾಗ! ಅಷ್ಟೆಲ್ಲ ಕೆಲಸಗಳನ್ನು ಮನುಷ್ಯರಂತೆ ನೀಟಾಗಿ ಮಾಡಿದ್ದ ಹೇನು ಪಾಯಸ ಕೆದಕುವಾಗ ಸತ್ತು ಹೋಗುವುದೆಂದರೇನು? ಯಾರೋ ಅಡುಗೆಭಟ್ಟನು ಸಟ್ಟುಗದಿಂದ ಪಾಯಸ ಕೆದಕುತ್ತಿದ್ದಾಗ ಆತನ ತಲೆಯಲ್ಲಿದ್ದ ಹೇನು ಪಾಯಸದಲ್ಲಿ ಬಿದ್ದು ಸತ್ತುಹೋಯಿತು ಅಂತಿದ್ದರೆ ಒಪ್ಪಬಹುದಪ್ಪಾ. ಇದು ಹಾಗಲ್ಲ ಸಟ್ಟುಗದಿಂದ ಪಾಯಸವನ್ನು ಕೆದಕುತ್ತಿದ್ದದ್ದು ಸ್ವತಃ ಹೇನೇ. ಹಾಗಿದ್ದರೆ ಅದು ಸಟ್ಟುಗವನ್ನೇ ಪೋಲ್‌ವಾಲ್ಟ್‌ನ ಪೋಲನ್ನಾಗಿ ಮಾಡಿಕೊಂಡು ಪಾಯಸದಲ್ಲಿ ಬೆಂದಿತೇ ಎಂದು ಬಗ್ಗಿನೋಡುವಾಗ ಸಟ್ಟುಗದ ತುದಿಯಿಂದ ಬಿದ್ದು ಸತ್ತಿರಬಹುದೇ? ಇರಲಿ, ಕಥೆಯ ಕೊನೆಗೆ ಪುನರ್ಜನ್ಮ ಪಡೆಯಿತಲ್ಲ ಅದೇ ಸಮಾಧಾನ.

ಸರ್ವಜ್ಞನ ವಚನಗಳಲ್ಲೂ ಹೇನು ಕಾಣಿಸಿದೆ: ''ಜಡೆಯ ಕಟ್ಟದ ಮುನ್ನ ಒಡನೆ ಬಂದುದು ಮಾರಿ। ಗುಡುಗುಡಿಸಿ ಹೇನು ಹರಿಯಲು ಬೋಳಯ್ಯ। ಕಡು ನಗುವನಯ್ಯ ಸರ್ವಜ್ಞ॥'' ಅಂತ ಬೋಳುತಲೆಯವರ ಭಾಗ್ಯ. ''ಹೇನು ಕೂರೆಗಳನ್ನು ತಾನಾಗಿ ಜಿನ ಕೊಲ್ಲ। ಸ್ಥಾನ ಪಲ್ಲಟವ ಮಾಡದಡೆ ಆ ಮೇಲೆ। ಏನಾದುದರಿಯ ಸರ್ವಜ್ಞ॥'' ಅಂತ ಇನ್ನೊಂದು, ವಿಧಿಲೀಲೆಯ ಬಗ್ಗೆ. ಫೇಸ್‌ಬುಕ್‌ನಲ್ಲಿ ಸಿಕ್ಕಿದ, ರವಿ ಕೋಡಮಗ್ಗಿ ಎಂಬುವರ ಒಂದು ಚೌಪದಿಯೂ ಉಲ್ಲೇಖಾರ್ಹವೇ. ''ತಿಳಿನೀಲಿ ಬಾನ ತಾರೆಯಂತೆ ನೀನು। ಬಿಳಿಹಾಳೆ ಮೇಲೊಂದ ಕವಿತೆ ಗೀಚಲೇನು? ರಂಗು ಬಳಿದ ತುಟಿಯಲಿ ಸಿಹಿಯಾದ ಜೇನು। ಹೊಟ್ಟೆಲ್ಲದ ತಲೆಯಲಿ ತುಂಬಿತ್ತು ಹೇನು!'' ಇಂಗ್ಲಿಷ್‌ನಲ್ಲೂ Lice Poetry ಸಮೃದ್ಧ ಬೆಳೆ ಇದೆ. ರಾಬರ್ಟ್ ಬರ್ನ್ಸ್ ಎಂಬ ಸ್ಕಾಟಿಷ್ ಕವಿಯ To A Louse, On Seeing One on a Lady's Bonnet at Church ಪ್ರಖ್ಯಾತ ಕವಿತೆ. ಡಬ್ಲ್ಯು.ಎಸ್ ಮರ್ವಿನ್‌ನ The Lice, ಆರ್ಥರ್ ರಿಂಬೌಡ್‌ನ The Seakers of Lice, ಐಸಾಕ್ ರೋಸೆನ್‌ಬರ್ಗ್‌ನ Louse Hunting ಕೂಡ. ಒಟ್ಟಾರೆಯಾಗಿ ಕೊಳೆಬುರುಕತನ, ಸಮರಕ್ಷೋಭೆ ಇತ್ಯಾದಿಗಳ ಅಭಿವ್ಯಕ್ತಿಗೆ ಹೇನುಗಳನ್ನು ರೂಪಕವಾಗಿಸಿವೆ ಈ ಕವಿತೆಗಳು.

ಆದರೆ ಶೃಂಗಾರರಸದ ಉತ್ಕಟತೆಗೂ ಹೇನನ್ನು ಬಳಸಬಹುದೇ? ಅದು ನಮ್ಮ ಸಂಸ್ಕೃತ ಕವಿಗಳಿಗಷ್ಟೇ ಸಾಧ್ಯ! ಇಲ್ಲಿದೆ ನೋಡಿ ಅನಾಮಧೇಯ ಕವಿಯೊಬ್ಬನ ರಚನೆ, ಸುಭಾಷಿತ ರತ್ನಕೋಶದಿಂದ: ''ಸ ಖಲು ಸುಕೃತಿಭಾಜಾಮಗ್ರಣೀಃ ಸೋಽತಿಧನ್ಯೋ। ವಿನಿಹಿತಕುಚಕುಂಭಾ ಪೃಷ್ಠತೋ ಯನ್ಮೃಗಾಕ್ಷೀ। ಬಹಲತರ ನಖಾಗ್ರಕ್ಷೋದ ವಿನ್ಯಸ್ತಮಾರ್ಗೇ। ಶಿರಸಿ ಟಸಿತಲಿಕ್ಷಾಂ ಹಂತಿ ಹೂಂಕಾರಗರ್ಭಮ್॥'' ಇದರ ಭಾವಾರ್ಥ: ಅವನು ನಿಜಕ್ಕೂ ಪುಣ್ಯಕಾರ್ಯ ಮಾಡಿದವರಲ್ಲಿ ಶ್ರೇಷ್ಠನು, ಅತ್ಯಂತ ಭಾಗ್ಯವಂತನು. ಜಿಂಕೆಕಣ್ಣುಗಳ ಪ್ರೇಯಸಿಯು ಕುಂಭಗಳಂತೆ ತುಂಬಿ ಗಟ್ಟಿಯಾದ ಸ್ತನಗಳನ್ನು ಅವನ ಬೆನ್ನಿಗೆ ಒತ್ತಿಕೊಂಡು, ಉಗುರುಗಳ ತುದಿಗಳಿಂದ ಅವನ ತಲೆಯ ಕೂದಲಿನಲ್ಲಿ ಹಲವಾರು ದಾರಿಗಳನ್ನು ಬಿಡಿಸುತ್ತಿದ್ದಾಳೆ. ಬಳಿಕ ಹೇನಿನ ಮೊಟ್ಟೆಯನ್ನು 'ತ್ಸ್' ಎಂದು ಶಬ್ದಮಾಡುತ್ತಾ ತೆಗೆದು ಹಾಕಿ, ಉನ್ಮಾದದಿಂದ 'ಹೂಂ' ಎನ್ನುತ್ತಿದ್ದಾಳೆ. ಆ ಕ್ಷಣವು ಅವನಿಗೆ ಅಪಾರ ಆನಂದವನ್ನು ನೀಡುತ್ತದೆ. ಆಮೇಲೆ ಕದಾಚಿತ್ ಆ ಪ್ರೇಯಸಿಯು ದೂರವಿದ್ದಾಗ ಈ ಪ್ರಿಯಕರನಿಗೆ ''ದಿನರಾತ್ರಿಯಲಿ ಏಕಾಂತದಲಿ ಏಕೋ ಹೇನೋ ನೋವಾಗುವುದು'' ಸಹಜವೇ ತಾನೆ?

ಸಂಪ್ರದಾಯ ಮೀರದ ಹೊಸತನಕ್ಕೆ ಸದಾ ಸ್ವಾಗತವಿದೆ

ಎಲ್ಲ ಕಲಾಮಾಧ್ಯಮಗಳಲ್ಲಿಯೂ ಹುಳುಕುಗಳಿರುವಾಗ, ಈಗ ಚರ್ಚೆಗೆ ತಾಳಮದ್ದಳೆಯನ್ನೇ ಆಯ್ಕೆ ಮಾಡಿಕೊಂಡಿದ್ದು ಏಕೆ ಎನ್ನುವ ಪ್ರಶ್ನೆ ಸಹಜ. ಯಕ್ಷಗಾನಕ್ಕಿರುವ ಪರಂಪರೆ, ಇತಿಹಾಸ ಹಾಗೂ ಪಾವಿತ್ರ್ಯಗಳೇ ಇದಕ್ಕೆ ಕಾರಣವಿರಬಹುದು. ಪಾರಂಪರಿಕ ಪ್ರೇಕ್ಷಕನು ಸಾಂಪ್ರದಾಯಿಕ ಯಕ್ಷಗಾನದಲ್ಲಿ ಮಾತ್ರ ಏರುಪೇರನ್ನು ಸಹಿಸಲಾರ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vinayakbhat1669@gmail.com

ಯಕ್ಷಗಾನದ ಇನ್ನೊಂದು ರೂಪಾಂತರವಾದ ತಾಳಮದ್ದಳೆಯ ಇಂದಿನ ಸ್ಥಿತಿಗತಿಗಳ ಹಾಗೂ ಕೆಲವು ಪಟ್ಟಭದ್ರ ಅರ್ಥಧಾರಿಗಳ ಕುರಿತ ವಿಶ್ವೇಶ್ವರ ಭಟ್ಟರ ಲೇಖನದಿಂದ ಪ್ರಾರಂಭವಾದ ಚರ್ಚೆ, ಸಾಮಾಜಿಕ ಜಾಲತಾಣಕ್ಕೂ ವ್ಯಾಪಿಸಿ, ಪರ-ವಿರೋಧ ಅಭಿಪ್ರಾಯಗಳು ಸತತವಾಗಿ ಹೊಮ್ಮುತ್ತಲೇ ಇವೆ. ಆ ದೃಷ್ಟಿಯಿಂದ ಭಟ್ಟರ ಪ್ರಯತ್ನ ಸಾರ್ಥಕವೇ ಆಯಿತು ಎನ್ನಬಹುದು. ಯಕ್ಷಗಾನದ ಕುರಿತು ವಿಶ್ವೇಶ್ವರ ಭಟ್ಟರಿಗಿರುವ ಜ್ಞಾನವೆಷ್ಟು ಎನ್ನುವವರಿಗೆ, ವಿಶ್ವೇಶ್ವರ ಭಟ್ಟರೂ ಯಕ್ಷಗಾನಾಭಿಮಾನಿಗಳೇ, ಹಾಗಾಗಿಯೇ ಈ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಸ್ತಾಪಿಸಿದ್ದಾರೆ ಎನ್ನುವುದು ಮನದಟ್ಟಾಗಬೇಕಿದೆ. ಅಧ್ಯಯನದ ಆಧಾರವಿಲ್ಲದೇ ಭಟ್ಟರು ಬರೆಯುವವರಲ್ಲ ಎನ್ನುವುದು ಅವರ ಅಸಂಖ್ಯಾತ ಓದುಗರಿಗೆ ತಿಳಿದೇ ಇದೆ. ಕುಮಟಾದ ಸಮೀಪದ ಮೂರೂರು, ಯಕ್ಷಗಾನದ ದೈತ್ಯ ಪ್ರತಿಭೆ ದೇವರು ಹೆಗಡೆಯವರ ಊರು, ತಾನೊಬ್ಬ ಬೆಳೆದದ್ದಲ್ಲದೇ, ದೇವರು ಹೆಗಡೆಯವರು ಆ ಊರಿನಲ್ಲಿ ನೂರಾರು ಕಲಾವಿದರನ್ನು ತರಬೇತುಗೊಳಿಸಿದ್ದಾರೆ, ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಬಹಳ ಕಾಲದಿಂದ ಮೂರೂರಿನಿಂದ ಸ್ತ್ರೀ ಪಾತ್ರಧಾರಿಗಳು, ಹಾಸ್ಯಕಲಾವಿದರು, ಭಾಗವತರು, ಮದ್ದಳೆಗಾರರು ಬಂದಿದ್ದಾರೆ. ಒಂದರ್ಥದಲ್ಲಿ ಉತ್ತರಕನ್ನಡದ ಯಕ್ಷಗಾನಕ್ಕೆ ಮೂರೂರು ತವರು ಎಂದರೂ ತಪ್ಪಾಗಲಾರದು. ಮೂರೂರಿನಲ್ಲಿ ಯಕ್ಷಗಾನ ಸಾಕ್ಷರತೆ ಇಲ್ಲದವರು ಇಲ್ಲವೇ ಇಲ್ಲ ಎನ್ನಬಹುದು.

ವಿಶ್ವೇಶ್ವರ ಭಟ್ಟರು ಇದೇ ಮೂರೂರಿನಲ್ಲಿ ಯಕ್ಷಗಾನದ ವಾತಾವರಣದಲ್ಲಿ ಹುಟ್ಟಿ ಬೆಳೆದವರು. ಎರಡನೆಯದಾಗಿ, ಅವರ ಒಬ್ಬ ಅಜ್ಜ (ತಾಯಿಯ ತಂದೆ) ಹೆಸರುವಾಸಿ ಅರ್ಥಧಾರಿಯಾಗಿದ್ದವರು, ಇನ್ನೊಬ್ಬ ಅಜ್ಜ ಘಟ್ಟದ ಮೇಲಿನ ಭಾಗದಲ್ಲಿ ಪ್ರಸಿದ್ಧ ಭಾಗವತರಾಗಿದ್ದವರು; ನೆಬ್ಬೂರು ಭಾಗವತರಂಥವರು ಅವರನ್ನು ಗುರುಸ್ಥಾನದಲ್ಲಿ ನೋಡುತ್ತಿದ್ದರು. ಒಟ್ಟಿನಲ್ಲಿ ಹೇಳಬೇಕಾದರೆ, ವಿಶ್ವೇಶ್ವರ ಭಟ್ಟರು ಯಕ್ಷಗಾನ-ತಾಳಮದ್ದಳೆಗಳ ನಡುವೆಯೇ ಹುಟ್ಟಿ ಬೆಳೆದುಬಂದವರು. ಹಾಗಾಗಿ ಯಕ್ಷಗಾನದ ಕುರಿತು ಅವರದ್ದೇ ಆದ ನಿರೀಕ್ಷೆಗಳನ್ನು, ನಿಲುವುಗಳನ್ನು ಹೊಂದಲು ಅವರು ಸ್ವತಂತ್ರರೂ, ಸಮರ್ಥರೂ ಆಗಿದ್ದಾರೆ. ಇನ್ನು, ಪ್ರಸ್ತುತ ವಿಷಯದ ಪರ ಮತ್ತು ವಿರೋಧ ಎರಡೂ ಅಭಿಪ್ರಾಯಗಳಿಗೆ ಅವರ ಪತ್ರಿಕೆಯಲ್ಲಿ ಅವಕಾಶಮಾಡಿ ಕೊಟ್ಟಮೇಲೆ, ಅವರನ್ನು ದೂರುವುದು ಸರಿಯಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ವಿಶ್ವೇಶ್ವರ ಭಟ್ಟರನ್ನೂ ಸೇರಿಸಿ 'ವಿಶ್ವವಾಣಿ' ಪತ್ರಿಕೆಯಲ್ಲಿ ಈ ಕುರಿತು ಬರೆದವರೆಲ್ಲರೂ ಯಕ್ಷಗಾನವನ್ನು ಹಾಗೂ ಯಕ್ಷಗಾನ ಕಲಾವಿದರನ್ನೂ ಗೌರವಿಸುವವರು, ಪ್ರೀತಿಸುವವರು ಮತ್ತು ಯಕ್ಷಗಾನ ಯಕ್ಷಗಾನವಾಗಿಯೇ ಉಳಿದು ಮುಂದಿನ ತಲೆಮಾರಿಗೆ ತಲುಪಬೇಕು ಎನ್ನುವ ಕಾಳಜಿ ಇರುವವರೇ ಆಗಿದ್ದಾರೆ ಎನ್ನುವುದನ್ನು ಮೊದಲು ಎಲ್ಲರೂ ಒಪ್ಪಬೇಕು.

ಇರಲಿ, ಈ ಸರಣಿ ಲೇಖನಗಳ ಪರ-ವಿರೋಧಗಳ ಚರ್ಚೆಯ ಪ್ರಮುಖ ಸಂಗತಿಗಳನ್ನು ಗಮನಿಸುವುದಾದರೆ, ಒಟ್ಟಾರೆ ಗುಣಮಟ್ಟದಲ್ಲಿನ ಕುಸಿತ, ಪೌರಾಣಿಕ ಲೋಕಕ್ಕೆ ಪ್ರೇಕ್ಷಕನನ್ನು ಕೊಂಡೊಯ್ಯುವ ಬದಲು, ಅರ್ಥಧಾರಿಗಳೇ ಲೌಕಿಕಕ್ಕೆ ಬಂದು ಮಾತನಾಡುವುದು, ಪ್ರಸಂಗದ ನಿಯಂತ್ರಣ ಭಾಗವತರ ಕೈತಪ್ಪಿ ಅರ್ಥಧಾರಿಗಳ ಕೈಸೇರಿರುವುದು, ಅರ್ಥಗಾರಿಕೆಯಲ್ಲಿ ಸರಳತೆ ಮಾಯವಾಗಿ ಅರ್ಥಧಾರಿಯ ವೈದುಷ್ಯವೇ ಮೆರೆಯುವಂತಾದದ್ದು, ಪಾತ್ರಧಾರಿಗಳ ನಡುವೆ ಆಗುವ ಒಳಒಪ್ಪಂದದಿಂದಾಗಿ, ಕಣ್ಣುಸನ್ನೆ, ಕೈ ಸನ್ನೆಗಳಾಗುವುದರಿಂದ ಪ್ರೇಕ್ಷಕನಿಗುಂಟಾಗುವ ಕಿರಿಕಿರಿ ನಿರಾಸೆಗಳು, ಪರಸ್ಪರರ ಮಾತನ್ನು ಪೂರ್ತಿಕೇಳಿಸಿಕೊಳ್ಳುವ ಮೊದಲೇ ಅತಿಕ್ರಮಿಸುವುದು ಇತ್ಯಾದಿ. ಯಾಕೆ ನಾಟಕ, ಸಿನಿಮಾ ಇತ್ಯಾದಿ ಕಲಾಪ್ರಕಾರಗಳನ್ನು ಬಿಟ್ಟು, ಜನ ತಾಳಮದ್ದಳೆಯ ಬೆನ್ನುಬಿದ್ದಿದ್ದಾರೆ ಎನ್ನುವುದು ಇನ್ನೊಂದು ಆಕ್ಷೇಪ. ಅದಕ್ಕೆ ಕಾರಣ, ಯಕ್ಷಗಾನ ಮತ್ತು ಅದರ ಪ್ರಕಾರಗಳಿಗೆ ಅಷ್ಟು ಸತ್ವವಿದೆ, ಕಲಾಭಿಮಾನಿಗಳಿಗೆ ಅದು ಕೊಳಕಾಗುವುದು ಇಷ್ಟವಿಲ್ಲ ಎಂದರ್ಥ. ಫಲವಿರುವ ಮರಕ್ಕೆ ತಾನೆ ಕಲ್ಲು ಬೀಸುವುದು?

ಸುಪ್ರಸಿದ್ಧ ಯಕ್ಷಗಾನ ಅರ್ಥಧಾರಿ, ಸಾಹಿತಿ, ಉಪನ್ಯಾಸಕ, ಅಂಕಣಕಾರ ಮತ್ತು ವಿಮರ್ಶಕರಾದ ರಾಧಾಕೃಷ್ಣ ಕಲ್ಚಾರ್ ಅವರು ಮೊನ್ನೆ ಪತ್ರಿಕೆಯೊಂದರಲ್ಲಿ ಪ್ರಸಕ್ತ ವಿಷಯದ ಕುರಿತು ಬರೆದು ಇಂಥ ವಿಮರ್ಶೆಗಳನ್ನು ಸ್ವಾಗತಿಸಿದ್ದಾರೆ. ಯಾವುದೇ ಕಲಾಪ್ರಕಾರದಲ್ಲಿ ಈ ಥರದ ಸಾರ್ವಜನಿಕವಾಗಿ ವಿಮರ್ಶೆಗೊಳಗಾಗುವ ಸಂದರ್ಭ, ಅದು ಮೂಡಿಸುವ ಸಂಚಲನ ಸ್ವಾಗತಾರ್ಹ. ಇಂಥ ವಿಮರ್ಶೆಗಳು ಆ ಕಲೆಯ ಬೆಳವಣಿಗೆಯ ಲಕ್ಷಣ. ಯಾವ ಕಲೆಯು ಸಶಕ್ತವೂ, ಸತ್ವಪೂರ್ಣವೂ ಆಗಿದ್ದು ಜನಮನ್ನಣೆ ಸಿಗುತ್ತಿದ್ದರೆ, ಅಂಥ ಕಲೆಗಳು ಮಾತ್ರ ವಿಮರ್ಶೆಗೆ ಒಳಗಾಗುತ್ತವೆ ಎಂದಿದ್ದಾರೆ. ಹಾಗಾಗಿ, ಇದು ನಿಜವಾದ ಯಕ್ಷಗಾನಾಭಿಮಾನಿಗಳು, ಕಲಾವಿದರು ಸಂತೋಷಪಡುವ ಸಂದರ್ಭವೇ ಹೊರತು ಸಿಟ್ಟುಮಾಡಿಕೊಳ್ಳಬೇಕಾದ ಪ್ರಸಂಗವಲ್ಲ. ಈ ಕೇರುವ ಪ್ರಕ್ರಿಯೆಯಲ್ಲಿ ಜೊಳ್ಳುಗಳು ಮಾತ್ರ ಕೆಳಕ್ಕೆ ಬೀಳಲಿದ್ದು, ಗಟ್ಟಿ ಭತ್ತ ಅಲ್ಲೇ ಇರಲಿದೆ, ಅದಕ್ಕಿರುವ ಮರ್ಯಾದೆ ಇನ್ನೂ ಹೆಚ್ಚಲಿದೆ ಎನ್ನುವುದರಲ್ಲಿ ಅನುಮಾನ ಬೇಡ.

ಎಲ್ಲ ಕಲಾಮಾಧ್ಯಮಗಳಲ್ಲಿಯೂ ಹುಳುಕುಗಳಿರುವಾಗ, ಈಗ ಚರ್ಚೆಗೆ ತಾಳಮದ್ದಳೆಯನ್ನೇ ಆಯ್ಕೆ ಮಾಡಿಕೊಂಡಿದ್ದು ಏಕೆ ಎನ್ನುವ ಪ್ರಶ್ನೆ ಸಹಜ. ಯಕ್ಷಗಾನಕ್ಕಿರುವ ಪರಂಪರೆ, ಇತಿಹಾಸ ಹಾಗೂ ಪಾವಿತ್ರ್ಯಗಳೇ ಇದಕ್ಕೆ ಕಾರಣವಿರಬಹುದು ಎನ್ನುವುದು ನನ್ನ ಭಾವನೆ. ನಾಟಕದಲ್ಲಿ ಹೆಚ್ಚು ಕಡಿಮೆಯಾಗಬಹುದು, ಸಿನಿಮಾ ಅಂತೂ ಕೇಳುವುದೇ ಬೇಡ; ಆದರೆ ಪಾರಂಪರಿಕ ಪ್ರೇಕ್ಷಕನು ಸಾಂಪ್ರದಾಯಿಕ ಯಕ್ಷಗಾನದಲ್ಲಿ ಮಾತ್ರ ಏರುಪೇರನ್ನು ಸಹಿಸಲಾರ. ಅದು ಹೇಗಿತ್ತೋ ಹಾಗೇ ಇರಬೇಕು ಎನ್ನುವುದು ಪ್ರೇಕ್ಷಕನ ಕಾಲಾತೀತವಾದ ಬಯಕೆ. ಯಕ್ಷಗಾನ ಎನ್ನುವಂಥದ್ದು ಅನ್ಯ ಕಲೆಗಳಂತಲ್ಲ, ಅದು ಪ್ರೇಕ್ಷಕನಲ್ಲಿ ದೈವಿಕ ಭಾವವನ್ನು ಹುಟ್ಟುಹಾಕುವ ಒಂದು ಕಲೆಯಾಗಿದೆ. ಈ ಕಲೆಯನ್ನು ಅನುಭವಿಸುವುದರ ಜತೆಗೆ ಅನೇಕರು ಆರಾಧಿಸಿರುವ ಉದಾಹರಣೆಗಳಿವೆ. ಮಹಾಕಾವ್ಯಗಳ ಮಹತ್ತನ್ನು ಮಂದಾಧಿಕಾರಿಗಳಿಗೆ ಸರಳವಾಗಿ ಅರ್ಥವಾಗುವಂತೆ ತಲುಪಿಸಲು, ಈ ಮಾಧ್ಯಮವನ್ನು ನಮ್ಮ ಅನೇಕ ಗುರು-ಪರಂಪರೆಗಳು ಬಳಕೆ ಮಾಡಿರುವ ಉದಾಹರಣೆ ನಮ್ಮ ಮುಂದಿದೆ.

ಈ ವಿಷಯದಲ್ಲಿ ನಿಷ್ಣಾತರಾದವರು ಮಾತ್ರ ವಿಮರ್ಶೆ ಮಾಡಬೇಕು ಎನ್ನುವ ಇನ್ನೊಂದು ವಾದವಿದೆ. ಪ್ರೇಕ್ಷಕ ಎಷ್ಟು ತಿಳಿವಳಿಕೆಯುಳ್ಳವ ಅಥವಾ ಅಲ್ಲ ಎನ್ನುವುದು ಪ್ರಧಾನವಾಗಿದ್ದರೆ, ಯಾವುದೇ ಕಲೆಯನ್ನು ಸಾರ್ವಜನಿಕವಾಗಿ ಪ್ರದರ್ಶನ ಮಾಡದೇ ಪ್ರಾಜ್ಞ ಕಲಾಭಿಮಾನಿಗಳ ಮುಂದೆ ಮಾತ್ರ ಪ್ರದರ್ಶಿಸಲಾಗುತ್ತಿತ್ತಲ್ಲವೇ? ಪ್ರೇಕ್ಷಕನಾಗಿ ಎಲ್ಲರೂ ಬೇಕು, ವಿಮರ್ಶೆಯನ್ನು ತಜ್ಞನು ಮಾತ್ರ ಮಾಡಬೇಕು ಎನ್ನುವುದು ಸರಿಯಾದ ಧೋರಣೆಯಲ್ಲ. ಕಲಾವಿದರಿಗೆ ಪ್ರೇಕ್ಷಕನಿಗಿಂತ ಅಥವಾ ಆ ಕಲೆಯ ಅಭಿಮಾನಿಗಿಂತ ದೊಡ್ಡ ದೇವರಿಲ್ಲ. ಪ್ರೇಕ್ಷಕನೂ ಕಲಾವಿದರಷ್ಟೇ ತಿಳಿದಿದ್ದರೆ, ಆತನೂ ಕಲಾವಿದನೇ ಆಗಿರುತ್ತಿದ್ದನಲ್ಲವೇ? ಪ್ರೇಕ್ಷಕನಾಗಿ ಅಲ್ಲವಲ್ಲ! ಹಾಗಾಗಿ ಅಜ್ಞ ಅಥಾವಾ ತಜ್ಞ ಅಂತ ಪ್ರೇಕ್ಷಕನನ್ನು ವಿಭಾಗ ಮಾಡುವುದು ಮುಗ್ಧ, ನಿಸ್ವಾರ್ಥಿ ಕಲಾಭಿಮಾನಿಗಳಿಗೆ ಮಾಡುವ ಅವಮಾನ ಎನ್ನುವುದು ನನ್ನ ಭಾವನೆಯಾಗಿದೆ.

ಯಕ್ಷಗಾನ ಮತ್ತು ತಾಳಮದ್ದಳೆಯ ಅರ್ಥಗಾರಿಕೆಗೆ ಒಂದು ಪರಿಶುದ್ಧವಾದ ಭಾಷೆಯಿದೆ, ಅಲ್ಲಿನ ಮಾತುಕತೆಗೆ ಒಂದು ಲಯವಿದೆ, ಶ್ರುತಿಯಿದೆ. ಯಕ್ಷಗಾನದ ಭಾಷೆ ಕನ್ನಡವೇ ಎನ್ನುವುದು ಗಮನಾರ್ಹ ಸಂಗತಿ. ಇಂಗ್ಲಿಷಿನಿಂದ ಕಲುಷಿತವಾಗದ ಶುದ್ಧ ಕನ್ನಡದ ಬಳಕೆ ಇನ್ನೂ ಎಲ್ಲಾದರೂ ಇದ್ದರೆ ಅದು ಯಕ್ಷಗಾನದಲ್ಲಿ ಮಾತ್ರ ಎನ್ನುವುದು ಯಾರೂ ಒಪ್ಪಲೇಬೇಕಾದ ಸಂಗತಿ. 'ಪ್ರತ್ಯುತ್ಪನ್ನ ಮತಿತ್ವ' ಎನ್ನುವುದು ತಾಳಮದ್ದಳೆಯ ಜೀವಾಳ, ಬದಲಿಗೆ ಅದು ಅರ್ಥಧಾರಿಯ ವೈದುಷ್ಯದ ವಿದ್ವತ್ ಪ್ರದರ್ಶನ ಮಾತ್ರ ಆಗಬಾರದು. ಎಷ್ಟೇ ಸುಂದರವಾಗಿದ್ದರೂ, ತುಟಿಮೀರಿ ಬೆಳೆದ ಹಲ್ಲು ಮುಖಕ್ಕೆ ಹೇಗೆ ವಿಕಾರವೇ ಆಗುತ್ತದೆಯೋ, ಹಾಗೆ ಮಿತಿಮೀರಿದ ಮಾತುಗಳು ಪ್ರಸಂಗಾನುಭವಕ್ಕೆ ಅಷ್ಟೇ ವಿಕಾರವಾಗಿ ಪರಿಣಮಿಸುತ್ತವೆ. ಅಲ್ಲಿ ಪಾತ್ರಗಳ ಸೋಲು ಗೆಲುವಿನ ಚರ್ಚೆಯಾಗಬೇಕೇ ಹೊರತು ಅರ್ಥಧಾರಿಗಳ ವೈಯಕ್ತಿಕ ಸೋಲು-ಗೆಲುವಿನ ಚರ್ಚೆಯಾಗಬಾರದು. ಯಾವುದೋ ಪೌರಾಣಿಕ ವಿಷಯಗಳ ಕುರಿತು ಸಮಗ್ರವಾಗಿ ಮಾತನಾಡ ಬಯಸುವ ಅರ್ಥಧಾರಿಗಳು, ಪ್ರವಚನ ಮಾಧ್ಯಮವನ್ನು ಬಳಸಿಕೊಳ್ಳಬಹುದೇ ಹೊರತು ಅದಕ್ಕೆ ತಾಳಮದ್ದಳೆ ಬಳಕೆಯಾಗಬಾರದು.

ಎರಡನೆಯದಾಗಿ, ಕಲೆ ಎನ್ನುವುದು ನಿಂತ ನೀರಾಗಬಾರದು, ಸಂಗತವಾದ ಮಾರ್ಪಾಡುಗಳನ್ನು ಪಡೆದುಕೊಳ್ಳುತ್ತಾ ಸದಾ ಚಲನ ಶೀಲವಾಗಿರಬೇಕು ಎನ್ನುವುದನ್ನೂ ಒಪ್ಪಲೇಬೇಕು. ಶೇಣಿಯವರ ಹಾಗೆ ಅರ್ಥಹೇಳುವವರು ಈಗ ಯಾರೂ ಇಲ್ಲ ನಿಜ, ಹಾಗಂತ ತಾಳಮದ್ದಳೆಗಳು ನಿಂತಿಲ್ಲ, ಸಾವಿರಾರು ಹೊಸ ಕಲಾವಿದರುಗಳು ಹುಟ್ಟಿಬಂದಿದ್ದಾರೆ, ಅದ್ಯಪಿ ಬರುತ್ತಿದ್ದಾರೆ. ಚಿಟ್ಟಾಣಿಯವರ ಹಾಗೆ ಕುಣಿಯುವವರು ಬರ್ತಾನೇ ಇಲ್ಲ ಎಂದು ಅಲವತ್ತುಕೊಳ್ಳುವುದರಲ್ಲಿ ಅರ್ಥವಿಲ್ಲ. ಚಿಟ್ಟಾಣಿಯವರ ಕೀಚಕ, ಕೌರವ, ಮಾಗಧ ಮುಂತಾದ ಪಾತ್ರಗಳನ್ನು ನೋಡಿದವರನ್ನು, ಇನ್ನೊಬ್ಬ ಕಲಾವಿದ ಆ ಪಾತ್ರಗಳನ್ನು ಮಾಡಿ ತಣಿಸಲಾರ ಎನ್ನುವುದು ಸತ್ಯ. ಆದರೆ ಇನ್ನಾರೂ ಆ ಪಾತ್ರಗಳನ್ನು ಮಾಡಬಾರದು, ಆ ಪಾತ್ರಗಳು ಚಿಟ್ಟಾಣಿಯವರ ಜತೆಗೇ ಮುಗಿದುಹೋಗಬೇಕು ಎನ್ನುವುದು ಸರಿಯಲ್ಲ. ಕೆರೆಮನೆ ಶಿವರಾಮ ಹೆಗಡೆಯವರ ಪಾತ್ರಗಳನ್ನು ನೋಡಿದವರಿಗೆ, ಚಿಟ್ಟಾಣಿಯವರ ಪ್ರಸ್ತುತಿಯಲ್ಲಿ ಕೊರತೆ ಕಂಡರೆ ಅದು ಸ್ವಾಭಾವಿಕವೇ. ಅಂತೆಯೇ ಚಿಟ್ಟಾಣಿಯವರು ಮಾಡಿದ ಪಾತ್ರಗಳನ್ನು ಬೇರೆ ಯಾರೂ ಮಾಡಿದರೆ ಅದರಲ್ಲಿ ಕೊರತೆ ಕಾಣುವುದೂ ಸಹಜವೇ ಆಗಿದೆ. ಆದರೆ ಆ ಪಾತ್ರಗಳನ್ನು ಬೇರೆ ಯಾರೂ ಮಾಡಲೇಬಾರದು ಎನ್ನಲಾಗದು. ಅಂಥ ಮನಸ್ಥಿತಿಯ ಪ್ರೇಕ್ಷಕರಿಗೆ ಹೇಳಿದ ಮಾತಿದು.

ಹಾಗೆ ನೋಡಿದರೆ, ಯಕ್ಷಗಾನದಿಂದ ಸ್ವಲ್ಪ ಪಕ್ಕಕ್ಕೆ ಸರಿದು, ವಿದ್ವತ್ ಪ್ರದರ್ಶನ, ಶಾಸ್ತ್ರಾರ್ಥಗಳು ಶುರುವಾದದ್ದು ಮೂಲತಃ ಹರಿಕೀರ್ತನೆ ಮಾಡುವವರಾಗಿದ್ದ ಶೇಣಿಯವರ ಕಾಲಘಟ್ಟದಲ್ಲೇ ಎಂದರೆ ತಪ್ಪಾಗಲಾರದು. ಅವರ ಅರ್ಥಗಾರಿಕೆಯು ಪರಂಪರೆಯಿಂದ ಸ್ವಲ್ಪ ಭಿನ್ನವಾಗಿತ್ತು, ಆದರೆ ಜನರಿಗೆ ಮೆಚ್ಚುಗೆಯಾಯಿತು ಅಷ್ಟೇ. ತೆಕ್ಕಟ್ಟೆ ಆನಂದ ಮಾಸ್ತರರ ಅರ್ಥವೂ ಹಾಗೆ ವಿಭಿನ್ನವಾಗಿರುತ್ತಿತ್ತು, ಆದರೆ

ಯಕ್ಷಗಾನದೊಳಗೇ ಇರುತ್ತಿತ್ತು. ಆ ಕಾಲದಲ್ಲಿ ಚಿಟ್ಟಾಣಿಯವರಿಗಾಗಿಯೇ ಕೆಲವು ಪ್ರಸಂಗಗಳ ಪದ್ಯಗಳನ್ನು ಹೊಸದಾಗಿ ಬರೆದು ಪ್ರಸಂಗಕ್ಕೆ ಸೇರಿಸಲಾಗಿತ್ತು, ಕೆಲವು ಹಳೆಯ ಪದ್ಯಗಳನ್ನು ಹೇಳುವ ಶೈಲಿಯಲ್ಲಿ ಬದಲಾವಣೆ ಮಾಡಲಾಗಿತ್ತು; ಈ ಮೂಲಕ ಅದು ಜನ ಮೆಚ್ಚುಗೆಗೆ ಪಾತ್ರವಾಯಿತು ಎನ್ನುವುದನ್ನು ಮತ್ತು ಈ ಎಲ್ಲ ಬದಲಾವಣೆಗಳು ಯಕ್ಷಗಾನದ ಮೂಲ ಆಶಯಕ್ಕೆ ಧಕ್ಕೆ ತಾರದಂತಿದ್ದವು ಎನ್ನುವುದನ್ನು ಗಮನಿಸಬೇಕು. ಕಾಲಮಿತಿಯ ಪ್ರದರ್ಶನವನ್ನು ಇಡಗುಂಜಿ ಮೇಳ ಪ್ರಾರಂಭಿಸಿದಾಗಲೂ ಇದೇ ರೀತಿಯ ಕೂಗು ಕೇಳಿಬಂದಿತ್ತು. 'ಯಕ್ಷಗಾನವನ್ನು ಇವರು ಹಾಳುಮಾಡಿಬಿಟ್ಟರು' ಎಂದು ದೂರಿದ್ದರು. ಆ ಕಾಲಘಟ್ಟದಲ್ಲಿ ಅವರು ಆ ಕ್ರಾಂತಿಕಾರಕ ನಿರ್ಧಾರವನ್ನು ತೆಗೆದುಕೊಳ್ಳದಿದ್ದಿದ್ದರೆ, ಯಕ್ಷಗಾನ ಇಲ್ಲಿಯತನಕ ಮುಂಬರಿದು ಬರುತ್ತಿರಲಿಲ್ಲವೇನೋ!

ಇತ್ತೀಚೆಗೆ ಬಹಳ ಅರ್ಥಧಾರರಿಗೆ ಬಣ್ಣ ಹಚ್ಚುವ ಉಮೇದು. ಬರೇ ಮಾತಿನಲ್ಲೇ ರಂಗವನ್ನೂ ಗೆಲ್ಲಬಹುದು ಎನ್ನುವ ಹುಂಬ ಧೈರ್ಯ ಅವರದ್ದು. ಆದರೆ ರಂಗದ ಗುಣಲಕ್ಷಣಗಳು, ಪಾತ್ರಗಳ ನಡೆ ಎಲ್ಲವೂ ವಿಭಿನ್ನವೇ ಆಗಿರುತ್ತವೆ. ಅದು ಒಬ್ಬರಿಗೆ ಒಗ್ಗಿದರೆ ಇನ್ನೊಬ್ಬರಿಗೆ ಒಗ್ಗುವುದಿಲ್ಲ. ಹಿಂದೆ ಯಕ್ಷಗಾನದಲ್ಲಿ ಪ್ರಸಿದ್ಧರಾಗಿದ್ದ ಕಲಾವಿದರಲ್ಲಿ ಬಹಳಷ್ಟು ಜನ ತಾಳಮದ್ದಳೆಯಲ್ಲಿ ಕಾಣುತ್ತಿರಲಿಲ್ಲ. ಹಾಗೆ ತಾಳಮದ್ದಳೆಯಲ್ಲಿ ಪ್ರಖ್ಯಾತರಾದವರು ಯಕ್ಷಗಾನದ ಕಡೆಗೆ ತಲೆಹಾಕುತ್ತಿರಲಿಲ್ಲ. ಟಿ-20 ಪಂದ್ಯಗಳಿಗೆ ಸೂರ್ಯಕುಮಾರ್ ಒಳ್ಳೆಯ ಆಟಗಾರನೇ... ಅನುಮಾನವಿಲ್ಲ; ಆದರೆ ಐದು ದಿನದ ಆಟದಲ್ಲಿ ಆತ ಯಶಸ್ವಿಯಾಗಲಿಕ್ಕಿಲ್ಲ. ಕಾರಣ ಅದು ಅವನಿಗೆ ಒಗ್ಗುವ ಆಟವಲ್ಲ. ಹಾಗಂತ ಎಲ್ಲ ಸ್ತರದ ಪಂದ್ಯಗಳಲ್ಲೂ ಸಮಾನವಾಗಿ ಸಲ್ಲುವ ಕೆಲವು ಆಟಗಾರರೂ ಇದ್ದಾರೆ, ಇಲ್ಲ ಅಂತ ಅಲ್ಲ, ಸಚಿನ್, ವಿರಾಟ್, ಸೆಹ್ವಾಗ್ ಇದ್ದಂತೆ, ಯಕ್ಷಗಾನರಂಗದಲ್ಲೂ ಕುಂಬ್ಳೆ ಸುಂದರ್ ರಾವ್, ಕೆರೆಮನೆ ವೆಂಕಟಾಚಲ ಭಟ್ಟರು, ಮಹಾಬಲ ಹೆಗಡೆಯವರು, ಶಂಭು ಹೆಗಡೆಯವರು ಮುಂತಾದ 'ಎರಡು ಕಡೆಯಲ್ಲಿಯೂ ಸಲ್ಲುವ' ಕಲಾವಿದರು ಇದ್ದರು, ಆದರೆ ಇಂಥವರು ಅಪರೂಪ ಎನ್ನುವುದು ನಾನು ಹೇಳಹೊರಟಿರುವ ವಿಷಯ.

ಉಪ್ಪೂರರು, ನೆಬ್ಬೂರರು ಹಾಗೂ ಕಾಳಿಂಗ ನಾವುಡರ ಕಾಲಕ್ಕೆ ಪಾತ್ರಧಾರಿಗಳು, ಅರ್ಥಧಾರಿಗಳು ಭಾಗವತರಿಗೆ ಅತ್ಯಂತ ಗೌರವ ನೀಡುತ್ತಿದ್ದರು. ಇಡೀ ರಂಗದ ನಿಯಂತ್ರಣ ಭಾಗವತರ ಕೈಯಲ್ಲಿರುತ್ತಿತ್ತು. ಎಲ್ಲೂ ಆಭಾಸವಾಗದಂತೆ ಭಾಗವತರು ನೋಡಿಕೊಂಡು ಹೋಗುವುದಿತ್ತು. ಆಟದಲ್ಲಾಗಲೀ ಅಥವಾ ತಾಳಮದ್ದಳೆಯಲ್ಲಾಗಲೀ ಅರ್ಥಧಾರಿಗಳ ಮಾತು ದಾರಿತಪ್ಪುತ್ತಿದೆ, ಅಗತ್ಯಕ್ಕಿಂತ ಉದ್ದವಾಗುತ್ತಿದೆ ಎಂದೆನಿಸಿದಾಗ, ಭಾಗವತರು ಹಿಂದಿನಿಂದ ಹೂಂಕರಿಸಿದರೆ ಸಾಕಿತ್ತು, ಅರ್ಥಧಾರಿಗಳು ಎಚ್ಚೆತ್ತುಕೊಂಡು ಲಯಕ್ಕೆ ಮರಳುತ್ತಿದ್ದರು. ಇನ್ನೂ ಮುಂದುವರಿದರೆ ಭಾಗವತರು ಮುಂದಿನ ಪದ್ಯ ಎತ್ತುಗಡೆ ಮಾಡಿಬಿಡುತ್ತಿದ್ದ ಸಂದರ್ಭವೂ ಇತ್ತು. ಆದರೆ ಈಗ? ಪಾತ್ರಧಾರಿಯ ಕುಣಿತವೆಲ್ಲ ಖರ್ಚಾಗುವವರೆಗೆ ಭಾಗವತರು ಪದ್ಯದ ಎತ್ತುಗಡೆ ಮಾಡುತ್ತಲೇ ಇರಬೇಕು, ಪಾತ್ರಧಾರಿಯ ಕೈ-ಕಣ್ ಸನ್ನೆಯ ನಂತರ ಭಾಗವತರು ಪದ್ಯ ನಿಲ್ಲಿಸಬೇಕು ಎಂಬಂತಾಗಿದೆ. ಅದು ಸರಿಯಲ್ಲ ಎನ್ನುವುದು ಪ್ರೇಕ್ಷಕರ ಭಾವನೆ.

ಈ ಎಲ್ಲ ವೈರುಧ್ಯಗಳ ನಡುವೆ ಯಕ್ಷಗಾನ ಕಲೆ ಉಳಿದುಕೊಂಡಿದೆ, ಬೆಳೆಯುತ್ತಲೂ ಇದೆ. ಯಕ್ಷಗಾನ ಅಥವಾ ತಾಳಮದ್ದಳೆಯ ಕ್ಷೇತ್ರಕ್ಕೆ ಹೊಸಬರ ಪ್ರವೇಶ ಆಗುತ್ತಿರುವುದು ನಿಜಕ್ಕೂ ಸಂತೋಷದ ವಿಷಯವೇ ಆಗಿದೆ. ಸಣ್ಣ ಸಣ್ಣ ಮಕ್ಕಳು ಇಂದು ರಂಗದಲ್ಲಿ ಅತ್ಯಂತ ಶಾಸ್ತ್ರೀಯವಾಗಿ ಹೆಜ್ಜೆ ಹಾಕುವುದನ್ನು ನೋಡುವಾಗ ಯಕ್ಷಗಾನಕ್ಕೆ ಇನ್ನೂ ಭವಿಷ್ಯ ಮುಗಿದಿಲ್ಲ ಎನ್ನುವುದು ತಿಳಿದು ಸಮಾಧಾನವಾಗುತ್ತದೆ. ಇವತ್ತಿಗೂ ಕೆಲವು ಕಡೆಗಳಲ್ಲಿ ತಾಳಮದ್ದಳೆಯ ಸಪ್ತಾಹಗಳು ನಡೆಯುತ್ತಿವೆ ಎಂದರೆ ಅದು ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿದೆ ಎಂತಲೇ ಅರ್ಥ. ಅದಲ್ಲದಿದ್ದರೆ, ಶೇಣಿಯವರು, ಪೆರ್ಲ ಕೃಷ್ಣ ಭಟ್ಟರು, ಶಂಕರ ನಾರಾಯಣ ಸಾಮಗರು ಮುಂತಾದವರ ನಂತರ ತಾಳಮದ್ದಳೆ ಕ್ಷೇತ್ರ ನಿಂತುಬಿಡಬೇಕಿತ್ತು. ಚಿಟ್ಟಾಣಿ ಶಂಭು ಹೆಗಡೆಯವರ ತರುವಾಯ ಆಟಗಳು ನಡೆಯಲೇ ಬಾರದಿತ್ತು. ಕಾಲಮಿತಿ ಮುಂತಾದ, ಇಂದಿನ ಕಾಲಕ್ಕೆ ಪ್ರೇಕ್ಷಕರಿಗೆ ಅನುಕೂಲವಾಗುವ ಮಾರ್ಪಾಡುಗಳನ್ನು ಮಾಡಿಕೊಂಡು ಯಕ್ಷಗಾನ ಇನ್ನೂ ಪ್ರಸ್ತುತಿಯನ್ನು ಉಳಿಸಿಕೊಂಡು ಬಂದಿದೆ, ದೇಶ-ವಿದೇಶಗಳಲ್ಲಿ ಯಶಸ್ವಿ ಪ್ರದರ್ಶನವನ್ನು ಕಾಣುತ್ತಿದೆ. ಯಕ್ಷಗಾನದಲ್ಲಷ್ಟೇ ಅಲ್ಲದೆ, ತಾಳಮದ್ದಳೆಯಲ್ಲೂ ಏಕವ್ಯಕ್ತಿ ಪ್ರದರ್ಶನಗಳಂಥಾ ಹೊಸ ಪ್ರಯತ್ನಗಳು ನಡೆಯುತ್ತಿವೆ. ದಿವಾಕರ ಹೆಗಡೆ ಕೆರೆಹೊಂಡ ಅವರು ಅತ್ಯಂತ ಸಮರ್ಥವಾಗಿ ಏಕವ್ಯಕ್ತಿ ತಾಳಮದ್ದಳೆಯನ್ನು ನಡೆಸುತ್ತಿದ್ದು ಅದು ಜನಮನ್ನಣೆಯನ್ನೂ ಗಳಿಸಿದೆ. ಯಕ್ಷಗಾನದ ಪರಂಪರೆಯನ್ನು ಉಳಿಸಿ ಮುಂದಿನ ತಲೆಮಾರಿನವರೆಗೆ ತಲುಪಿಸುವ ಕಾರ್ಯದಲ್ಲಿ ಎಲ್ಲ ಹೊಸ ಕಲಾವಿದರ ಪಾತ್ರವೂ ಹಾಗೂ ಹೊಸರೂಪದಿಂದ ಪ್ರಕಟವಾಗುತ್ತಿರುವ ಯಕ್ಷಗಾನ-ತಾಳಮದ್ದಳೆಗಳ ಪಾತ್ರವೂ ಇದೆ ಎನ್ನುವುದರಲ್ಲಿ ಎರಡು ಮಾತಿಲ್ಲ ಹಾಗೂ ಇದು ಪ್ರಶಂಸನಾರ್ಹ ವಿಚಾರವಾಗಿದೆ. ಹಾಗಾಗಿ ಹೊಸದೆಲ್ಲ ಹಾಳು ಎಂದು ಪ್ರೇಕ್ಷಕ ತಿರಸ್ಕರಿಸುತ್ತಿಲ್ಲ, ಸರಿಯಾದ ಬದಲಾವಣೆಗಳನ್ನು ಸ್ವಾಗತ ಮಾಡಿರುತ್ತಾನೆ ಎನ್ನುವುದು ಮನಗಾಣಬೇಕಾದ ಸಂಗತಿಯಾಗಿದೆ.

ಯಕ್ಷಗಾನವೂ ಸೇರಿ ಯಾವುದೇ ಕಲೆ ಸೃಜನಶೀಲವೂ ಚಲನಶೀಲವೂ ಆಗಿರಬೇಕು ಎನ್ನುವುದು ಸರಿ; ಆದರೆ ಅದು ಸಂಪ್ರದಾಯದ ಕೊನೆಯ ಬೇಲಿಯನ್ನು ದಾಟಬಾರದು ಎನ್ನುವುದು ಹೊಸ ಕಲಾವಿದರು ಮನಸ್ಸಿಗೆ ತೆಗೆದುಕೊಳ್ಳಬೇಕಾದ ಸಂಗತಿಯಾಗಿದೆ. ಸಂಪ್ರದಾಯದ ಚೌಕಟ್ಟಿನೊಳಗೆ ಕಲಾವಿದರು ನಾವೀನ್ಯವನ್ನು ಕಂಡುಕೊಳ್ಳುವುದಾದರೆ, ಏನಾದರೂ ಹೊಸದೊಂದನ್ನು ಸೃಜಿಸುವುದಾದರೆ ಅದು ಸ್ವಾಗತಾರ್ಹವೇ, ಅದರಲ್ಲಿ ಎರಡು ಮಾತಿಲ್ಲ. ಯಕ್ಷಗಾನ ಅಥವಾ ತಾಳಮದ್ದಳೆ ನಾಟಕವಾಗಬಾರದು, ನಾಟಕಗಳು ಸಿನಿಮಾ ಆಗಬಾರದು. ಅದರದರ ಜಾಗದಲ್ಲಿ ಅದದು ಇದ್ದರೇ ಚೆನ್ನ. ಯಾವುದೇ ಕಲೆ ಒಂದು ಸಾರಭೂತವಾದ ಸಂಗತಿಯನ್ನು ಸಾರುವ ಮಾಧ್ಯಮವಷ್ಟೇ. ಅದಕ್ಕೆ, ಏನೋ ಒಳ್ಳೆಯದನ್ನು ಸಮಾಜಕ್ಕೆ ನೀಡುವ ಮೂಲಕ ಅದನ್ನು ಸಂಸ್ಕರಿಸುವ ಹೊಣೆಗಾರಿಕೆಯಿರುತ್ತದೆ. ಕಲಾವಿದ ಹಾಗೂ ಕಲಾರಸಿಕ ಇಬ್ಬರೂ ಸೇರಿದಾಗ ಮಾತ್ರ ಆ ಕಲೆಯ ಉಳಿವಾಗುತ್ತದೆ; ಒಬ್ಬರಿಲ್ಲದಿದ್ದರೆ ಇನ್ನೊಬ್ಬರಿಗೆ ಕೆಲಸವಿರುವುದಿಲ್ಲ, ಲೋಕವನ್ನು ಸಂಸ್ಕರಿಸುವ ಮೂಲ ಉದ್ದೇಶಕ್ಕಿಂತ ಕಲೆ ದೊಡ್ಡದಲ್ಲ, ಕಲೆಗಿಂತ ಕಲಾವಿದ ದೊಡ್ಡವನಲ್ಲ. ಆ ಪ್ರಸಂಗ ಅಪೇಕ್ಷಿಸುವ ಪಾತ್ರವನ್ನು ಕಲಾವಿದನಾದವನು ಪ್ರಾಮಾಣಿಕವಾಗಿ ನಿರ್ವಹಿಸಿದಾಗ ಮಾತ್ರ ಆತ ದೇವರಾಗುತ್ತಾನೆ.

ಯಕ್ಷಗಾನಂ ಗೆಲ್ಗೆ...!

ಭಗವದ್ಗೀತೆ: ಅರ್ಥ ಮತ್ತು ಅನರ್ಥದ ಸುತ್ತಮುತ್ತ

ಆಧುನಿಕ ಯುಗದಲ್ಲಿ ಭಗವದ್ಗೀತೆಯನ್ನು ಬರೀ ಆಧ್ಯಾತ್ಮಿಕ ಗ್ರಂಥವಾಗಿ ನೋಡದೆ, ನಾಯಕತ್ವದ ಗುಣಗಳು, ಮ್ಯಾನೇಜ್‌ಮೆಂಟ್ ಮುಂತಾದ ವಿಷಯಗಳ ಕುರಿತಾದ ಚರ್ಚೆಗಳಲ್ಲಿ ವಿಶ್ವದೆಲ್ಲೆಡೆ ಅದನ್ನು ಪ್ರಸ್ತಾಪಿಸಲಾಗುತ್ತದೆ. ಜೀವನಕ್ರಮದಲ್ಲಿ ಎದುರಾಗುವ ಆಂತರಿಕ- ಬಾಹ್ಯ ಒತ್ತಡಗಳನ್ನು, ನಿಭಾಯಿಸುವಲ್ಲಿ ಅದನ್ನೊಂದು ದಾರಿದೀವಿಗೆಯಂತೆ ಪರಿಗಣಿಸಲಾಗುತ್ತದೆ. ಆದರೆ, ನಮ್ಮದೇ ಶಿಕ್ಷಣ ಸಂಸ್ಥೆಗಳಲ್ಲಿ 'ಭಗವದ್ಗೀತೆಯು ಒಂದು ಪ್ರತಿಗಾಮಿ ಪುಸ್ತಕ' ಎಂಬ ಭಾವನೆಯನ್ನು ನೆಟ್ಟಿದ್ದಾರೆ.

ಅರ್ಥಾನುಸಂಧಾನ
ಡಾ. ನಾಗರಾಜ ಶೆಣೈ
vveditoped@gmail.com

ಇದು ಸಾಕಷ್ಟು ವರ್ಷಗಳ ಹಿಂದಿನ ಮಾತು. ''ಭಗವದ್ಗೀತೆಯಲ್ಲಿ ಬರುವ 'ಕರ್ಮಣ್ಯೇವಾಧಿಕಾರಸ್ತೆ, ಮಾ ಫಲೇಷು ಕದಾಚನ' ಶ್ಲೋಕದ ಅರ್ಥ ನಿಮಗೇನಾದರೂ ಗೊತ್ತೇನ್ರೋ?'' ಅಂತ ಹೈಸ್ಕೂಲಿನಲ್ಲಿ ನಮ್ಮ ಮೇಷ್ಟ್ರು ಪ್ರಶ್ನಿಸಿದರು. ನಮ್ಮಲ್ಲಿ ಕೆಲವರು ಗೊತ್ತಿದ್ದಷ್ಟನ್ನು ಹೇಳಲು ಮುಂದಾದೆವು. ''ನಿನಗೆ ನಿನ್ನ ಕರ್ತವ್ಯ ಮಾಡಲು ಮಾತ್ರ ಅಧಿಕಾರವಿದೆ, ಅದರ ಫಲದ ಮೇಲಲ್ಲ. ಅದನ್ನು ನಾನು ನಿರ್ಧರಿಸುತ್ತೇನೆ'' ಎಂದು ಶ್ರೀಕೃಷ್ಣನು ಅರ್ಜುನನಿಗೆ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಹೇಳಿದ ಮಾತಿದು. ಅದನ್ನೇ ಹೇಳಿದೆವು.

ಆಗ ಮೇಷ್ಟ್ರು, ''ಅದು ಹಂಗಲ್ರೋ, ಅದು ಕೆಲಸ ಮಾಡೋ ಕಾರ್ಮಿಕರಿಗೆ, 'ನೀವು ಕೆಲಸ ಅಷ್ಟೇ ಮಾಡಬೇಕು. ಕೂಲಿ ಕೇಳಬಾರದು. ಕೊಡೋದು ಬಿಡೋದು ನಮ್ಮ ಮರ್ಜಿ' ಅಂತ ತಿಳಿಸಲಿಕ್ಕಾಗಿ ದೇವರ ಬಾಯಲ್ಲಿ ಇಂಥ ಶ್ಲೋಕ ಹಾಕಿ ಎಲ್ಲರಿಗೂ ಹೇಳಿಸ್ಯಾರು'' ಅಂದರು.

ನಮಗೋ, ಇವರು ಯಾವುದೋ ಹೊಸ ಅರ್ಥವನ್ನು ಹೇಳುತ್ತಿದ್ದಾರಲ್ಲಾ ಅಂತ ಅನಿಸಿತು. ಅವರು ಮುಂದುವರಿದು, ''ಇವೆಲ್ಲ ಸನಾತನ ಧರ್ಮೀಯರು ಕೆಳವರ್ಗದ, ದುಡಿಯುವ ವರ್ಗದ ಜನರನ್ನು ತುಳಿಯಲು ಮಾಡಿಕೊಂಡ ಅಸ್ತ್ರಗಳು. ಬಂಡವಾಳಶಾಹಿ, ಪುರೋಹಿತಶಾಹಿ ವ್ಯವಸ್ಥೆಯಲ್ಲಿ ಭೂಮಾಲೀಕರು, ಸಿರಿವಂತರು, ಬಡವರ್ಗದ ಜನರನ್ನು ಮೊದಲು ಧರ್ಮದ ಹೆಸರಿನಲ್ಲಿ ಮರುಳುಮಾಡಿ, ನಂತರ ಇಂಥ ಶ್ಲೋಕಗಳನ್ನು ಬರೆದು, ಅವರ ಎಲ್ಲಾ ಹಕ್ಕುಗಳನ್ನು ಕಸಿದು ಶೋಷಣೆ ಮಾಡಲಿಕ್ಕೆ ಇದನ್ನು ಸಾಧನವನ್ನಾಗಿ ಮಾಡಿಕೊಂಡರು'' ಎಂದರು. ಆಗ ನಮ್ಮಂಥ ವಿದ್ಯಾರ್ಥಿಗಳ ಮನಸ್ಸಿನಲ್ಲಿ, ''ಅಬ್ಬಾ! ಎಂಥ ಕ್ರೂರ ಶಾಸನಗಳು! ಇದೆಂಥ ಶ್ಲೋಕ! ಅದು ಹೇಗೆ ಪವಿತ್ರಗ್ರಂಥ?'' ಎಂಬೆಲ್ಲಾ ಅಭಿಪ್ರಾಯಗಳು ತುಂಬಿಕೊಂಡುಬಿಟ್ಟಿದ್ದವು.

'ನಮಗೆ ಹೈಸ್ಕೂಲಿನಲ್ಲಿ ಇಂಥ ಪಾಠ ಬೋಧಿಸಿದ ಮೇಷ್ಟ್ರು ಯಾವ ವಿಷಯದ ಬೋಧಕರಾಗಿದ್ದರು ಗೊತ್ತೇ?' ಎಂಬ ನನ್ನ ಪ್ರಶ್ನೆಗೆ 'ಸಮಾಜಶಾಸ್ತ್ರ' ಎಂಬುದು ನಿಮ್ಮ ಉತ್ತರವಾಗಿದ್ದರೆ, ನಿಮ್ಮ ಊಹೆ ಸರಿ, ಆದರೆ ಉತ್ತರ ತಪ್ಪು! ಯಾಕೆಂದರೆ, ಅವರು ನಮಗೆ ವಿಜ್ಞಾನ ವಿಷಯ ಕಲಿಸುವ ಶಿಕ್ಷಕರಾಗಿದ್ದರು! ಹೌದು, ಅವರು ವಿಜ್ಞಾನ ವಿಷಯದ ತರಗತಿಗಳಲ್ಲಿ ಇಂಥ ಸಂಗತಿಗಳನ್ನೆಲ್ಲ ನಮ್ಮ ತಲೆಗೆ ತುಂಬುತ್ತಿದ್ದರು. ಇಂದಿನಂತೆಯೇ ಅಂದೂ ನಮ್ಮ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರದ ಯಾವ ಪಠ್ಯಕ್ರಮದಲ್ಲೂ ಇಂಥ ಪಾಠಗಳಿರಲಿಲ್ಲ. ಆದರೂ ಅವರು 'ಸ್ವಯಂಸ್ಫೂರ್ತಿ'ಯಿಂದ ಕಮ್ಯುನಿಸಂ, ಮಾರ್ಕ್ಸ್‌ವಾದ, ಸಮಾಜವಾದ, ಬಂಡಾಯ, ಹೋರಾಟ ಇವುಗಳ ಬಗ್ಗೆಯೇ ಸದಾ ನಮಗೆ ಪಾಠ ಮಾಡುತ್ತಿದ್ದರು. ''ಈ ಒಂದು ವರ್ಷ ಮುಗಿಯುವುದರೊಳಗೆ ನಿಮ್ಮೆಲ್ಲರನ್ನೂ ಒಂದೊಂದು ಕ್ರಾಂತಿಯ ಕಿಡಿಗಳನ್ನಾಗಿ ಮಾಡಿಬಿಡುತ್ತೇನೆ'' ಎಂದು ಅವರು ಹೇಳಿದ್ದರು. ಆದರೆ ದುರದೃಷ್ಟವಶಾತ್ (ಅಥವಾ ಅದೃಷ್ಟವಶಾತ್!) ವರ್ಷದ ಮಧ್ಯೆಯೇ ಅವರಿಗೆ ಬೇರೊಂದು ಶಾಲೆಗೆ ವರ್ಗವಾಯಿತು. ಹೀಗಾಗಿ ನಾವೆಲ್ಲ ಯಾವುದೇ ತರಹದ ಕಿಡಿಗಳಾಗದೆ, ನಿಜಜೀವನದ ಸತ್ಯವನ್ನು ನಾವೇ ಹುಡುಕಿಕೊಂಡು ಹೋಗುವ ಸತ್ಯಾರ್ಥಿಗಳಾದೆವು.

ಹೈಸ್ಕೂಲ್ ನಂತರ ನಾನು ನನ್ನ ಕಾಲೇಜು ಶಿಕ್ಷಣಕ್ಕೆಂದು ಧಾರವಾಡಕ್ಕೆ ಹೋದೆ. ಅಲ್ಲಿ ನಾನು ಭಾಗವಹಿಸಿದ ಒಂದು ಭಾಷಣದಲ್ಲಿ ಚಿನ್ಮಯ ಮಿಷನ್‌ನ ಸ್ವಾಮೀಜಿಯವರೊಬ್ಬರು ಭಗವದ್ಗೀತೆಯ ಕುರಿತಾದ ಉಪನ್ಯಾಸದಲ್ಲಿ ಇದೇ ಶ್ಲೋಕದ ಬಗ್ಗೆ ಒಂದು ಪುಟ್ಟ ಕಥೆಯನ್ನು ಹೇಳಿದರು: ಸುಶಿಕ್ಷಿತ ಯುವಕನೊಬ್ಬ ಗ್ರಾಮವೊಂದರ ದಾರಿಯಲ್ಲಿ ಹಾದುಹೋಗುವಾಗ ಪಕ್ಕದ ತೋಟದಲ್ಲಿ ವಯೋವೃದ್ಧನೊಬ್ಬ 12 ವರ್ಷದ ನಂತರ ಫಲ ಬಿಡುವ ತೆಂಗಿನ ಸಸಿಗಳನ್ನು ನೆಡುತ್ತಿರುವುದನ್ನು ನೋಡಿದ. ನಂತರ ಆತ ಆ ವೃದ್ಧರನ್ನು ಸಮೀಪಿಸಿ ಸ್ವಲ್ಪ ಕುಹಕದ ಧ್ವನಿಯಲ್ಲಿ, ''ಈ ತೆಂಗಿನಮರವು ಫಲ ಬಿಡುವ ತನಕ ನೀವು ಬದುಕಿರುವ ವಿಶ್ವಾಸವಿದೆಯೋ?'' ಎಂದು ತಿವಿದ. ಆಗ ಆ ವೃದ್ಧರು, ''ನೋಡು ಮಗೂ, ಈಗ ನಾನು ಮಾಡುತ್ತಿರುವ ಯಾವ ಕೆಲಸದ ಪ್ರತಿಫಲವೂ ನನಗೆ ಖಂಡಿತವಾಗಿಯೂ ಸಿಗುವುದಿಲ್ಲ ಎಂಬ ವಿಶ್ವಾಸದಿಂದಲೇ ಇದನ್ನೆಲ್ಲ ಮಾಡುತ್ತಿರುವೆ. ಯಾಕೆ ಗೊತ್ತಾ? ನಾನು ನನ್ನ

ಜೀವನಪೂರ್ತಿ ಅನುಭವಿಸಿದ ಫಲಗಳೆಲ್ಲವೂ ದಕ್ಕಿದ್ದು ನನ್ನ ತಂದೆ-ತಾತ-ಮುತ್ತಾತಂದಿರು ಮಾಡಿದ ಕೆಲಸಗಳಿಂದ. ಆ ಋಣವನ್ನು ನಾನು ಹೇಗೆ ತೀರಿಸಲಿ? ಹೀಗಾಗಿ, ಅವರಂತೆಯೇ ನಾನು ಈಗ ಮಾಡುತ್ತಿರುವುದು ನನ್ನ ಮಕ್ಕಳು-ಮೊಮ್ಮಕ್ಕಳಿಗಾಗಿ. ಜೀವನಸರಣಿ ಹೀಗೆ ಮುಂದುವರಿದಾಗಲೇ ಅದು ಸರಿಯಾದ ಕ್ರಮದಲ್ಲಿ ಸಾಗುತ್ತದೆ. ನನ್ನೆಲ್ಲಾ ಕೆಲಸದ ಪ್ರತಿಫಲಗಳು ನನಗೇ ಸಿಗಬೇಕೆಂಬ ಬಯಕೆ ಮೂಡಿದಾಗ, ಎಲ್ಲರ ಜೀವನವೂ ಅಸ್ತವ್ಯಸ್ತವಾಗುತ್ತದೆ, ಎಲ್ಲರೂ ನರಳುತ್ತಾರೆ'' ಎಂದರು.

ಈ ಕಥೆಯನ್ನು ಹೇಳಿ ಮುಗಿಸಿದ ಸ್ವಾಮೀಜಿ, ''ಕರ್ಮಣ್ಯೇವಾಧಿಕಾರಸ್ತೆ ಎಂಬ ಶ್ಲೋಕದ ಅರ್ಥವೂ ಇದೇ. ನಮ್ಮ ಬದುಕಿನಲ್ಲಿ ನಾವು ಪಡೆದಿರುವ ಅನೇಕ ಸುಖ-ಸೌಕರ್ಯಗಳನ್ನು ಸೃಷ್ಟಿಸಿರುವವರು ಇನ್ಯಾರೋ. ಫಲಾಪೇಕ್ಷೆ ಇಲ್ಲದ ಅವರ ಕೆಲಸಗಳ ಲಾಭವನ್ನು ಪಡೆಯುತ್ತಿರುವವರು ನಾವು. ಇದಕ್ಕೆ ಪ್ರತಿಯಾಗಿ ನಮ್ಮ ಜೀವನದಲ್ಲಿ ನಾವು ಮಾಡುವ ಎಲ್ಲ ಕೆಲಸಗಳನ್ನು ಫಲದ ಅಪೇಕ್ಷೆ ಇಲ್ಲದೆ ಮಾಡಬೇಕಾಗಿರುವುದು ನಮ್ಮ ಧರ್ಮ. ನಮಗೆ ಸಿಗಬೇಕಾದುದನ್ನು ಆ ದೇವರು ನಮಗೆ ಕೊಟ್ಟೇ ಕೊಡುತ್ತಾನೆ- ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ...'' ಎಂದರು. ಆಗ ನನಗೆ, ''ಅರೆ, ಒಂದು ಶ್ರೇಷ್ಠ ಕಲ್ಪನೆಯನ್ನು ಮಡಿಲಲ್ಲಿ ಇಟ್ಟುಕೊಂಡಿರುವ ಶ್ಲೋಕವೊಂದನ್ನು ಎಷ್ಟೊಂದು ಕೀಳುಮಟ್ಟಕ್ಕೆ ಇಳಿಸಿದವರ ವಿಚಾರಗಳನ್ನು ಇಷ್ಟು ಕಾಲ ನಾನು ಹೊತ್ತುಕೊಂಡಿದ್ದೆನಲ್ಲಾ...?!!'' ಎಂದನಿಸಿದ್ದು ನಿಜ.

ಈಗಿನ ಆಧುನಿಕ ಯುಗದಲ್ಲಿ ನಮ್ಮ ಭಗವದ್ಗೀತೆಯನ್ನು ಬರೀ ಆಧ್ಯಾತ್ಮಿಕ ಗ್ರಂಥವಾಗಿ ನೋಡದೆ, ನಾಯಕತ್ವದ ಗುಣಗಳು, ಮ್ಯಾನೇಜ್‌ಮೆಂಟ್ ಮುಂತಾದ ವಿಷಯಗಳ ಕುರಿತಾದ ಚರ್ಚೆಗಳಲ್ಲಿ ವಿಶ್ವದೆಲ್ಲೆಡೆ ಅದನ್ನು ಪ್ರಸ್ತಾಪಿಸಲಾಗುತ್ತದೆ. ಒತ್ತಡದ ಜೀವನಕ್ರಮದಲ್ಲಿ ಎದುರಾಗುವ ಆಂತರಿಕ ಮತ್ತು ಬಾಹ್ಯ ಒತ್ತಡಗಳನ್ನು, ಸಂಘರ್ಷಗಳನ್ನು ನಿಭಾಯಿಸುವಲ್ಲಿ ಅದನ್ನು ಒಂದು ದಾರಿದೀವಿಗೆಯಂತೆ ಪರಿಗಣಿಸಲಾಗುತ್ತದೆ. ಆದರೆ, ನಮ್ಮದೇ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿನ ಎಲ್ಲಾ ವಿಷಯಗಳಲ್ಲಿ, ಕೆಲ ಶಿಕ್ಷಕರು ಸಾವಿರ, ಲಕ್ಷಗಳ ಸಂಖ್ಯೆಯ ವಿದ್ಯಾರ್ಥಿಗಳ ಮನಸ್ಸಿನಲ್ಲಿ 'ಭಗವದ್ಗೀತೆಯು ಒಂದು ಪ್ರತಿಗಾಮಿ ಪುಸ್ತಕ' ಎಂಬ ಭಾವನೆಯನ್ನು ನೆಟ್ಟಿದ್ದಾರೆ. ಭಾರತೀಯತೆ, ಹಿಂದೂ ಧಮ, ಸನಾತನ ಸಂಸ್ಕೃತಿ ಇವುಗಳ ಬಗ್ಗೆ ಈಗಿನ ಜನಾಂಗದಲ್ಲಿ ಅವಜ್ಞೆ, ಕೀಳರಿಮೆ, ತಿರಸ್ಕಾರ ಮೂಡುತ್ತಿರುವುದಕ್ಕೆ ಇದುವೇ ಕಾರಣವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

(ಲೇಖಕರು ಶಿಕ್ಷಣತಜ್ಞರು ಹಾಗೂ ಚಿಂತಕರು)

ಟ್ರಂಪು ಕಣ್ಣು ಎಣ್ಣೆಗೆಂಪು

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಮೊನ್ನೆಯ ಡಿಸೆಂಬರ್ 30ಕ್ಕೆ ಕನ್ನಡದ ಅಭಿನಯ ಭಾರ್ಗವ ಡಾ. ವಿಷ್ಣುವರ್ಧನ್ ಅವರು ತೀರಿಹೋಗಿ 16 ವರ್ಷಗಳು ಮುಗಿದು ಹೋಗಿವೆ. ಈ ಒಂದೂವರೆ ದಶಕಕ್ಕೂ ಹೆಚ್ಚಿನ ಅವಧಿಯಲ್ಲಿ ಇಂದಿಗೂ ಜನರು ವಿಷ್ಣುವರ್ಧನ್ ಅವರ ಬಗ್ಗೆ ಮಾತನಾಡುತ್ತಿದ್ದಾರೆ ಅನ್ನೋದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಅವರ ಜತೆಯಲ್ಲಿ ಕನ್ನಡ ಪ್ರೇಕ್ಷಕರದ್ದು ಒಂಥರಾ ವಿಶೇಷ ಬಂಧನ. ಈ ಬಂಧನದ ಕಾರಣಕ್ಕೆ ವಿಷ್ಣು ಎಂಬ ಮರೆಯಾದ ಮಾಣಿಕ್ಯವನ್ನು ಮರೆಯದೆ ನೆನಪಿಸಿಕೊಳ್ಳುತ್ತಿದ್ದಾರೆ ಅವರ ಅಭಿಮಾನಿಗಳು ಮತ್ತು ಸಿನಿಪ್ರೇಮಿಗಳು. ಆದರೆ ಇಲ್ಲೊಂದು ವಿಷಾದದ ವಿಷಯವಿದೆ; ಕನ್ನಡ ಚಿತ್ರರಂಗದಲ್ಲಿ ನನೆಗುದಿಗೆ ಬಿದ್ದಿರುವ ಎರಡು ವಿಷಯಗಳು ಅಂದ್ರೆ ತಕ್ಷಣ ನೆನಪಾಗೋದು ಹೆಸರುಘಟ್ಟದ 'ಫಿಲ್ಮ್ ಸಿಟಿ' ಮತ್ತು ವಿಷ್ಣುವರ್ಧನ್ ಎಂಬ ಹೆಸರಿನಲ್ಲಿ ಇರಬೇಕಾದ ಸ್ಮಾರಕ. ಚಿತ್ರರಂಗದಲ್ಲಿ ಆಗಾಗ, ಇನ್ನೇನು ಮುಗಿದೇ ಹೋಯಿತು, ಎಲ್ಲ ಫೈನಲ್ ಎಂಬ ಹಂತದ ಮಾತುಕತೆಗಳನ್ನು ಕೇಳಿದ ಮೇಲೂ ಮತ್ತೆ ಲೀಗ್ ಮ್ಯಾಚ್ ಹಂತಕ್ಕೆ ಹೋಗುವಂಥ ಎರಡು ವಿಷಯಗಳು ಇವು. ಇದು ಕೇವಲ ವಿಷ್ಣು ಅಭಿಮಾನಿಗಳಿಗೆ ಮಾತ್ರವಲ್ಲ ಅಪ್ಪಟ ಸಿನಿಪ್ರಿಯರಿಗೆಲ್ಲಾ ಇದೊಂಥರಾ ಮುಜುಗರದ ವಿಷಯ. ಈ ಹೊಸ ವರ್ಷದಲ್ಲಾದ್ರೂ, ವಿಷ್ಣುವರ್ಧನ್ ಅವರ ಸ್ಮಾರಕದ ಬಗ್ಗೆ ಒಂದು ಅಂತಿಮ ನಿರ್ಧಾರ ಆಗಿ ಆ ಕೆಲಸಕ್ಕೆ ಚಾಲನೆ ಸಿಗಲಿ ಅನ್ನೋದು ಎಲ್ಲರ ಆಶಯ. ಅಂದಹಾಗೆ, ಒಬ್ಬ ವ್ಯಕ್ತಿಯ ಹೆಸರು ಉಳೀಬೇಕು ಅಂದ್ರೆ ಸ್ಮಾರಕ ಆಗಲೇ ಬೇಕು ಎಂದೇನಿಲ್ಲ. ಈ ಸ್ಮಾರಕಗಳೆಲ್ಲಾ ಕೇವಲ 'ನಾಮ್-ಕೆ-ವಾಸ್ತೆ' ಎನ್ನುವ ಕೆಲವರ ವಾದವೂ ನಿಜ. ಏಕೆಂದರೆ, ನಿಜವಾದ ವ್ಯಕ್ತಿತ್ವ ಜನರ ಮನದಲ್ಲಿ ಸ್ಮಾರಕವಾಗಿ ಉಳಿದಿರುತ್ತದೆ. ಸ್ಮಾರಕ ಆಗಲಿ ಬಿಡಲಿ, ರಾಮಾಚಾರಿ ಯನ್ನು ಈ ಕರುನಾಡು ಎಂದಿಗೂ ಮರೆಯೋದು ಸಾಧ್ಯವಿಲ್ಲ. ಹಾಗಾಗಿ, 'ನಾಗರಹಾವು' ಚಿತ್ರದ 'ಹಾವಿನ ದ್ವೇಷ ಹನ್ನೆರಡು ವರುಷ, ನನ್ನ ರೋಷ ನೂರು ವರುಷ' ಹಾಡಿನ ಧಾಟಿಯಲ್ಲೇ ಅಪ್ಪಟ ವಿಷ್ಣು ಅಭಿಮಾನಿ ಹೇಳುತ್ತಿದ್ದಾನೆ- ನೀವು ಹೋಗಿ ಹದಿನಾರು ವರುಷ, ನಮ್ಮ ಪ್ರೀತಿಗೆ ನೂರು ವರುಷ.

ಲೂಸ್ ಟಾಕ್ ▸▸ ಡೊನಾಲ್ಡ್ ಟ್ರಂಪ್

- **ಏನ್ ಟ್ರಂಪ್ ಅವ್ರೇ, ಎಣ್ಣೆ ಇರೋ ಕಡೆ ಎಲ್ಲ ಕಣ್ಣು ಹಾಕ್ತಾ ಇದ್ದೀರಂತೆ?**
- ಹೌದು, ಟ್ರಂಪು ಕಣ್ಣು ಎಣ್ಣೆ ಮ್ಯಾಗೆ ಅಂತ ನಿಮ್ಮ ಉಪೇಂದ್ರ ಹಾಡು ಬರೀಲಿ ಅಂತ
- **ಸರಿ, ಆದ್ರೆ ನಿಮಗೆ ಈ ಎಣ್ಣೆ ವ್ಯಾಮೋಹ ಯಾಕೆ? ಅದಕ್ಕೋಸ್ಕರ ಸಿಕ್ಕಿದವರನ್ನೆಲ್ಲಾ ಬಂಧಿಸೋದು ಸರಿನಾ?**
- ಹೆಣ್ಣಿನ ವ್ಯಾಮೋಹ ಇರೋದಕ್ಕಿಂತ ಈ ಎಣ್ಣೆಯ ವ್ಯಾಮೋಹ ಒಳ್ಳೇದೇ ಬಿಡ್ರಿ. 'ಎಣ್ಣೇ ನಿನಗಾಗಿ ಬಂಧನ' ಅಂತ ಒಂದು ಸಿನಿಮಾ ಮಾಡ್ತಾ ಇದ್ದೀನಿ.
- **ಆದ್ರೂ ಜನ ನಿಮ್ಮ ಬಗ್ಗೆ ಏನೆಲ್ಲಾ ಮಾತಾಡ್ತಾ ಇದ್ದಾರೆ ಗೊತ್ತಾ?**
- ಜನ ಏನೋ ಅಂತಾರೆ ಅಂತ ಎಣ್ಣೆ ಬಂದಾಗ ಕಣ್ಣು ಮುಚ್ಚಿ ಕೂತ್ಕೊಳೋಕೆ ಆಗುತ್ತಾ? ಟ್ರಂಪು ಕಣ್ಣು ಎಣ್ಣೆಗೆಂಪು ಅಂತ ಜನ ಮಾತಾಡೋದ್ ಕೇಳೋಕೆ ಕಿವಿಗೆ ಇಂಪು.
- **ನಿಮ್ಮ ಮುಂದಿನ ಟಾರ್ಗೆಟ್ ಯಾರು?**
- ನಿಮ್ಮ ತೆಲಂಗಾಣದಲ್ಲಿ ತೇಲ್ ಇದೆ ಅಂತ ಗೊತ್ತಾಗಿದೆ. ಇಷ್ಟರಲ್ಲೇ ಗೊತ್ತಾಗುತ್ತೆ ನೋಡ್ತಾ ಇರಿ.
- **ಸರಿ ಹೋಯ್ತು. ಹೋಗ್ಲಿ, ಮೋದಿ ಅವರನ್ನೂ ಕಿಡ್ನ್ಯಾಪ್ ಮಾಡಿಸ್ತೀರ ಅಂತ ಸುದ್ದಿ ಇದೆಯಲ್ಲ**
- ಅವರಿಗೂ ನನಗೂ ಎಣ್ಣೆ ಸೀಗೇಕಾಯಿ ಸಂಬಂಧ; ಆದ್ರೆ ತೀರಾ ಅವರನ್ನ ಕಿಡ್ನ್ಯಾಪ್ ಎಲ್ಲ ಮಾಡಿಸಕಾಗಲ್ಲ ಬಿಡಿ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ನ್ಯಾಷನಲ್ ಹೈವೇನಲ್ಲಿ ಎರಡು ಕಾರುಗಳು ಡಿಕ್ಕಿಯಾಗಿ ದೊಡ್ಡ ಅಪಘಾತವೇ ಆಯಿತು. ಕಾರು ಚಲಾಯಿಸುತ್ತಿದ್ದ ಖೇಮು ಕೆಳಗಿಳಿದು ಬಂದು ನೋಡಿದ. ಇನ್ನೊಂದು ಕಾರಿನಲ್ಲಿದ್ದದ್ದು ಒಂದು ಹುಡುಗಿ. ಹಾಗೆ ನೋಡಿದರೆ ಖೇಮುದೇನೂ ತಪ್ಪಿರಲಿಲ್ಲ. ಆಕೆಯೇ ಫಾಸ್ಟ್ ಆಗಿ ರಾಂಗ್ ಸೈಡಲ್ಲಿ ಬಂದು ಗುದ್ದಿದ್ದಳು. ಇಬ್ಬರ ಕಾರಿಗೂ ಡ್ಯಾಮೇಜ್ ಆಗಿತ್ತು. ಖೇಮು ಅವಳ ಬಳಿ ಎಲ್ಲದರ ಖರ್ಚು ವಸೂಲಿ ಮಾಡಬೇಕು ಎಂದುಕೊಂಡು ಬಂದ. ಆದರೆ ಹುಡುಗಿಯನ್ನ ನೋಡಿ ಒಂದು ಕ್ಷಣ ಮೈಮರೆತ. ಅಷ್ಟು ಚೆನ್ನಾಗಿದ್ಲು ಹುಡುಗಿ. ಅವಳು ಸೀದಾ ಇವನ ಬಳಿ ಬಂದವಳೇ, ಕಾಮ್ ಆಗಿ ಮಾತಾಡಿದಳು. ''ಇಲ್ನೋಡಿ, ಇಬ್ಬರ ಕಾರೂ ಸಿಕ್ಕಾಪಟ್ಟೆ ಡ್ಯಾಮೇಜ್ ಆಗಿದೆ. ಆದರೆ ನಮಗಿಬ್ಬರಿಗೂ ಏನೂ ಆಗಿಲ್ಲ. ಇದರ ಅರ್ಥ ಏನು?'' ಅಂತ ಕೇಳಿದಳು. ''ಏನು?'' ಅಂದ ಖೇಮು. ''ನೋಡಿ, ನಮ್ಮಿಬ್ಬರನ್ನು ಸೇರಿಸೋಕೆ ಅಂತನೇ ದೇವರು ಈ ರೀತಿ ಮಾಡಿದ್ದಾನೆ. ಅವನ ಮನಸ್ಸಿನಲ್ಲಿ ನಾವಿಬ್ಬರೂ ಜತೆಯಾಗಿ ಜೀವನ ಮಾಡಬೇಕು ಅನ್ನೋ ಆಸೆ ಇದೆ ಅನ್ನಿಸುತ್ತೆ. ಹಾಗಾಗಿ ನಮ್ಮನ್ನ ಈ ರೀತಿ ಭೇಟಿ ಮಾಡಿಸಿದ್ದಾನೆ'' ಅಂತ ರೊಮ್ಯಾಂಟಿಕ್ ಆಗಿ ಹೇಳಿದಳು. ಅದನ್ನು ಕೇಳಿ ಖೇಮು ಒಂದೇ ನಿಮಿಷದಲ್ಲಿ ಅವಳ ಕಡೆ ಆಕರ್ಷಿತನಾದ. ಆ ಹುಡುಗಿ ಮತ್ತೆ ಹೇಳಿದಳು, ''ಅಲ್ನೋಡಿ, ನನ್ನ ಕಾರು ಅಷ್ಟೊಂದ್ ಡ್ಯಾಮೇಜ್ ಆಗಿದ್ದರೂ, ಅದರಲ್ಲಿದ್ದ ಈ ವಿಸ್ಕಿ ಬಾಟಲ್ ಮಾತ್ರ ಹಾಗೇ ಇದೆ. ಇದರ ಅರ್ಥ, ದೇವರು ನಮ್ಮ ಜೀವನದ ಈ ಪ್ರಮುಖ ಗಳಿಗೆಯನ್ನು ಎಂಜಾಯ್ ಮಾಡಿ ಅಂತ ನಮಗೆ ಹೇಳ್ತಾ ಇದ್ದಾನೆ''. ಖೇಮು ಹೌದು ಅಂತ ತಲೆ ಆಡಿಸಿದ. ತಕ್ಷಣ, ಖೇಮುಗೆ ಒಂದು ಗ್ಲಾಸಿನಲ್ಲಿ ವಿಸ್ಕಿ ಸುರಿದುಕೊಟ್ಟಳು. ಅವಳನ್ನು ನೋಡುತ್ತಾ ವಿಸ್ಕಿ ಹೀರುತ್ತಿದ್ದ ಖೇಮುಗೆ ಗ್ಲಾಸ್ ಖಾಲಿ ಆಗಿದ್ದೇ ಗೊತ್ತಾಗಲಿಲ್ಲ. ಮತ್ತೆ ವಿಸ್ಕಿ ಹಾಕಿದಳು ಹುಡುಗಿ. ಅದನ್ನೂ ಹೀರುತ್ತಾ ಖೇಮು, ''ಅರೇ, ಬರೀ ನನಗೇ ಕುಡಿಸುತ್ತಿದ್ದೀಯ, ನೀನು ಕುಡಿಯಲ್ವಾ?'' ಅಂತ ಕೇಳಿದ. ಅದಕ್ಕೆ ಹುಡುಗಿ ಹೇಳಿದಳು, ''ಇಲ್ಲ, ಪೊಲೀಸ್ ಬರ್ಲಿ ಅಂತ ನಾನು ಕಾಯ್ತಾ ಇದ್ದೀನಿ''.

ಲೈನ್‌ಮ್ಯಾನ್

- **ಫುಡ್ v/s ಫಿಲಾಸಫಿ**
- ಹಸಿವಿಲ್ಲದವನಿಗೆ ಅನ್ನ ಕೊಡಬಾರದು,
- ಟೇಸ್ಟ್ ಇಲ್ಲದವನಿಗೆ ಬಿರಿಯಾನಿ ಕೊಡಬಾರದು.
- **ಸಹಕಾರ-ಸರಕಾರ**
- 'ಒಂದು ನಿಸ್ವಾರ್ಥ ಸೇವೆಯ ಕೆಲಸದ ಮಾಡಬೇಕು ಅಂತಿದ್ದೀವಿ'
- 'ಮಾಡಿ, ಮಾಡಿ, ನನ್ನ ಸಹಕಾರ ಇದ್ದೇ ಇರುತ್ತೆ'
- 'ಹಂಗಾದ್ರೆ, ಒಂದ್ 10 ಲಕ್ಷ ಕೊಡಿ'
- 'ನಾನ್ ಹೇಳಿದ್ದು, ನನ್ನ ಸಹಕಾರ ಇದೆ ಅಂತ, ನನ್ನ ಸರಕಾರ ಇದೆ ಅಂತ ಅಲ್ಲ'
- **ತನ್ನ ಬ್ಯಾಟಿಂಗ್‌ನಲ್ಲಿ ರನ್ ಹೊಡೆದು, ಬೋಲಿಂಗ್‌ನಲ್ಲಿ ತಾನೂ ಹೊಡೆಸಿಕೊಳ್ಳುವ ಆಲ್‌ರೌಂಡರ್ ಒಬ್ಬನ ಪಾಲಿಸಿ**
- ದುಡಿದ್ದರಲ್ಲಿ ಮಾತ್ರ ಅಲ್ಲ, ಹೊಡೆದಿದ್ದರಲ್ಲೂ ಒಂದಿಷ್ಟಾದರೂ ದಾನ ಮಾಡಬೇಕು.
- **ಐಪಿಎಲ್ ಅವಾರ್ಡ್ಸ್**
- ಪ್ರತಿ ಮ್ಯಾಚ್ ಮುಗಿದಾಗಲೂ ಒಂದೊಂದ್ ಸ್ಪಾನ್ಸರ್ ಹೆಸರಲ್ಲಿ ಒಂದೊಂದ್ ಅವಾರ್ಡ್ ಕೊಡ್ತಾರೆ. ಹಂಗೇನೇ, ಮ್ಯಾಚಲ್ಲಿ ಜಾಸ್ತಿ ಬಾಲು 'ತಿಂದವನಿಗೂ' ಒಂದ್ ಅವಾರ್ಡ್ ಕೊಡ್ರೋ.. 'ಜೊಮ್ಯಾಟೋ'ದವ್ರು ಸ್ಪಾನ್ಸರ್ ಮಾಡ್ತಾರೆ
- **ಐಪಿಎಲ್ ಗಾದೆ**
- ಊಟ ಬಲ್ಲವನಿಗೆ ರೋಗವಿಲ್ಲ, ಆಟ ಬಲ್ಲವನಿಗೆ ಜಗಳವಿಲ್ಲ
- **ಐಪಿಎಲ್ ಫ್ಯಾನ್ಸ್ ವಿಷ್ಯ**
- ಎನಿ ಸ್ಪೋರ್ಟ್ ಈಸ್ ನಥಿಂಗ್ ವಿತೌಟ್ ಸಪೋರ್ಟ್
- **ಇನ್ನೊಬ್ಬರನ್ನ ಕನ್ವಿನ್ಸ್ ಮಾಡೋ ಕೆಲಸಕ್ಕೆ ಬಹುಮಾನ ಕೊಟ್ಟರೆ ಅದಕ್ಕೆ ಏನಂತಾರೆ?**
- ಸಮಾಧಾನಕರ ಬಹುಮಾನ
- **ಪಾರ್ಕಿನಲ್ಲಿ ಬೆಳೆದು ನಿಂತ ಹೂವುಗಳನ್ನು ಕೀಳುವವರದ್ದು**
- 'ಕೀಳು' ಜಾತಿ
- **ಎಲ್ಲದಕ್ಕೂ 'ಅದೇನ್ ಕಿತ್ಕೊ ತೀಯಾ ಕಿತ್ಕೋ' ಅನ್ನೋದು**
- 'ಕೀಳು' ಅಭಿರುಚಿ

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 250

ಸಮಾಚಾರ ಸಣ್ಣದಲ್ಲ

ರಾಮ ಮಂದಿರ ಸುತ್ತ ಮಾಂಸ-ಮದ್ಯ ನಿಷಿದ್ಧ

ಅಯೋಧ್ಯೆ: ಉತ್ತರ ಪ್ರದೇಶ ರಾಜ್ಯದ ಅಯೋಧ್ಯೆಯಲ್ಲಿರುವ ಶ್ರೀರಾಮ ಮಂದಿರದ ಸುತ್ತಲ 15 ಕಿಮೀ ವ್ಯಾಪ್ತಿಯಲ್ಲಿ ರಾಮ ಮಂದಿರದ 15 ಕಿ.ಮೀ ವ್ಯಾಪ್ತಿಯಲ್ಲಿ ಮದ್ಯ-ಮಾಂಸಾಹಾರ ಮಾರಾಟ-ಆನ್ಲೈನ್ ಪೂರೈಕೆಯನ್ನು ನಿಷೇಧಿಸಿ ದೇಗುಲದ ಆಡಳಿತ ಮಂಡಳಿ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಅಯೋಧ್ಯೆಯ ಕೆಲ ಹೋಟೆಲ್ ಮತ್ತು ಹೋಂ ಸ್ಟೇಗಳಲ್ಲಿ ಅತಿಥಿಗಳಿಗೆ ಮಾಂಸಾಹಾರ-ಮದ್ಯ ಪೂರೈಕೆ ಆಗುತ್ತಿದೆ. ಆನ್‌ಲೈನ್ ಬುಕಿಂಗ್ ಮೂಲಕ ಮದ್ಯ ಮಾಂಸಾಹಾರ ಪೂರೈಕೆಯಾಗುತ್ತಿದೆ ಎಂದು ನಾಗರಿಕರಿಂದ ನಿರಂತರ ದೂರು ಕೇಳಿಬಂದ ಹಿನ್ನೆಲೆ 'ಪಂಚಕೋಶ ಪರಿಕ್ರಮ' ದಡಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಯೋಧ್ಯೆ-ಫೈಜಾಬಾದ್ ಸಂಪರ್ಕದ 14 ಕಿಮೀ ರಾಮ ಪಥದಲ್ಲಿ ಮದ್ಯ-ಮಾಂಸ ಮಾರಾಟ ನಿಷೇಧಕ್ಕೆ ಅಯೋಧ್ಯೆ ಪುರಸಭೆಯೇ 2025ರ ಮೇ ತಿಂಗಳಲ್ಲಿ ನಿರ್ಧಾರ ತೆಗೆದುಕೊಂಡಿತ್ತು. ಆದರೆ 9 ತಿಂಗಳಾದರೂ ಕಟ್ಟುನಿಟ್ಟಾಗಿ ನಿಷೇಧ ಕ್ರಮ ಜಾರಿ ಆಗಿರಲಿಲ್ಲ. 20ಕ್ಕೂ ಹೆಚ್ಚು ಮಳಿಗೆಗಳು ಇದೇ ಭಾಗದಲ್ಲಿ ಮದ್ಯ ಮಾರುತ್ತಿದ್ದವು.

ನಿತೀಶ್‌ಗೆ ಭಾರತರತ್ನ: ಕೆ.ಸಿ.ತ್ಯಾಗಿ ಮನವಿ

ಪಟನಾ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅಮೂಲ್ಯವಾದ ರತ್ನ ಎಂದು ಬಣ್ಣಿಸಿರುವ ಜೆಡಿಯು ನಾಯಕ, ಮಾಜಿ ಸಂಸದ ಕೆ.ಸಿ. ತ್ಯಾಗಿ, ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಬೇಕೆಂದು ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದಾರೆ. ಈ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರವನ್ನೂ ಬರೆದಿದ್ದಾರೆ. ಆದರೆ ಬಿಹಾರದಲ್ಲಿನ ಆಡಳಿತರೂಢ ಪಕ್ಷವಾದ ಜನತಾ ದಳ (ಸಂಯುಕ್ತ) ತ್ಯಾಗಿ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದೆ. ಅವರ ಹೇಳಿಕೆ ಪಕ್ಷದ ಸಿದ್ಧಾಂತಕ್ಕೆ ಹೊಂದಿಕೆಯಾಗದು ಎಂದು ಶನಿವಾರ ಪ್ರತಿಕ್ರಿಯಿಸಿದೆ.

ಸೀತಾರಸೋಯಿ ಬಳಿ ನಮಾಜ್: ಒಬ್ಬನ ಸೆರೆ

ಅಯೋಧ್ಯೆ: ಅಯೋಧ್ಯೆಯ ಶ್ರೀ ರಾಮ ಮಂದಿರ ಸಂಕೀರ್ಣದ ಬಳಿ ಸೀತಾ ರಸೋಯಿ ಇರುವಲ್ಲಿ ನಮಾಜ್ ಮಾಡಲೆತ್ನಿಸಿದ ಕಾಶ್ಮೀರಿ ಉಡುಪು ಧರಿಸಿದ್ದ ವ್ಯಕ್ತಿಯನ್ನು ಭದ್ರತಾ ಪಡೆ ಸಿಬ್ಬಂದಿಗಳು ಶನಿವಾರ ಬಂಧಿಸಿದ್ದಾರೆ.

ರಾಮ ಮಂದಿರದ ಗೇಟ್ ಡಿ1 ಮೂಲಕ ಆವರಣ ಪ್ರವೇಶಿಸಿದ್ದ ಜಮ್ಮು-ಕಾಶ್ಮೀರದ ಶೋಪಿಯಾನ್ ಜಿಲ್ಲೆ ನಿವಾಸಿ ಅಹ್ಮದ್ ಶೇಖ್, ಮಂದಿರ ಸಂಕೀರ್ಣದ ದಕ್ಷಿಣ ಗೋಡೆಯ ಪ್ರದೇಶದಲ್ಲಿರುವ ಸೀತಾ ರಸೋಯಿ ಬಳಿ ನಮಾಜ್ ಮಾಡಲು ಯತ್ನಿಸಿದ. ತಕ್ಷಣವೇ ಭದ್ರತಾ ಸಿಬ್ಬಂದಿ ಆತನನ್ನು ತಡೆದು ಎಳೆದುಕೊಂಡು ಹೋಗಲಾರಂಭಿಸಿದರು. ಆತ ಆತ ಘೋಷಣೆ ಕೂಗಲಾರಂಭಿಸಿದ ಎಂದು ವರದಿಯಾಗಿದೆ. ತಕ್ಷಣವೇ, ಗುಪ್ತಚರ ಸಂಸ್ಥೆಗಳು, ಸ್ಥಳೀಯ ಪೊಲೀಸರು, ಹಿರಿಯ ಆಡಳಿತಾಧಿಕಾರಿಗಳು ಶಂಕಿತನನ್ನು ಪ್ರಶ್ನೆ ಮಾಡಿ, ಆತನ ಉದ್ದೇಶ, ಹಿನ್ನೆಲೆ ಕುರಿತು ಮಾಹಿತಿ ಕಲೆಹಾಕುತ್ತಿದ್ದಾರೆ.

ರೂರ್ಕೆಲಾ ಸಣ್ಣ ವಿಮಾನ ಪತನ, 6 ಜನಕ್ಕೆ ಗಾಯ

ರೂರ್ಕೆಲಾ: ಒಡಿಶಾ ರಾಜ್ಯದ ರೂರ್ಕೆಲಾದಿಂದ ಭುವನೇಶ್ವರಕ್ಕೆ ಹಾರುತ್ತಿದ್ದ 'ಇಂಡಿಯ 1 ಏರ್' ಸಂಸ್ಥೆಯ 9 ಆಸನಗಳ ಸಣ್ಣ ವಿಮಾನ ಶನಿವಾರ ಪತನಗೊಂಡಿದೆ. ವಿಮಾನದಲ್ಲಿ 6 ಪ್ರಯಾಣಿಕರು ಮತ್ತು ಒಬ್ಬ ಪೈಲಟ್ (7 ಜನ) ಇದ್ದರು. ರೂರ್ಕೆಲಾದಿಂದ 15 ಕಿ.ಮೀ. ದೂರದಲ್ಲಿ ವಿಮಾನ ಪತನಗೊಂಡಿದ್ದು, ಪೈಲಟ್ ಸೇರಿದಂತೆ ಆರು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ರಕ್ಷಣಾ ತಂಡ, ಅಪಘಾತ ಸ್ಥಳಕ್ಕೆ ಧಾವಿಸಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ.

ಮುಫ್ತಿ ನೂರ್ ದೆಹಲಿಗೆ ತಾಲಿಬಾನ್ ರಾಯಭಾರಿ

ದೆಹಲಿ: ಅಫ್ಘಾನಿಸ್ತಾನ ಸರಕಾರದಿಂದ ಭಾರತದಲ್ಲಿನ ರಾಯಭಾರಿಯಾಗಿ ನೇಮಕಗೊಂಡಿರುವ ಮುಫ್ತಿ ನೂರ್ ಅಹಮದ್ ನೂರ್ ದೆಹಲಿಯಲ್ಲಿನ ಧೂತಾವಾಸದಲ್ಲಿ ಶನಿವಾರ ಅಧಿಕಾರ ಸ್ವೀಕರಿಸಿದ್ದಾರೆ. ಇದಕ್ಕೂ ಮುನ್ನ ಅವರು ಅಫ್ಘಾನಿಸ್ತಾನದ ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಮೊದಲ ರಾಜಕೀಯ ಇಲಾಖೆಯಲ್ಲಿ ಮಹಾ ನಿರ್ದೇಶಕರಾಗಿದ್ದರು. ನೆರೆಯ ಪಾಕಿಸ್ತಾನ, ಬಾಂಗ್ಲಾದೇಶ, ಚೀನಾ ಜತೆ ಸಂಘರ್ಷ ಮುಂದುವರಿದಿರುವಾಗ ಭಾರತ ಮತ್ತು ಅಫ್ಘಾನಿಸ್ತಾನದ ನಡುವಿನ ಮೈತ್ರಿ ದಿನೇ ದಿನೇ ದೃಢವಾಗುತ್ತಿದೆ ಎಂಬುದು ಉಲ್ಲೇಖಾರ್ಹ.

{ಯೋಗಿ ಆದಿತ್ಯನಾಥ್} ಉ.ಪ್ರ. ಸಿಎಂ

ಬಾಂಗ್ಲಾದಲ್ಲಿ ಹಿಂದೂ ಮೇಲೆ ಸರಣಿ ಹಿಂಸೆ-ನರಮೇಧ ನಡೆಯುತ್ತಿದ್ದರೂ ಜಾತ್ಯತೀತವಾದಿ 'ಚಾಂಪಿಯನ್'ಗಳಿಂದ ಒಂದು ಶಬ್ದವೂ ಹೊರಬಂದಿಲ್ಲ. ಕ್ಯಾಂಡಲ್ ಮಾರ್ಚ್ ಕೂಡಾ ನಡೆಸುತ್ತಿಲ್ಲ, ಏಕೆ? ಸೆಕ್ಯುಲರಿಸ್ಟ್‌ಗಳ ಈ ದಿವ್ಯ ಮೌನದ ಅರ್ಥವೇನು? ಅವರ ಬಾಯಿಗೆ ಯಾರಾದರೂ 'ಫೆವಿಕಾಲ್' ಅಂಟು ಹಾಕಿಬಿಟ್ಟಿದ್ದಾರೆಯೇ? ಇದು ಹಿಂದೂಗಳಿಗೆ ಎಚ್ಚರಿಕೆ ಗಂಟೆ.

ಪ್ರತಿಮೆಯಲ್ಲೇ ಮಗನನ್ನು ಕಾಣುತ್ತಿರುವ ತಾಯಿ ಜಸ್ವಂತ್ ಕೌರ್ | ಚಳಿಯಲ್ಲಿ ಪತ್ರಿಮೆ ನಡುಗದಿರಲೆಂದು ಕಂಬಳಿ ಹೊದಿಸಿದ ತಾಯಿ

ಉಗ್ರನ ಕೊಂದು ಹುತಾತ್ಮನಾದ ಯೋಧ ಪುತ್ರನ ಪ್ರತಿಮೆಗೆ ಅಮ್ಮನ ರಕ್ಷಣೆ

ಶ್ರೀನಗರ: ಹೆತ್ತ ಮಕ್ಕಳ ಸಂಕಟ ತಾಯಿಯ ಕರುಳಿಗೆ ಮೊದಲು ಗೊತ್ತಾಗುತ್ತದೆ, ಮಕ್ಕಳ ಯಶಸ್ಸು, ಆರೋಗ್ಯ, ಸಂತೋಷ, ನೆಮ್ಮದಿಗಾಗಿಯೇ ಹೆತ್ತ ಕರುಳು ಸದಾ ಮಿಡಿಯುತ್ತಲೇ ಇರುತ್ತದೆ ಎಂಬ ಮಾತನ್ನು ಮತ್ತೊಮ್ಮೆ ದೃಢೀಕರಿಸುವ ಘಟನೆ ಜಮ್ಮು-ಕಾಶ್ಮೀರದ ಆರ್‌ಎಸ್ ಪುರದಲ್ಲಿ ಇತ್ತೀಚೆಗೆ ನಡೆದಿದೆ.

ಜಮ್ಮು-ಕಾಶ್ಮೀರದಲ್ಲಿ ನಡೆದಿದ್ದ ಭಯೋತ್ಪಾದಕರ ದಾಳಿಯಲ್ಲಿ ಬಿಎಸ್‌ಎಫ್ ಕಾನ್‌ಸ್ಟೆಬಲ್ ಆಗಿದ್ದ ಗುರ್ನಾಮ್ ಸಿಂಗ್ ಹುತಾತ್ಮರಾದರು. ಆರ್‌ಎಸ್ ಪುರದ ಚೌಕದಲ್ಲಿ ಗುರ್ನಾಮ್ ಪ್ರತಿಮೆ ಸ್ಥಾಪಿಸಿ, ಸುತ್ತಲೂ ಗಾಜಿನ ಚೌಕಟ್ಟು ರಚಿಸಲಾಗಿದೆ. 'ಹುತಾತ್ಮ ಗುರ್ನಾಮ್ ಚೌಕ' ಎಂದೇ ನಾಮಕರಣ ಮಾಡಲಾಗಿದೆ. ಮಗ ಗುರ್ನಾಮ್ ಸಿಂಗ್‌ನನ್ನು ಕಳೆದುಕೊಂಡ ತಾಯಿ ಜಸ್ವಂತ್ ಕೌರ್ ಅಂದಿನಿಂದಲೇ ಅವನ ನೆನಪಲ್ಲೇ ದಿನ ದೂಡುತ್ತಿದ್ದರು. ಇತ್ತೀಚೆಗೆ ಜಮ್ಮು-ಕಾಶ್ಮೀರದಲ್ಲಿ ತಾಪಮಾನ ಮೈನಸ್ 8 ಡಿ.ಸೆ.ವರೆಗೂ ಕುಸಿದಿತ್ತು. ತೀವ್ರ ಚಳಿಗೆ ಜಮ್ಮು-ಕಾಶ್ಮೀರದ ಜನರು ತತ್ತರಿಸಿ ಹೋಗಿದ್ದರು. ಇದರ ನಡುವೆ ಗುರ್ನಾಮ್ ತಾಯಿಗೆ 'ನನ್ನ ಮಗನ ಪ್ರತಿಮೆಗೂ ಚಳಿಯಾಗುತ್ತದೆ. ಈ ತೀವ್ರ ಚಳಿಯಲ್ಲಿ ಅವನನ್ನು ಹೇಗೆ ನಡುಗಲು ಬಿಡಲಿ' ಎಂದು ಕಳವಳಗೊಂಡರು. ತಕ್ಷಣವೇ ದೊಡ್ಡ ಗೌನ್ ರೀತಿಯಲ್ಲಿ ದಪ್ಪನಾದ ಕಂಬಳಿ ರಚಿಸಿ ಅದನ್ನು ಆರ್‌ಎಸ್ ಪುರದಲ್ಲಿರುವ ಮಗನ ಪ್ರತಿಮೆಗೆ ಹೊದಿಸಿದ್ದಾರೆ. ಮನಕಲುಕುವ ಘಟನೆಗೆ ಜಮ್ಮು-ಕಾಶ್ಮೀರದ ಜನರೂ ಕಣ್ಣೀರಾಗಿದ್ದಾರೆ.

ನಿತ್ಯವೂ ಮಾತು-ಪೂಜೆ: ಜಸ್ವಂತ್ ಕೌರ್ ನಿತ್ಯವೂ ಬೆಳಗ್ಗೆ ಪ್ರತಿಮೆ ಬಳಿ ತೆರಳಿ ಮಗನನ್ನು ನೆನೆದು ಕಣ್ಣೀರಾಗುತ್ತಾರೆ. ಪ್ರತಿಮೆಯನ್ನು ಸ್ವಚ್ಛಗೊಳಿಸಿ ಪೂಜೆ ಸಲ್ಲಿಸಿ ಹೂವುಗಳನ್ನು ಅರ್ಪಿಸುತ್ತಾರೆ. ಕೆಲ ಹೊತ್ತು ಪ್ರತಿಮೆ ಜತೆಗೆ ಮಾತನಾಡಿ ವಾಪಸಾಗುತ್ತಾರೆ. ಈಗ ತೀವ್ರ ಚಳಿ ಎಂದು ದಪ್ಪನಾದ ಉಣ್ಣೆಯ ಕಂಬಲಿ ಹೊದಿಸಿದ್ದಾರೆ. ಹೆತ್ತ ಮಗನ ಕುರಿತು ತಾಯಿಯೊಬ್ಬಳ ಈ ಪರಿಯ ಪ್ರೀತಿ ಕಂಡು ಸ್ಥಳೀಯರೂ ಕಣ್ಣೀರಿಟ್ಟಿದ್ದಾರೆ.

ಉಗ್ರನನ್ನು ಕೊಂದು ಹುತಾತ್ಮರಾದ ಸಿಂಗ್

ಕುಲ್ಬೀರ್ ಸಿಂಗ್-ಜಸ್ವಂತ್ ಕೌರ ದಂಪತಿಯ ಪುತ್ರನಾಗಿ ಜಮ್ಮು ಭಾಗದ ಆರ್‌ಎಸ್ ಪುರ ಜಿಲ್ಲೆಯ ಅರ್ನಿಯಾ ತಾಲೂಕಿನ ಮೇಗೊವಾಲ್ ವ್ಯಾಪ್ತಿಯ ಭಾಲೊಸರ್ ಗ್ರಾಮದಲ್ಲಿ 1990ರ ಮಾ.14ರಂದು ಜನಿಸಿದ ಗುರ್ನಾ ಮ್ ಸಿಂಗ್, 2011ರ ಸೆ.15ರಂದು ಬಿಎಸ್‌ಎಫ್‌ಗೆ ಜನರಲ್ ಡ್ಯೂಟಿ ಕಾನ್‌ಸ್ಟೆಬಲ್ ಆಗಿ ಸೇರ್ಪಡೆಗೊಂಡರು. 2012 ಡಿ.12ರಂದು 173 ಬ್ರಿಗೇಡಿಯರ್ ರೆಜಿಮೆಂಟ್‌ಗೆ ನಿಯೋಜನೆಗೊಂಡರು. 2016ರಲ್ಲಿ ಅ.20ರಂದು ಭಾರತ-ಪಾಕಿಸ್ತಾನ ಅಂತಾರಾಷ್ಟ್ರೀಯ ಗಡಿ ರೇಖೆ ಬಳಿಯ ಹರಿ ನಗರ ಸೆಕ್ಟರ್‌ನಲ್ಲಿ ಕಾವಲಿದ್ದರು. ರಾತ್ರಿ 11.45ರಲ್ಲಿ ಪಾಕ್ ಕಡೆಯಿಂದ 6 ಉಗ್ರರು ಒಳನುಸುಳಲು ಹೊಂಚು ಹಾಕಿದ್ದರು. ಮೌಂಡ್ 2ರಲ್ಲಿ ಕಾವಲಿಗಿದ್ದ ಗುರ್ನಾಮ್ ಸಿಂಗ್, ಅಪಾಯವನ್ನು ಅರಿತು ಪಾಕ್ ಉಗ್ರರತ್ತ ಗುಂಡಿಕ್ಕಲಾರಂಭಿಸಿದರು. ಒಬ್ಬ ಉಗ್ರನನ್ನೂ ಗುರ್ನಾಮ್ ಹೊಡೆದುರುಳಿಸಿದರು. ಒಳನುಸುಳಲು ಯತ್ನಿಸಿದ್ದವರನ್ನು ಹಿಮ್ಮೆಟ್ಟಿಸಿ ದೇಶವನ್ನು ರಕ್ಷಿಸಿದ್ದರು. ಆದರೆ, ಇದೇ ಕಾರ್ಯಾಚರಣೆಯಲ್ಲಿ ಅ.21ರ ಬೆಳಗ್ಗೆ ಉಗ್ರರು ಹಾರಿಸಿದ ಗುಂಡು ಗುರ್ನಾಮ್ ಸಿಂಗ್ ತಲೆಗೆ ಹೊಕ್ಕಿತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಗುರ್ನಾಮ್ ಸಿಂಗ್‌ರನ್ನು ಜತೆಗಾರ ಯೋಧರು ತಕ್ಷಣವೇ ಸೇನಾ ಆಸ್ಪತ್ರೆಗೆ ಸೇರಿಸುವ ವ್ಯವಸ್ಥೆ ಮಾಡಿದರು. ಆದರೆ, ಅ.22ರ ರಾತ್ರಿ 11.15 ವೇಳೆಗೆ ಗುರ್ನಾಮ್ ಅಸುನೀಗಿದರು. ಭಾರತ ಸರಕಾರ ಮರಣೋತ್ತರ ಶೌರ್ಯಚಕ್ರ ನೀಡಿ ಗುರ್ನಾಮ್ ಸಿಂಗ್‌ಗೆ ಗೌರವ ಸಲ್ಲಿಸಿದೆ.

'ಇಒಎಸ್-ಎನ್1' ಉಪಗ್ರಹ ಜತೆ 14 ಉಪಗ್ರಹಗಳ ಉಡಾವಣೆ: ಇಸ್ರೊ

ನಾಳೆ ಬೆಳಗ್ಗೆ ಪಿಎಸ್‌ಎಲ್‌ವಿ 64ನೇ ಜಿಗಿತ

ಶ್ರೀಹರಿಕೋಟಾ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ವಾಣಿಜ್ಯ ವಿಭಾಗ 'ನ್ಯೂಸ್ಪೇಸ್ ಇಂಡಿಯ ಲಿ.' (ಎನ್‌ಎಸ್‌ಐಎಲ್) ಸೋಮವಾರ ಬೆಳಗ್ಗೆ ಒಟು 15 ಉಪಗ್ರಹಗಳ ಉಡಾವಣೆ ನಡೆಸಲಿದೆ.

ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್(ಪಿಎಸ್‌ಎಲ್‌ವಿ)-ಸಿ62 ಮೂಲಕ 1 ದೇಶೀ ಉಪಗ್ರಹ ಮತ್ತು ಬೇರೆ ಬೇರೆ ದೇಶಗಳ ಗ್ರಾಹಕ ಸಂಸ್ಥೆಗಳ 14 ಉಪಗ್ರಹಗಳು ಸೇರಿ ಒಟ್ಟು 15 ಉಪಗ್ರಹಗಳನ್ನು ಉಡಾವಣೆ ಮಾಡಲಿದೆ. ಇಸ್ರೊ ತನ್ನ 2026ನೇ ವರ್ಷದ ಕ್ಯಾಲೆಂಡರ್‌ನಲ್ಲಿ ಆರಂಭದಲ್ಲೇ ವಾಣಿಜ್ಯ ಚಟುವಟಿಕೆಗಳನ್ನು ಭರ್ಜರಿಯಾಗಿ ಆರಂಭಿಸಿದೆ. ಜ.12 ರಂದು ಪಿಎಸ್‌ಎಲ್‌ವಿ-ಸಿ 62ಯ ಮೊದಲ ವಾಣಿಜ್ಯ ಕಾರ್ಯಾಚರಣೆ ನಡೆಯಲಿದೆ. ಈ ಬಾರಿಯ ಉಡಾವಣೆಯಲ್ಲಿ ಥಾಯ್ಲೆಂಟ್ ಮತ್ತು ಯುನೈಟೆಡ್ ಕಿಂಗ್ಡಮ್ ಜಂಟಿಯಾಗಿ ನಿರ್ಮಿಸಿರುವ 'ಇಒಎಸ್-ಎನ್ 1' ಭೂ ವೀಕ್ಷಣಾ ಉಪಗ್ರಹವೂ ಗಗನಕ್ಕೆ ಸೇರಿಕೊಳ್ಳಲಿದೆ. ಅಲ್ಲದೇ, ಬೇರೆ ಬೇರೆ ದೇಶಗಳ 14 ಸಣ್ಣ ಉಪಗ್ರಹಗಳನ್ನು ಆಕಾಶಕ್ಕೆ ಸಾಗಲಿವೆ. ಇದು ಪಿಎಸ್‌ಎಲ್‌ವಿ ರಾಕೆಟ್‌ನ 64ನೇ ಹಾರಾಟ. ಉಡಾವಣಾ ವಾಹನ ಮತ್ತು ಉಪಗ್ರಹಗಳ ಏಕೀಕರಣ ಕಾರ್ಯ ಪೂರ್ಣಗೊಂಡಿದೆ. ಉಡಾವಣೆಗೂ ಮುಂಚಿನ 'ಪೂರ್ವ ಪರಿಶೀಲನೆ ಕಾರ್ಯ'ಗಳು ಪ್ರಗತಿಯಲ್ಲಿವೆ. ಪಿಎಸ್‌ಎಲ್‌ವಿ-ಸಿ62 ಮಿಷನ್ ಸೋಮವಾರ ಬೆಳಗ್ಗೆ 10.17ಕ್ಕೆ ಆಂಧ್ರಪ್ರದೇಶದ ಕರಾವಳಿ ಭಾಗದಲ್ಲಿನ ಶ್ರೀಹರಿ ಕೋಟಾ ನಗರದ ಹೊರವಲಯದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ಉಡಾವಣಾ ವೇದಿಕೆ-1ರಿಂದ ಗಗನಕ್ಕೆ ಜಿಗಿಯಲಿದೆ ಎಂದು ಇಸ್ರೊ ತಿಳಿಸಿದೆ.

25 ಗಂಟೆ ಕೌಂಟ್‌ಡೌನ್: ಈ ಕಾರ್ಯಾಚರಣೆಗೆ ಜ.11ರಂದು 25 ಗಂಟೆಗಳ ಕೌಂಟ್‌ಡೌನ್ ಪ್ರಾರಂಭವಾಗಲಿದೆ. ಉಡಾವಣೆಗೊಂಡ ನಂತರ ಉಪಗ್ರಹಗಳನ್ನು ಉದ್ದೇಶಿತ 'ಸೂರ್ಯ-ಸಿಂಕ್ರೊನಸ್ ಕಕ್ಷೆ'ಗೆ ನಿಯೋಜಿಸಲಾಗುತ್ತದೆ. ರಾಕೆಟ್‌ನ 4ನೇ ಹಂತದ ಬೇರ್ಪಡಿಕೆ ಮತ್ತು ಸ್ಪ್ಯಾನಿಷ್ ಸ್ಟಾರ್ಟ್‌ಅಪ್‌ಗೆ ಸೇರಿದ ಕೆಸ್ಟ್ರೆಲ್ ಇನಿಶಿಯಲ್ ಟೆಕ್ನಾಲಜಿ ಡೆಮಾನ್‌ಸ್ಟ್ರೇಟರ್ ಕ್ಯಾಪ್ಸೂಲ್ ಪ್ರದರ್ಶನ ಉಡಾ ವಣೆ ನಂತರದ 2 ಗಂಟೆಗಳಷ್ಟು ಸಮಯ ತೆಗೆದುಕೊಳ್ಳುವ ನಿರೀಕ್ಷೆ ಇದೆ ಎಂದು ಇಸ್ರೊ ವಿಜ್ಞಾನಿಗಳು ತಿಳಿಸಿದ್ದಾರೆ.

ಏನು-ಎತ್ತ
- ಇಸ್ರೊ ಎನ್‌ಎಸ್‌ಐಎಲ್
- ಪಿಎಸ್‌ಎಲ್‌ವಿ-ಸಿ62 ರಾಕೆಟ್
- ಸೋಮವಾರ ಬೆಳಗ್ಗೆ 10.17
- 15 ಉಪಗ್ರಹ ಉಡಾವಣೆ
- ಭಾನುವಾರವೇ ಕೌಂಟ್‌ಡೌನ್

ಸೋಮವಾರ ಬೆಳಗ್ಗೆ ಗಗನಕ್ಕೆ ನೆಗೆಯಲು ಸಿದ್ಧವಾಗುತ್ತಿರುವ ಪಿಎಸ್‌ಎಲ್‌ವಿ-ಸಿ62 ರಾಕೆಟ್

ಈವರೆಗೆ 442 ವಿದೇಶಿ ಉಪಗ್ರಹ ಉಡಾವಣೆ

ಹಿಂದೆ ಉಪಗ್ರಹ ಉಡಾವಣೆಗೆ ವಿದೇಶವನ್ನು ಆಶ್ರಯಿಸಬೇಕಿದ್ದ ಭಾರತ ಈಗ ಬಾಹ್ಯಾಕಾಶ ಕ್ಷೇತ್ರದಲ್ಲಿ ದಾಪು ಗಾಲಿಡುತ್ತಿದೆ. ವಿದೇಶಿ ಸಂಸ್ಥೆಗಳ ಉಪಗ್ರಹಗಳನ್ನೂ ಉಡಾವಣೆ ಮಾಡಿಕೊಡುತ್ತಿದೆ. ಆ ಮೂಲಕ ವಾಣಿಜ್ಯ ದೃಷ್ಟಿಯಿಂದಲೂ ಯಶಸ್ಸು ಕಂಡಿದೆ. ಈವರೆಗೆ ಭಾರ ತದ ನೆಲದಿಂದ ಒಟ್ಟು 442 ವಿದೇಶಿ ಉಪಗ್ರಹಗಳನ್ನು ಗಗನಕ್ಕೆ ಕಳುಹಿಸಿಕೊಡಲಾಗಿದೆ. ಅದಕ್ಕೆ ಇಸ್ರೊ ನೆರವಾ ಗಿದೆ ಎಂದು ವಿಜ್ಞಾನಿಗಳು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಒಂದು ಕಾಲದಲ್ಲಿ ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶ ಕ್ಷೇತ್ರಗಳಲ್ಲಿ ಅಮೆರಿಕ, ಯೂರೋಪ್, ರಷ್ಯಾ ದೇಶಗಳನ್ನು ಅವಲಂಭಿಸಿದ್ದ ಭಾರತ ಈಗ ಪೂರ್ಣ ಸ್ವಾವಲಂಬಿಯಾಗಿದೆ. ಅಷ್ಟೇ ಅಲ್ಲ, ವಿಜ್ಞಾನ-ತಂತ್ರಜ್ಞಾನ-ವೈದ್ಯಕೀಯ ಕ್ಷೇತ್ರಗಳಲ್ಲಿ ಹಲವು ದೇಶಗಳಿಗೂ ನೆರವಾಗುತ್ತಿದೆ.

ಸಹೋದ್ಯೋಗಿಗಳ ಜತೆಗೂಡಿ ತಿರುಪತಿ ತಿಮ್ಮಪ್ಪನ ದರ್ಶನ ಪಡೆದ ಇಸ್ರೊ ಅಧ್ಯಕ್ಷ ವಿ.ನಾರಾಯಣನ್

ತಿಮ್ಮಪ್ಪನ ದರ್ಶನ ಪಡೆದ 'ಇಸ್ರೊ' ನಾರಾಯಣನ್

ಒಟ್ಟು 15 ಉಪಗ್ರಹಗಳನ್ನು ಒಡಲಲ್ಲಿ ಇಟ್ಟುಕೊಂಡು ಪಿಎಸ್‌ಎಲ್‌ವಿ-ಸಿ62 ರಾಕೆಟ್ ಸೋಮವಾರ ಬೆಳಗ್ಗೆ 64ನೇ ಉಡ್ಡಯನ ನಡೆಸಲಿರುವ ಹಿನ್ನೆಲೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ(ಇಸ್ರೊ)ದ ಅಧ್ಯಕ್ಷ ವಿ.ನಾರಾಯಣನ್ ಶನಿವಾರ ಬೆಳಗ್ಗೆಯೇ ತಿರುಮಲದ ತಿರುಪತಿಗೆ ತೆರಳಿ ಶ್ರೀ ವೆಂಕಟೇಶ್ವರ ಸ್ವಾಮಿಯ ದರ್ಶನ ಪಡೆದುಕೊಂಡರು. ಪಿಎಸ್‌ಎಲ್‌ವಿ ಯಶಸ್ವಿ ಉಡಾವಣೆ ಮತ್ತು 15 ಉಪಗ್ರಹಗಳು ಸುರಕ್ಷಿತವಾಗಿ ಕಕ್ಷೆ ಸೇರಲಿ ಎಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸಿದರು ಎಂದು ವರದಿಯಾಗಿದೆ. ಈ ಸಂದರ್ಭ 'ಇಸ್ರೊ'ದ ಹಲವು ಅಧಿಕಾರಿಗಳು, ಹಿರಿಯ ವಿಜ್ಞಾನಿಗಳು ನಾರಾಯಣನ್ ಅವರ ಜತೆಗಿದ್ದರು. ಪಿಎಸ್‌ಎಲ್‌ವಿ ಗಗನನೌಕೆಯು ಈವ ರೆಗೆ 63 ಗಗನಯಾನಗಳನ್ನು ಬಲು ಯಶಸ್ವಿಯಾಗಿ ಪೂರ್ಣ ಗೊಳಿಸಿದೆ. ಚಂದ್ರಯಾನ-1 ಉಪಗ್ರಹದ ಉಡಾವಣೆ, 'ಮಾಸ್ ಆರ್ಬಿಟ್ ಮಿಷನ್'(ಎಂಒಎಂ-ಮಾಮ್) ಮತ್ತು ಸೂರ್ಯನ ಅಧ್ಯಯನಕ್ಕೆಂದು ತೆರಳಿರುವ 'ಆದಿತ್ಯ-ಎಲ್1' ಉಪಗ್ರಹಗಳ ಉಡಾವಣೆಯನ್ನೂ ಬಲು ಯಶಸ್ವಿಯಾಗಿ ಪಿಎಸ್‌ಎಲ್‌ವಿ ರಾಕೆಟ್ ಪೂರ್ಣಗೊಳಿಸಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

ಶ್ರೀ ಸೋಮನಾಥ ಸ್ವಾಭಿಮಾನ ಪರ್ವ ಸಮಾರೋಪಕ್ಕೆ ಮೋದಿ

ಗಾಂಧಿನಗರ: ಪ್ರಧಾನಿ ನರೇಂದ್ರ ಮೋದಿ ಶನಿವಾರ ಸಂಜೆ ತವರು ರಾಜ್ಯ ಗುಜರಾತ್‌ಗೆ ಆಗಮಿಸಿದ್ದು, 3 ದಿನಗಳ ರಾಜ್ಯ ಪ್ರವಾಸ ಹಮ್ಮಿಕೊಂಡಿದ್ದಾರೆ. ಭಾನುವಾರ ಬೆಳಗ್ಗೆ 'ಸೋಮನಾಥ ಸ್ವಾಭಿಮಾನ ಪರ್ವ' ಸಮಾರೋಪದಲ್ಲಿ ಭಾಗಿಯಾಗಲಿದ್ದಾರೆ.

ಗಿರ್ ಸೋಮನಾಥ ಜಿಲ್ಲೆಯ ವೆರಾವಲ್ ಬಳಿಯ ಸೋಮನಾಥ ಮಂದಿರಕ್ಕೆ ಶನಿವಾರ ರಾತ್ರಿ 8 ಗಂಟೆಗೆ ಭೇಟಿ ನೀಡಿದ ಪ್ರಧಾನಿ ಮೋದಿ, ಓಂಕಾರ ಮಂತ್ರ ಪಠಣದಲ್ಲಿ ಭಾಗವಹಿಸಿದ್ದರು. ಬಳಿಕ ಡ್ರೋನ್ ಪ್ರದರ್ಶನ ವೀಕ್ಷಿಸಿದರು. ಅನ್ಯಧರ್ಮದ ದಾಳಿಕೋರರಿಂದ ಪದೆ ಪದೇ ಗಾಳಿಗೆ ಒಳಗಾಗುತ್ತಿದ್ದ ಶ್ರೀ ಸೋಮನಾಥ ದೇವಾಲಯದ ರಕ್ಷಣೆಗಾಗಿ ಪ್ರಾಣ ತ್ಯಾಗ ಮಾಡಿದ ಅಸಂಖ್ಯಾತ ಯೋಧರನ್ನು ಗೌರವಿಸುವ ಸಲುವಾಗಿ ಆಯೋಜಿಸಲಾಗಿದ್ದ 'ಶೌರ್ಯ ಯಾತ್ರೆ'ಯಲ್ಲಿಯೂ ಭಾಗವಹಿಸಿದ್ದರು. ಘಜನಿ ಮಹಮೂದ್ ಸೋಮನಾಥ ದೇವಾಲಯದ ಮೇಲೆ ನಡೆಸಿದ ಮೊದಲ ದಾಳಿಗೀಗ 1,000 ವರ್ಷಗಳಾಗಿವೆ. ಹಲವು ದಾಳಿಗಳ ಬಳಿಕವೂ ಸೋಮನಾಥ ದೇಗುಲ ಪುನರುಜ್ಜೀವನಗೊಂಡು ಸ್ಥಿರವಾಗಿ ನಿಂತಿದೆ. ಅದೇ ಕಾರಣಕ್ಕೆ ಶೌರ್ಯ ಯಾತ್ರೆ ನಡೆಸಲಾಗುತ್ತಿದ್ದು, 108 ಕುದುರೆಗಳನ್ನು ಒಳಗೊಂಡ 1 ಕಿ.ಮೀ.ವರೆಗಿನ ರೋಡ್ ಶೋ 'ಶೌರ್ಯ ಯಾತ್ರೆ'ಯನ್ನು ಮುನ್ನಡೆಸಿದರು.

1026ರಲ್ಲಿ ಶ್ರೀ ಸೋಮನಾಥ ಮಂದಿರದ ಮೇಲೆ ನಡೆದ ದಾಳಿ ಮತ್ತು ನಂತರದ ಆಕ್ರಮಣಗಳು ಭಾರತದ ಆಧ್ಯಾತ್ಮಿಕ ಸಂಕಲ್ಪವನ್ನು ದುರ್ಬಲಗೊಳಿಸಲು ವಿಫಲವಾದವು ಮತ್ತು ಬದಲಾಗಿ ಸಾಂಸ್ಕೃತಿಕ ಏಕತೆ ಬಲಪಡಿಸಿದವು. ಇದು ದೇವಾಲಯದ ಪುನರಾವರ್ತಿತ ಪುನರ್ನಿರ್ಮಾಣಕ್ಕೆ ಕಾರಣವಾಯಿತು ಎಂದು ಮೋದಿ ಶ್ಲಾಘಿಸಿದ್ದಾರೆ.

ಭಾನುವಾರ ಬೆಳಗ್ಗೆ 9.45ಕ್ಕೆ ಗುಜರಾತ್ ರಾಜ್ಯ ಪ್ರಸಿದ್ಧ ಪುಣ್ಯಕ್ಷೇತ್ರ, 12 ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಶ್ರೀ ಸೋಮನಾಥ ಭಗವಾನರ ಮಂದಿರಕ್ಕೆ ಭೇಟಿ ನೀಡುವರು. 4 ದಿನಗಳ ಸ್ವಾಭಿಮಾನ ಪರ್ವ ಉತ್ಸವ ಜ.8ರಂದೇ ಆರಂಭವಾಗಿತ್ತು.

ಕರಾವಳಿ ಭಾಗದಲ್ಲಿ ಇಂದು ಮಳೆ ಸಾಧ್ಯತೆ

ದೆಹಲಿ: ಬಂಗಾಳಕೊಲ್ಲಿಯಲ್ಲಿ ತೀವ್ರ ವಾಯುಭಾರ ಕುಸಿತವಾಗಿದ್ದು, ದಕ್ಷಿಣ ಭಾರತದ ಕೆಲವು ರಾಜ್ಯಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಭಾರತದ ಹವಾಮಾನವು ತುಂಬಾ ಭಿನ್ನವಾಗಿದೆ. ತಮಿಳುನಾಡು, ಕೇರಳದಲ್ಲಿ ಭಾರೀ ಮಳೆಯಾಗುವ ನಿರೀಕ್ಷೆಯಿದೆ. ತಮಿಳುನಾಡು ರಾಜ್ಯದ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಗಂಟೆಗೆ 55 ರಿಂದ 65 ಕಿ.ಮೀ. ವೇಗದಲ್ಲಿ ಗಾಳಿ ಬೀಸುತ್ತಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಸೂಚನೆ ನೀಡಲಾಗಿದೆ. ಕರ್ನಾಟಕದ ಕೆಲವೆಡೆಯೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಕೇರಳದಲ್ಲೇ ಭಾರೀ ಮಳೆಯ ಎಚ್ಚರಿಕೆ ನೀಡಲಾಗಿದೆ. ಪರಿಣಾಮವಾಗಿ ಕರ್ನಾಟಕದ ಕರಾವಳಿ ಭಾಗಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡದಲ್ಲಿ ಶನಿವಾರ ಮಳೆ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದೇಶದ ಪಶ್ಚಿಮ ಭಾಗದಲ್ಲಿ ಉಂಟಾಗಿರುವ ಹವಾಮಾನ ವ್ಯತ್ಯದಿಂದಾಗಿ ಪರ್ವತಗಳಲ್ಲಿ ಹಿಮಪಾತವು ಬಯಲು ಪ್ರದೇಶಗಳಲ್ಲಿ ಶೀತ ಮತ್ತು ಮಂಜಿಗೆ ಕಾರಣವಾಗಿದೆ. ಪಂಜಾಬ್, ಹರಿಯಾಣ, ಚಂಡೀಗಢ ಮತ್ತು ಬಿಹಾರದ ವಿವಿಧೆಡೆ ಜ.16ರವರೆಗೂ ಬೆಳಗ್ಗೆ ವೇಳೆ ದಟ್ಟ ಮಂಜು ಸುರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಆಟೋ ಪೈಲಟ್‌ನಲ್ಲಿಯೂ ಭಾರತ ವಿಕಸನ: ದೋವಲ್

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು ಎಂತಹ ಬಲಿಷ್ಠ ಹಂತಕ್ಕೆ ತಂದಿದ್ದಾರೆಂದರೆ, ಇದೀಗ ದೇಶದ ಆಡಳಿತ ಆಟೋಪೈಲಟ್‌ನಲ್ಲಿಯೇ ಮುಂದುವರಿದರೂ 2047ರ ವೇಳೆಗೆ 'ಪೂರ್ಣ ವಿಕಸಿತ ಭಾರತ' ಆಗುವುದು ಖಚಿತ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಭಾರೀ ವಿಶ್ವಾಸದಿಂದ ಹೇಳಿದ್ದಾರೆ.

'ಅಭಿವೃದ್ಧಿ ಹೊಂದಿದ ಭಾರತ-ಯುವ ನಾಯಕರ ಸಂವಾದ' ಕಾರ್ಯಕ್ರಮ ಉದ್ಘಾಟಿಸಿ, ಯುವಜನರ ಜತೆ ಶನಿವಾರ ಸಂವಾದ ನಡೆಸಿದ ದೋವಲ್, ಭಾರತದ ಭವಿಷ್ಯ ಯುವಜನರು ನಿರ್ಧಾರ ತೆಗೆದುಕೊಳ್ಳುವ ವೇಗ, ಆ ನಿರ್ಧಾರವನ್ನು ಜಾರಿಗೊಳಿಸಬಲ್ಲ ಸಾಮರ್ಥ್ಯದ ಮೇಲೆ ನಿಂತಿದೆ. ಇಂದು ಎಲ್ಲವೂ ಬದಲಾಗಿರಬಹುದು, ಆದರೆ ಒಂದು ವಿಷಯ ಸದಾ ಹಾಗೇ ಉಳಿದಿರುತ್ತದೆ. ಅದು, ನಿಮ್ಮ ಜೀವನದ ಹಾದಿಯನ್ನು ನಿರ್ಧರಿಸುವ ಕೆಲವು ಸಣ್ಣ ವಿಚಾರಗಳು, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಎಂದೆಂದಿಗೂ ಹಾಗೆಯೇ ಇರುತ್ತದೆ ಎಂದು ಮಾರ್ಗದರ್ಶನದ ಮಾತನಾಡಿದರು. ನಿಮ್ಮ ಜೀವನದ ಪ್ರತಿಹಂತದಲ್ಲೂ ನೀವು ನಿರ್ಧಾರ ತೆಗೆದುಕೊಳ್ಳುತ್ತಲೇ ಇರಬೇಕಾಗುತ್ತದೆ ಎಂದೂ ಗಮನ ಸೆಳೆದರು.

ವಿಶ್ವಾದ್ಯಂತದ ಸದ್ಯದ ಸಂಘರ್ಷಗಳು ಮತ್ತು ಯುದ್ಧಗಳಿಗೆ ಕಾರಣ ಕೆಲವು ದೇಶಗಳು ತಮ್ಮ ಆಸಕ್ತಿ, ಅಗತ್ಯ, ಇಚ್ಛೆಯನ್ನು ಇತರೆ ದೇಶಗಳ ಮೇಲೆ ಹೇರಲು ಬಯಸುತ್ತಿರುವುದೇ ಆಗಿದೆ. ಆ ನಿಟ್ಟಿನಲ್ಲೇ ಸಾಗುವ ಮೂಲಕ ಆ ದೇಶಗಳು ತಮ್ಮ ಶಕ್ತಿಯನ್ನೆಲ್ಲಾ ಅದಕ್ಕೇ ಬಳಸಿಕೊಳ್ಳುತ್ತಿವೆ.

ಗರುಡ ಗಮನ ಬೇರೆಡೆ ಸೆಳೆಯುವ ಸರಳ ತಂತ್ರ

ಗಣತಂತ್ರ ದಿನಾಚರಣೆಗೆ ಆಪರೇಷನ್ ಡೈವರ್ಷನ್

ದೆಹಲಿ: ಈ ಬಾರಿ ಗಣತಂತ್ರ ದಿನೋತ್ಸವ ದಿನ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಅದುವೇ ಆಪರೇಷನ್ ಡೈವರ್ಷನ್. ಕರ್ತವ್ಯ ಪಥದತ್ತ ಹದ್ದುಗಳು ಹಾರಿ ಬರದಂತೆ ತಡೆಯುವ ಭಾಗವಾಘಿ 'ಗರುಡ ಗಮನ' ಬೇರೆಡೆ ಸೆಳೆಯುವ ಸರಳ ತಂತ್ರ.

ಗಣರಾಜ್ಯೋತ್ಸವ ದಿನವಾದ ಜ.26ರಂದು ದೆಹಲಿ ಆಕಾಶದಲ್ಲಿ ನರ್ತಿಸಲು ಭಾರತೀಯ ವಾಯುಪಡೆಯ 'ಫೈಟರ್ ಜೆಟ್'(ಯುದ್ಧ ವಿಮಾನ)ಗಳು ಮತ್ತು ಹೆಲಿ ಕಾಪ್ಟರ್‌ಗಳು ಆಗಮಿಸುವ ವೇಳೆ ಕರ್ತವ್ಯ ಪಥದ ಬಳಿ ವಿಶಿಷ್ಟ ಕಾರ್ಯಾಚರಣೆ ನಡೆ ಯುತ್ತದೆ. ಹಲವೆಡೆ ದೊಡ್ಡ ಬಟ್ಟಲುಗಳನ್ನು ದೊಡ್ಡ ಕಟ್ಟಡಗಳ ಮೇಲಿರಿಸಿ ಅದರಲ್ಲಿ 1,275 ಕೆಜಿ ಕೋಳಿ ಮಾಂಸವನ್ನಿಟ್ಟು ದೊಡ್ಡ ಹದ್ದುಗಳನ್ನು ಅದರತ್ತ ಆಕರ್ಷಿಸಲಾಗುತ್ತದೆ. ಆ ಮೂಲಕ 'ಗಣತಂತ್ರ ದಿನದ ಪ್ರಮುಖ ಆಕರ್ಷಣೆ'ಯಾದ ಸಮರ ವಿಮಾನಗಳ ಆಕರ್ಷಕ ಹಾರಾಟ ವೇಳೆ ಹದ್ದುಗಳು ವಿಮಾನಗಳಿಗೆ ಅಡ್ಡ ಬರದಂತೆ ತಡೆಯುವ ಯತ್ನ ನಡೆಸಲಾಗುತ್ತದೆ. ಸಂಭಾವ್ಯ ಅವಘಡಗಳನ್ನು ತಪ್ಪಿಸಲೆಂದೇ ದೆಹಲಿ ಸರಕಾರದ ಅರಣ್ಯ ಮತ್ತು ವನ್ಯಜೀವಿ ಇಲಾಖೆಯು ಈ ಸರಳ ತಂತ್ರ ಹಮ್ಮಿಕೊಂಡಿದೆ.

ಈ ಮೊದಲು, ಗರುಡ ಗಮನ ಬೇರೆಡೆ ಸೆಳೆಯುವ ತಂತ್ರಕ್ಕಾಗಿ ಎಮ್ಮೆ ಮಾಂಸ ಬಳಕೆ ಆಗುತ್ತಿತ್ತು. ಈ ವರ್ಷ, ಮೊದಲ ಬಾರಿಗೆ ಕೋಳಿ ಮಾಂಸ ಬಳಸಲಾಗುತ್ತಿದೆ. ವನ್ಯಜೀವಿಗಳ ರಕ್ಷಣೆ ಮತ್ತು ನಿರಾತಂಕ ಗಣರಾಜ್ಯೋತ್ಸವ ಆಚರಣೆ ಉದ್ದೇಶ ದಿಂದಲೇ ಈ ಪ್ರಯತ್ನವನ್ನು ವಾಯುಪಡೆಯ ಸಮನ್ವಯದೊಂದಿಗೆ ಮಾಡಲಾಗುತ್ತಿದೆ.

20 ಸ್ಥಳಗಳಲ್ಲಿ ಪ್ರತಿ ಬಟ್ಟಲಲ್ಲಿ 20 ಕೆಜಿ ಕೋಳಿಮಾಂಸದಂತೆ ನಿತ್ಯ 400 ಕಿಲೊ ಮಾಂಸ ಇರಿಸಲಾಗುವುದು. ಕೆಜಿಗೆ 350 ರು. ಲೆಕ್ಕದಲ್ಲಿ 1,275 ಕೆಜಿ ಮೂಳೆಯಿಲ್ಲದ ಕೋಳಿ ಖರೀದಿಗೆ ಅಂದಾಜು 4.46 ಲಕ್ಷ ರು. ವೆಚ್ಚ ಮಾಡಲಾಗುತ್ತಿದೆ ಎಂದು ದೆಹಲಿ ಸರಕಾರದ ಅಧಿಕಾರಿಗಳು ಹೇಳಿದ್ದಾರೆ.

ಮಹಾ ರಾಜಕೀಯ ಗೊಂದಲ

ಮುಂಬೈ: ಸದ್ಯ ಸ್ಥಳೀಯ ಚುನಾವಣೆಗಳನ್ನು ಎದುರಿಸುತ್ತಿರುವ ಮಹಾರಾಷ್ಟ್ರ ರಾಜ್ಯದಲ್ಲಿನ ರಾಜಕಾರಣ ಈಗ ಅಕ್ಷರಶಃ ಕಲಸು ಮೇಲೋಗರದಂತಾಗಿದೆ. ಯಾವ ರಾಜಕೀಯ ಪಕ್ಷ ಯಾವ ಮೈತ್ರಿಕೂಟದಲ್ಲಿದೆ, ಯಾರು ಯಾರೊಂದಿಗೆ ಮೈತ್ರಿ ಮಾಡಿಕೊಂಡಿದ್ದಾರೆ ಎಂಬುದೇ ಗೊಂದಲಮಯವಾಗಿದೆ. ಅಂಬರನಾಥ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಪರಮ ಶತ್ರುಗಳೆಂದೇ ಬಿಂಬಿತ ಬಿಜೆಪಿ-ಕಾಂಗ್ರೆಸ್ ನಡುವೆಯೇ ಮೈತ್ರಿಯಾಗಿದೆ. ಬಳಿಕ ಕಾಂಗ್ರೆಸ್ 12 ಕೌನ್ಸಿಲರ್‌ಗಳನ್ನು ವಜಾ ಮಾಡಿದೆ. ಅವರೆಲ್ಲಾ ಬಿಜೆಪಿಗೇ ಸೇರ್ಪಡೆಯಾಗಿದ್ದಾರೆ. ಈ ಮಧ್ಯೆ, ಇವರು ರಚಿಸಿಕೊಂಡಿದ್ದ ಅಂಬರನಾಥ ವಿಕಾಸ್ ಅಘಾಡಿ ಮೈತ್ರಿಕೂಟದ ಭಾಗವಾಗಿದ್ದ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯ 4 ಸದಸ್ಯರು, 2 ದಿನ ಕಳೆಯುವಷ್ಟರಲ್ಲೇ ಮೈತ್ರಿಕೂಟ ತೊರೆದು ಡಿಸಿಎಂ ಏಕನಾಥ ಶಿಂಧೆ ನೇತೃತ್ವದ ಶಿವಸೇನೆಗೆ ಬೆಂಬಲ ಘೋಷಿಸಿದ್ದಾರೆ. ಈಗ ಶಿಂಧೆ ನೇತೃತ್ವದ ಶಿವಸೇನೆಯೇ ಅಂಬರನಾಥ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಮರಳಿ ಅಧಿಕಾರಕ್ಕೇರಿದೆ. ಬಿಜೆಪಿ-ಕಾಂಗ್ರೆಸ್ ಸದಸ್ಯರು ಮಾಡಿದ ಪ್ರಯತ್ನವೆಲ್ಲಾ ಮಣ್ಣುಪಾಲಾಗಿದೆ.

ರಾಜ್ಯ ಸರಕಾರ ನಡೆಸುತ್ತಿರುವ 'ಮಹಾಯುತಿ' ಮೈತ್ರಿಕೂಟದ ಪಾಲುದಾರ ಪಕ್ಷವಾಗಿರುವ ಎನ್‌ಸಿಪಿ(ಅಜಿತ್ ಬಣ) ಶನಿವಾರ ಬಹಿರಂಗವಾಗಿಯೆ 'ಎನ್‌ಸಿಪಿ'(ಶರದ್ ಬಣ)ದ ಜತೆ ಗುರುತಿಸಿಕೊಂಡಿದೆ. ಡಿಸಿಎಂ ಅಜಿತ್ ಪವಾರ್, ಎನ್‌ಸಿಪಿ(ಶರದ್ ಬಣ) ಸಂಸದೆ, ಸೋದರ ಸಂಬಂಧಿ ಸುಪ್ರಿಯಾ ಸುಳೆ ಜತೆಗೇ ಶನಿವಾರ ಜಂಟಿ ಸುದ್ದಿಗೋಷ್ಠಿ ನಡೆಸಿದ್ದಾರೆ. ಅಷ್ಟೇ ಅಲ್ಲದೇ, ಪುಣೆ ಪುರಸಭೆ ಚುನಾವಣೆಗೆ ಜಂಟಿ ಪ್ರಣಾಳಿಕೆಯನ್ನೂ ಬಿಡುಗಡೆ ಮಾಡಿದ್ದಾರೆ.

ಸದ್ಯದ ಮಹಾರಾಷ್ಟ್ರ ರಾಜಕಾರಣ, ವಿಧಾನಸಭೆಯಲ್ಲೇ ಒಂದು ಲೆಕ್ಕ, ಪಾಲಿಕೆ, ನಗರಸಭೆ ಹಾಗೂ ಪಂಚಾಯತ್ ಮಟ್ಟದಲ್ಲೇ ಬೇರೆ ಬೇರೆಯದೇ ಲೆಕ್ಕಾಚಾರ ಎನ್ನುವಂತಾಗಿದೆ. ಇದು ಮತದಾರರನ್ನೇ ಗೊಂದಲಕ್ಕೆ ಬೀಳುವಂತೆ ಮಾಡಿದೆ.

ರಷ್ಯಾ-ಉಕ್ರೇನ್ ಯುದ್ಧವೇ ನಿಲ್ಲುತ್ತಿಲ್ಲ: ಟ್ರಂಪ್ ಬೇಸರ

ವಾಷಿಂಗ್ಟನ್: 'ಈಗಾಗಲೇ ವೆನೆಜುವೆಲಾ ಅಧ್ಯಕ್ಷರಾಗಿದ್ದ ನಿಕೊಲಸ್ ಮಡುರೊರನ್ನು ಅಮೆರಿಕದ ಸೇನಾಪಡೆ ವೆನೆಜುವೆಲಾದಿಂದಲೇ ಅಪಹರಣ ಮಾಡಿ ಬಂಧಿಸಿ ನ್ಯೂಯಾರ್ಕ್ ಸೆರೆಮನೆಯಲ್ಲಿರಿಸಿದೆ. ಮುಂದಿನ ಸರದಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರದ್ದಾಗಿರಲಿದೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊದಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಈ ಕುರಿತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಗಮನ ಸೆಳೆದಿರುವ ಅಮೆರಿಕದ ಪತ್ರಕರ್ತರೊಬ್ಬರು, 'ವ್ಲಾದಿಮಿರ್ ಪುಟಿನ್ ಅವರನ್ನು ಬಂಧಿಸಲು ನೀವೇನಾದರೂ ಆದೇಶ ಹೊರಡಿಸಿದ್ದೀರಾ?' ಎಂದು ಸುದ್ದಿಗೋಷ್ಠಿಯಲ್ಲಿ ಪ್ರಶ್ನೆ ಮಾಡಿದ್ದಾರೆ.

'ನನಗೆ ಅನಿಸುತ್ತದೆ, ಅಂತಹುದೆಲ್ಲಾ ಅಗತ್ಯ ಇಲ್ಲ ಎಂದು. ನಾನು ಅಂದುಕೊಂಡಿರುವುದೇನೆಂದರೆ, ಪುಟಿನ್ ಜತೆಗಿನ ನಮ್ಮ ಸಂಬಂಧ ಬಹಳ ಒಳ್ಳೆಯದಾಗಿದೆ. ಅದು ಹಾಗೆಯೇ ಮುಂದುವರಿಯುತ್ತದೆ' ಎಂದೇ ಅಡ್ಡಗೋಡೆ ಮೇಲೆ ದೀಪವಿರಿಸಿದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ಹಿಂದೆ ಅಮೆರಿಕ ಅಧ್ಯಕ್ಷರಾಗಿದ್ದ ಬರಾಕ್ ಒಬಾಮಾ ಏನನ್ನೂ ಮಾಡಲಿಲ್ಲ. ಒಂದು ಯುದ್ಧವನ್ನೂ ನಿಲ್ಲಿಸಲಿಲ್ಲ. ಆದರೆ, ಅವರಿಗೆ ನೊಬೆಲ್ ಶಾಂತಿಪ್ರಶಸ್ತಿ ನೀಡಲಾಗಿದೆ. ನಾನು ಈವರೆಗೆ 8 ಯುದ್ಧ ನಿಲ್ಲಿಸಿ ಲಕ್ಷಾಂತರ ಜನರ ಪ್ರಾಣ ಉಳಿಸಿರುವೆ. ನನಗೆ ಮಾತ್ರ ಈವರೆಗೂ ನೊಬೆಲ್ ಶಾಂತಿ ಪ್ರಶಸ್ತಿ ಕೊಡಲಾಗಿಲ್ಲ. ಸಮಾಧಾನ ತರುವ ಸಂಗತಿ ಏನೆಂದರೆ, ಈ ಬಾರಿಯ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ವೆನೆಜುವೆಲಾ ಪ್ರತಿಪಕ್ಷ ನಾಯಕಿ ಮರಿಯಾ ಕರಿನೊ ಮಚಾದೋ ಪ್ರಶಸ್ತಿಯನ್ನು ನನಗೆ ಅರ್ಪಿಸಿದ್ದಾರೆ. ನನ್ನನ್ನು ಗೌರವಿಸುವ ಸಲುವಾ ಗಿಯೇ ಅವರು ಮುಂದಿನ ವಾರ ಅಮೆರಿಕಕ್ಕೆ ಬರುತ್ತಿದ್ದಾರೆ. ಇದು ಬಹಳ ಒಳ್ಳೆಯ ಸಂಗತಿ.

-ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷ

ಬಳಿಕ ತೈಲ ಮತ್ತು ಅನಿಲ ಕ್ಷೇತ್ರದ ಉನ್ನತ ಸ್ಥರದ ಅಧಿಕಾರಿಗಳ ಜತೆ ಸಭೆ ನಡೆಸಿದ ಟ್ರಂಪ್, ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಕೊನೆಗೊಳ್ಳದೇ ಇರುವುದು ನನಗೆ ಬಹಳ ಬೇಸರ ತರಿಸಿದೆ ಎಂದಿದ್ದಾರೆ. ನಾನು ಈವರೆಗೆ ಭಾರತ-ಪಾಕ್‌ನದ್ದೂ ಸೇರಿದಂತೆ ಒಟ್ಟು 8 ಯುದ್ಧಗಳು ಕೊನೆಗೊಳ್ಳುವಂತೆ ಮಾಡಿರುವೆ. ಆದರೆ, 2022ರಲ್ಲಿ ಶುರುವಾಗಿರುವ ರಷ್ಯಾ-ಉಕ್ರೇನ್ ನಡುವಿನ ಯುದ್ಧ, ಹಲವು ಸುತ್ತಿನ ಮಾತುಕತೆ ಬಳಿಕವೂ ಕೊನೆಗೊಂಡಿಲ್ಲ ಎಂಬುದೇ ಬೇಸರದ ಸಂಗತಿ ಎಂದರು. ಕಳೆದ ತಿಂಗಳಲ್ಲೇ ರಷ್ಯಾ-ಉಕ್ರೇನ್ ಯುದ್ಧದಲ್ಲಿ 31 ಸಾವಿರ ಸಾವು ಉಂಟಾಗಿದೆ. ಅವರಲ್ಲಿ ಹಲವಾರು ರಷ್ಯಾ ಸೈನಿಕರೂ ಸೇರಿದ್ದಾರೆ. ರಷ್ಯಾದ ಆರ್ಥಿಕತೆಯಂತೂ ಸತತ ಕುಸಿತ ಕಾಣುತ್ತಿದೆ. ನನಗೆ ಅನಿಸುತ್ತದೆ, ತಕ್ಷಣವೇ ಇದಕ್ಕೆ ಕೊನೆ ಹೇಳಬೇಕಿದೆ. ರಷ್ಯಾ-ಉಕ್ರೇನ್ ಯುದ್ಧ ನಿಲ್ಲುವಂತೆ ಮಾಡಬೇಕಿದೆ. ಆ ಮೂಲಕ ಸಾವಿರಾರು ಜನರ ಸಾವು ಉಂಟಾಗು ವುದನ್ನು ತಪ್ಪಿಸಬೇಕಿದೆ ಎಂದು ಟ್ರಂಪ್ ಹೇಳಿದ್ದಾರೆ.

ಸದ್ಯ, ಹೇಗ್‌ನಲ್ಲಿರುವ 'ಅಂತಾರಾಷ್ಟ್ರೀಯ ಅಪರಾಧ ನ್ಯಾಯಾಲಯ' ಉಕ್ರೇನ್‌ನಲ್ಲಿ ಯುದ್ಧ ಅಪರಾಧಗಳನ್ನು ನಡೆಸಿರುವ ಆರೋಪ ಹೊರಿಸಿ ರಷ್ಯಾ ಅಧ್ಯಕ್ಷ ಪುಟಿನ್ ಅವರ ಬಂಧನಕ್ಕೆ ವಾರಂಟ್ ಹೊರಡಿಸಿದೆ.

ಬೆಂಜಮಿನ್ ಅಪಹರಿಸಿ: ಪಾಕ್ ಸಚಿವನ ಆಗ್ರಹ

ಇಸ್ಲಾಮಾಬಾದ್: ವೆನೆಜುವೆಲಾ ಅಧ್ಯಕ್ಷರನ್ನು ಅಪಹರಿಸಿದಂತೆಯೇ ಇಸ್ರೇಲ್ ಪ್ರಧಾನಿ ಬೆಂಜ ಮಿನ್ ನೆತನ್ಯಾಹು ಅವರನ್ನೂ ಅಮೆರಿಕ ಅಥವಾ ಟರ್ಕಿ ಸರಕಾರ ಅಪಹರಣ ಮಾಡಬೇಕು ಎಂದು ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್, ಪಾಕ್ ಮಾಧ್ಯಮ ಸಂದರ್ಶನದಲ್ಲಿ ಒತ್ತಾಯಿಸಿ ದ್ದಾರೆ. ಬೆಂಜಮಿನ್ ಮಾನವೀಯತೆಯ ಅಪರಾಧಿ. ಗಾಜಾ ಪಟ್ಟಿಯಲ್ಲಿ ಆತ ಮಾಡಿರುವ ನರಮೇಧಕ್ಕೆ ಕ್ಷಮೆಯೇ ಇಲ್ಲ. ಅಮೆರಿಕಕ್ಕೆ ಮಾನವೀಯತೆ ಮೇಲೆ ಗೌರವವಿದ್ದರೆ ಕೂಡಲೇ ಬೆಂಜಮಿನ್‌ರನ್ನು ಬಂಧಿಸಿ ಅಪಹರಿಸಲಿ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಇದನ್ನೇ ನಾನು ನಿರೀಕ್ಷಿಸುತ್ತೇನೆ ಎಂದಿದ್ದಾರೆ. ಅಮೆರಿಕ ಈ ಕ್ರಮ ಕೈಗೊಳ್ಳದೇ ಇದ್ದರೆ ಟರ್ಕಿಯಾದರೂ ಬೆಂಜ ಮಿನ್‌ರನ್ನು ಅಪಹರಿಸಬಹುದು. ಪಾಕಿಸ್ತಾನಿಗ ಳೆಲ್ಲರೂ ಅದಕ್ಕಾಗಿ ಪ್ರಾರ್ಥನೆ ಮಾಡುತ್ತಿದ್ದಾರೆ ಎಂದೂ ಖ್ವಾಜಾ ಒತ್ತಾಯಿಸಿದ್ದಾರೆ.



ಸಮಾಚಾರ ಸಣ್ಣದಲ್ಲ

ಪುರಸಭೆ ಪೂರ್ವಭಾವಿ ಸಭೆ ಜ.17ರಂದು

ಬಳ್ಳಾರಿ: ಕುರುಗೋಡು ಪುರಸಭೆಯ 2026-2027 ನೇ ಸಾಲಿನ ಆಯ-ವ್ಯಯ ಪತ್ರದ ತಯಾರಿಕೆಯ ಪೂರ್ವಭಾವಿ ಸಭೆಯನ್ನು ಕುರುಗೋಡು ಪುರಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಮತ್ತು ಮುಖ್ಯಾಧಿಕಾರಿಗಳ ಉಪಸ್ಥಿತಿಯಲ್ಲಿ ಜ.17 ರಂದು ಬೆಳಗ್ಗೆ 11 ಗಂಟೆಗೆ ಕುರುಗೋಡು ಪುರಸಭೆ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಪಟ್ಟಣದ ಗಣ್ಯ ವ್ಯಕ್ತಿಗಳು, ನೋಂದಾಯಿತ ಸಂಘ-ಸಂಸ್ಥೆಗಳ ಸದಸ್ಯರು ಮತ್ತು ಕಾರ್ಯಾಲಯದ ಸದಸ್ಯರು ಆಗಮಿಸಿ ಪಟ್ಟಣದ ಸರ್ವತೋಮುಖ ಅಭಿವೃದ್ಧಿ ಕುರಿತಂತೆ ಮುಂಗಡ ಆಯ-ವ್ಯಯ ತಯಾರಿಕೆಗೆ ತಮ್ಮ ಅಭಿಪ್ರಾಯ, ಸಲಹೆ-ಸೂಚನೆಗಳನ್ನು ನೀಡಬಹುದು ಎಂದು ಕುರುಗೋಡು ಪುರಸಭೆ ಕಾರ್ಯಾಲಯದ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬಳ್ಳಾರಿ: ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-1 ರ ವ್ಯಾಪ್ತಿಯ 110/11 ಕೆವಿಯ ಬಿಸಿಲಹಳ್ಳಿ ವಿದ್ಯುತ್ ಉಪ-ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ 11 ಕೆವಿ ಫೀಡರನಲ್ಲಿ ಲಿಂಕ್ ಲೈನ್ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಜ.11 ರಂದು ಬೆಳಿಗ್ಗ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಫೀಡರ್‌ಎಫ್-63 ಮತ್ತು ಎಫ್-64 ಫೀಡರ್ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಯೋಗದ ಅಧ್ಯಕ್ಷರ ಪ್ರವಾಸ ನಾಳೆ

ಹೊಸಪೇಟೆ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರಾದ ಶಶಿಧರ್ ಕೋಸಂಬೆ ರವರು ಜ.12 ರಂದು ಸಂಜೆ 5 ಗಂಟೆಗೆ ಹೊಸಪೇಟೆಗೆ ಆಗಮಿಸಿ ವಾಸ್ತವ್ಯ ಹೂಡುವರು. ಜ.13 ರಂದು ಬೆಳಗ್ಗೆ 10 ರಿಂದ 1 ಗಂಟೆಯ ವರೆಗೆ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಸರಕಾರಿ, ಅನುದಾನಿತ, ಅನುದಾನ ರಹಿತ ಮತ್ತು ವಿವಿಧ ವಸತಿ ಶಾಲೆಗಳ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಅದೇ ದಿನ ಮಧ್ಯಾಹ್ನ 2 ರಿಂದ 4 ರವರೆಗೆ ಕೂಡ್ಲಿಗಿ ತಾಲೂಕಿನ ಶಾಲಾ ಮಕ್ಕಳು, ಪೋಷಕರು ಮತ್ತು ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಸದಸ್ಯರುಗಳ ಅಹವಾಲು ಸ್ವೀಕಾರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ತಿಳಿಸಿದ್ದಾರೆ.

ವಾರಸುದಾರರ ಪತ್ತೆಗೆ ಮನವಿ

ಹೊಸಪೇಟೆ: ನಗರದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಬುಕ್ಕಿಂಗ್ ಕೌಂಟರ್‌ಮುಂಭಾಗದಲ್ಲಿ ಸುಮಾರು 75-80 ವರ್ಷ ವಯಸ್ಸಿನ ಅನಾಮಧೇಯ ವ್ಯಕ್ತಿ ಅಸ್ವಸ್ಥನಾಗಿದ್ದು, ಅವರನ್ನು ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿಯೇ ಮೃತಪಟ್ಟಿರುತ್ತಾರೆ. ಈ ಕುರಿತು ಜನವರಿ 5 ರಂದು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತವ್ಯಕ್ತಿಯು ಸುಮಾರು 5.6 ಅಡಿ ಎತ್ತರ, ಕೋಲು ಮುಖ, ದಪ್ಪ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಎಡ ಎದೆಯ ಮೇಲೆ ಸರ್ಜರಿ ಗುರುತು ಹೊಂದಿರುತ್ತಾನೆ. ಈ ವ್ಯಕ್ತಿಯು ಬಿಳಿ ಬಣ್ಣದ ಶರ್ಟ್, ಬಿಳಿ ಬಣ್ಣದ ಬನಿಯನ್ ಮತ್ತು ಬಿಳಿ ಬಣ್ಣದ ಪಂಚೆ, ಬಿಳಿ ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಮೃತ ವ್ಯಕ್ತಿಯ ಸಂಬಂಧಿಕರು ಅಥವಾ ಈ ವ್ಯಕ್ತಿಯ ಕುರಿತು ಮಾಹಿತಿ ತಿಳಿದುಬಂದಲ್ಲಿ ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆ ದೂ, ಸಂ: 08394224033, 9480805700, 9480805745 ಗೆ ಸಂಪರ್ಕಿಸಬಹುದು ಎಂದು ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರಿಸರ ಜಾಗೃತಿಗೆ ಶ್ರಮಿಸಿ: ಕುಲಸಚಿವ

ಬಳ್ಳಾರಿ: ಯುವಕರು ಪರಿಸರ ಸಂರಕ್ಷಣೆ ಮತ್ತು ಜಾಗೃತಿ ಕುರಿತು ಕಾಳಜಿ ವಹಿಸಬೇಕು ಎಂದು ವಿಶ್ರೀಕೃವಿವಿ ಪ್ರಭಾರ ಕುಲಸಚಿವ ಪ್ರೊ. ತಿಪ್ಪೇರುದ್ರಪ್ಪ. ಜೆ ಹೇಳಿದರು. ವಿಶ್ವವಿದ್ಯಾಲಯದ ಡಾ.ಬಿ.ಆರ್ ಅಂಬೇಡ್ಕರ್‌ಸಭಾಂಗಣದಲ್ಲಿ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ ಎ.ಬಿ.ಸಿ ಮತ್ತು ಡಿ ಘಟಕಗಳು ಹಾಗೂ ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ರೂಸಾ ಅನುದಾನಿತ ಪರಿಸರ ಜಾಗೃತಿ ಕುರಿತ ಎನ್‌ಎಸ್‌ಎಸ್ ಮತ್ತು ಇಕೋ ಕ್ಲಬ್ ಕಾರ್ಯಾಕ್ರಮಾಧಿಕಾರಿಗಳಿಗೆ ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

{ಡಿ.ಕೆ.ಸುರೇಶ್ } ಮಾಜಿ ಸಂಸದ

ಜೆಡಿಎಸ್ನವರಿಗೆ ಕೆಲಸ ಇಲ್ಲ, ಸಿಡಿ ಫ್ಯಾಕ್ಟರಿ ಇದ್ದಿದ್ದು ಹೊಳೆನರಸೀಪುರದಲ್ಲಿ, ಪದ್ಮನಾಭ ನಗರದಲ್ಲಿ. ಆ ಫ್ಯಾಕ್ಟರಿಯಲ್ಲಿ ಯಾರು ಮ್ಯಾನಿಫ್ಯಾಕ್ಚರ್‌ಮಾಡ್ತಿದ್ದು? ಕುಮಾರಸ್ವಾಮಿ ಇದನ್ನೆಲ್ಲಾ ಬಿಡಿ. ದಯವಿಟ್ಟು ಎಚ್ ಎಂಟಿಯವರಿಗೆ ನ್ಯಾಯ ಕೊಡಿಸಿ.

ವಾರ್ತಾ ಮತ್ತು ಪ್ರಸಾರ ಸಚಿವಾಲಯದಿಂದ ಛಾಯಾಚಿತ್ರ ಪ್ರದರ್ಶನ, ಯೋಜನೆಗಳ ಜಾಗೃತಿ ಕಾರ್ಯಕ್ರಮ

ಬಾಲ್ಯವಿವಾಹ ಮುಕ್ತ ಅಭಿಯಾನಕ್ಕೆ ಕೈಜೋಡಿಸಿ

ಬಳ್ಳಾರಿ: ಬಾಲ್ಯವಿವಾಹವು ಹೆಣ್ಣುಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಮಾರಕವಾಗಿದ್ದು, ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಹೇಳಿದರು.

ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕೇಂದ್ರ ಸಂವಹನ ಇಲಾಖೆ, ಬಳ್ಳಾರಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಸಹಯೋಗದಲ್ಲಿ ನಗರದ ಜಿಲ್ಲಾ ಪಂಚಾಯತ್ ನ ಹೊಸ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಕಸಿತ ಭಾರತ ಜಿ ರಾಮ್ ಜಿ, ವಂದೇ ಮಾತರಂ ರಾಷ್ಟ್ರೀಯ ಗೀತೆಯ 150ನೇ ವರ್ಷಾಚರಣೆ, ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತ ಛಾಯಾಚಿತ್ರ ಪ್ರದರ್ಶನ ಮತ್ತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ವೇಳೆ ಭಾರತ ಸರಕಾರದ ವಾರ್ತಾ ಶಾಖೆಯ ಕರ್ನಾಟಕದ ಹೆಚ್ಚುವರಿ ಮಹಾನಿರ್ದೇಶಕ ಎಸ್ .ಜಿ.ರವೀಂದ್ರ, ಕೇಂದ್ರ ಸರಕಾರದ ಯೋಜನೆಗಳ ಫಲಾನುಭವಿಗಳ ಅನಿಸಿಕೆಗಳನ್ನು ಆಲಿಸಿದರು.

ಛಾಯಾಚಿತ್ರ ಪ್ರದರ್ಶನದ ಉದ್ಘಾಟನೆಯಲ್ಲಿ ಭಾಗವಹಿಸಿದ ಬಳ್ಳಾರಿ ಮಹಾನಗರ ಪಾಲಿಕೆಯ



ವಿಕಸಿತ ಭಾರತ ಜಿ ರಾಮ್ ಜಿ, ವಂದೇ ಮಾತರಂ ರಾಷ್ಟ್ರೀಯ ಗೀತೆಯ 150ನೇ ವರ್ಷಾಚರಣೆ, ಬಾಲ್ಯವಿವಾಹ ಮುಕ್ತ ಭಾರತ ಅಭಿಯಾನ ಕಾರ್ಯಕ್ರಮವನ್ನು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಉದ್ಘಾಟಿಸಿದರು.

ಮಹಾಪೌರರಾದ ಪಿ.ಗಾದೆಪ್ಪ ಅವರು ಯೋಜನೆಗಳ ಕುರಿತು ಬಿತ್ತರವಾದ ಮಾಹಿತಿಗಳನ್ನು ಅವಲೋಕಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಿನ ಕೇಂದ್ರ ಸಂವಹನ ಇಲಾಖೆಯ ಕ್ಷೇತ್ರ ಪ್ರಚಾರಾಧಿಕಾರಿ ಎಸ್.ಟಿ.ಶೃತಿ ಪ್ರಾಸ್ತಾವಿಕವಾಗಿ ಮಾತನಾಡಿ, ಬಾಲ್ಯವಿವಾಹ ಮುಕ್ತ ಭಾರತ, ವಿಕಸಿತ ಭಾರತ ಕುರಿತು ವಿದ್ಯಾರ್ಥಿಗಳಿಗೆ, ರೈತರಿಗೆ, ಮಹಿಳೆಯರು ಮತ್ತು ಮಕ್ಕಳಿಗೆ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಗಳ ಕುರಿತು ಮಾಹಿತಿ ನೀಡುವ ಸಲುವಾಗಿ ಜನವರಿ 9 ರಿಂದ ಮೂರು ದಿನಗಳ ಕಾಲ ಜಾಗೃತಿ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರದ ಯೋಜನೆಗಳ ಕುರಿತು ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್, ಸ್ವ-ಸಹಾಯ ಗುಂಪಿನ ಮಹಿಳಾ ವೃಂದದಿಂದ ಜನಪರ ಯೋಜನೆಗಳ ಮಾಹಿತಿ ಬಿತ್ತರಿಸುವ ಮಳಿಗೆಗಳನ್ನು ತೆರೆಯಲಾಗಿದೆ. ಜೊತೆಗೆ ಉಚಿತ ಆರೋಗ್ಯ ಶಿಬಿರ ಆಯೋಜಿಸಲಾಗಿದೆ.

ಸಂಗೀತ ಮತ್ತು ನಾಟಕ ವಿಭಾಗದ ಕೊಪ್ಪಳದಿಂದ ಆಗಮಿಸಿದ ಕಲಾತಂಡ ಜಾಗೃತಿಗೀತೆಗಳನ್ನು ಹಾಡಿದರು.

ಬೆಂಗಳೂರಿನ ಕೇಂದ್ರ ಸಂವಹನ ಇಲಾಖೆಯ ಸಹಾಯಕ ನಿರ್ದೇಶಕರಾದ ಕರಿಷ್ಮಾ ಪಂತ್, ಮಧು.ಎಂ., ಅಭಿಯಾನ ಅಧಿಕಾರಿ ಶ್ವೇತಾ ಶರ್ಮಾ,ಸುರೇಶ್ ಸಿ.ಕೆ., ಪಿ.ದರ್ಶನ್, ಬಳ್ಳಾರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಾಧವನಂದ, ಸಿರಗುಪ್ಪ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರದೀಪ್.ಜಿ., ಆರೋಗ್ಯ ಇಲಾಖೆಯ ಅಧಿಕಾರಿ ಡಾ.ವೀರೇಂದ್ರ ಕುಮಾರ್ ಉಪಸ್ಥಿತರಿದ್ದರು.

ಪ್ರಬಂಧ ಸ್ಪರ್ಧೆ: ಬಹುಮಾನ ವಿತರಣೆ

ಕಾರ್ಯಕ್ರಮದ ಪೂರ್ವಭಾವಿಯಾಗಿ ಮಹಿಳೆಯರು ಮತ್ತು ವಿದ್ಯಾರ್ಥಿಗಳಿಗೆ ಸ್ವಚ್ಛ ಭಾರತ, ಬೇಟಿ ಬಚಾವೋ ಬೇಟಿ ಪಡಾವೋ, ವಂದೇ ಮಾತರಂ ಗೀತೆ, ಬಾಲ್ಯ ವಿವಾಹ ಮುಕ್ತ ಭಾರತ ವಿಷಯಗಳ ಮೇಲೆ ಆಯೋಜಿಸಲಾಗಿದ್ದ ರಂಗೋಲಿ, ಚಿತ್ರಕಲೆ, ಪೋಷಣೆಯುಕ್ತ ಆಹಾರ ಮತ್ತು ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಗಣ್ಯರು ಬಹುಮಾನ ವಿತರಿಸಿದರು.

ಜಿಲ್ಲೆಯಲ್ಲಿ ಅಪೌಷ್ಟಿಕತೆ ಇರಬಾರದು

ಜಿಲ್ಲೆಯಲ್ಲಿ ಅಪೌಷ್ಟಿಕತೆಯಿಂದ ಮಹಿಳೆಯರು ಮತ್ತು ಮಕ್ಕಳು ನರಳಬಾರದು ಎಂಬ ಉದ್ದೇಶದಿಂದ ಕೇಂದ್ರ ಸರಕಾರವು ಪೋಷಣ ಅಭಿಯಾನವನ್ನು ಪ್ರತಿವರ್ಷ ನಡೆಸುತ್ತಿದ್ದು, ಜಿಲ್ಲೆಯ ಕಟ್ಟಕಡೆಯ ವ್ಯಕ್ತಿಗೂ ಇದು ತಲುಪಬೇಕು ಎಂದು ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ತಿಳಿಸಿದರು.

ಜನರ ದಾರಿ ತಪ್ಪಿಸುವ ಸರಕಾರ: ಪಾಟೀಲ್

ರಾಯಚೂರು: ಕೇಂದ್ರ ಸರಕಾರದ ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ವಿಬಿ-ಜಿ.-ರಾಮ-ಜಿ) ಯೋಜನೆಯನ್ನು ದುರುದ್ದೇಶ ಪೂರಕವಾಗಿ ರಾಜ್ಯ ಕಾಂಗ್ರೆಸ್ ಸರಕಾರ ವಿರೋಧಿಸಿ ಜನರಿಗೆ ತಪ್ಪು ದಾರಿಗೆ ಎಳೆಯುತ್ತಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅಮರನಾಥ ಪಾಟೀಲ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 20 ವರ್ಷಗಳಿಂದ ರೂಪಿಸಲಾಗಿದ್ದ ಯೋಜನೆ ಜವಾಹರ ರೋಜ್ಗಾರ ಯೋಜನೆ ಮೂಲಕ ಜಾರಿಗೊಳಿಸಿ, ನಂತರ ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಎಂದು ರೂಪಿಸಲಾಗಿತ್ತು. ಆದರೆ ನರೇಂದ್ರ ಮೋದಿ ನೇತೃತ್ವದ ಸರಕಾರ ಮೂರು

ಸುದ್ದಿಗೋಷ್ಠಿಯಲ್ಲಿವಿಧಾನ ಪರಿಷತ್ ಮಾಜಿ ಸದಸ್ಯ ಅಮರನಾಥ ಪಾಟೀಲ್ ಮಾತನಾಡಿದರು.

ಯೋಜನೆಗಳನ್ನು ಒಗ್ಗೂಡಿಸಿ ಮತ್ತಷ್ಟು ಪಾರದರ್ಶಕ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕೆ ವಿಬಿ ಜಿ ರಾಮ್ಜಿ ಯೋಜನೆ ರೂಪಿಸಿದೆ. ಆದರೆ ಕಾಂಗ್ರೆಸ್ ನಾಯಕರಿಗೆ ಯೋಜನೆಗಿಂತ ಹೆಸರಿನ ರಾಜಕೀಯ ಮುಖ್ಯವಾಗಿದೆ. ನೂರು ದಿನ ಇದ್ದ ಯೋಜನೆಯನ್ನು 125 ದಿನಗಳಿಗೆ ಹೆಚ್ಚಿಸಲಾಗಿದೆ. ಪ್ರತಿನಿತ್ಯ 370 ರೂ ಕೂಲಿ ಹಣ ಹೆಚ್ಚಿಸಿರುವುದನ್ನು ಚರ್ಚಿಸುತ್ತಿಲ್ಲ. ಬದಲಾಗಿ ಮಹಾತ್ಮಗಾಂಧಿ ಹೆಸರು ಬದಲಾವಣೆಯನ್ನು ರಾಜಕೀಯವಾಗಿ ಬಳಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ದೂರಿದರು. ಸುದ್ದಿಗೋಷ್ಟಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಪ್ರಧಾನ ಕಾರ್ಯದರ್ಶಿಗಳಾದ ರವೀಂದ್ರ ಜಲ್ದಾರ, ಜಂಬಣ್ಣ ನಿಲೋಗಲ್, ಮಾಧ್ಯಮ ಎಂಬ ತಾರ ಸಿದ್ದನಗೌಡ ನೆಲಹಾಳ, ಯು.ನರಸರೆಡ್ಡಿ ಉಪಸ್ಥಿತರಿದ್ದರು.

ದೀರ್ಘಾವಧಿ ಸಿಎಂ: ಸಂಭ್ರಮಾಚರಣೆ

ಮುದಗಲ್: ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ದಿನಗಳ ಕಾಲ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ ಸಿಎಂ ಸಿದ್ದರಾಮಯ್ಯ ರವರ ಅಭಿಮಾನಿಗಳಿಂದ ಪಟ್ಟಣ ಸಮೀಪದ ಉಪ್ಪಾರನಂದಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಬರುವ ಕಿಲ್ಲಾರಹಟ್ಟಿ ಗ್ರಾಮದಲ್ಲಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಕರ್ನಾಟಕ ರಾಜ್ಯದ ಧೀಮಂತ ನಾಯಕರಾದ ಅನ್ನಭಾಗ್ಯ, ಕ್ಷೀರಭಾಗ್ಯ, ಗೃಹಲಕ್ಷ್ಮಿಯಂತ, ಯೋಜನೆಯನ್ನು ನೀಡಿ ಜನರ ಮನದಲ್ಲಿ ಅಜರಾಮರವಾಗಿ ಉಳಿದ ಸಿದ್ದರಾಮಯ್ಯ ನವರು ಇಂದಿಗೆ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗಿ ಸುದೀರ್ಘವಾಗಿ ಅತಿ ಹೆಚ್ಚು ದಿನಗಳನ್ನು ಆಡಳಿತ ನಡೆಸಿದ

ಸಿಎಂ ಸಿದ್ದರಾಮಯ್ಯ ರವರ ಅಭಿಮಾನಿಗಳಿಂದ ಪಟ್ಟಣ ಸಮೀಪದ ಉಪ್ಪಾರನಂದಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಬರುವ ಕಿಲ್ಲಾರಹಟ್ಟಿ ಗ್ರಾಮದಲ್ಲಿ ಪಟಾಕಿ ಸಿಡಿಸಿ ಸಂಭ್ರಮಾಚರಣೆ ಮಾಡಿದರು.

ಕೀರ್ತಿ ಸಿದ್ದರಾಮಯ್ಯ ನವರಿಗೆ ಸಲ್ಲಿದ ಹಿನ್ನೆಲೆಯಲ್ಲಿ ಕಿಲಾರಹಟ್ಟಿ ಗ್ರಾಮದಲ್ಲಿ ವಿಶೇಷ ಪೂಜಾ ಸಲ್ಲಿಸಿ ಅದ್ದೂರಿಯಾಗಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ರಾಜಪ್ಪ ಬುದೇರ್,ಬಸವರಾಜಗೌಡ ಪಾಟೀಲ್, ಬಸವರಾಜ ಬುದೇರ್ ,ನಾಗನಗೌಡ ಪಾಟೀಲ, ವಸಂತ ತುಂಬದ, ಹನುಮಂತ ಕಮತರ, ಬಸವರಾಜ ಆಶಿಹಾಳ, ಹನುಮಗೌಡ ದಳಪತಿ, ದೇವಪ್ಪ ಕೊಡಿಹಾಳ, ದುರಗನಗೌಡ ಪಾಟೀಲ ಸೇರಿದಂತೆ ಮುಂತಾದವರು ಇದ್ದರು.

ಹೇರ್‌ಸ್ಟೈಲ್ ಚಿಂತೆ ಬಿಡಿ ಹೆಲ್ಮೆಟ್ ಬಳಸಿ

ಹರಪನಹಳ್ಳಿ ನಗರದ ಪೊಲೀಸ್ ಠಾಣೆಯ ಆವರಣದಲ್ಲಿ ರಸ್ತೆ ಸುರಕ್ಷಾ ಮಾಸಾಚರಣೆ ಕಾರ್ಯಕ್ರಮದ ಬೈಕ್ ರ್‍ಯಾಲಿಗೆ ಡಿವೈಎಸ್ಪಿ ಸಂತೋಷ ಚವ್ಹಾಣ ಹಸಿರು ನಿಶಾನೆ ತೋರಿಸಿದರು.

ಹರಪನಹಳ್ಳಿ: ಸಾರ್ವಜನಿಕರು ವಾಹನ ಚಾಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ಹೇರ್‌ಸ್ಟೈಲ್‌ಗಾಗಿ ಜೀವ ಕಳೆದು ಕೊಳ್ಳಬೇಡಿ, ಕನಿಷ್ಟ ಟ್ರಾಫಿಕ್ ನಿಯಮಗಳನ್ನಾದರೂ ಅಳವಡಿಸಿಕೊಳ್ಳ ಬೇಕು ಎಂದು ಹರಪನಹಳ್ಳಿ ಡಿವೈಎಸ್ಪಿ ಸಂತೋಷ ಚವ್ಹಾಣ್ ಹೇಳಿದರು.

ಪಟ್ಟಣದ ಹರಪನಹಳ್ಳಿ ಪೊಲೀಸ್ ಠಾಣೆಯಲ್ಲಿ ರಸ್ತೆ ಸುರಕ್ಷಾ ಮಾಸಾಚರಣೆ ಕಾರ್ಯಕ್ರಮದ ಬೈಕ್ ರ್‍ಯಾಲಿಗೆ ಹಸಿರು ನಿಶಾನೆ ತೋರಿಸಿ ಶನಿವಾರ ಮಾತನಾಡಿದರು.

ರಸ್ತೆ ಅಪಘಾತದಲ್ಲಿ ಶೇ.90 ರಷ್ಟು ಸಾವು ಹೆಲ್ಮೆಟ್ ಧರಿಸದಿರುವುದರಿಂದ ಆಗುತ್ತವೆ, ರೋಡ್ ಸುರಕ್ಷೆ ಜೀವ ರಕ್ಷಕ ಎಂಬ ಧ್ಯೇಯ ವಾಕ್ಯವಿದೆ, ಆದ್ದರಿಂದ ಸಾರ್ವಜನಿಕರು ರಸ್ತೆ ನಿಯಮಗಳನ್ನು ಪಾಲಿಸಬೇಕು ಎಂದು ಹೇಳಿದರು.

ಮೊದಲು ನಾವು ಹೆಲ್ಮೆಟ್ ಧರಿಸಿ ರಸ್ತೆ ಮೇಲೆ ಹೋದರೆ ಜನರು ನಮ್ಮ ಮಾತು ಕೇಳುತ್ತಾರೆ, ನಮಗೆ ನೈತಿಕತೆ ಬರುತ್ತದೆ ಎಂದು ತಮ್ಮ ಪೊಲೀಸ್ ಸಿಬ್ಬಂದಿಗೆ ತಿಳಿಸಿದ ಅವರು ಹೆಲ್ಮೆಟ್ ಧರಿಸುವುದು ಫ್ಯಾಷನ್ ಅಲ್ವ ಎಂದು ಸ್ಪಷ್ಟಪಡಿಸಿದರು. ಸಿಪಿಐ ಮಹಂತೇಶ ಸಜ್ಜನ್ ಮಾತನಾಡಿ, ಮೊದಲು ನಮ್ಮ ಸಿಬ್ಬಂದಿ ಹೆಲ್ಮೆಟ್ ಹಾಕಿಕೊಂಡು ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.

ತಾಲೂಕಿನ ವಿವಿಧ ಪೊಲೀಸ್ ಠಾಣೆಗಳ ಪಿಎಸ್ ಐ ಗಳಾದ ಶಂಭುಲಿಂಗಹಿರೇಮಠ, ವಿಜಯ ಕೃಷ್ಣ, ಕಿರಣ್ ಕುಮಾರ, ನಾಗರತ್ನ ಹಾಗೂ ಅಪರಾಧ ವಿಭಾಗದ ಪಿಎಸ್ ಐ ಮೀನಾಕ್ಷಿ ಹಾಗೂ ಎಎಸ್ ಐ, ಸಿಬ್ಬಂದಿಗಳಾದ ರವಿಕುಮಾರ್,ವಾಸುದೇವ ನಾಯ್ಕ, ಜಾತಪ್ಪ, ಮುಬಾರಕ್, ಸೇರಿದಂತೆ ಇತರೆ ಹಿರಿಯ ಮತ್ತು ಕಿರಿಯ ಪೊಲೀಸ್ ಠಾಣೆಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಕಳೆದ 2025 ರಲ್ಲಿ ಹರಪನಹಳ್ಳಿ ಉಪವಿಭಾಗದಲ್ಲಿ ರಸ್ತೆ ಅಪಘಾತದಲ್ಲಿ 68 ಸಾವು ಸಂಭವಿಸಿವೆ, 102 ಜನರು ಗಾಯಗೊಂಡಿದ್ದಾರೆ ಎಂದು ಮಾಹಿತಿ ನೀಡಿದ ಅವರು ಆದ್ದರಿಂದ ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಬೇಕಿದೆ.

-ಸಂತೋಷ ಚವ್ಹಾಣ್, ಡಿವೈಎಸ್ಪಿ

ಎಸ್‌ಡಿಎಂಸಿ ಅಧ್ಯಕ್ಷರಾಗಿ ಆಯ್ಕೆ

ಕೊಪ್ಪಳದ ಸರದಾರಗಲ್ಲಿ ಶಾಲೆಯಲ್ಲಿ ಎಸ್‌ಡಿಎಂಸಿ ರಚನೆ ಸಭೆ ನಡೆದು, ಅಧ್ಯಕ್ಷ, ಉಪಾಧ್ಯಕ್ಷರನ್ನು ಶನಿವಾರ ಆಯ್ಕೆ ಮಾಡಲಾಯಿತು.

ಕೊಪ್ಪಳ: ನಗರದ ಸರದಾರಗಲ್ಲಿ ಶಾಲೆಯಲ್ಲಿ ಎಸ್‌ಡಿಎಂಸಿ ರಚನೆ ಸಭೆ ನಡೆದು, ಅಧ್ಯಕ್ಷ, ಉಪಾ ಧ್ಯಕ್ಷರನ್ನು ಶನಿವಾರ ಆಯ್ಕೆ ಮಾಡಲಾಯಿತು.

ಎಸ್ಡಿಎಂಸಿ ಅಧ್ಯಕ್ಷರಾಗಿ ಅಬ್ದುಲ್ ರಹಮಾನ್ ಹುಬ್ಬಳ್ಳಿ, ಉಪಾಧ್ಯಕ್ಷರಾಗಿ ರೇಣುಕಾ ಗವಿಸಿದ್ದಪ್ಪ ಮೂಗಿನ ಹಾಗೂ ಸದಸ್ಯರಾಗಿ ಸಿರಾಜುದ್ದೀನ್ ಚಳ್ಳಿಗಿಡ, ಖಾಸಿಂ ಅಲಿ ಮಾನ್ವಿ, ಅಬ್ಬಾಸ್ ಕಪಾಲಿ, ಮಸ್ತಾನ ಬಿ. ಕುದುರಿಮೋತಿ, ಕಾಜಾಬನ್ನಿ ಅಣಗಿ, ನಸರೀನಬಾನು ಲುಂಗಿ, ಮೆಹರಿನ್, ಹನುಮಂತ ಕನಕಗಿರಿ, ಚಂದ್ರು ಅಣ್ಣಿಗೇರಿ, ವಸಂತ ಕನಕಗಿರಿ, ಲಕ್ಷ್ಮಿ ಸಂಗಾಪುರ, ಮುತ್ತಪ್ಪ ಮಾದರ್, ಸುನಿತಾ ದೊಡ್ಡಮನಿ, ಸರ್ವಮಂಗಲ ಹಿರೇಮಠ, ಲಕ್ಷ್ಮಿ ನಡವಲಮನಿ, ಹನುಮಪ್ಪ ಹಡಪದ, ಸದಸ್ಯರಾಗಿ ಆಯ್ಕೆಯಾದರು.

ಶಿಕ್ಷಣ ಸಂಯೋಜಕ ವೀರೇಶ ಅರಳಿಕಟ್ಟಿ ಎಸ್‌ಡಿಎಂಸಿ ರಚನೆ ನಿಯಮಾವಳಿ ಕುರಿತು ಸಮಗ್ರವಾಗಿ ಪಾಲಕರಿಗೆ ಮಾಹಿತಿ ನೀಡಿದರು. ಸಮೂಹ ಸಂಪನ್ಮೂಲ ಅಧಿಕಾರಿ ಯಲ್ಲಪ್ಪ, ಒಟ್ಟು 18 ಜನ ಸದಸ್ಯರ ಆಯ್ಕೆ ಪ್ರಕ್ರಿಯೆ ಜೊತೆಗೆ ಎಸ್ಡಿಎಂಸಿ ರಚನೆ ಕುರಿತು ವಿಸ್ತಾರವಾಗಿ ವಿವರಿಸಿದರು. ನಗರ ಸಭೆ ಮಾಜಿ ಸದಸ್ಯ ಮಾನ್ವಿ ಪಾಷಾ, ರಾಮಣ್ಣ ಹದ್ದಿನ್, ಗ್ರಾಪಂ ಮಾಜಿ ಅಧ್ಯಕ್ಷರ ಯಮನೂರಪ್ಪ ನಾಯಕ, ಮುಖ್ಯ ಶಿಕ್ಷಕ ಬಿ. ಮಂಜುನಾಥ ಮಾತನಾಡಿದರು.

ವಾರ್ಡ್ ಹಿರಿಯರಾದ ಖಾದರ್‌ಸಾಬ್ ಕುದುರೆಮೋತಿ, ಖಾಜಾಸಾಬ್ ಹನಕುಂಟಿ, ಕಾಸಿಂಸಾಬ್ ಗರ್ಸ್ ಗಲ್ಲ್, ಶಿಕ್ಷಕರಾದ ರತ್ನಮ್ಮ, ಬಸವರಾಜ ಹೊಸಮನಿ, ವಿಜಯಲಕ್ಷ್ಮಿ ಅಶ್ವಿನಿ, ಮಲ್ಲಿಕಾರ್ಜುನ, ಮಾರುತಿ ಮ್ಯಾಗಳಮನಿ ಇದ್ದರು.

ಕೇರಳದ ವಿರುದ್ಧ ಕರವೇ ಪ್ರತಿಭಟನೆ

ಕೇರಳ ಸರಕಾರದ ನಡೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ)ದಿಂದ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಗಂಗಾವತಿ: ಕೇರಳ ರಾಜ್ಯಾದ್ಯಂತ ಎಲ್ಲ ಕನ್ನಡ ಮಾಧ್ಯಮ ಶಾಲೆಯಲ್ಲೂ ಪ್ರಥಮ ಭಾಷೆಯಾಗಿ ಮಲಯಾಳಂ ಭಾಷೆ ಕಲಿಕೆ ಕಡ್ಡಾಯಗೊಳಿಸಿ, ಮಸೂದೆ ಮಂಡಿಸಿರುವ ಕೇರಳ ಸರಕಾರದ ನಡೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ ಶೆಟ್ಟಿ ಬಣ)ಯಿಂದ ನಗರದಲ್ಲಿ ಶನಿವಾರ ಪ್ರತಿಭಟಿಸಲಾಯಿತು.

ತಹಸೀಲ್ದಾರ್ ಕಚೇರಿ ಮುಂದೆ ಜಮಾಯಿಸಿದ ಸಂಘಟನೆ ಕಾರ್ಯಕರ್ತರು, ಕೇರಳ ಸರಕಾರ ಮತ್ತು ಕೇರಳ ಸಿಎಂ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತಹಸೀಲ್ದಾರ್‌ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಜಿಲ್ಲಾಧ್ಯಕ್ಷ ಪಂಪಣ್ಣ ನಾಯಕ ಮಾತನಾಡಿ, ಕೇರಳದಲ್ಲಿನ ಕನ್ನಡ ಮಾಧ್ಯಮ ಶಾಲೆಯಲ್ಲೂ ಮಲೆಯಾಳಂ ಭಾಷೆಯನ್ನೇ ಕಡ್ಡಾಯವಾಗಿ ಮೊದಲ ಭಾಷೆಯಾಗಿ ಕಲಿಯಬೇಕು ಎಂದು ಕಾಯ್ದೆ ಮಾಡಲು ಮುಂದಾಗಿದೆ. ಈ ದೇಶದ ಸಂವಿಧಾನ ಅಧಿಕೃತ ಭಾಷೆ ಉಳಿಸಲು ಕಾಯ್ದೆ ಮಾಡಿಕೊಳ್ಳಬಹುದು ಎಂದು ಹೇಳಿದೆ. ಆದರೆ, ಕಾಯ್ದೆ ಅಲ್ಲಿನ ಭಾಷಾ ಅಲ್ಪಸಂಖ್ಯಾತರನ್ನು ಹೇಗೆ ಸಂರಕ್ಷಿಸುತ್ತದೆ ಎಂಬುದು ಮುಖ್ಯ. ಕಾಸರಗೋಡು ಜಿಲ್ಲೆಯಲ್ಲಿ ಶೇ. 90 ಕನ್ನಡ ಮಾತಾಡುತ್ತಿದ್ದರೂ ಕೇರಳಕ್ಕೆ ಸೇರಿದೆ. ಈ ಕಾಯ್ದೆ ತರುವ ಮುಂಚೆ 8 ಲಕ್ಷ ಕನ್ನಡಿಗರ ಬಗ್ಗೆ ಯೋಚನೆ ಮಾಡಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇರಳದಲ್ಲಿ ಎಲ್ಲ ಕಡೆ ಮಲೆಯಾಳಂ ಕಡ್ಡಾಯ ಮಾಡಿದ್ದಾರೆ. ಆದರೆ, ಕಾಯ್ದೆಯ 6ನೇ ಅಧಿಸೂಚಿಯಲಿ ಭಾಷಿಕ ಅಲ್ಪ ಸಂಖ್ಯಾತರನ್ನು ಹೊರತುಪಡಿ ಸಬೇಕು. ಅವರನ್ನು ಹೊರತುಪಡಿಸಿ ಕೇರಳ ಕಡ್ಡಾಯ ನಿಯಮ ಮಾಡಬೇಕು ಎಂದು ಆಗ್ರಹಿಸಿದರು. ಗಡಿ ಭಾಗದ ಭಾಷಾ ಅಲ್ಪಸಂಖ್ಯಾತರ ನಡುವೆ ಬಿಕ್ಕಟ್ಟು ಹೆಚ್ಚಾಗದಂತೆ ರಾಜ್ಯ ಸರಕಾರದ ಕೆಲಸ ಮಾಡಬೇಕು. ಗಡಿ ಭಾಗದ ಅಲ್ಪಸಂಖ್ಯಾತರ ಹಕ್ಕಿಗೆ ಧಕ್ಕೆ ಆಗದಂತೆ ಕ್ರಮ ಕೈಗೊಳ್ಳಬೇಕು. ಪ್ರಾಧಿಕಾರ ಭಾಷಾ ನೀತಿಯ ಬಗ್ಗೆ ವರದಿಯನ್ನು ಕೇಂದ್ರ ಸರಕಾರಕ್ಕೆ ನೀಡಬೇಕು. ಕೂಡಲೇ ಕೇರಳ ಸರಕಾರ ಕಾಯ್ದೆ ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸಿದರು.

ಪದಾಧಿಕಾರಿಗಳಾದ ಹಸೇನಸಾಬ್, ಮುತ್ತಣ್ಣ ಈಳಿಗೇರ, ಹುಲುಗಪ್ಪ ಜೋಗಿ, ಬಸವರಾಜ ನಾಯಕ, ವೆಂಕಟೇಶ ಭೋವಿ, ನಾಗರಾಜ ನಾಯಕ, ವೆಂಕಟೇಶ, ಪುಂಡಲಿಕ ಇದ್ದರು.

ಅಧಿಕಾರಿಗಳೊಂದಿಗೆ ಸಭೆ | ಉತ್ಸವದ ಅಗತ್ಯ ಸಿದ್ಧತೆಗೆ ಸಚಿವ ಬೋಸರಾಜು ಸೂಚನೆ

ಜ.29ರಿಂದ 3 ದಿನ ಅದ್ದೂರಿ ರಾಯಚೂರು ಉತ್ಸವ

ರಾಯಚೂರು: ಈ ತಿಂಗಳ ಕೊನೆಯಲ್ಲಿ 29, 30 ಹಾಗೂ 31ರಂದು ಮೂರು ದಿನಗಳ ಕಾಲ ಆಯೋಜನೆ ಮಾಡಲಾದ ರಾಯಚೂರು ಜಿಲ್ಲಾ ಉತ್ಸವದಲ್ಲಿ ಎಲ್ಲರೂ ಭಾಗಿಯಾಗೋಣ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್ ಎಸ್ ಬೋಸರಾಜು ಅವರು ಜಿಲ್ಲೆಯ ಸಾರ್ವಜನಿಕರಲ್ಲಿ ಸಲಹೆ ಮಾಡಿದರು.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜನವರಿ ನಗರದ ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಯಚೂರು ಜಿಲ್ಲೆಯಲ್ಲಿ ಬಹು ವರ್ಷಗಳ ನಂತರ ಉತ್ಸವವು ನಿಗದಿಯಾಗಿದೆ. ಇದು ಸಾರ್ವಜನಿಕ ಉತ್ಸವ ಆಗಿರುವುದರಿಂದ ಸಂಘ-ಸಂಸ್ಥೆಗಳ ಪ್ರಮುಖರು ತನುಮನಧನದ ಮೂಲಕ ಉತ್ಸವದಲ್ಲಿ ಭಾಗಿಯಾಗಬೇಕು ಎಂದು ಸಚಿವರು ಮನವಿ ಮಾಡಿದರು.

ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಸಚಿವ ಬೋಸರಾಜು ಮಾತನಾಡಿದರು.

ಸಭೆಯಲ್ಲಿ ಚೇಂಬರ್‌ಆಫ್ ಕಾಮರ್ಸನ ಎಸ್ ಕಮಲಕುಮಾರ ಅವರು ಮಾತನಾಡಿ, ಅತ್ಯಂತ ಪ್ರಶಸಾಂರ್ಹ ಕಾರ್ಯವನ್ನು ಜಿಲ್ಲಾಡಳಿತವು ಉತ್ಸವವನ್ನು ನಿಗದಿ ಮಾಡುವ ಮೂಲಕ ಮಾಡಿದೆ ಎಂದರು. ತಾವು ತನುಮನಧನದೊಂದಿಗೆ ಉತ್ಸವಕ್ಕೆ ಜತೆಯಾಗುವುದಾಗಿ ತಿಳಿಸಿದರು.

ರಾಯಚೂರು ಉತ್ಸವ ಹಮ್ಮಿಕೊಂಡಿದಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದಿಂದ ಅಭಿನಂದಿಸುತ್ತೇವೆ. ಎಲ್ಲ ರೀತಿಯ ಸಹಕಾರ ಕೊಡುತ್ತೇವೆ ಎಂದು ಎಸ್.ಕೆ.ನಾಗಿರಡ್ಡಿ ತಿಳಿಸಿದರು.

ಉತ್ಸವದಲ್ಲಿ ನಾವು ಸಂಪೂರ್ಣ ಭಾಗಿಯಾಗುತ್ತೇವೆ. ನಮಗೂ ಸಹ ಬೇರೆ ಬೇರೆ ಕಾರ್ಯಗಳಿಗೆ ಜವಾಬ್ದಾರಿ ವಹಿಸಿದರೆ ಜತೆಗಿದ್ದು ನಿರ್ವಹಿಸುತ್ತೇವೆ ಎಂದು ರೈಸ್ ಮಿಲ್ ಅಸೋಸಿಯೇಶನ್ದ ಎಸ್ ಪುರುಷೋತ್ತಮ ಹಾಗೂ ಅವರ ತಂಡದವರು ತಿಳಿಸಿದರು.

ಉತ್ಸವದ ಮೆರವಣಿಗೆಯು ಐತಿಹಾಸಿಕ ಕರ್ನಾಟಕ ಸಂಘದಿಂದಲೇ ಆರಂಭವಾಗಬೇಕು. ಹಾಗಾದಲ್ಲಿ ನಗರದ ಎಲ್ಲ ಜನತೆಗೆ ಉತ್ಸವದಲ್ಲಿ ಭಾಗಿಯಾಗುವ ಕಲಾ ತಂಡಗಳ ರಸದೌತಣ ಸವಿಯಲು ಮತ್ತು ಉತ್ಸವದ ಬಗ್ಗೆ ಜನತೆಗೆ ತಿಳಿದು ಭಾಗಿಯಾಗಲು ಅನುಕೂಲವಾಗುತ್ತದೆ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಕೆ.ಶಾಂತಪ್ಪ ಸಭೆಗೆ ಸಲಹೆ ಮಾಡಿದರು. ಸ್ಕೌಟ್ಸ್ ಮತ್ತು ಗೈಡ್ಸನ ಎನ್ ಶೇಖರ ಮಾತನಾಡಿ, ಉತ್ಸವದ ನಾನಾ ಕಾರ್ಯಗಳಿಗೆ ತಾವು ತಮ್ಮ ಸ್ಕೌಟ್ಸ್ ಮತ್ತು ಗೈಡ್ಸ್ ತಂಡದೊಂದಿಗೆ ಹಾಜರಾಗುವುದಾಗಿ ಹೇಳಿದರು.

ಸಭೆಯಲ್ಲಿ ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ ಭಜಂತ್ರಿ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಡಿವೈಎಸ್ಪಿ ಡಾ.ಶಾಂತವೀರ, ಮಹಾನಗರ ಪಾಲಿಕೆ ಜೋನಲ್ 1ರ ಸಹಾಯಕ ಆಯುಕ್ತ ಪುರುರಾಜ ಸೋಲಂಕಿ ಹಾಗೂ ಇನ್ನಿತರರು ಭಾಗಿಯಾಗಿದ್ದರು.

ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಎಲ್ಲ ರೀತಿಯ ಸಹಕಾರ

ರಾಯಚೂರು ಉತ್ಸವವು ಸಾಂಸ್ಕೃತಿಕ ಹಬ್ಬವಾಗಿದೆ. ಈ ಉತ್ಸವಕ್ಕೆ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಎಲ್ಲ ರೀತಿಯ ಸಹಕಾರ ನೀಡುತ್ತೇವೆ. ಖಾಸಗಿ ಶಾಲೆಗಳ ವಿದ್ಯಾರ್ಥಿಗಳನ್ನು ಕಾರ್ಯಕ್ರಮಕ್ಕೆ ಕರೆ ತರುತ್ತೇವೆ. ನಮ್ಮ ಶಾಲೆಗಳಲ್ಲಿನ ದೈಹಿಕ ಶಿಕ್ಷಣ, ಡ್ರಾಯಿಂಗ್ ಟೀಚರ್‌ಸೇರಿದಂತೆ ಶಾಲೆಯ ಎನ್ ಎಸ್‌ಎಸ್ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್‌ನ ತಂಡಗಳನ್ನು ಬೇರೆ ಬೇರೆ ಕಾರ್ಯಗಳಿಗೆ ನಿಯೋಜನೆ ಮಾಡಿ ಸಹಕಾರ ನೀಡುತ್ತೇವೆ ಎಂದು ರುಷ್ಮಾ ಅಧ್ಯಕ್ಷ ರಾಜಾ ಶ್ರೀನಿವಾಸ ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಬೀಚ್‌ಗೇಮ್ಸ್: ರಾಜ್ಯದ ಅಶ್ಮಿತಾಗೆ ಚಿನ್ನದ ಪದಕ

ದಿಯು: ನಿರೀಕ್ಷೆಯಂತೆ ಕರ್ನಾಟಕದ ಈಜುಪಟುಗಳು ಘೋಘ್ಲಾ ಕಡಲ ಕಿನಾರೆಯಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಬೀಚ್ ಗೇಮ್ಸ್‌ನಲ್ಲಿ ಪಾಬಲ್ಯ ಮೆರೆದಿದ್ದಾರೆ. ಶುಕ್ರವಾರ ನಡೆದ ಓಪನ್ ವಾಟರ್ ಸ್ವಿಮ್ಮಿಂಗ್ 10 ಕಿ.ಮೀ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿದ್ದ ಆರು ಪದಕಗಳ ಪೈಕಿ ನಾಲ್ಕನ್ನು ಬಾಚಿಕೊಂಡಿದ್ದು, ಇದರೊಂದಿಗೆ ಕರ್ನಾಟಕದ ಪದಕಗಳ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ. ಅರಬ್ಬಿ ಸಮುದ್ರದಲ್ಲಿ ಏಳುತ್ತಿದ್ದ ಉಗ್ರ ಸ್ವರೂಪಿ ಅಲೆಗಳನ್ನು ಸೀಳಿಕೊಂಡು ಮುನ್ನುಗ್ಗಿದ ಬೆಂಗಳೂರಿನ 20 ವರ್ಷದ ಅಶ್ಮಿತಾ ಚಂದ್ರ ಅವರು ಮಹಿಳೆಯರ ವಿಭಾಗದಲ್ಲಿ ಚಿನ್ನದ ಪದಕ ಪಡೆದರು, ಎರಡನೇ ಆವೃತ್ತಿಯ ಕೂಟದಲ್ಲಿ ಕರ್ನಾಟಕಕ್ಕೆ ಲಭಿಸಿದ ಮೊದಲ ಸ್ವರ್ಣ ಇದಾಗಿದೆ. ಅಶ್ಮಿತಾ ಅವರು 2 ಗಂಟೆ 46.34 ನಿಮಿಷಗಳಲ್ಲಿ ಗುರಿ ತಲುಪಿದರು.

ಆರ್‌ಸಿಬಿಯಿಂದ ಪುಣೆ ಸ್ಟೇಡಿಯಂ ಪರಿಶೀಲನೆ

ಬೆಂಗಳೂರು: ಐಪಿಎಲ್ ಟಿ20 ಕ್ರಿಕೆಟ್ ಟೂರ್ನಿಯ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ತನ್ನ ತವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಸಾಧ್ಯವಾಗಬಹುದೆನ್ನುವ ನಿರೀಕ್ಷೆಯನ್ನು ಕೈ ಬಿಟ್ಟಿದೆ. ಈ ಅನಿಶ್ಚಿತತೆಯ ಹಿನ್ನೆಲೆಯಲ್ಲಿ ಆರ್‌ಸಿಬಿಯು ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಮುಂದಾಗಿದೆ. ಅದಕ್ಕಾಗಿಯೇ ಪುಣೆಯ ಗಹುಂಜೆಯಲ್ಲಿರುವ ಕ್ರೀಡಾಂಗಣದಲ್ಲಿ ಪಂದ್ಯಗಳನ್ನು ಆಯೋಜಿಸಲು ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ (ಎಂಸಿಎ) ಜತೆಗೆ ಆರ್‌ಸಿಬಿಯು ಮಾತುಕತೆ ನಡೆಸಿದೆ, ಅಲ್ಲದೇ ತಂಡದ ನಿಯೋಗವು ಕ್ರೀಡಾಂಗಣಕ್ಕೂ ಭೇಟಿ ನೀಡಿ ಪರಿಶೀಲಿಸಿದೆ. ರಾಜಸ್ಥಾನ ರಾಯಲ್ಸ್ ತಂಡ ಕೂಡ ತನ್ನ ತವರು ಪಂದ್ಯಗಳನ್ನು ಪುಣೆಯಲ್ಲಿ ನಡೆಸುವ ಕುರಿತು ಮಾತುಕತೆ ನಡೆಸಿದೆ ಎಂದು ಎಂಸಿಎ 'ಎಕ್ಸ್'ನಲ್ಲಿ ಪ್ರಕಟಣೆ ನೀಡಿದೆ.

3 ಪಂದ್ಯಗಳ ಮೊದಲ ಏಕದಿನ | ಮತ್ತೊಮ್ಮೆ ರೋಕೊ ಆಟದತ್ತ ಕ್ರಿಕೆಟ್‌ಪ್ರೇಮಿಗಳ ಚಿತ್ತ

ಇಂದು ಭಾರತ-ಕಿವೀಸ್ ಏಕದಿನ ಕದನ

ಮುಖಾಮುಖಿ

ಆಡಿದ ಪಂದ್ಯಗಳು	ಭಾರತ ಗೆಲುವು
120	62
ಫಲಿತಾಂಶ ರಹಿತ	ಕಿವೀಸ್ ಗೆಲುವು
8	50

ವಡೋದರಾ: ಭಾರತ ಮತ್ತು ನ್ಯೂಜಿಲ್ಯಾಂಡ್ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಪಂದ್ಯವು ಇಂದು ಇಲ್ಲಿನ ಬಿಸಿಎ ಕ್ರೀಡಾಂಗಣದಲ್ಲಿ ನಡೆಯಲಿದೆ.

ಶುಭ್‌ಮನ್ ಗಿಲ್ ನಾಯಕತ್ವದ ಟೀಮ್ ಇಂಡಿಯಾಕ್ಕಾಗಿ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿಯಂತಹ ಅನುಭವಿ ಆಟಗಾರರು ಮತ್ತೆ ಸಾಮರ್ಥ್ಯವನ್ನು ಒರೆಗೆ ಹಚ್ಚಲಿದ್ದಾರೆ. ಟಿ20 ವಿಶ್ವಕಪ್ ಮತ್ತು ಈ ಸಲದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಾವಳಿಯ ಮೊದಲು ಭಾರತ ತಂಡದ ಕೊನೆಯ ಏಕದಿನ ಸರಣಿ ಇದಾಗಿದೆ.

ಮೈಕೆಲ್ ಬ್ರೇಸ್‌ವೆಲ್ ನಾಯಕತ್ವದಲ್ಲಿ ನ್ಯೂಜಿಲೆಂಡ್ ಹೊಸ ಚೈತನ್ಯದೊಂದಿಗೆ ಮೈದಾನಕ್ಕೆ ಇಳಿಯಲಿದೆ. ದೀರ್ಘ ವಿರಾಮದ ನಂತರ ಎರಡೂ ತಂಡಗಳು ಏಕದಿನ ಸ್ವರೂಪದಲ್ಲಿ ಪರಸ್ಪರ ಎದುರಾಗಲಿವೆ ಮತ್ತು ಈ ಸರಣಿಯು ಅನೇಕ ಆಟಗಾರರಿಗೆ ನಿರ್ಣಾಯಕವೆಂದು ಪರಿಗಣಿಸಲಾಗಿದೆ.

ಟಿ20 ವಿಶ್ವಕಪ್‌ಗಾಗಿ ಭಾರತೀಯ ತಂಡದಿಂದ ಕೈಬಿಟ್ಟ ನಂತರ ಶುಭ್‌ಮನ್ ಗಿಲ್ ಆಡುತ್ತಿರುವ ಮೊದಲ ಸರಣಿ ಇದಾಗಿದ್ದು, 25 ವರ್ಷ ವಯಸ್ಸಿನ ಆಟಗಾರ ಏಕದಿನ ತಂಡದ ನಾಯಕನಾಗಿ ಮರಳಿದ್ದಾರೆ. ಗುರುವಾರ ನಡೆದ ವಿಜಯ್ ಹಜಾರೆ ಟ್ರೋಫಿಯಲ್ಲಿ ತಮ್ಮ ತಂಡಗಳ ಪರ ಆಡಿದ್ದ ಭಾರತದ ಮಧ್ಯಮ ಕ್ರಮಾಂಕದ ಪ್ರಮುಖ ಆಟಗಾರರಾದ ಶ್ರೇಯಸ್ ಅಯ್ಯರ್, ರಿಷಭ್ ಪಂತ್ ಹಾಗೂ ವೇಗಿ ಮೊಹಮ್ಮದ್ ಸಿರಾಜ್ ಶನಿವಾರದ ಮೂರು ಗಂಟೆಗಳ ಪ್ರಮುಖ ತರಬೇತಿ ಅವಧಿಯಲ್ಲಿ ಭಾಗವಹಿಸಿರಲಿಲ್ಲ.

ಪಿಚ್ ರಿಪೋರ್ಟ್: ವಡೋದರಾದಲ್ಲಿನ ಪಿಚ್ ಮತ್ತು ಪರಿಸ್ಥಿತಿಗಳು ಭಾರತೀಯ ತಂಡಕ್ಕೆ ಸವಾಲಾಗಬಹುದು ಎನ್ನಲಾಗುತ್ತಿದೆ. ಟೀಮ್ ಇಂಡಿಯಾ ಇಲ್ಲಿ ಆಡುತ್ತಿರುವ ಮೊದಲ ಏಕದಿನ ಪಂದ್ಯ ಇದಾಗಿದೆ. ಇಲ್ಲಿ ದೇಶೀಯ ಪಂದ್ಯಗಳು ನಡೆದಿದ್ದು, ಪಿಚ್ ಸಮತಟ್ಟಾಗಿದೆ.

ಇಲ್ಲಿನ ಪಿಚ್ ಬೌಲರ್‌ಗಳಿಗಿಂತ ಬ್ಯಾಟ್ಸ್‌ಮನ್‌ಗಳಿಗೆ ಹೆಚ್ಚಿನ ಸಹಾಯವನ್ನು ನೀಡುವ ನಿರೀಕ್ಷೆಯಿದೆ.

ಬೌಲರ್‌ಗಳು ಹೊಸ ಚೆಂಡಿನೊಂದಿಗೆ ಲಭ್ಯವಿರುವ ಸ್ವಿಂಗ್ ಅನ್ನು ಬಳಸಿಕೊಳ್ಳಬಹುದು, ಇಲ್ಲದಿದ್ದರೆ ಬ್ಯಾಟ್ಸ್‌ಮನ್‌ಗಳು ಪ್ರಾಬಲ್ಯ ಸಾಧಿಸುವ ಸಾಧ್ಯತೆಯಿದೆ.

ಸಂಭಾವ್ಯ ತಂಡಗಳು

ಭಾರತ: ಶುಭ್‌ಮನ್ ಗಿಲ್ (ನಾಯಕ), ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆಎಲ್ ರಾಹುಲ್ (ಕೀಪರ್), ಶ್ರೇಯಸ್ ಅಯ್ಯರ್ (ಉಪ ನಾಯಕ), ವಾಷಿಂಗ್ಟನ್ ಸುಂದರ್, ರವೀಂದ್ರ ಜಡೇಜಾ, ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ, ಪ್ರಸಿದ್ಧ್ ಕೃಷ್ಣ, ಕುಲದೀಪ್ ಯಾದವ್, ರಿಷಭ್ ಪಂತ್, ನಿತೀಶ್ ಕುಮಾರ್ ರೆಡ್ಡಿ, ಅರ್ಷದೀಪ್ ಸಿಂಗ್, ಯಶಸ್ವಿ ಜೈಸ್ವಾಲ್.

ನ್ಯೂಜಿಲೆಂಡ್ ಮೈಕೆಲ್ ಬ್ರೇಸ್‌ವೆಲ್ (ನಾಯಕ), ಆದಿ ಅಶೋಕ್, ಕ್ರಿಸ್ಟಿಯನ್ ಕ್ಲಾರ್ಕ್, ಜೋಶ್ ಕ್ಲಾರ್ಕ್ಸನ್, ಡೆವೊನ್ ಕಾನ್ವೇ (ವಿ.ಕೀ.), ಜ್ಯಾಕ್ ಫೌಲ್ಕ್ಸ್, ಮಿಚ್ ಹೇ, ಕೈಲ್ ಜೇಮಿಸನ್, ನಿಕ್ ಕೆಲ್ಲಿ, ಜೇಡೆನ್ ಲೆನಾಕ್ಸ್, ಡ್ಯಾರಿಲ್ ಮಿಚೆಲ್, ಹೆನ್ರಿ ನಿಕೋಲ್ಸ್, ಗ್ಲೆನ್ ಫಿಲಿಪ್ಸ್, ಮೈಕೆಲ್ ರೇ, ವಿಲ್ ಯಂಗ್.

ಬಾಂಗ್ಲಾ ನಿರ್ಧಾರ ಬಗ್ಗೆ ಬಿಸಿಸಿಐ ಮೌನ

ಮುಂಬಯಿ: ಟಿ20 ವಿಶ್ವಕಪ್‌ಗೆ ಸಂಬಂಧಿಸಿದಂತೆ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ ಜತೆಗಿನ ಬಿಕ್ಕಟ್ಟಿನ ಬಗ್ಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮೌನ ವಹಿಸಿದೆ. ಭದ್ರತಾ ಕಾರಣಗಳನ್ನು ಉಲ್ಲೇಖಿಸಿ ಬಾಂಗ್ಲಾದೇಶವು ಭಾರತ ಪ್ರಯಾಣಕ್ಕೆ ನಿರಾಕರಿಸಿದ್ದು, ತನ್ನ ಪಂದ್ಯಗಳನ್ನು ಸಹ ಆತಿಥೇಯ ಶ್ರೀಲಂಕಾಕ್ಕೆ ಸ್ಥಳಾಂತರಿಸುವಂತೆ ಅಂತರ ರಾಷ್ಟ್ರೀಯ ಕ್ರಿಕೆಟ್ ಮಂಡಳಿಯನ್ನು ಒತ್ತಾಯಿಸಿದೆ. ಎರಡು ಕ್ರಿಕೆಟ್ ಮಂಡಳಿಗಳ ನಡುವೆ ನಡೆಯುತ್ತಿರುವ ಉದ್ವಿಗ್ನತೆಯ ನಡುವೆ, ಬಿಸಿಸಿಐ ಈ ವಿಷಯದ ಬಗ್ಗೆ ಮೌನವನ್ನು ಕಾಯ್ದುಕೊಂಡಿದೆ. ಶನಿವಾರದಂದು ಮುಂಬೈನಲ್ಲಿ ಬಿಸಿಸಿಐ ಉನ್ನತ ಅಧಿಕಾರಿಗಳ ಸಭೆ ನಡೆದಿದ್ದರೂ, ಟಿ 20 ವಿಶ್ವಕಪ್ ವಿವಾದದ ಬಗ್ಗೆ ಯಾವುದೇ ಚರ್ಚೆಗಳು ನಡೆದಿಲ್ಲ ಎಂದು ಕಾರ್ಯದರ್ಶಿ ದೇವಜಿತ್ ಸೈಕಿಯಾ ಬಹಿರಂಗ ಪಡಿಸಿದರು. ಸಭೆಯಲ್ಲಿ ಬಿಸಿಸಿಐ ಅಧ್ಯಕ್ಷ ಮಿಥುನ್ ಮನ್ಹಾಸ್, ಉಪಾಧ್ಯಕ್ಷ ರಾಜೀವ್ ಶುಕ್ಲಾ ಮತ್ತು ಸಿಒಇ ವಿವಿಎಸ್ ಲಕ್ಷ್ಮಣ್ ಕೂಡ ಭಾಗವಹಿಸಿದ್ದರು. 'ಸಭೆಯು ಸಿಒಇ ಮತ್ತು ಇತರ ಕ್ರಿಕೆಟ್ ವಿಷಯಗಳ ಕುರಿತಾಗಿತ್ತು. ಬಾಂಗ್ಲಾ ನಿರ್ಧಾರದ ಬಗ್ಗೆ ಮಾತನಾಡುವುದು ನಮ್ಮ ವಿಷಯವಲ್ಲ. ಟಿ20 ವಿಶ್ವಕಪ್‌ನಲ್ಲಿ ಬಾಂಗ್ಲಾ ಭಾಗವಹಿಸುವಿಕೆಯ ಬಗ್ಗೆ ಐಸಿಸಿ ಅಂತಿಮ ನಿರ್ಧಾರವನ್ನು ಹೊಂದಿದೆ' ಎಂದು ಸೈಕಿಯಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಫೋಬೆ ಲಿಚ್‌ಫೀಲ್ಡ್ ಏಕಾಂಗಿ ಹೋರಾಟ ವ್ಯರ್ಥ | ಯುಪಿ ವಾರಿಯರ್ಸ್‌ಗೆ ವೀರೋಚಿತ ಸೋಲು

ಗುಜರಾತ್ ವನಿತೆಯರಿಗೆ ಗೆಲುವು

ಮಹಿಳಾ ಪ್ರೀಮಿಯರ್ ಲೀಗ್ 2026

ನವಿಮುಂಬೈ: ಮಹಿಳಾ ಪ್ರೀಮಿಯರ್ ಲೀಗ್‌ನ ಗುಜರಾತ್ ಜೈಂಟ್ಸ್ ಶುಭಾರಂಭ ಮಾಡಿದೆ. ಶನಿವಾರದ ಪಂದ್ಯದಲ್ಲಿ ಯು.ಪಿ ವಾರಿಯರ್ಸ್ ವಿರುದ್ಧ ಗುಜರಾತ್ ಜೈಂಟ್ಸ್ 10 ರನ್‌ಗಳ ರೋಚಕ ಗೆಲುವು ಸಾಧಿಸಿದೆ. ಲಿಚ್‌ಫೀಲ್ಡ್ (40 ಎಸೆತ, 78 ರನ್) ಅವರ ಏಕಾಂಗಿ ಹೋರಾಟ ಹೊರತಾಗಿಯೂ ಸೋಲನ್ನು ತಪ್ಪಿಸಲು ಯುಪಿ ವಾರಿಯರ್ಸ್‌ನಿಂದ ಸಾಧ್ಯವಾಗಲಿಲ್ಲ. ಲಿಚ್‌ಫೀಲ್ಡ್ ಹೊರತುಪಡಿಸಿದರೆ ಮೆಗ್ ಲ್ಯಾನಿಂಗ್30 ರನ್, ಶ್ವೇತಾ ಸೆಹರ್ವಾತ್ 25 ರನ್ ಮತ್ತು ಆಶಾ ಶೋಭನಾ 27 ರನ್ ಗಳಿಸಿದರು.

ಯುಪಿ ವಾರಿಯರ್ಸ್ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್‌ಗಳ ನಷ್ಟಕ್ಕೆ 207 ರನ್ ಗಳಿಸಿತು. ನಾಯಕಿ ಆಶ್ಲೇ ಗಾರ್ಡ್ನರ್ (65) ಅರ್ಧಶತಕದೊಂದಿಗೆ ಅದ್ಭುತ ಆಟವಾಡಿದರು. ಅನುಷ್ಕಾ ಶರ್ಮಾ (44) ಕೂಡ ಉತ್ತಮ ಪ್ರದರ್ಶನ ನೀಡಿದರು, ಸೂಫಿ ಡಿವೈನ್ ಕೂಡ 38 ರನ್ ಗಳಿಸಿದರು.

ಯು.ಪಿ ಬೌಲರ್‌ಗಳ ಪೈಕಿ ಸೂಫಿ ಎಕ್ಲೆಸ್ಟೋನ್ 2 ವಿಕೆಟ್ ಪಡೆದರು, ಡಯಾಂಡ್ರಾ ಡಾಟಿನ್ ಮತ್ತು ಶಿಖಾ ಪಾಂಡೆ ತಲಾ ಒಂದು ವಿಕೆಟ್ ಪಡೆದರು.

ಗುಜರಾತ್ ತಂಡ ಆರಂಭಿಕ ಆಟಗಾರ್ತಿ ಸೂಫಿ ಡಿವೈನ್ ಆರಂಭದಿಂದಲೇ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಿದರು. ಬೆತ್ ಮೂನಿ ಕೇವಲ 13 ರನ್‌ಗಳಿಗೆ ಔಟಾದರು. ಮೊದಲ ವಿಕೆಟ್ 41 ರನ್‌ಗೆ ಪತನಗೊಂಡರೂ, ಸೂಫಿ ಮತ್ತು ಅನುಷ್ಕಾ ಶರ್ಮಾ ಆ ಬಳಿಕ ರನ್ ಮಳೆ ಹರಿಸಿದರು. ಡಿವೈನ್ 20 ಎಸೆತಗಳಲ್ಲಿ 38 ರನ್ ಗಳಿಸಿ ಶಿಖಾ ಪಾಂಡೆ ಬೌಲಿಂಗ್‌ನಲ್ಲಿ ಪೆವಿಲಿಯನ್ ಸೇರಿದರು.

ಆಶ್ಲೀ ಗಾರ್ಡ್ನರ್ ಸ್ಫೋಟಕ ಬ್ಯಾಟಿಂಗ್.

ನಂತರ ಬ್ಯಾಟಿಂಗ್‌ಗೆ ಬಂದ ನಾಯಕಿ ಆಶ್ಲೀ ಗಾರ್ಡ್ನರ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಗಾರ್ಡ್ನರ್ ಯುಪಿ ಬೌಲರ್‌ಗಳ ಮೇಲೆ ದಾಳಿಯನ್ನು ಎದುರಿಸದರು.

ಗಾರ್ಡ್ನರ್ ಕೇವಲ 41 ಎಸೆತಗಳಲ್ಲಿ 65 ರನ್ ಗಳಿಸುವ ಮೂಲಕ ಗುಜರಾತ್ ಉತ್ತಮ ಸ್ಕೋರ್ ಗಳಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಜಾರ್ಜಿಯಾ ವೇರ್‌ಹ್ಯಾಮ್ (27) ಮತ್ತು ಭಾರತಿ ಫುಲ್ಮಾಲಿ (14) ಕೊನೆಯಲ್ಲಿ ತಮ್ಮ ತಂಡಕ್ಕೆ ಉತ್ತಮ ಕಾಣಿಕೆ ನೀಡಿದರು. ಗುಜರಾತ್ ಜೈಂಟ್ಸ್‌ವು ನಿಗದಿತ 20 ಓವರ್‌ಗಳಲ್ಲಿ 207 ರನ್ ಗಳಿಸಿತು.

ಮತ್ತೆ ಸೂರ್ಯವಂಶಿ ಅಬ್ಬರದ ಬ್ಯಾಟಿಂಗ್

ದೆಹಲಿ: ಐಸಿಸಿ ಅಂಡರ್-19 ವಿಶ್ವಕಪ್ ಟೂರ್ನಿಗೂ ಮುನ್ನ ಭಾರತ ಕಿರಿಯರ ತಂಡದ ಆರಂಭಿಕ ಬ್ಯಾಟ್ಸ್‌ಮನ್ ವೈಭವ್ ಸೂರ್ಯವಂಶಿ ತಮ್ಮ ಬ್ಯಾಟಿಂಗ್ ಅಬ್ಬರವನ್ನು ಮುಂದುವರಿಸಿದ್ದಾರೆ. ಅಭ್ಯಾಸದ ಪಂದ್ಯದಲ್ಲಿ ಮತ್ತೊಂದು ಸ್ಫೋಟಕ ಇನ್ನಿಂಗ್ಸ್ ಅನ್ನು ಆಡಿದ್ದಾರೆ. ಬುಲವಾಯೊದ ಅಥ್ಲೆಟಿಕ್ ಕ್ಲಬ್‌ನಲ್ಲಿ ಶನಿವಾರ ಸ್ಕಾಟ್ಲೆಂಟ್ ವಿರುದ್ಧದ ಅಭ್ಯಾಸದ ಪಂದ್ಯದಲ್ಲಿ ಹದಿನಾಲ್ಕು ವಯಸ್ಸಿನ ವೈಭವ್ ಸೂರ್ಯವಂಶಿ ಅವರು ಕೇವಲ 50 ಎಸೆತಗಳಲ್ಲಿ 96 ರನ್‌ಗಳನ್ನು ಬಾರಿಸಿದ್ದಾರೆ. ತಮ್ಮ ಸ್ಫೋಟಕ ಇನಿಂಗ್ಸ್‌ನಲ್ಲಿ ವೈಭವ್ ಸೂರ್ಯವಂಶಿ 7 ಸಿಕ್ಸರ್‌ಗಳು ಹಾಗೂ 9 ಬೌಂಡರಿಗಳನ್ನು ಬಾರಿಸಿದ್ದಾರೆ. ಇದರ ಜತೆಗೆ ನಾಯಕ ಆಯುಷ್ ಮ್ಹಾತ್ರೆ ಅವರೊಂದಿಗೆ ಮುರಿಯದ ಮೊದಲನೇ ವಿಕೆಟ್‌ಗೆ 70 ರನ್‌ಗಳ ಜೊತೆಯಾಟವನ್ನು ಆಡಿದ್ದರು.

ಮೊಹಾಲಿಯಲ್ಲಿ ನಡೆದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ (ಪುರುಷರ ವಿಭಾಗ) ಭಾಗವಹಿಸಿದ್ದ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ತಂಡ.

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಭಾರತದ ಆಟಗಾರರ ಅಭಿಯಾನ ಅಂತ್ಯ

ಪಿ.ವಿ. ಸಿಂಧು.

ಸೆಮೀಸ್‌ನಲ್ಲಿ ಸಿಂಧುಗೆ ಸೋಲು

ಕೌಲಾಲಂಪುರ: ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಮಲೇಷ್ಯಾ ಓಪನ್ ಸೂಪರ್-1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ತನ್ನ ಅಭಿಯಾನ ಮುಗಿಸಿದ್ದಾರೆ. ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಚೀನಾದ ವಾಂಗ್ ಝಿಯಿ ವಿರುದ್ಧ ಸೋತು ಹೊರಬಿದ್ದರು. ಶುಕ್ರವಾರ ನಡೆದಿದ್ದ ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್‌ನ ಅಕಾನೆ ಯಮಾಗುಚಿ ಅವರು ಗಾಯದ ಕಾರಣ ನಿವೃತ್ತರಾದ ಕಾರಣ ಸಿಂಧು ಸೆಮಿ ಪ್ರವೇಶಿಸಿದ್ದರು.

ಸೆಮಿಫೈನಲ್‌ನಲ್ಲಿ ಸಿಂಧು ಎರಡನೇ ಶ್ರೇಯಾಂಕದ ವಾಂಗ್ ಝಿಯಿ ವಿರುದ್ಧ ಸಂಪೂರ್ಣ ವಿಫಲರಾದರು. 21-16, 21-15 ಅಂತರದ ಸೋಲು ಕಂಡರು. ಕಳೆದ ವರ್ಷ ಅಕ್ಟೋಬರ್‌ನಿಂದ ಕಾಲಿನ ಗಾಯದಿಂದಾಗಿ ಪಿ.ವಿ ಸಿಂಧು ಹೊರಗುಳಿದ ನಂತರ ಇದು ಅವರ ಮೊದಲ ಪಂದ್ಯವಾಗಿತ್ತು. 2ನೇ ಗೇಮ್‌ನಲ್ಲಿ ಸಿಂಧು 11-6 ಮುನ್ನಡೆ ಸಾಧಿಸಿದರೂ ಅದೇ ಲಯ ಮುಂದುವರಿಸುವಲ್ಲಿ ವಿಫಲರಾದರು. ಸೆಮಿಫೈನಲ್‌ನಲ್ಲಿ ಸಿಂಧು ಅವರ ಸೋಲಿನಿಂದಾಗಿ ಮಲೇಷ್ಯಾ ಓಪನ್‌ನಲ್ಲಿ ಭಾರತೀಯ ಆಟಗಾರರ ಪ್ರದರ್ಶನಕ್ಕೆ ತೆರೆ ಬಿದ್ದಿತು.

ವಿಶ್ವದ ಎರಡನೇ ನಂಬರ್ ಒನ್ ಆಟಗಾರ್ತಿ ಝಿಯಿ, ಟೂರ್ನಮೆಂಟ್‌ನ ಫೈನಲ್ ಹಣಾಹಣಿಯಲ್ಲಿ ದಕ್ಷಿಣ ಕೊರಿಯಾದ ಎಸ್‌ವೈ ಆನ್ ಅವರನ್ನು ಎದುರಿಸಲಿದ್ದಾರೆ. ಭಾನುವಾರದಂದು ಇಬ್ಬರು ತಾರೆಯರು ಮುಖಾಮುಖಿಯಾಗಲಿದ್ದಾರೆ. ಟೂರ್ನಮೆಂಟ್‌ನಲ್ಲಿ ಕೆಲವು ಅದ್ಭುತ ಪ್ರದರ್ಶನ ನೀಡಿದ ನಂತರ, ಝಿಯಿ ಫೈನಲ್ ಹಣಾಹಣಿಯಲ್ಲೂ ಅದೇ ರೀತಿಯ ಪ್ರದರ್ಶನ ನೀಡುವ ನಿರೀಕ್ಷೆಯಲಿದ್ದಾರೆ. ಸೆಮಿಫೈನಲ್‌ನಲ್ಲಿ ಪಿ.ವಿ ಸಿಂಧು ಅವರನ್ನು ಸೋಲಿಸಿದ ನಂತರ ಮಲೇಷ್ಯಾ ಓಪನ್ ಪ್ರಶಸ್ತಿಯನ್ನು ಗೆಲ್ಲುವ ಗುರಿಯನ್ನು ಹೊಂದಿರುವ ಅವರು, ಆಟದ ಪ್ರಗತಿಯನ್ನು ಮುಂದುವರಿಸಲು ಕಾತರರಾಗಿದ್ದಾರೆ.

ವಿಟಾಕೀಸ್

ದೈಜಿಯಲ್ಲಿ ಖುಷಿ

ನಟ ರಮೇಶ್ ಅರವಿಂದ್, ಶಿವಾಜಿ ಸುರತ್ಕಲ್ ಚಿತ್ರದಲ್ಲಿ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿ ಕೊಂಡು ಮನಗೆದ್ದರು. ಪತ್ತೆದಾರಿ ಕಥೆಯ ಈ ಚಿತ್ರ ರಮೇಶ್ ಅವರಿಗೆ ಹೊಸ ಇಮೇಜ್ ತಂದು ಕೊಟ್ಟಿತು. ಆ ಬಳಿಕ ಶಿವಾಜಿ ಸುರತ್ಕಲ್ ಕೂಡ ತೆರೆಗೆ ಬಂದು ಯಶಸ್ವಿಯಾಯಿತು. ಶಿವಾಜಿ ಸುರತ್ಕಲ್ ಚಿತ್ರವನ್ನು ನಿರ್ದೇಶಿಸಿದ್ದ ಆಕಾಶ್ ಶ್ರೀವತ್ಸ ಈಗ ದೈಜಿ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಪೋಸ್ಟರ್ ಮೂಲಕ ಗಮನ ಸೆಳೆದಿದ್ದ ಚಿತ್ರತಂಡ ತಾರಾಗಣದ ಮೂಲಕವೂ ನಿರೀಕ್ಷೆ ಮೂಡಿಸಿದೆ. ರಾಧಿಕಾ ನಾರಾಯಣ್, ಅವಿನಾಶ್, ದಿಗಂತ್, ಗುರು ದೇಶಪಾಂಡೆ ಮುಂತಾದವರು ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಈ ಚಿತ್ರತಂಡಕ್ಕೀಗ ದಿಯಾ ಖ್ಯಾತಿಯ ಖುಷಿ ಸೇರ್ಪಡೆಯಾಗಿದ್ದು, ವಿಶೇಷ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಆಧ್ಯಾತ್ಮಿಕ ಹಿನ್ನೆಲೆಯ ವಿಶೇಷ ಪಾತ್ರದಲ್ಲಿ ಖುಷಿ ಕಾಣಿಸಿಕೊಳ್ಳುತ್ತಿದ್ದಾರೆ.

ದೈಜಿ, ರಮೇಶ್ ಅರವಿಂದ್ ಅಭಿನಯದ ನೂರ ಆರನೇ ಚಿತ್ರವಾಗಿದೆ. ಥ್ರಿಲ್ಲಿಂಗ್ ಅಂಶಗಳ ಜತೆಗೆ ಹಾರರ್ ಅಂಶಗಳು ಬೆರೆತಿದ್ದು, ಆಕಾಶ್ ಶ್ರೀವತ್ಸ ಅವರೇ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ವಿಬಾ ಕಶ್ಯಪ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ರವಿ ಕಶ್ಯಪ್ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಬಹುತೇಕ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಇನ್ನೇನು ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಆರಂಭಿಸಲಿದೆ. ಜ್ಯೂಡಾ ಸ್ಯಾಂಡಿ, ನಕುಲ್ ಅಭಯಂಕರ್ ಹಾಗೂ ಸಚಿನ್ ಬಸ್ರೂರ್ ಮೂರು ಜನ ಸಂಗೀತ ಸಂಯೋಜಿಸುತ್ತಿರುವುದು ಚಿತ್ರದ ಮತ್ತೊಂದು ವಿಶೇಷವಾಗಿದೆ. ಜ್ಯೂಡಾ ಸ್ಯಾಂಡಿ ಹಿನ್ನೆಲೆ ಸಂಗೀತ ನೀಡುತ್ತಿದ್ದು, ಶ್ರೀಶ ಕುದುವಳ್ಳಿ ಛಾಯಾಗ್ರಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆದರೆ ದೈಜಿ ಅಕ್ಟೋಬರ್ ಹೊತ್ತಿಗೆ ತೆರೆಗೆ ಬರುವ ನಿರೀಕ್ಷೆಯಿದೆ.

ಹಳ್ಳಿ ಸೊಡಗಿನ ಗ್ರಾಮಾಯಣ

ಹಳ್ಳಿಯ ಸೊಗಡೇ ಚೆಂದ, ಹೊಲ ಗದ್ದೆ ತೋಟಗಳು ಹಸಿರ ಸಿರಿ ಕಣ್ಣಿಗೆ ತಂಪು ನೀಡುತ್ತದೆ. ಹಾಗಾಗಿ ಗ್ರಾಮಗಳನ್ನು ನೋಡುವುದೇ ಆನಂದ ಅನ್ನಿಸುತ್ತದೆ. ಈಗೆಲ್ಲಾ ಪ್ಯಾನ್ ಇಂಡಿಯಾ ಜಮಾನ ಆಗಿರುವುದರಿಂದ ಹಳ್ಳಿಗಾಡಿನ ಕಥೆ ಹೊತ್ತ ಸಿನಿಮಾಗಳೂ ತೀರ ಅಪರೂಪ ಅನ್ನಿಸಿಬಿಟ್ಟಿವೆ. ಹೀಗಿರುವಾಗಲೇ ನಿರ್ದೇಶಕ ದೇವನೂರು ಚಂದ್ರು, ಅಪ್ಪಟ ಗ್ರಾಮೀಣ ಕಥನವನ್ನು ತೆರೆಗೆ ತರಲು ಸಿದ್ಧವಾಗಿದ್ದಾರೆ. ಹೌದು, ಗ್ರಾಮಾಯಣ ಸಿನಿಮಾದ ಮೂಲಕ ಹಳ್ಳಿಗಾಡಿನ ಸಿರಿಯನ್ನು ಪ್ರೇಕ್ಷಕರಿಗೆ ಉಣಬಡಿಸಲಿದ್ದಾರೆ. ಈ ಹಿಂದೆಯೇ ಸೆಟ್ಟೇರಿದ್ದ ಗ್ರಾಮಾಯಣ, ಶೀರ್ಷಿಕೆಯಲ್ಲಿಯೇ ಗಮನಸೆಳೆದಿತ್ತು. ಈಗ ಸಂಪೂರ್ಣ ಚಿತ್ರೀಕರಣ ಮುಗಿಸಿದ್ದು ಬಿಡುಗಡೆಯ ಹಂತಕ್ಕೆ ತಲುಪಿದೆ.

ಸದ್ಯ ಈ ಚಿತ್ರದ ಹಾಡು ಬಿಡುಗಡೆಯಾಗಿದ್ದು, ಸಿನಿಪ್ರಿಯರನ್ನ ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಓಲೇ ಸಮಲಿಗ್ಯಾ... ಎಂದು ಆರಂಭವಾಗುವ ಈ ಹಾಡು ಹಳ್ಳಿಗಳಲ್ಲಿ ಸಿಗುವ ತೊಟ್ಟಿ ಮನೆ, ಸುಣ್ಣದ್ ಗೋಡೆ, ಸೀಮೆ ಹಂಚನ್ನು.. ನೆನಪಿಸುತ್ತಾ ಸಂಪೂರ್ಣ ಹಳ್ಳಿಯ ಸೌಂದರ್ಯವನ್ನು ವರ್ಣಿಸುತ್ತದೆ. ಇಡೀ ಹಾಡಿನಲ್ಲಿ ಅಪ್ಪಟ ಗ್ರಾಮೀಣ ಪದಗಳೇ ಬೆರೆತ್ತಿದ್ದು, ಕೇಳಲು ಕರ್ಣಾನಂದ ಎನಿಸುತ್ತದೆ. ಸರ್ವೇರಸ್ವಾಮಿ ಸಾಹಿತ್ಯದ ಈ ಹಾಡಿಗೆ ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸುವ ಜತೆಗೆ ಹಾಡಿಗೂ ದನಿಯಾಗಿದ್ದಾರೆ. ಎಂ.ಸಿ.ಅರುಣ್ ಹಾಡಿಗೆ ದನಿಗೂಡಿದ್ದಾರೆ. ಮಹಾಕಾವ್ಯ ರಾಮಾಯಣದಂತೆ ಗ್ರಾಮೀಣ ಭಾಗದಲ್ಲಿ ನಡೆಯುವ ಕಥೆಯನ್ನು ಚಿತ್ರದಲ್ಲಿ ಹೇಳಲಾಗುತ್ತಿದೆ. ಕೌಟುಂಬಿಕ ಕಥೆಯ ಜತೆಗೆ, ಲವ್, ಸೆಂಟಿಮೆಂಟ್ ಒಂದಷ್ಟು ಕಾಮಿಡಿ ಯನ್ನು ಬೆರೆಸಿ ಎಲ್ಲರಿಗೂ ಇಷ್ಟವಾ ಗುವಂತೆ ತೆರೆಯಲ್ಲಿ ಕಟ್ಟಿಕೊಡಲಾಗುತ್ತಿದೆ. ಗ್ರಾಮೀಣ ಭಾಗದಲ್ಲೇ ಬೆಳೆದುಬಂದ ನಿರ್ದೇಶಕ ದೇವನೂರು ಚಂದ್ರು, ತಾವು ಕಂಡ ಅನುಭವಗಳನ್ನು ಸಿನಿಮಾ ರೂಪದಲ್ಲಿ ತೆರೆಗೆ ತರುತ್ತಿದ್ದಾರೆ.

ದೊಡ್ಮನೆ ಮೊಮ್ಮಗ ವಿನಯ್ ರಾಜ್ ಕುಮಾರ್, ಗ್ರಾಮಾಯಣದ ನಾಯಕನಾಗಿ ನಟಿಸಿದ್ದು, ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಲು ಕಾರಣವಾಗಿದೆ. ವಿನಯ್‌ಗೆ ಈ ಚಿತ್ರ ಬಿಗ್‌ಬ್ರೇಕ್ ನೀಡೋದು ಖಚಿತವಾಗಿದೆ. ಮೇಘಾ ಶೆಟ್ಟಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಲಹರಿ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಗ್ರಾಮಾಯಣ ಶೀಘ್ರದಲ್ಲಿಯೇ ತೆರೆಗೆ ಬರಲಿದೆ.

ಫೆಬ್ರವರಿಯಲ್ಲಿ ಕಾಟನ್‌ಪೇಟೆ ಗೇಟ್

ಆರ್.ಎಸ್. ಪ್ರೊಡಕ್ಷನ್ಸ್‌ನಲ್ಲಿ ನಿರ್ಮಾಪಕ ಆರ್. ಶ್ರೀನಿವಾಸ್, ಯುವರಾಜ, ಕಂಠಿ, ಭರ್ಜರಿ, ಬಹದ್ದೂರ್ ಸೇರಿದಂತೆ ಹಲವು ಸೂಪರ್ ಹಿಟ್ ಚಿತ್ರಗಳನ್ನು ನಿರ್ಮಾಣ ಮಾಡಿದ್ದರು. ಈಗ ಅದೇ ಆರ್. ಶ್ರೀನಿವಾಸ್ ಮತ್ತೊಂದು ಅದ್ದೂರಿ ಚಿತ್ರವನ್ನು ನಿರ್ಮಿಸಿದ್ದು ತೆರೆಗೆ ತರುವ ತಯಾರಿಯಲ್ಲಿದ್ದಾರೆ. ಕಾಟನ್‌ಪೇಟೆ ಗೇಟ್ ಶೀರ್ಷಿಕೆಯಲ್ಲಿ ಈ ಚಿತ್ರ ಮೂಡಿಬಂದಿದ್ದು, ಫೆಬ್ರವರಿ 13ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಆ್ಯಕ್ಷನ್, ಕಾಮಿಡಿ, ಸೆಂಟಿಮೆಂಟ್ ಹೀಗೆ ಎಲ್ಲಾ ಮನರಂಜನಾತ್ಮಕ ಅಂಶಗಳು ಬೆರೆತ ಈ ಚಿತ್ರವನ್ನು ವೈ. ರಾಜಕುಮಾರ್ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ವೇಣುಗೋಪಾಲ್ ಹಾಗೂ ಯಶ್ವನ್ ನಾಯಕರಾಗಿ ನಟಿಸಿದ್ದು, ಸುರಭಿ ತಿವಾರಿ, ಅನುಶಾ ಜೈನ್, ಸುಧೀಕ್ಷಾ, ಕಿಸ್ಲೆ ಚೌಧರಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪಾರ್ಥು, ರಘು, ಕಟ್ಟಪ್ಪ ಮುಂತಾದವರು ತಾರಾಗಣದಲ್ಲಿದ್ದಾರೆ. ಚೇತನ್ ಕುಮಾರ್ ಸಾಹಿತ್ಯದ ಹಾಡುಗಳಿಗೆ ಎನ್.ಎಸ್.ಪ್ರಸು ಸಂಗೀತ ಸಂಯೋಜಿಸಿದ್ದಾರೆ. ಯೋಗಿ ರೆಡ್ಡಿ ಛಾಯಾಗ್ರಹಣ, ಶಿವ ಸರ್ವಣಿ ಸಂಕಲನ ಈ ಚಿತ್ರಕ್ಕಿದೆ. ಕಾಟನ್‌ಪೇಟೆ ಗೇಟ್ ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ.

ಜನನಾಯಕನಿಗೆ ತಡೆ ಯಾಕೆ

ತಮಿಳಿನ ಖ್ಯಾತ ನಟ ದಳಪತಿ ವಿಜಯ್ ಅಭಿನಯದ ಜನ ನಾಯಕನ್ ಸಿನಿಪ್ರಿಯರ ಕುತೂಹಲ ಹೆಚ್ಚಿಸಿದೆ. ಇದು ವಿಜಯ್ ಅಭಿನಯದ ಕೊನೆಯ ಸಿನಿಮಾ ಎಂದು ಹೇಳಲಾಗುತ್ತಿತ್ತು. ಹಾಗಾಗಿ ಸಹಜವಾಗಿಯೇ ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿತ್ತು. ಜನನಾಯಕನ್ ದಾಖಲೆ



ಮೇಲೆ ದಾಖಲೆ ಬರೆಯುತ್ತಾ, ಹೊಸ ಅಲೆಯನ್ನೇ ಸೃಷ್ಟಿಸಿತ್ತು. ಸಂಕ್ರಾಂತಿ ಪ್ರಯುಕ್ತ ಕಳೆದ ವಾರವೇ ಸಿನಿಮಾ ಅದ್ದೂರಿಯಾಗಿ ತೆರೆಗೆ ಬರಬೇಕಿತ್ತು. ಆದರೆ ಚಿತ್ರಕ್ಕೆ ಸೆನ್ಸಾರ್ ಮಂಡಳಿ ಅಸ್ತು ಅನ್ನದ ಕಾರಣ ಚಿತ್ರದ ಬಿಡುಗಡೆ ತಡವಾಗಿದೆ. ಈ ಕುರಿತಂತೆ ಜನ ನಾಯಕನ್ ನಿರ್ಮಾಪಕ, ಕೆವಿಎನ್ ಪ್ರೊಡಕ್ಷನ್ಸ್‌ನ ಮಾಲೀಕ ವೆಂಕಟ್ ನಾರಾಯಣ್ ಮಾಹಿತಿ ಹಂಚಿಕೊಂಡಿದ್ದಾರೆ. ಜನ ನಾಯಕನ್ ಸಿನಿಮಾವನ್ನು ಡಿಸೆಂಬರ್ 18ರಂದೇ ಸಿಬಿಎಫ್‌ಸಿಗೆ ಸಲ್ಲಿಕೆ ಮಾಡಲಾಗಿತ್ತು. ಡಿಸೆಂಬರ್ 22ರಂದು ಸಿಬಿಎಫ್‌ಸಿಯು ಇಮೇಲ್ ಮಾಡಿ, ಸಿನಿಮಾಕ್ಕೆ ಯು/ಎ ಪ್ರಮಾಣ ಪತ್ರ ನೀಡುವುದಾಗಿ ತಿಳಿಸಿ, ಸಿನಿಮಾಕ್ಕೆ ಕೆಲವು ಕಟ್‌ಗಳನ್ನು ಸಹ ಸೂಚಿಸಿತ್ತು. ಅದರಂತೆ ಚಿತ್ರ ತಂಡ ಸೆನ್ಸಾರ್ ಮಂಡಳಿ ಸೂಚಿಸಿದ ಬದಲಾವಣೆಗಳನ್ನು ಮಾಡಿ ಮತ್ತೆ ಸಿನಿಮಾವನ್ನು ಸಿಬಿಎಫ್‌ಸಿಗೆ ಸಲ್ಲಿಕೆ ಮಾಡಿತ್ತು.

ಈ ನಡುವೆ ಜನನಾಯಕನ್ ಬಗ್ಗೆ ಬಂದ ದೂರನ್ನು ಪರಿಗಣಿಸಿ ಸಿನಿಮಾವನ್ನು ರಿವ್ಯೂ ಕಮಿಟಿಗೆ ಕಳಿಸಲು ನಿರ್ಧಾರ ಮಾಡಿತು. ಆದರೆ ನಮಗೆ ಬಿಡುಗಡೆ ದಿನಾಂಕ ಹತ್ತಿರವಾಗಿದ್ದರಿಂದ, ದೂರುದಾರರು ಯಾರು ಎಂಬ ಮಾಹಿತಿಯೂ ಇಲ್ಲವಾದ ಕಾರಣ, ನಾವು ನ್ಯಾಯಾಲಯದ ಮೆಟ್ಟಿಲೇರಿ ದೆವು. ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯವು ಜನವರಿ 09ರಂದು ಜನ ನಾಯಕನ್ ಸಿನಿಮಾಕ್ಕೆ ಯು/ಎ ಪ್ರಮಾಣ ಪತ್ರ ನೀಡಬೇಕೆಂದು ಆದೇಶ ಹೊರಡಿಸಿತು. ಆದರೆ ಸಿಬಿಎಫ್‌ಸಿಯು ಅದೇ ದಿನ ಆದೇಶದ ವಿರುದ್ಧ ಮದ್ರಾಸ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತು. ಈ ಕಾರಣದಿಂದಾಗಿ ಸಿನಿಮಾಕ್ಕೆ ಪ್ರಮಾಣ ಪತ್ರ ನೀಡಬೇಕು ಎಂದು ಹೊರಡಿಸಲಾಗಿದ್ದ ಆದೇಶದ ಮೇಲೆ ತಡೆ ನೀಡಲಾಗಿದೆ. ಇದೇ 27ರಂದು ವಿಚಾರಣೆ ನಿಗಧಿಯಾಗಿದ್ದು, ನಮಗೆ ನ್ಯಾಯ ದೊರೆಯುವ ನಂಬಿಕೆಯಿದೆ. ಆದಷ್ಟು ಬೇಗ ಜನನಾಯಕನ್ ಚಿತ್ರವನ್ನು ತೆರೆಗೆ ತರಲಿದ್ದೇವೆ ವೆಂಕಟ್ ಹೇಳಿದ್ದಾರೆ.

ದೈವದಲ್ಲಿ ರಾವಣಾಸುರ

ಎಂ. ಜೆ.ಜಯರಾಜ್ ನಿರ್ದೇಶನ ಮಾಡುತ್ತಿರುವ ದೈವ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಈಗ ಈ ಚಿತ್ರದ ರಾವಣಾಸುರಂ.. ಹಾಡು ಬಿಡುಗಡೆಯಾಗಿದೆ. ಮಾಸ್ ಆಗಿ ಮೂಡಿ ಬಂದಿರುವ ಈ ಹಾಡು ಸಿನಿಪ್ರಿಯರ ಮೆಚ್ಚುಗೆ ಪಡೆಯುತ್ತಿದೆ. ಟ.ಎಂ.ಮೂರ್ತಿ ಸಾಹಿತ್ಯದ ಈ ಗೀತೆಗೆ ವಿಜೇತ್ ಮಂಜಯ್ಯ ಸಂಗೀತ ಸಂಯೋಜಿಸಿದ್ದು, ಅನಿರುದ್ಧ್ ಶಾಸ್ತ್ರಿ ಮತ್ತು ವಿಜೇತ ಮಂಜಯ್ಯ ಹಾಡಿಗೆ ದನಿಯಾಗಿದ್ದಾರೆ. ಇದೊಂದು ಪಕ್ಕಾ ದೇಸಿ ಕಥಾಹಂದರ ಹೊಂದಿರುವ ಚಿತ್ರವಾಗಿದ್ದು, ನಿರ್ದೇಶಕ ಜಯರಾಜ್ ಅವರೆ ನಾಯಕನಾಗಿ ನಟಿಸಿದ್ದಾರೆ. ಚಿತ್ರದಲ್ಲಿ ಕಾಲಭೈರವನ ಆರಾಧಕನಾಗಿ ಜೋಗಯ್ಯನ ಪಾತ್ರದಲ್ಲಿ ಹೀಗೆ ಎರಡು ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ನಾಯಕನ

ಪರಿಚಯಿಸುವ ಈ ಹಾಡು ಪಕ್ಕಾ ಮಾಸ್ ಆಗಿ ಮೂಡಿಬಂದಿದೆ. ಈ ಹಾಡಿಗೆ ವಿನಯ್ ನೃತ್ಯ ನಿರ್ದೇಶನ ಮಾಡಿದ್ದಾರೆ, ಕಮರ್ಷಿಯಲ್ ಸಿನಿಮಾಗೆ ಬೇಕಿರುವ ಎಲ್ಲಾ ಅಂಶಗಳನ್ನು ಈ ಹಾಡು ಒಳಗೊಂಡಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ಬ್ಯುಸಿಯಾಗಿರುವ ದೈವ, ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಸುರಭಿ, ನೀತು ರಾಯ್, ಮಂಜುರಾಜ್ ಸೂರ್ಯ, ಅರುಣ್ ಬಚ್ಚನ್ ಮುಂತಾದವರು ತಾರಾ ಬಳಗದಲ್ಲಿದ್ದಾರೆ. ಕಲ್ಪವೃಕ್ಷ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಜಯಮ್ಮ ಪದ್ಮರಾಜ್ ಚಿತ್ರ ನಿರ್ಮಾಣ ಮಾಡಿದ್ದಾರೆ.

11.01.2026
ಭಾನುವಾರ
ವಿಶ್ವವಾಣಿ

ವಿರಾಮ

ಓದುವ ಲೋಕಕ್ಕೆ ಓದುವ ನಿಲ್ದಾಣ

ಆಗುಂಬೆಯಲ್ಲಿ ಭಿಕ್ಷಾಟನೆ?

ನಮ್ಮ ಸುತ್ತಲಿನ ಪ್ರಕೃತಿ ಮತ್ತು ಪರಿಸರ ಸಮತೋಲನವು ನಿಧಾನವಾಗಿ ನಾಶವಾಗುತ್ತಿರುವುದು ಒಂದು ಕಹಿ ಸತ್ಯ. ಆಧುನಿಕ ಮಾನವನು ಇಂದು ಅಳವಡಿಸಿಕೊಂಡಿರುವ ದಿನಚರಿಯಿಂದಾಗಿ, ಕಾಡು, ಗುಡ್ಡ, ಹುಲ್ಲುಗಾವಲು, ನದಿ, ಸರೋವರ ಸೇರಿದಂತೆ ಎಲ್ಲಾ ಕಡೆ ಪರಿಸರ ಸಮತೋಲನ ಏರುಪೇರಾಗುತ್ತಿದೆ. ಪರಿಸರ ವ್ಯವಸ್ಥೆಯ ನಾಶವನ್ನು ಕಣ್ಣಾರೆ ಕಾಣುವ, ನೇರವಾಗಿ ಗುರುತಿಸಬಹುದಾದ ಒಂದು ಸಂದಿಗ್ಧ ಸನ್ನಿವೇಶದಲ್ಲಿ ನಮ್ಮ ತಲೆಮಾರು ಇದೆ! ಇದಕ್ಕೆ ಒಂದು ಉದಾಹರಣೆ ಎಂದರೆ, ಪಶ್ಚಿಮಘಟ್ಟಗಳ ನಡುವೆ ಸಾಗುವ ಆಗುಂಬೆ ಘಾಟಿ ರಸ್ತೆಯ ತಿರುವುಗಳಲ್ಲಿ, ಸಿಮೆಂಟ್ ದಂಡೆಯ ಮೇಲೆ ಕುಳಿತು, ಪ್ರಯಾಣಿಕರಿಗಾಗಿ ಕಾಯುತ್ತಿರುವ ಸಿಂಗಳೀಕಗಳು. ಇಡೀ ಭೂಮಂಡಲದ ಅಪರೂಪದ ಜೀವಿಗಳಲ್ಲಿ ಒಂದು ಎನಿಸಿರುವ ಸಿಂಗಳೀಕ ಸಂತತಿಯು, ಆಗುಂಬೆಯಲ್ಲಿ ಇಂದು ಅಕ್ಷರಶಃ ಭಿಕ್ಷಾಟನೆಗೆ ಇಳಿದಿವೆ; ರಸ್ತೆಯಲ್ಲಿ ಸಾಗುವ ಪ್ರಯಾಣಿಕರು, ತಮ್ಮ ವಾಹನ ನಿಲ್ಲಿಸಿ, ಅವುಗಳತ್ತ ಎಸೆಯುತ್ತಿರುವ ಚಿಪ್ಸ್, ಬಿಸ್ಕೀಟ್ ಮೊದಲಾದ ಆಹಾರಕ್ಕಾಗಿ ಅವು ಭಿಕ್ಷೆ ಬೇಡುತ್ತಿವೆ. ಮಾತ್ರವಲ್ಲ, ಈ ಭಿಕ್ಷಾಟನೆಯು ಹಲವು ವರ್ಷಗಳ ಕಾಲ ಮುಂದುವರಿಯುತ್ತಿದ್ದು, ಆ ಸಂತತಿಯ ಮರಿಗಳು ಕಾಡಿನಲ್ಲಿ ಆಹಾರ ಹುಡುಕುವ ಕೌಶಲವನ್ನೇ ಕಳೆದುಕೊಳ್ಳುತ್ತಿವೆ. ದಟ್ಟಕಾಡಿನಲ್ಲಿ, ಸದಾ ಎತ್ತರದ ಮರಗಳ ತುದಿಯಲ್ಲೇ ವಾಸಿಸುತ್ತಿದ್ದ ಸಿಂಗಳೀಕಗಳು, ಇಂದು ನೆಲದ ಮೇಲೆ ಓಡಾಡುತ್ತಾ, ನಾಗರಿಕ ಮಾನವ ನೀಡುತ್ತಿರುವ ಜಂಕ್ ಫುಡ್ ಮತ್ತು ಅನಾರೋಗ್ಯಕರ ಆಹಾರಕ್ಕಾಗಿ ಕಾಯುತ್ತಿರುವುದು, ಅಂಗಲಾಚುತ್ತಿರುವುದು, ನಮ್ಮ ಕಣ್ಣೆದುರೇ ನಡೆಯುತ್ತಿರುವ ತೀವ್ರ ಮಟ್ಟದ ಪ್ರಕೃತಿ ನಾಶದ ಒಂದು ಕಹಿ ಉದಾಹರಣೆ.

» ಮಂಜುನಾಥ್.ಎಸ್, ಶಿವಮೊಗ್ಗ

ತೀವ್ರವಾದ ತಿರುವು ರಸ್ತೆಗಳಿಂದ ಕೂಡಿದ, ದಟ್ಟ ಕಾಡಿನಿಂದ ಆವೃತವಾದ ಆಗುಂಬೆಯ ಘಾಟಿ ರಸ್ತೆಯಲ್ಲಿ ಪ್ರಯಾಣಿಸುವವರಿಗೆ ಇತ್ತೀಚಿನ ದಿನಗಳಲ್ಲಿ ಒಂದು ದೃಶ್ಯ ಕಾಣಸಿಗುತ್ತಿದೆ. ದಟ್ಟ ಕಾಡಿನ ಮೇಲ್ಭಾಗದಲ್ಲಿ ಮಾತ್ರ ವಾಸಿಸುತ್ತಿದ್ದ, ಅತೀ ನಾಚಿಕೆ ಸ್ವಭಾವದ ಸಿಂಗಳೀಕ ಅಥವಾ ಸಿಂಹಬಾಲದ ಕೋತಿಗಳು, ರಸ್ತೆ ಬದಿಯ ತಡೆಗೋಡೆಗಳ ಮೇಲೆ ಕುಳಿತು ಪ್ರವಾಸಿಗರು ನೀಡುವ ಆಹಾರಕ್ಕಾಗಿ ಕಾಯುತ್ತಿವೆ. ಆಗುಂಬೆ ರಸ್ತೆಯ 14 ತಿರುವುಗಳಲ್ಲಿ ಕಾಣಿಸುತ್ತಿರುವುದು ಪ್ರಕೃತಿಯ ಸೌಂದರ್ಯದ ಜತೆಯಲ್ಲೇ, ಅಳಿವಿನ ಅಂಚಿನಲ್ಲಿರುವ ಸಿಂಗಳೀಕಗಳ ಮೌನ ಆರ್ತನಾದ. ಪಶ್ಚಿಮ ಘಟ್ಟಗಳ ಮಳೆಕಾಡಿನ ಕಿರೀಟಪ್ರಾಯವಾದ ಈ ಜೀವಿಗಳು ಪ್ರಾಥಮಿಕವಾಗಿ 'ಆರ್ಬೋರಿಯಲ್' ಜೀವಿಗಳು, ಅಂದರೆ ತಮ್ಮ ಜೀವನದ ಶೇ.99% ಸಮಯವನ್ನು ದಟ್ಟ ಅರಣ್ಯದ, ಎತ್ತರದ ಮರಗಳ ಮೇಲೆಯೇ ಓಡಾಡುತ್ತಾ ಕಳೆಯುವಂತಹವು. ಈಗ ರಸ್ತೆ ಬದಿಯ ತಡೆಗೋಡೆಗಳ ಮೇಲೆ ಕುಳಿತು ಪ್ರವಾಸಿಗರು ನೀಡುವ ಬಿಸ್ಕತ್ತು-ಚಿಪ್ಸ್‌ಗಾಗಿ ಕೈಯೊಡ್ಡಿ ನಿಂತು ಭಿಕ್ಷಾಟನೆ ಮಾಡುತ್ತಿರುವುದು ಕಂಡರೆ ಅದು ನಮ್ಮ ನಾಗರಿಕ ಸಮಾಜದ ನೈತಿಕ ದಿವಾಳಿತನದ ಸಂಕೇತವಾಗಿದೆ.

ಇದು ಕೇವಲ ಒಂದು ಪ್ರಾಣಿಯ ನಡವಳಿಕೆಯ ಬದಲಾವಣೆಯಾಗಿ ಮಾತ್ರವಲ್ಲ, ಒಂದು ಇಡೀ ಮಳೆಕಾಡಿನ ಪರಿಸರ ವ್ಯವಸ್ಥೆ ಅಪಾಯದಲ್ಲಿದೆ ಎಂಬುದರ ಸಂಕೇತವಾಗಿದೆ.

ಬೇರೊಂದು ದೃಷ್ಟಿಕೋನದಿಂದ ನೋಡುವುದಾದರೆ ಆಗುಂಬೆಯಲ್ಲಿ ಇಂದು ನಡೆಯುತ್ತಿರುವುದು ಕೇವಲ ಪ್ರಾಣಿಗಳಿಗೆ ಆಹಾರ ನೀಡುವ ಕ್ರಿಯೆಯಲ್ಲ, ಅಲ್ಲಿ ನಡೆಯುತ್ತಿರುವುದು ಒಂದು ಪುಟ್ಟ ದುರಂತ. ದಟ್ಟ ಕಾಡಿನ ಕ್ಯಾನೊಪಿಗಳಲ್ಲಿ ವಾಸಿಸುವ ಪ್ರಾಣಿಗಳ ನೈಸರ್ಗಿಕ ವಿಕಾಸವನ್ನೇ ಬುಡಮೇಲು ಮಾಡುವ ಅಪಾಯಕಾರಿ ನಡವಳಿಕೆ. ನೈಸರ್ಗಿಕವಾಗಿ ಈ ಕೋತಿಗಳು ಮನುಷ್ಯರನ್ನು ಕಂಡರೆ ದೂರ ಓಡುವ ಆ್ಯಂತ್ರೋಪ್ರೊಫೋಬಿಯಾ ಎಂದು ಕರೆಯಲ್ಪಡುವ ಗುಣವನ್ನು ಹೊಂದಿರುತ್ತವೆ. ಆದರೆ, ಇಂದು ಸಿಂಗಳೀಕಗಳು

ಅಂತಹ ಸಂಕೋಚದ ಗುಣವನ್ನೇ ಕಳೆದುಕೊಳ್ಳುತ್ತಿವೆ! ಇದು ನೈಸರ್ಗಿಕವಾಗಿ ವಿರುದ್ಧವಾದುದು ಎನ್ನಬಹುದು.

ಪ್ರಯಾಣಿಕರ ವಿಕೃತ ಸಂತೋಷ

ಆಗುಂಬೆ ಘಾಟಿಯಲ್ಲಿ ಕಾರಿನ ಮೂಲಕ ಸಾಗುವ ಇಂದಿನ ಪ್ರಯಾಣಿಕರು ತಮ್ಮ ವಿಕೃತ ಸಂತೋಷಕ್ಕಾಗಿ ಸಿಂಗಳೀಕಗಳ ಎದುರು ನಿಂತು, ಕೋತಿಗಳಂತೆ ಶಬ್ದ ಮಾಡುವುದು, ಅವುಗಳನ್ನು ರೇಗಿಸುವುದು ಮತ್ತು ಆಹಾರದ ಆಸೆ ತೋರಿಸಿ ಹತ್ತಿರ ಕರೆಯುವ ಮೂಲಕ ಅವುಗಳಲ್ಲಿನ ಸಹಜ ಭಯವನ್ನು ಅಳಿಸಿಹಾಕುತ್ತಿದ್ದಾರೆ. ಪದೇ ಪದೇ ಇಂತಹ ನಡವಳಿಕೆಗಳಿಗೆ ತುತ್ತಾಗುವ ಕೋತಿಗಳು ತೀವ್ರ ಮಾನಸಿಕ ಒತ್ತಡಕ್ಕೆ ಒಳಗಾಗುತ್ತವೆ. ಈ ಹತಾಶೆಯು ಅಂತಿಮವಾಗಿ ಮನುಷ್ಯರ ಮೇಲೆ ದಾಳಿ ಮಾಡುವ ಆಕ್ರಮಣಕಾರಿ ಪ್ರವೃತ್ತಿಯಾಗಿ ಬದಲಾಗುವ ಸಾಧ್ಯತೆ ಇದೆ.

ಸಿಂಹಬಾಲದ ಕೋತಿಗಳು ಪಶ್ಚಿಮ ಘಟ್ಟದ ನಿತ್ಯಹರಿದ್ವರ್ಣ ಕಾಡುಗಳಿಗೆ ಮಾತ್ರ ಸೀಮಿತವಾಗಿರುವ ವಿಶಿಷ್ಟ ಪ್ರಭೇದ. ಇವುಗಳ ಮುಖದ ಸುತ್ತ ಇರುವ ಬೆಳ್ಳನೆಯ ಕೇಸರಿ ಮತ್ತು ಸಿಂಹದಂತಿರುವ ಬಾಲ ಇವುಗಳಿಗೆ ರಾಜಗಾಂಭೀರ್ಯವನ್ನು ತಂದುಕೊಟ್ಟಿದೆ. ಇವು ಕಾಡಿನ 'ಬಿತ್ತನೆಗಾರರು'. ಅಂದರೆ, ನಾನಾ ರೀತಿಯ ಕಾಡಿನ ಕಾಯಿ ಮತ್ತು ಹಣ್ಣುಗಳನ್ನು ತಿಂದು, ಬೀಜಗಳನ್ನು ಕಾಡಿನ ಬೇರೆ ಬೇರೆ ಕಡೆ ಎಸೆಯುವ ಪ್ರವೃತ್ತಿಯವು. ವನ್ಯಜೀವಿ ಸಂಶೋಧಕರ ಪ್ರಕಾರ ಇವು ಪ್ರಾಥಮಿಕವಾಗಿ ಮರಗಳ ಮೇಲೆಯೇ ಬದುಕುವ ಜೀವಿಗಳು. ಹವಾಮಾನ ಬದಲಾವಣೆ ಮತ್ತು ಕಾಡಿನ ಒತ್ತುವರಿಯಿಂದಾಗಿ ಇವುಗಳ ಆವಾಸಸ್ಥಾನ ಈಗಾಗಲೇ ಸಾಕಷ್ಟು ಕುಗ್ಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಆಗುಂಬೆಯ ಘಾಟ್ ರಸ್ತೆಗಳಲ್ಲಿ ಇವು ನೆಲಕ್ಕಿಳಿದು, ವಾಹನಗಳಲ್ಲಿ ಸಂಚರಿಸುವ ಮನುಷ್ಯರು ನೀಡುವ ತಿನಿಸುಗಳಿಗಾಗಿ ಕಾಯುತ್ತಿರುವುದು ಕಂಡುಬರುತ್ತಿದೆ. ಇದು ಕೇವಲ ನಡವಳಿಕೆಯ ಬದಲಾವಣೆಯಲ್ಲ, ಬದಲಾಗಿ ಒಂದು ಇಡೀ ಪ್ರಭೇದದ ಪರಿಸರ ಪತನದ ಮುನ್ಸೂಚನೆಯಾಗಿದೆ. ಇಂತಹ ಸಂದರ್ಭದಲ್ಲಿ ಇವು ರಸ್ತೆಗೆ ಇಳಿಯುತ್ತಿರುವ ಅಭ್ಯಾಸವು, ಕ್ರಮೇಣ ಇವುಗಳ ವಂಶವನ್ನೇ ನಾಶಮಾಡಬಲ್ಲದು.

ಇಲ್ಲಿ ಅತ್ಯಂತ ಆತಂಕಕಾರಿ ವಿಷಯವೆಂದರೆ 'ತಾಯಿ-ಮರಿಯ ಕಲಿಕೆ'ಯಲ್ಲಿ (ಸೋಷಿಯಲ್ ಲರ್ನಿಂಗ್) ಆಗುತ್ತಿರುವ ಪಲ್ಲಟ. ನೈಸರ್ಗಿಕವಾಗಿ ತಾಯಿ ಕೋತಿಗಳು ತಮ್ಮ ಮರಿಗಳಿಗೆ ಕಾಡಿನ ಗಿಡಮೂಲಿಕೆಗಳನ್ನು ಗುರುತಿಸುವುದನ್ನು ಮತ್ತು ಇನ್ನು ಹತ್ತು ಹಲವು ಹಣ್ಣುಗಳನ್ನು ಶೋಧಿಸುವುದನ್ನು ಕಲಿಸುತ್ತವೆ; ಆದರೆ ಇಂದು ಆಗುಂಬೆಯ ಘಾಟಿಯಲ್ಲಿ ತಾಯಿ ಕೋತಿಗಳು ಮರಿಗಳಿಗೆ ಪ್ಲಾಸ್ಟಿಕ್ ಚೀಲಗಳನ್ನು ಸೀಳುವುದನ್ನು, ಬಿಸ್ಕೀಟ್ ಮೊದಲಾದ ತಿನಿಸು ಗಳನ್ನು ಸೇವಿಸುವುದನ್ನು ಮತ್ತು ವಾಹನಗಳನ್ನು ಬೆನ್ನಟ್ಟುವುದು ಹೇಗೆ ಎಂದು ಕಲಿಸುತ್ತಿವೆ. ಸಂಸ್ಕರಿ ಸಿದ ಆಹಾರ ಸೇವನೆಯಿಂದ ಇವುಗಳಲ್ಲಿ ರಕ್ತದೊತ್ತಡ ಮತ್ತು ಮಧುಮೇಹದಂತಹ ಕಾಯಿಲೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಅತ್ಯಧಿಕ. ಅಷ್ಟೇ ಅಲ್ಲದೆ, ವನ್ಯಜೀವಿ ಸಂಸ್ಥೆಗಳು ನಡೆಸಿದ ಸಮೀಕ್ಷೆಯ ಪ್ರಕಾರ, ಈ ರೀತಿ ರಸ್ತೆ ಬದಿಯಲ್ಲಿ ಕೇಂದ್ರೀಕೃತವಾಗುವುದರಿಂದ ಈ ಕೋತಿಗಳ ಗುಂಪಿನಲ್ಲಿ ಆಂತರಿಕ ಕಲಹಗಳು ಹೆಚ್ಚುತ್ತಿವೆ.

ಚಿಪ್ಸ್ ತರುವ ಅವಾಂತರ

ನೈಸರ್ಗಿಕವಾಗಿ ಕಾಡಿನ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿರಬೇಕಾದ ಈ ಕುಟುಂಬಗಳು ರಸ್ತೆಯ ಒಂದು ಸಣ್ಣ ಭಾಗದಲ್ಲಿ ಆಹಾರಕ್ಕಾಗಿ ಕಿತ್ತಾಡುತ್ತಿವೆ. ಇದು ಈ ಪ್ರಾಣಿಗಳ ಸಾಮಾಜಿಕ ರಚನೆಯನ್ನು ಸಡಿಲಗೊಳಿಸುತ್ತಿದೆ. ಪ್ರವಾಸಿಗರು ನೀಡುವ ಬಿಸ್ಕತ್ತು, ಚಿಪ್ಸ್ ಮತ್ತು ಸಂಸ್ಕರಿಸಿದ ಆಹಾರವು ಇವುಗಳಲ್ಲಿ 'ಫುಡ್ ಕಂಡೀಷನಿಂಗ್' ಎಂಬ ಗಂಭೀರ ಸಮಸ್ಯೆಯನ್ನು ಸೃಷ್ಟಿಸಿದೆ. ಸಂಶೋಧನೆಗಳು ಹೇಳುವಂತೆ ಮನುಷ್ಯರ ಆಹಾರವು ಈ ವನ್ಯಜೀವಿಗಳಿಗೆ ಮಂದಗತಿಯ ವಿಷವಾಗಿದೆ. ಆಹಾರಕ್ಕಾಗಿ ರಸ್ತೆಗೆ ಬರುವ ಈ ಪ್ರಾಣಿಗಳು, ಕೆಲವು ಆಕಸ್ಮಿಕವಾಗಿ ವಾಹನಗಳಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿವೆ. ಇವುಗಳ ಸಂತಾನೋತ್ಪತ್ತಿ ದರವು ಅತೀ ಕಡಿಮೆಯಿರುವುದರಿಂದ (ಸುಮಾರು 3-4 ವರ್ಷಕ್ಕೊಮ್ಮೆ ಒಂದು ಮರಿ)



ಪ್ರತಿಯೊಂದು ಅಪಘಾತವೂ, ಈ ಪ್ರಭೇದವನ್ನು ಅಳಿವಿನ ಅಂಚಿಗೆ ಮತ್ತಷ್ಟು ಹತ್ತಿರ ತಳ್ಳುತ್ತಿದೆ.

ನೈಸರ್ಗಿಕ ಕೌಶಲ್ಯದ ನಾಶ

ಕಾಡಿನಲ್ಲಿ ವೈವಿಧ್ಯಮಯ ಮರಗಳ ನಡುವೆ ಓಡಾಡುತ್ತಾ, ತರತರದ ಹಣ್ಣುಗಳನ್ನು ಹುಡುಕಿ ತಿನ್ನುವ ಶ್ರಮದಾಯಕ ಕೆಲಸವನ್ನು ಬಿಟ್ಟು ಸುಲಭವಾಗಿ ಸಿಗುವ ಮನುಷ್ಯರ ಆಹಾರಕ್ಕೆ ಇವು ಒಗ್ಗಿಕೊಳ್ಳುತ್ತಿವೆ. ಇದರಿಂದಾಗಿ ಈ ಕೋತಿಗಳು ಮರ ಹತ್ತುವ ಮತ್ತು ಆಹಾರ ಹುಡುಕುವ ತಮ್ಮ ಸಹಜ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿವೆ.

ಸಿಂಗಳಿಕ ರಕ್ಷಣೆಗಾಗಿ ಸರ್ಕಾರ ಕರ್ನಾಟಕದ ಹೊಸನಗರ ತಾಲೂಕಿನ ಕಾರ್ಗಲ್ ಬಳಿ ರಕ್ಷಿತಾಭಯಾರಣ್ಯವನ್ನು ಮಿಸಲಿಟ್ಟಿದೆ. ಅಂದಾಜು ಅಲ್ಲಿ 600 ಕ್ಕೂ ಹೆಚ್ಚು ಸಿಂಗಳಿಕಗಳು ಇದೇ ಎಂದು ಅಂದಾಜಿಸಲಾಗಿದೆ. ಇವು ಬಹಳ ಸೂಕ್ಷ್ಮ ಸ್ವಭಾವದ ಪ್ರಾಣಿಯಾಗಿದ್ದು ಕನಿಷ್ಠ 320 ಹಣ್ಣು ಹಂಪಲು ಇರುವ ಮತ್ತು ಬೆಳೆಯುವ ಪ್ರದೇಶದಲ್ಲಿ ಮಾತ್ರ ಹೆಚ್ಚು ಕಾಣಸಿಗುತ್ತದೆ ಎಂಬುದು ಪ್ರಕೃತಿ ವಿಸ್ಮಯ.



ಸಾಕುಪ್ರಾಣಿಗಳಾದ ಎಮ್ಮೆ, ಹಸು, ನಾಯಿ, ಬೆಕ್ಕಿಗೂ, ಅಭಯಾರಣ್ಯದ ಜೀವಿಗಳಿಗೂ ಇರುವ ವ್ಯತ್ಯಾಸವನ್ನು ನಮ್ಮ ಜನರು ಮರೆತಂತೆ ಇದೆ. ಇದನ್ನು ಸರ್ಕಾರ ಮತ್ತು ಅರಣ್ಯ ಇಲಾಖೆ ಬಹಳ ಗಂಭೀರವಾಗಿ ಗಮನಿಸಿ ಇನ್ನಷ್ಟು ಅರಿವು ಮೂಡಿಸುವ ಕಾರ್ಯ ಮಾಡಬೇಕಾಗಿದೆ.

ಪರಿಹಾರವೇನು?

ಈ ಬಿಕ್ಕಟ್ಟನ್ನು ಎದುರಿಸಲು ಸಮಗ್ರ ಮತ್ತು ದೀರ್ಘಕಾಲದ ಕ್ರಮಗಳ ಅಗತ್ಯವಿದೆ. ಕೇವಲ ರಸ್ತೆಯಲ್ಲಿ ಕಾರುಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಎಚ್ಚರಿಕೆ, ತಿಳಿವಳಿಕೆ ನೀಡುವುದಷ್ಟೇ ಸಾಕಾಗುವುದಿಲ್ಲ; ಅರಣ್ಯ ಇಲಾಖೆಯು 'ಕೆನೋಪಿ ಬ್ರಿಡ್ಜ್‌ಗಳ' ಮೂಲಕ ಈ ಪ್ರಾಣಿಗಳು ನೆಲಕ್ಕಿಳಿಯದಂತೆ ವ್ಯವಸ್ಥೆ ಮಾಡಬೇಕು. ವೈಜ್ಞಾನಿಕವಾಗಿ ಸಿದ್ಧಪಡಿಸಿದ ಮಾಹಿತಿ ಫಲಕಗಳು, ಇವುಗಳ ಜೈವಿಕ ಮಹತ್ವವನ್ನು ಸಾರಬೇಕು ಮತ್ತು ಅದನ್ನೋದುವ ಮಕ್ಕಳು, ಪ್ರಯಾಣಿಕರು ತಕ್ಕಮಟ್ಟಿಗೆ ಮಾಹಿತಿಯನ್ನು ಪಡೆಯುವಂತೆ ಇರಬೇಕು. ಸಮುದಾಯ ಮಟ್ಟದಲ್ಲಿ ಆಗುಂಬೆಯ ಸುತ್ತಮುತ್ತಲಿನ ಜನರಲ್ಲಿ ಜಾಗೃತಿ ಮೂಡಿಸಿ, ಅವರನ್ನು 'ವನ್ಯಜೀವಿ ಕಾವಲುಗಾರರನ್ನಾಗಿ' ರೂಪಿಸಬೇಕು. ನಮ್ಮ ಕ್ಷಣಿಕ ಸಂತೋಷಕ್ಕಾಗಿ ನಾವು ಅವುಗಳಿಗೆ ತಿನ್ನಲು ನೀಡುವ ಒಂದು ಚಿಪ್ಸ್, ಬಿಸ್ಕೆಟ್, ತಿಂದು ಉಳಿದ ಪಲಾವ್, ಕೊಳೆತ ಹಣ್ಣುಗಳು, ಪಶ್ಚಿಮ ಘಟ್ಟದ ಈ ಅದ್ಭುತ ಜೀವಿಗಳ ಸ್ವಾತಂತ್ರ್ಯ ಮತ್ತು ಅಸ್ತಿತ್ವವನ್ನೇ ಕಸಿದುಕೊಳ್ಳುತ್ತಿದೆ ಎಂಬ ಸತ್ಯ ನಮಗೆ ಅರಿವಾಗಬೇಕಿದೆ. ಆಗುಂಬೆಯ ಮಳೆಕಾಡುಗಳು ಈ ಸಿಂಹಬಾಲದ ಕೋತಿಗಳಿಲ್ಲದೆ ಮೌನವಾದರೆ ಅದು ನಮ್ಮ ಪರಿಸರ ವ್ಯವಸ್ಥೆಗೆ ತುಂಬಲಾರದ ನಷ್ಟವಾಗಲಿದೆ. ನಾವು ನಮ್ಮ ಪರಿಸರ ಮತ್ತು ಪ್ರಕೃತಿಯ ಅತಿಥಿಗಳು ಮಾತ್ರ, ಮಾಲೀಕರಲ್ಲ ಎಂಬುದನ್ನು ನೆನಪಿಟ್ಟುಕೊಳ್ಳೋಣ.



ಪಂಚಾಂಗ ಗಣಿತದ ಅಪೂರ್ವ ಕೃತಿ

ಗ್ರಹಲಾಘವ

» ಎನ್.ಎಸ್.ಶ್ರೀಧರ ಮೂರ್ತಿ

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ 1500ಕ್ಕೂ ಹೆಚ್ಚು ಪಂಚಾಂಗಗಳಿವೆ. ಇದರಲ್ಲಿ ಇರುವ ಪ್ರಮುಖ ಸಾಮ್ಯತೆ ಎಂದರೆ ಬಹುತೇಕ ಪಂಚಾಗಕರ್ತರು ಆಧಾರವಾಗಿ ಬಳಸುವ ಪಂಚಾಂಗ ಗಣಿತ ಕೃತಿ ಗಣೇಶ ದೈವಜ್ಞನ 'ಗ್ರಹಲಾಘವ'. ಗ್ರಹಗಳ ಲೆಕ್ಕಾಚಾರವನ್ನು ಅತ್ಯಂತ ಸರಳ ಮತ್ತು ಸುಲಭಗೊಳಿಸಿದ ಕೀರ್ತಿ, ಗಣೇಶ ದೈವಜ್ಞನಿಗೆ ಸೇರುತ್ತದೆ. ಅಲ್ಲಿಯವರೆಗೆ ಪಂಚಾಂಗ ಗಣಿತದಲ್ಲಿ ಬಹುಸಂಖ್ಯೆಯ ಅಹರ್ಗಣಗಳನ್ನು ಬಳಸಲಾಗುತ್ತಿತ್ತು. ಗಣೇಶ ದೈವಜ್ಞನು ಈ ಮೂಲಕ 4016 ದಿನಗಳ ಲೆಕ್ಕಾಚಾರವನ್ನು ತಂದನು. ಇದು ಚೌಕಟ್ಟನ್ನು ಲೆಕ್ಕಾಚಾರಕ್ಕೆ ನೀಡಿತು. ತ್ರಿಕೋಣ ಮಿತಿ (Trigonometry) ಯ 'ಜ್ಯಾ' ಮತ್ತು 'ಕೋಟಿ ಜ್ಯಾ' (Sine and Cosine) ಬಳಸದೆ ಬೀಜಗಣಿತದ ಮೂಲಕ ಸಮೀಕರಣವನ್ನು ರೂಪಿಸಿದನು. ಇದರಿಂದ ಪಂಚಾಂಗ ಕರ್ತೃಗಳಿಗೆ ಲೆಕ್ಕ ಹಾಕಲು ಸುಲಭವಾಯಿತು.

ಸುಲಭವಾಗಿದ್ದರೂ ಅವನು ಬಿಡಿಸಿದ ಸಮೀಕರಣಗಳು ನಿಖರವಾಗಿದ್ದವು. ಇಂದಿಗೂ ಅವನ ಗ್ರಹ ಸಮೀಕರಣದಿಂದ ನಿಖರ ಫಲಿತಾಂಶ ದೊರಕುತ್ತಿರುವುದೇ ಇದಕ್ಕೆ ಸಾಕ್ಷಿ. ಗ್ರಹ ಲಾಘವಕ್ಕೆ ಮೊದಲು ಬ್ರಾಹ್ಮ (ಪೈತಾಮಹ) ಆರ್ಯಭಟೀಯ, ಸೌರ ಸಿದ್ಧಾಂತಗಳನ್ನು ಹೆಚ್ಚಾಗಿ ಬಳಸಲಾಗುತ್ತಿತ್ತು. ಇಲ್ಲಿ ಬುಧ ಮತ್ತು ಶುಕ್ರನ ಸ್ಥಾನದಲ್ಲಿ ಐದು ಡಿಗ್ರಿಯಷ್ಟು ವ್ಯತ್ಯಾಸ ಉಂಟಾಗುತ್ತಿತ್ತು. ವಾರ್ಷಿಕ ಲೆಕ್ಕಾಚಾರದಲ್ಲಿಯೂ ಏರು ಪೇರಾಗುತ್ತಿತ್ತು. ಮೊದಲಿನ ಲೆಕ್ಕಾಚಾರದಲ್ಲಿ ಜ್ಯಾ ಬಳಸಿ ಹದಿನೈದು ಡಿಗ್ರಿಗಳ ಅಂತರದಲ್ಲಿ ಗ್ರಹಗಳ ಚಲನೆ ಲೆಕ್ಕಾಚಾರ ಹಾಕಲಾಗುತ್ತಿತ್ತು. ನಡುವಿನ ಸ್ಥಾನವನ್ನು ತ್ರೈರಾಶಿ ಬಳಸಿ ಕಂಡು ಹಿಡಿಯಬೇಕಿತ್ತು. ಆಗ ಸಿಗುವ ಫಲಿತಾಂಶ ಸನ್ನಿಹಿತವಾಗಿರುತ್ತಿತ್ತೇ ಹೊರತು ನಿಖರವಾಗಿರುತ್ತಿರಲಿಲ್ಲ. ಗಣೇಶ ದೈವಜ್ಞ ಗ್ರಹಗಳ ಪರಿಭ್ರಮಣೆ ಮತ್ತು ಚಲನೆ ಎರಡನ್ನೂ ನಿಖರವಾಗಿ ಗುರುತಿಸಿದ್ದರಿಂದ ಲೆಕ್ಕಾಚಾರದಲ್ಲಿ ನಿಖರತೆ ಬಂದಿತು

ಗಣೇಶ ದೈವಜ್ಞನು ಎಲ್ಲಿಯವನು?

ಪ್ರಸಿದ್ಧ ಖಗೋಳ ಶಾಸ್ತ್ರಜ್ಞರಾದ ಶಂಕರ ಬಾಲಕೃಷ್ಣ ದೀಕ್ಷಿತರ ಪ್ರಕಾರ, ಗಣೇಶ ದೈವಜ್ಞನು ಮುಂಬೈನಿಂದ ನಲವತ್ತು ಕಿಲೋ ಮೀಟರ್ ದೂರದಲ್ಲಿರುವ ಕೊಂಕಣ ಪ್ರಾಂತ್ಯದ ನಂದಗಾವ್‌ನವನು. ಕ್ರಿ.ಶ 1507 ಅವನು ಜನಿಸಿದ ವರ್ಷ ಎಂದು ಹೇಳಲಾಗಿದೆ. ಗ್ರಹ ಲಾಘವ ರಚಿತವಾಗಿದ್ದು ಕ್ರಿ.ಶ 1510ರ ಮಾರ್ಚ್ 19ರಂದು; ಇದು ನಿಜವಾದರೆ ಇದನ್ನು ರಚಿಸಿದಾಗ ಅವನಿಗೆ ಕೇವಲ ಹದಿಮೂರು ವರ್ಷವಾಗಿರಬೇಕು. ಇದನ್ನು ಅಸಾಧ್ಯವೆಂದು ಹೇಳುವ ವಾದಗಳೂ ಇದೆ. ಅವನ ತಂದೆ ಕೇಶವ ದೈವಜ್ಞನೂ ಖಗೋಲ ಶಾಸ್ತ್ರಜ್ಞನೇ. ಖಗೋಲ ಶಾಸ್ತ್ರ ಹಾಗೂ ಫಲ ಜ್ಯೋತಿಷಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಕೃತಿಗಳನ್ನು ರಚಿಸಿದ್ದಾನೆ. ಅವುಗಳಲ್ಲಿ 'ಗ್ರಹಕೌತುಕ' ಆದರಣೀಯ ಕೃತಿ ಎನ್ನಿಸಿಕೊಂಡಿದೆ. ಗಣೇಶ ದೈವಜ್ಞನ ಕಮಲಾಕರ ಕೂಡ ಖಗೋಲತಜ್ಞನೇ. ಇದು ವಂಶವಾಹಿನಿಯಾಗಿ ಬಂದ ಪ್ರತಿಭೆ ಕೂಡ ಹೌದು. ತಂದೆ ಕೇಶವ ದೈವಜ್ಞನ ಬಳಿ ಕಲಿತ ನಂತರ ವೈಜನಾಥ ಎನ್ನುವ ವಿದ್ವಾಂಸರ ಬಳಿ ಕಲಿಕೆ ಮುಂದುವರೆಯುತ್ತದೆ. ಲಘು, ಬೃಹತ್ ತಿಥಿ ಚಿಂತಾಮಣಿ ಗಣೇಶ ದೈವಜ್ಞನ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳು. ಬುದ್ಧಿವಿಲಾಸಿನಿ ಭಾಸ್ಕರಾಚಾರ್ಯನ ಲೀಲಾವತಿ ಮೇಲಿನ ಭಾಷ್ಯ, ಮುಹೂರ್ತ ತತ್ವ ವಿವೇಕ, ಶ್ರಾದ್ಧ ನಿರ್ಣಯ, ಪರ್ವ ನಿರ್ಣಯ ಅವನ ಇತರ ಕೃತಿಗಳು.

ಕಳೆದ ಆರು ನೂರು ವರ್ಷಗಳಿಂದಲೂ ನಿರಂತರವಾಗಿ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿರುವ ಕೃತಿ, ಗ್ರಹಲಾಘವ. ಇದರ ಕುರಿತು ಗಂಗಾಧರ, ಮಲ್ಲಾರಿ, ವಿಶ್ವನಾಥ, ನಾರಾಯಣ, ಕಮಲಾಕರ ಹೀಗೆ ಹಲವರು ವ್ಯಾಖ್ಯಾನಗಳನ್ನು ಬರೆದಿದ್ದಾರೆ; ಇಂದಿಗೂ ಅದನ್ನು ಆಧರಿಸಿದ ಲೆಕ್ಕಾಚಾರಗಳು ನಿಖರವಾಗಿರುತ್ತವೆ, ಯಾವುದೇ ಪದ್ಧತಿಯನ್ನು ಅನುಸರಿಸಿದರೂ ಇದರಲ್ಲಿ ಒಮ್ಮೆ ಪರಿಶೀಲನೆ ನಡೆಸುತ್ತಾರೆ ಎನ್ನುವುದೇ ಅದರ ಹಿರಿಮೆಯನ್ನು ಹೇಳುತ್ತದೆ. ಜಗತ್ತಿನಲ್ಲಿ ಇಂತಹ ಮಾನ್ಯತೆಯನ್ನು ಪಡೆದ ಕೃತಿಗಳ ಸಂಖ್ಯೆ ಬೆರಳೆಣಿಯಷ್ಟರು.

ಗ್ರಹಲಾಘವದಲ್ಲಿ ಏನಿದೆ?

ಗ್ರಹಲಾಘವವು 14 ಅಧ್ಯಾಯಗಳನ್ನು ಹೊಂದಿದ್ದು 187 ಶ್ಲೋಕಗಳನ್ನು ಒಳಗೊಂಡಿದೆ. ಕೃತಿಯ ಆರಂಭವನ್ನು ಕ್ರಿ.ಶ 1520ರ ಮಾರ್ಚ್ 19ರ ಸೋಮವಾರ ಉಜ್ಜಯನಿಯ ಮಧ್ಯಮ ಸೂರ್ಯೋದಯಕ್ಕೆ ತೆಗೆದುಕೊಳ್ಳಲಾಗಿದೆ. ಮೊದಲ ಅಧ್ಯಾಯದಲ್ಲಿ ಕುಜ, ಗುರು, ಬುಧ, ಶುಕ್ರ, ಶನಿ ಇವುಗಳ ಚಲನೆಯನ್ನು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ

ರವಿ-ಚಂದ್ರರ ಸ್ಪಷ್ಟಾಧಿಕಾರವನ್ನು ಮಂದಫಲ ಸಂಸ್ಕಾರ ಮಾಡುವ ವಿಧಾನವನ್ನು ವಿವರಿಸಲಾಗಿದೆ. ಮೂರನೆಯ ಅಧ್ಯಾಯವು ತಾರಾಗ್ರ ಸ್ಪಷ್ಟಾಧಿಕಾರವಾಗಿದ್ದು ಇದರಲ್ಲಿ ಐದು ಗ್ರಹಗಳ ಮಂದಫಲ ಮತ್ತು ಶೀಘ್ರಫಲ ಸಂಸ್ಕಾರವನ್ನು ತಿಳಿಸಿಲಾಗಿದೆ. ನಾಲ್ಕನೆಯ ತ್ರಿಪ್ರಶ್ನಾಧಿಕಾರದಲ್ಲಿ ದೇಶ ಮತ್ತು ಕಾಲ ಗಣಿತವನ್ನು ವಿವರಿಸಲಾಗಿದೆ. ಐದು ಮತ್ತು ಆರನೆಯ ಅಧ್ಯಾಯಗಳು ಚಂದ್ರ ಮತ್ತು ಸೂರ್ಯರ ಚಲನೆಗಳನ್ನು ಗ್ರಹಣಗಳ ಸಂಭವನೀಯತೆಯನ್ನು ತಿಳಿಸುತ್ತವೆ. ವಿಶೇಷವಾಗಿ ಪರಿಗಣಿಸಬೇಕಾದ ಲಂಬನ ಮತ್ತು ನತಿಗಳು ಇಲ್ಲಿ ಚರ್ಚಿತವಾಗಿವೆ.

ಗ್ರಹಲಾಘವದ ವಿಶೇಷತೆ ಎಂದರೆ ಅಹರ್ಗಣವನ್ನು ಕಂಡು ಹಿಡಿಯದೆ ಮಾಸಗಣದ ಮೂಲಕ ಗ್ರಹಣವನ್ನು ಲೆಕ್ಕ ಹಾಕಿರುವುದು. ಏಳು ಮತ್ತು ಎಂಟನೆಯ ಅಧ್ಯಾಯಗಳಲ್ಲಿ ಇದನ್ನು ವಿವರಿಸಲಾಗಿದೆ. ಒಂಭತ್ತನೆಯ ಉದಯಾಸ್ತಾಧಿಕಾರದಲ್ಲಿ ಗ್ರಹಗಳ ದೈನಂದಿನ ಉದಯ ಮತ್ತು ಅಸ್ತ ಸೂರ್ಯನ ಸಾಮೀಪ್ಯದಿಂದ ಉಂಟಾಗುವ ಲೋಪಗಳನ್ನು ವಿವರಿಸಲಾಗಿದೆ. ಗ್ರಹಗಳ ಮತ್ತು ನಕ್ಷತ್ರಗಳ ಛಾಯೆಗೆ ಸಂಬಂಧಿಸಿದ ವಿಷಯಗಳನ್ನು ಹತ್ತು ಮತ್ತು ಹನ್ನೊಂದನೆಯ ಅಧ್ಯಾಯದಲ್ಲಿ ನೀಡಲಾಗಿದೆ. ಹನ್ನೆರಡನೆಯ ಅಧ್ಯಾಯ ಶೃಂಗೋನ್ನತಿ ಅಧಿಕಾರವು ಚಂದ್ರನಿಗೆ ಮೀಸಲಾಗಿದ್ದು ಇಲ್ಲಿ ವಲಯ ಚಲನೆಗಳನ್ನು ವಿರಿಸಲಾಗಿದೆ. ಹದಿಮೂರನೆಯ ಅಧ್ಯಾಯ ಗ್ರಹಗಳ ಯತಿಯ ಕುರಿತಾಗಿದೆ. ಹದಿನಾಲ್ಕನೆಯ ಅಧ್ಯಾಯ ಸೂರ್ಯ ಮತ್ತು ಚಂದ್ರ ವ್ಯತೀಪಾತ ಮತ್ತು ವೈದೃತಿಯನ್ನು ವಿವರಿಸಿ ಅದನ್ನು ಲೆಕ್ಕ ಮಾಡುವ ಕ್ರಮವನ್ನು ವಿವರಿಸುತ್ತದೆ.

ಉಪಸಂಹಾರದಲ್ಲಿ ಗಣೇಶ ದೈವಜ್ಞನು ತನ್ನ ಕಾಲಕ್ಕಿಂತಲೂ ಹಿಂದೆ ಮತ್ತು ಮುಂದಿನ ಸ್ಥಾನಾಂಶಗಳನ್ನು ಲೆಕ್ಕ ಹಾಕುವ ಕ್ರಮವನ್ನು ವಿವರಿಸಿದ್ದು ಸಿದ್ಧಾಂತವನ್ನು ಸರಳಗೊಳಿಸಿ ಹಗುರ ಮಾಡಿದ್ದಾನೆ. ಆದರೆ ಇವೆಲ್ಲವೂ ಪೂರ್ವಜರಿಂದ ಬಂದ ಜ್ಞಾನ ಭಂಡಾರ ಎಂದು ತನ್ನ ವಿನಯವನ್ನು ಮೆರೆದಿದ್ದಾನೆ. ಭಾರತೀಯ ಖಗೋಳ ಶಾಸ್ತ್ರವನ್ನು ಅರ್ಥ ಮಾಡಿಕೊಳ್ಳಲು 'ಗ್ರಹಲಾಘವ' ಅಗತ್ಯವಾದ ಗ್ರಂಥ. ಈ ಕುರಿತು ಹೆಚ್ಚಿನ ಪರಿಚಯ ಮತ್ತು ಚರ್ಚೆ ಕನ್ನಡದಲ್ಲಿಯೂ ನಡೆಯಬೇಕಾದ ಅಗತ್ಯವಿದೆ.

ಈ ವರ್ಷ ಮಕರ ಸಂಕ್ರಾಂತಿ ಏಕೆ ಜನವರಿ 15ರಂದು ಬಂದಿದೆ?

ಸಾಮಾನ್ಯವಾಗಿ ಜನವರಿ 14ರಂದು ಬರುತ್ತಿದ್ದ ಮಕರ ಸಂಕ್ರಾಂತಿ ಈ ವರ್ಷ ಜನವರಿ 15ರಂದು ಬಂದಿರುವುದು ಕೆಲವರಲ್ಲಿ ಗೊಂದಲವನ್ನು ಉಂಟು ಮಾಡಿದೆ. ಸಾಮಾಜಿಕ ಜಾಲತಾಣಗಳ ಈ ಕಾಲದಲ್ಲಿ ವಿವಿಧ ಊಹಾಪೋಹಗಳನ್ನು ಆಧರಿಸಿದ ಬರಹಗಳು ಬರುತ್ತಿವೆ. ಇತ್ತೀಚೆಗೆ ಸೂರ್ಯನು ಒಂದು ಡಿಗ್ರಿಯಷ್ಟು ಚಲಿಸಿರುವುದಿಂದ ಇನ್ನು ಮುಂದೆ ಜನವರಿ 15ಕ್ಕೇ ಮಕರ ಸಂಕ್ರಮಣ ಬರುತ್ತದೆ ಎನ್ನುವ ವಿಡಿಯೋ ನೋಡಿ ಬೆಚ್ಚಿ ಬಿದ್ದೆ. ಮುಂದೆ ಹಿಂದೆ ಎನ್ನುವುದು ಭೂಮಿಯ ಮೇಲಿನ ಲೆಕ್ಕಾಚಾರ ಅದು ಆಕಾಶಕ್ಕೆ ಅನ್ವಯಿಸದು. ಸೂರ್ಯನು ಪ್ರತಿ 72 ವರ್ಷಗಳಿಗೊಮ್ಮೆ ಒಂದು ಡಿಗ್ರಿಯಷ್ಟು ಚಲಿಸುತ್ತಾನೆ. ಆದರೆ ಸೌರಮಂಡಲದ ಸಹಿತವಾಗಿಯೇ ಚಲಿಸುತ್ತಾನೆ, ಹೀಗಾಗಿದ್ದರಿಂದ ಭೂಮಿಯ ಮೇಲಿನ ಲೆಕ್ಕಾಚಾರದಲ್ಲಿ ಈ ಕಾರಣದಿಂದ ಯಾವ ಬದಲಾವಣೆಯೂ ಆಗುವುದಿಲ್ಲ.

ಈ ವರ್ಷ ಸೂರ್ಯನು ಮಕರ ರಾಶಿಯನ್ನು ಪುಷ್ಯ ಮಾಸದ ಏಕಾದಶಿಯಂದು ಬುಧವಾರ 14.01.2026 ರ 34.59 ಕ್ಕೆ (ಮಧ್ಯರಾತ್ರಿ 1.22 ನಿಮಿಷ) ಪ್ರವೇಶಿಸುತ್ತಾನೆ. ಪ್ರತಿ ಸಂಕ್ರಮಣಗಳಿಗೂ ಪುಣ್ಯಕಾಲವನ್ನು ಪ್ರತ್ಯೇಕವಾಗಿ ಲೆಕ್ಕ ಹಾಕುವ ಕ್ರಮವಿದೆ. ಇದರಂತೆ ಅಯನ ಸಂಕ್ರಮಣವಾದ ಮಕರ ಸಂಕ್ರಮಣಕ್ಕೆ ಮುಂದಿನ ನಲವತ್ತು ಘಳಿಗೆ ಲೆಕ್ಕ ಹಾಕಬೇಕು ಅದರಂತೆ ಸೂರ್ಯ ಸಿದ್ಧಾಂತ ರೀತ್ಯ 15.01.2026 ಗುರುವಾರದ ಬೆ. 12.15 ಕ್ಕೆ ವಾಕ್ಯರೀತ್ಯ ಬೆ. 10.33ಕ್ಕೆ ದೃಗಣಿತ ರೀತ್ಯ ಬೆ. 6.57ಕ್ಕೆ ಪುಣ್ಯಕಾಲ ಸಲ್ಲುತ್ತದೆ. ಹೀಗಾಗಿ ಎಲ್ಲಾ ಲೆಕ್ಕಾಚಾರಗಳ ರೀತಿಯಲ್ಲಿಯೂ ಈ ವರ್ಷ ಮಕರ ಸಂಕ್ರಮಣ ಜನವರಿ 15ಕ್ಕೇ ಬರುತ್ತದೆ. ಏಕೆ ಹೀಗಾಗುತ್ತದೆ? ಸೌರಮಾನದ ರೀತಿ ವರ್ಷದ ಅವಧಿ 365.256363 ದಿನ. ನಾವು 365 ದಿನ ಎಂದೇ ಲೆಕ್ಕ ಹಿಡಿಯುತ್ತೇವೆ. ಈ ಸಮಸ್ಯೆ ಗ್ರಿಗೋರಿಯನ್ ಕ್ಯಾಲೆಂಡರ್‌ನಲ್ಲಿಯೂ ಇರುತ್ತದೆ. ಅಲ್ಲಿ ಫೆಬ್ರವರಿ ತಿಂಗಳಲ್ಲಿ ನಾಲ್ಕು ವರ್ಷಗಳಿಗೊಮ್ಮೆ ಒಂದು ದಿವಸ ಸೇರಿಸಿ ಸರಿದೂಗಿಸಲಾಗುತ್ತದೆ. ಸೌರಮಾನದಲ್ಲಿಯೂ ಹೀಗೆ ಒಂದು ದಿನ ಸೇರಿಸಲಾಗುತ್ತದೆ. ಆದರೆ ಅದು ಖಚಿತವಾಗಿ ಇದೇ ತಿಂಗಳು ಎಂದಿಲ್ಲ. ಯಾವ ಸಂಕ್ರಮಣದ ಲೆಕ್ಕಾಚಾರ ಚಂದ್ರಮಾನದ ಲೆಕ್ಕಕ್ಕಿಂತ 18 ಗಂಟೆಗಳ ವ್ಯತ್ಯಾಸದಲ್ಲಿ ನಿಲ್ಲುತ್ತದೆಯೋ ಅಲ್ಲಿ ಸೇರಿಸಿ ಸರಿಪಡಿಸಲಾಗುತ್ತದೆ. ಭಾರತೀಯ ಪಂಚಾಗ ಗಣಿತದ ವೈಶಿಷ್ಟ್ಯವೆಂದರೆ ನಿರಂತರವಾಗಿ ಚಾಂದ್ರ ಮತ್ತು ಸೌರ ಲೆಕ್ಕಾಚಾರಗಳನ್ನು ಸರಿದೂಗಿಸಿರುವುದು. ಚಾಂದ್ರಮಾನದಲ್ಲಿ ಒಂದು ತಿಂಗಳು ಸೇರುವುದರಿಂದ ಅಧಿಕಮಾಸ ಎಲ್ಲರ ಗಮನಕ್ಕೆ ಬರುತ್ತದೆ. ಸೌರಮಾನದಲ್ಲಿ ಒಂದು ದಿನ ಸೇರಿದ್ದು ಸೂಕ್ಷ್ಮವಾಗಿ ಗಮನಿಸುವವರಿಗೆ ಮಾತ್ರ ಗೊತ್ತಾಗುತ್ತದೆ. ಕಳೆದ ವರ್ಷ ಮಿಥುನ ಮಾಸ ಅಧಿಕ ಸೌರ ಮಾಸವಾಗಿತ್ತು. (ಅದರಲ್ಲಿ 32 ದಿನಗಳಿದ್ದವು) ಅಧಿಕ ಸೌರ ದಿನ ಬಂದ ನಂತರ ಸಂಕ್ರಮಣಕಾಲದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. (ವ್ಯತ್ಯಾಸ ಖಚಿತವಾಗಿ 24 ಗಂಟೆ ಅಲ್ಲವಾದ ಕಾರಣ) ಹೀಗಾಗಿ ಈ ವರ್ಷದ ಮಕರ ಸಂಕ್ರಮಣ ಒಂದು ದಿನ ಮುಂದೆ ಹೋಗಿದೆ. ಈ ವ್ಯತ್ಯಾಸವು ಪರಾಭವ ಸಂವತ್ಸರದ ಜ್ಯೇಷ್ಟ ಅಧಿಕ ಬರುವುದರಿಂದ ಮುಂದೆ ಸರಿ ಹೋಗಲಿದೆ. ಅಧಿಕ ಸೌರ ಮತ್ತು ಅಧಿಕ ಚಾಂದ್ರ ಎರಡೂ ಪ್ರತ್ಯೇಕ ಸಂವತ್ಸರಗಳಲ್ಲಿ ಬಂದಾಗ ಸಂಕ್ರಾಂತಿ ಜನವರಿ 15ಕ್ಕೆ ಹೋಗುವುದು ಸಾಮಾನ್ಯ. ಸೌರ ಅಧಿಕವು ಮತ್ತು ಚಾಂದ್ರ ಅಧಿಕವು ಮಕರ ಸಂಕ್ರಾಂತಿಗಿಂತಲೂ ಮುಂಚೆಯೇ ಸಂಭವಿಸಿದ್ದರೆ ಈ ವ್ಯತ್ಯಾಸವು ಸಂಭವಿಸುವುದಿಲ್ಲ. ಜನವರಿ 15ಕ್ಕೆ ಮಕರ ಸಂಕ್ರಾಂತಿ ಬಂದಿರುವುದರ ಹಿಂದೆ ಖಚಿತ ಪಂಚಾಂಗದ ಲೆಕ್ಕಾಚಾರಗಳಿವೆ. ಹೀಗಾಗಿ ಯಾರೂ ಗೊಂದಲಕ್ಕೆ ಒಳಗಾಗ ಬೇಕಿಲ್ಲ. ಈ ಕುರಿತು ತಪ್ಪು ಮಾಹಿತಿ ಹಂಚುವುದನ್ನು ತಡೆಯ ಬೇಕಾಗಿದೆ.

ಪುಸ್ತಕ ವಿಮಾನ

ಹೊಸ ದೃಷ್ಟಿಕೋನದ ಪ್ರವಾಸ ಕಥನ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಇದು ಶಶಿಧರ ಹಾಲಾಡಿ ಅವರ ವಿನೂತನ ಬಗೆಯ ಪ್ರವಾಸ ಕಥನ. ಏಕಾಂಗಿಯಾಗಿ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಕೈಗೊಂಡ ತಿರುಗಾಟದ ಚಿತ್ರಣ ಇಲ್ಲಿ ಬಹು ಪರಿಣಾಮಕಾರಿಯಾಗಿ ಮೈಪಡೆದಿದೆ. ಸಸ್ಯಕಾಶಿ-ಪಕ್ಷಿಕಾಶಿಗಳ ಒಡನಾಟ, ಸುತ್ತಲಿನ ಜನಜೀವನ ಸಂಸ್ಕೃತಿಗಳಿಗೆ ಸಂಬಂಧಿಸಿದ ಒಳನೋಟಗಳನ್ನು ನೀಡುವ ಪುಟ್ಟ ಪುಟ್ಟ ಸ್ವಾರಸ್ಯಕರ ಲೇಖನಗಳು ಇಲ್ಲಿವೆ.

ಈ ಪ್ರವಾಸ ಕಥನ ಕೃತಿ ಒಂದು ಬಗೆಯ ಸೃಜನಶೀಲ ಪ್ರಯೋಗವೇ ಆಗಿದೆ. ಹೊಸ ದೃಷ್ಟಿಕೋನ, ಸ್ವಂತಿಕೆ, ಸೋಪಜ್ಞತೆ ಈ ಕೃತಿಯಲ್ಲಿ ಎದ್ದು ಕಾಣುತ್ತದೆ. ಇಲ್ಲಿ ಲೇಖಕರು ನಡೆಸಿದ ಭಾಷೆಯ ಉಳುಮೆ ಮೆಚ್ಚುವಂಥದ್ದು.

ಪ್ರವಾಸವು ಶಶಿಧರ ಹಾಲಾಡಿಯವರಿಗೆ ಬರೇ ಒಂದು ಹವ್ಯಾಸವಲ್ಲ, ಅದು ಅವರ ಪ್ರವೃತ್ತಿ, ಮನೋಧರ್ಮ. ಕುಂದಾಪುರದಲ್ಲಿ ಕಾಲೇಜು ಓದುತ್ತಿದ್ದ ಯುವಕ ಹಾಲಾಡಿ ಅವರು ತಮ್ಮ ಮನೆಗೆ ಏಕಾಂಗಿಯಾಗಿ ಒಂದು ಮಧ್ಯಾಹ್ನ ಕಾಲ್ನಡಿಗೆಯಲ್ಲಿ ಮಾಡಿದ ಪ್ರವಾಸ ಈ ಕೃತಿಯ ಮೊದಲ ಲೇಖನ. ಯುವಕ ಶಶಿಧರ ಕುಂದಾಪುರ ದಲ್ಲಿ ಕಾಲೇಜು ಮುಗಿಸಿ, ರಸ್ತೆಯ ಮೇಲೆ 22 ಕಿ.ಮೀ. ದೂರದ ಹಾಲಾಡಿಗೆ ಸಾಗಿ ಬಂದ ಸಾಹಸ ಯಾತ್ರೆ ಇಲ್ಲಿದೆ. ಉಳಿದ ಲೇಖನಗಳು ಇದೇ ಬಗೆಯ ಕಾಲು ದಾರಿಯ ಸಾಹಸಕಥನಗಳೇ ಆಗಿವೆ. ಇದು ಲೇಖಕರು ಏಕಾಂಗಿಯಾಗಿ ಮಾಡಿದ ಪ್ರವಾಸಗಳ ಚಿತ್ರಣ. ಏಕಾಂತ ಎಂದರೆ ತನ್ನಲ್ಲೇ ತಾನು ಇರುವುದು, ತನ್ನೊಳಗೇ ತಾನು ಸಂತೋಷಪಡುವುದು! 'ಏಕಾಂತದ ಸ್ಥಿತಿಯನ್ನು ಸ್ವಸ್ಥ' ಎಂದೂ ಕರೆಯಬಹುದು. ಸ್ವ-ಸ್ಥ ಎಂದರೆ ತನ್ನಲ್ಲೇ ತಾನು ಇರುವ ಸ್ಥಿತಿ! ತನ್ನನ್ನು ತಾನೇ ಕಂಡುಕೊಳ್ಳುವ ಸ್ಥಿತಿ, ತಾನು ತಾನಾಗಿ ಬೆಳೆಯುವ, ಅರಳುವ ಹೊರಳುವ ಸ್ಥಿತಿ-ಗತಿ. ಹೀಗಾಗಿ ಇಲ್ಲಿ ಒಂದು ಬಗೆಯ ಆನಂದ, ವಿಸ್ಮಯ, ಆತ್ಮಸ್ಥೈರ್ಯ, ಆತ್ಮಪ್ರಕಾಶ ಎದ್ದು ಕಾಣುತ್ತದೆ. ಪ್ರಕೃತಿಯ ಚಿರವಾದ ಚೆಲುವನ್ನು ಒಲಿದು ನೋಡುವ ಸಂಪನ್ನ ಮನ:ಸ್ಥಿತಿಯೊಂದರ ದರ್ಶನ ಇಲ್ಲಿ ನಮಗಾಗುತ್ತದೆ. ನಿತ್ಯ ಹರಿದ್ವರ್ಣದ ಕಾಡು, ಕಾನು, ಗುಡ್ಡ, ಗಿರಿ, ಬರೆ, ನಿಸರ್ಗದ ವಿವಿಧ ಮುಖಗಳ ದರ್ಶನವಿಲ್ಲಿದೆ. ಇರುವುದೊಂದೇ ಭೂಮಿ. ಇದು ಕೇವಲ ಮನುಷ್ಯರಿಗಾಗಿ ಮಾತ್ರ ಅಲ್ಲ, ಆತ ಈ ಜೀವ ಜಗತ್ತಿನ ಒಬ್ಬ ಪ್ರತಿನಿಧಿ ಅಷ್ಟೇ, ನಾಗರಿಕ ಜೀವನ ಈ ವನ್ಯ ಸಂಸ್ಕೃತಿಯ ಮುಂದೆ ತೀರಾ ಸಪ್ಪೆಯಾದುದು ಎಂಬ ಸೂಕ್ಷ್ಮ ಚಿಂತನೆ, ಪರಿಸರದ ಬಗೆಗಿನ ಕಾಳಜಿ ಸಹ ಇಲ್ಲಿ ಅಭಿವ್ಯಕ್ತಗೊಂಡಿದೆ.



ನನ್ನ ಸೋಲೋ ಟ್ರಿಪ್
ಲೇ: ಶಶಿಧರ ಹಾಲಾಡಿ
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ ರೂ 100/-

ಶಶಿಧರ ಹಾಲಾಡಿಯವರು ಬರೇ ಪ್ರಕೃತಿಯ ಉಪಾಸಕರಷ್ಟೇ ಅಲ್ಲ, ಅವರಿಗೆ ನಿಸರ್ಗ ಬರೇ ಸೌಂದರ್ಯದ ಖಣಿ ಮಾತ್ರ ವಲ್ಲ. ಪ್ರಕೃತಿ ಹಾಗೂ ಮಾನವನ ಸಂಬಂಧ ಘನಿಷ್ಠ ವಾದದ್ದು, ಅಲ್ಲಿ ಸಾಮರಸ್ಯ ಸಹಜ. ಪ್ರಕೃತಿ ಯಿಂದ ಸಿಗುವ ದೊಡ್ಡ ಲಾಭವೆಂದರೆ ಆನಂದ. ಋತುಗಳ ರಿಂಗುಣಿತದಲ್ಲಿ ಬದುಕಿನ ಅಮೃತ ಶ್ರುತಿಯನ್ನು ಹಿಡಿಯುವ ಪ್ರಯತ್ನ ಇಲ್ಲಿ ಸದ್ದಿಲ್ಲದೇ ನಡೆದಿದೆ. ಪ್ರಕೃತಿಯನ್ನು ನಿಸರ್ಗವನ್ನು ಜಗತಿಯನ್ನು ಸೃಷ್ಟಿಯನ್ನು ಲೇಖಕರು ನೋಡುವ ಕ್ರಮದಲ್ಲಿ ಹೊಸತನವಿದೆ. ಸುತ್ತಲಿನ ಜೀವ ಜಗತ್ತಿನ ಕುರಿತಾಗಿ ಲೇಖಕರಿಗಿರುವ ನಿತಾಂತವಾದ ಪ್ರೇಮ, ಪ್ರಜ್ಞೆ ಮತ್ತು ಚೈತನ್ಯಗಳ ಬೆಸುಗೆ ಇಲ್ಲಿ ಎದ್ದು ಕಾಣುತ್ತದೆ. ನಾಗರಿಕತೆ ಮತ್ತು ನಿಸರ್ಗ ಜೀವನಗಳ ನಡುವಿನ ಆಪ್ತ ಸಂವಾದ ಸಮೀಕರಣವೂ ಇಲ್ಲಿದೆ. ಕಾದಂಬರಿಯ ಸ್ವಾರಸ್ಯವೂ ಭಾವ ಪ್ರಬಂಧದ ಪರಿಮಳವೂ ಇಲ್ಲಿ ಮಿಳಿತವಾಗಿದೆ.

ಪ್ರವಾಸ ಸಾಹಿತ್ಯ ಎಂದರೆ ಸಾಮಾನ್ಯವಾಗಿ ಒಂದು ಪ್ರೇಕ್ಷಣೀಯ ಸ್ಥಳ, ಪ್ರದೇಶ, ಸಮಾಜ, ದೇಶ, ರಾಷ್ಟ್ರವನ್ನು ಪರಕೀಯವಾಗಿ ನೋಡಿ ವಿಶ್ಲೇಷಣೆ ಗೊಳಪಡಿಸಿದ ಕಥನ. ಆದರೆ ಈ ಮಾದರಿಗಿಂತ ತುಸು ಭಿನ್ನ ಬಗೆಯ ಸಾಹಸ ಪ್ರವಾಸ ಕಥನಗಳನ್ನು ಈ ಪುಸ್ತಕದಲ್ಲಿ ಬರೆದಿರುವುದು ವಿಶೇಷ.

ಕೃಷಿ ಸಂಸ್ಕೃತಿಯಲ್ಲಿ ಕಾಣೆಯಾಗುತ್ತಿರುವ ಕಂಬಳ, ಅಣೆ, ಹಕ್ಕಲು, ಕುಮರಿ, ಸಂಕ, ಬರೆ, ತೋಡು, ಗುಮ್ಮಿ, ಮದಗ, ಗಾಡಿಪೈಂಟ್ ಹೀಗೆ ಅನೇಕ ಪಾರಿಭಾಷಿಕ ಪದಗಳು, ವಿಶೇಷವಾದ ಸ್ಥಳನಾಮಗಳು ಈ ಕೃತಿಯಲ್ಲಿ ಕಾಣಸಿಗುವುದು ವಿಶೇಷ. ಇಲ್ಲಿ ಪ್ರಕಟವಾದ ಗಾಢ ಅನುಭವ, ಸಮೃದ್ಧ ವಿವರಣೆ ಅಷ್ಟೇ ಚೇತೋಹಾರಿಯಾಗಿದೆ.

ಕನ್ನಡಕ್ಕೆ ವಿಶಿಷ್ಟ ರೀತಿಯ ಪ್ರವಾಸ ಕಥನಗಳನ್ನು ನೆಯ್ಗೆ ಮಾಡಿ ಕೊಟ್ಟವರಲ್ಲಿ ಶಶಿಧರ ಹಾಲಾಡಿ ಅವರೂ ಒಬ್ಬರು. ಪ್ರವಾಸ ಸಾಹಿತ್ಯ ಎಂದರೆ ಸಾಮಾನ್ಯವಾಗಿ ಒಂದು ಪ್ರೇಕ್ಷಣೀಯ ಸ್ಥಳ, ಪ್ರದೇಶ, ಸಮಾಜ, ದೇಶ, ರಾಷ್ಟ್ರವನ್ನು ಪರಕೀಯವಾಗಿ ನೋಡಿ ವಿಶ್ಲೇಷಣೆ ಗೊಳಪಡಿಸಿದ ಕಥನ. ಆದರೆ ಈ ಮಾದರಿಗಿಂತ ತುಸು ಭಿನ್ನ ಬಗೆಯ ಸಾಹಸ ಪ್ರವಾಸ ಕಥನಗಳನ್ನು ಹಾಲಾಡಿ ಅವರು ಬರೆದು ಹೆಸರು ಮಾಡಿರುವುದು ವಿಶೇಷ. ಹಾಲಾಡಿ ಅವರದು ಬಹುಮುಖ ಪ್ರತಿಭೆ. ಅವರ ಹಾಗೆ ನಿಸರ್ಗದೊಂದಿಗೆ ಆತ್ಮೀಯ ತಾದಾತ್ಮ್ಯ ಅಂಟು ನಂಟು ಹೊಂದಿ ಅನುಸಂಧಾನ ಗೈದು ಅಲ್ಲಿ ತಾವು ಎದುರಿಸಿದ ಸನ್ನಿವೇಶಗಳನ್ನು ಕಂಡುಂಡ ವಿದ್ಯಮಾನಗಳನ್ನು ಸಜೀವವಾಗಿ ಸಚಿತ್ರವಾಗಿ ಸ್ವಾರಸ್ಯಪೂರ್ಣವಾಗಿ ನಿರೂಪಿಸಿದ ವರು ತೀರಾ ಕಡಿಮೆ ಎಂದೇ ಹೇಳಬಹುದು. ಶಶಿಧರ ಹಾಲಾಡಿ ಅವರು ಪತ್ರಕರ್ತರಾಗಿ, ಕಾದಂಬರಿಕಾರರಾಗಿ, ಅಂಕಣಕಾರರಾಗಿ, ಪ್ರಬಂಧಕಾರರಾಗಿ, ಕಸುವುಳ್ಳ ಪ್ರವಾಸ ಸಾಹಿತ್ಯ ನಿರ್ಮಾಪಕರಾಗಿ ಸೈ ಎನಿಸಿಕೊಂಡಿದ್ದಾರೆ. ಅನ್ವೇಷಣಾತ್ಮಕವಾದ ಕುತೂಹಲಕರವಾದ ಹಲವು ಉತ್ತಮ ಪ್ರವಾಸ ಕಥನಗಳನ್ನುಅವರು ಬರೆದಿ ದ್ದಾರೆ. ಆ ಸಾಲಿಗೆ ಈ ಕೃತಿಯೂ ಈಗ ಹೊಸ ಸೇರ್ಪಡೆ.

ಕೈಬರಹದ ಸಮಗ್ರ ಮಾಹಿತಿ!

ನಮ್ಮ ಕೈಬರಹದ ಮಹತ್ವವನ್ನು ಮತ್ತು ಕೈಬರಹದ ಕುರಿತು ಸಮಗ್ರ ಮಾಹಿತಿಯನ್ನು ವಿವರಿಸುವ ಕೈಬರೆಹವಲ್ಲ ಇದು ಕೈಬರೆಹ ಯೋಗ ಎಂಬ ಪುಸ್ತಕ ಇದೀಗ ಪ್ರಕಟಗೊಂಡಿದೆ. ಈ ಪುಸ್ತಕಕ್ಕೆ ಅರ್ಥಪೂರ್ಣ ಮುನ್ನಡಿಯನ್ನು ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್ ಅವರು ಬರೆದಿರು ವರು; ಆ ಮುನ್ನುಡಿಯ ಭಾಗ ಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಇದೊಂದು ಅಪೂರ್ವ ಪುಸ್ತಕ. ಇದನ್ನು ಬರೆದ ಜಿ. ಕೆ. ವೆಂಕಟೇಶ ಮೂರ್ತಿ ಅವರು ಧನ್ಯರು ಮತ್ತು ಮಾನ್ಯರು! ಕನ್ನಡ ಲಿಪಿಯನ್ನು ಭಾರತೀಯ ಲಿಪಿಗಳಲ್ಲೇ 'ರಾಣಿ' ಎಂದು ತಿಳಿದವರೆಲ್ಲರೂ ಕರೆದಿದ್ದಾರೆ. ಮೊದಲು ಭಾಷೆ, ನಂತರ ಲಿಪಿ, ಕನ್ನಡ ಲಿಪಿಯೆನ್ನಿ. ಅಕ್ಷರ ಎನ್ನಿ. ಇದು ಕೈಬರೆಹದಲ್ಲಿ ನಿಬದ್ಧ ಗೊಳ್ಳಬೇಕು. ಕನ್ನಡ ಅಕ್ಷರವನ್ನು ನೋಡುವುದೇ ಒಂದು ಚೆಂದ. ಅದನ್ನು ಸುಂದರವಾಗಿ ಬರೆದಾಗ ಉಂಟಾಗುವ ಆನಂದವಂತೂ ಹೇಳಲಸದಳ, ಕನ್ನಡದ ನವೋದಯದ ಪ್ರಮುಖ ಕವಿ ಕುವೆಂಪು ಅವರ ಕೈಬರಹ ಬಲು ಸುಂದರ. ಅವರ ಮಹಾಕಾವ್ಯ 'ಶ್ರೀ ರಾಮಾಯಣ ದರ್ಶನಂ' ಕೈಬರೆಹದ ಹಸ್ತಪ್ರತಿಯು ಕರ್ನಾಟಕ ಸರ್ಕಾರದಿಂದ ಮುದ್ರಿತವಾಗಿದೆ. ಅದೇ ರೀತಿ ಉತ್ತಮ ಕೈಬರೆಹವುಳ್ಳ ಕವಿಗಳು, ಲೇಖಕರು, ವಿದ್ವಾಂಸರು ನಮ್ಮಲ್ಲಿ ಇದ್ದಾರೆಂಬುದೇ ನಮಗೆ ಹೆಮ್ಮೆಯ ಸಂಗತಿ.

ನಾವು ಈ ಹಿನ್ನೆಲೆಯಲ್ಲಿ ಪ್ರಸ್ತುತ 'ಕೈಬರೆಹವಲ್ಲ ಇದು ಕೈಬರೆಹ ಯೋಗ' ಎಂಬ ಹೆಸರಿನ ಈ ಮಾಂತ್ರಿಕ ಪುಸ್ತಕವನ್ನು ಗಮನಿಸಬೇಕು. ಇಂಗ್ಲಿಷಿನಲ್ಲಿ ಕ್ಯಾಲಿಗ್ರಫಿ ಎಂದು ಕರೆಯುವ ಇದು ಶಾಸ್ತ್ರವಾಗಿ ಮಾತ್ರವಲ್ಲ ವೈಜ್ಞಾನಿಕ ಪದ್ಧತಿಯಾಗಿ ಹೊರ ದೇಶದಲ್ಲಿ ಬೆಳೆದಿದೆ. ನನಗೆ ತಿಳಿದಂತೆ ತೆಲುಗಿನಲ್ಲಾಗಲಿ, ತಮಿಳು ಮತ್ತು ಮಲೆಯಾಳಂ ಭಾಷೆಯಲ್ಲಾಗಲಿ 'ಕೈಬರೆಹ'ಕ್ಕೆ ಸಂಬಂಧಿಸಿದಂತೆ ಪುಸ್ತಕಗಳು ಇನ್ನೂ ಬಂದಿಲ್ಲ. ನಾವೆಲ್ಲರೂ ಪ್ರಾಥಮಿಕ ಶಾಲೆಯಲ್ಲಿ ಅರ್ಧ ಶತಮಾನಕ್ಕೂ ಹಿಂದೆ ಓದುತ್ತಿರುವಾಗ 'ಕಾಪಿ ಪುಸ್ತಕ' ಇರುತ್ತಿತ್ತು. ನಮ್ಮ ಕೈಬರೆಹದ ಸುಧಾರಣೆಗೆ ಇದು ಸಹಾಯವಾಗುತ್ತಿತ್ತು. ಕಾಲಕ್ರಮೇಣ ಕಾಪಿ ಪುಸ್ತಕಗಳು ಕಣ್ಮರೆಯಾದವು. ಅವರ ಜೊತೆಗೆ ಪ್ಲೇಟು ಬಳಪಗಳೂ ಮರೆಯಾದವೂ. ಈಗಂತೂ, ಎಲೆಕ್ಟ್ರಾನಿಕ್ ಮಾಧ್ಯಮಗಳು ಬಂದು, 'ಬರಹ'ವೇ ಇಲ್ಲವಾಗುತ್ತಿರುವ ಕಾಲ ದಲ್ಲಿ ನಾವಿದ್ದೇವೆ!

ಜಿ.ಕೆ.ವೆಂಕಟೇಶ ಮೂರ್ತಿಯವರು ಕೆಲವು ದಶಕಗಳಿಂದ ಕೈಬರೆಹದ ಬಗೆಗೆ ಶಿಬಿರಗಳನ್ನೂ ಕಾರ್ಯಾಗಾರಗಳನ್ನೂ ನಡೆಸುತ್ತಾ ಬರುತ್ತಿದ್ದಾರೆ. ಈ ಕೈಬರೆಹವು ವ್ಯಕ್ತಿತ್ವವನ್ನೂ ಸ್ವಭಾವವನ್ನೂ ಪ್ರತಿಮಿಸುತ್ತದೆ ಎಂಬುದು ವೈಜ್ಞಾನಿಕವಾಗಿ ದೃಢವಾಗಿರುವ ಸಂಗತಿ. ಉತ್ತಮ ಕೈ ಬರೆಹವು ಸ್ವಭಾವ- ದೃಷ್ಟಿಕೋನ-ಮಾನಸಿಕ ಆರೋಗ್ಯವನ್ನು ಸೂಚಿಸುತ್ತದೆ ಎಂಬುದು ಈಗ 'ಪ್ರಯೋಗ'ದಿಂದ ಸಿದ್ಧವಾಗಿರುವ ಅಂಶ. ಇದು ನಮ್ಮ ಬುದ್ಧಿಯ ವಿಕಾಸಕ್ಕೂ ಕಲ್ಪನೆಗೂ ಸಾಧಾರವಾಗಿದೆ! ಉತ್ತಮ ಕೈ ಬರೆಹವು ನಮ್ಮ ಆಲೋಚನೆಯನ್ನು ಪ್ರಬುದ್ಧಗೊಳಿಸುತ್ತದೆ. ಮಾತ್ರವಲ್ಲ, ಸಂಸ್ಕೃತಿಯ ಸಂಗೋಪನೆಗೂ ಕಾರಣವಾಗುತ್ತದೆಂಬ ತಾತ್ವಿಕ ಸಂಗತಿಗಳನ್ನು ಲೇಖಕರು ಸಿದ್ಧಾಂತ - ಪ್ರಯೋಗದ ಮೂಲಕ ನಮ್ಮ ಗಮನವನ್ನು ಸೆಳೆಯುತ್ತಿದ್ದಾರೆ. ಸೆಳೆದಿದ್ದಾರೆ. ಈ ಪುಸ್ತಕವು ಅದೆಲ್ಲದರ ಸಾರವಾಗಿದೆ.



ಕೈಬರೆಹವಲ್ಲ ಇದು
ಕೈಬರೆಹದ ಯೋಗ
ಲೇ: ಜಿ.ಕೆ.ವೆಂಕಟೇಶಮೂರ್ತಿ
ಬೆಲೆ ರು.200/-

ಪ್ರಸ್ತುತ ಪುಸ್ತಕವು ಮೂವತ್ತೇಳು ಅಧ್ಯಾಯಗಳಿಂದ ಕೂಡಿದೆ. ತಮ್ಮ ವಿಚಾರಕ್ಕೆ ಅನುಗುಣವಾಗಿಯೂ ಪೂರಕವಾಗಿಯೂ ಹತ್ತಾರು ರೇಖಾಚಿತ್ರಗಳನ್ನು ಲೇಖಕರು ಬಳಸಿದ್ದಾರೆ. ಕೃತಿಕಾರರು 'ಕೈಬರೆಹವಲ್ಲ, ಇದು ಕೈಬರೆಹಯೋಗ' ವೆಂದು ಮೊದಲ ಅಧ್ಯಾಯಕ್ಕೆ ಶೀರ್ಷಿಕೆ ಕೊಟ್ಟು, ಕೈಬರಹದ ಮಹತ್ವವನ್ನು ಹತ್ತಾರು ಸಂಗತಿಗಳ ಮೂಲಕ ನಮಗೆ ಮನಗಾಣಿಸಿಕೊಡುತ್ತಾರೆ. ಇದನ್ನು ಮುಂದುವರೆಸಿ ಎರಡನೇ ಅಧ್ಯಾಯದಲ್ಲಿ ಅಮೆರಿಕ ದೇಶವು ಕೈಬರೆಹಕ್ಕೆ ನೀಡಿರುವ ಮಹತ್ವ, ಅಲ್ಲಿಯ ಮನೋವಿಜ್ಞಾನಿಗಳೂ ಶಿಕ್ಷಣವೇತ್ತರೂ ಕೈಬರಹದ ಪ್ರಾಮುಖ್ಯತೆಯ ಬಗೆಗೆ ಹೊಂದಿರುವ ಆಸಕ್ತಿಯ ಕಡೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಮೂರನೆಯ ಅಧ್ಯಾಯದಲ್ಲಿ ವಿದ್ಯಾರ್ಥಿಗಳಿಗೆ ಕೈಬರಹ ಏಕೆ ಮುಖ್ಯ? ಎಂಬುದನ್ನು ಉದಾಹರಣೆ ಸಹಿತ ತಿಳಿಸಿ ಕೊಡುತ್ತಾರೆ. ನಾಲ್ಕನೆಯ ಅಧ್ಯಾಯದಲ್ಲಿ ಕ್ಯಾಲಿಗ್ರಫಿಯ ಉಗಮ-ವಿಕಾಸವನ್ನು ತಿಳಿಸುತ್ತಾ ನಮ್ಮ ಕುತೂಹಲ ವನ್ನು ತಣಿಸುತ್ತಾರೆ. ಈ ಪುಸ್ತಕದ ಸ್ವಾರಸ್ಯವಿರುವುದು ನಿರ್ಧಾರವಾದ ಮೂವತ್ತನಾಲ್ಕನೆಯ ಅಧ್ಯಾಯದಲ್ಲಿ, ಇಲ್ಲಿ ಲೇಖಕರು ಹತ್ತಾರು ಸ್ವಾರಸ್ಯಗಳನ್ನು ಉದಾಹರಣೆಗಳ ಮೂಲಕ ಕೈಬರಹದ ವಿಶ್ವತೋಮುಖ ಪರಿಚಯವನ್ನು ನಮಗೆ ಮಾಡಿಕೊಡುತ್ತಾರೆ. ಮೂವತ್ತೈದನೆಯ ಅಧ್ಯಾಯವು ಪ್ರಮುಖವಾಗಿ ಇಪ್ಪತ್ತೈದು ಕಿರು ಟಿಪ್ಪಣಿಗಳನ್ನು ಹೊಂದಿದೆ. ಈ ಮೇಲಿನ ವಿವರಗಳನ್ನು ಓದಿದಾಗ ಇದು ಕೇವಲ ಕೈಬರೆಹದ : ಚರಿತ್ರೆಯಲ್ಲ, ಇದು ಭಾಷೆ - ಲಿಪಿ - ಕೈಬರೆಹಗಳ ಪರಿವಾರದ ಸಂಕಥನ ವೆಂಬ ಸತ್ಯ ಅರಿವಾಗುತ್ತದೆ! ಲೇಖಕರಾದ ಜಿ. ಕೆ. ವೆಂಕಟೇಶಮೂರ್ತಿಯವರು ಉತ್ತಮ ಅಧ್ಯಾಪಕರಾಗಿ ಹಲವು ದಶಕಗಳ ಕಾಲ ವಿದ್ಯಾರ್ಥಿಗಳನ್ನು ಕಂಡವರು. ಅವರನ್ನು ಶಿಲ್ಪಿ ಗಳನ್ನಾಗಿ ನಿರ್ಮಿಸಿದವರು. ಹೀಗಾಗಿ 'ಕೈಬರೆಹ'ದ ವಿಷಯವಾಗಿ ಅಧಿಕೃತವಾಗಿ ಹೇಳಬಲ್ಲ ಸಾಮರ್ಥ ಇವರಿಗಲ್ಲದೆ ಇನ್ನಾರಿ ಗಿದೆ? ಇಂಥದೊಂದು ಅಪೂರ್ವ ಪುಸ್ತಕವನ್ನು ಕನ್ನಡ ಶಿಕ್ಷಣ ಕ್ಷೇತ್ರಕ್ಕೆ ನೀಡುವ ಮೂಲಕ 'ಶಿಕ್ಷಣ ಸಮಾಜ'ದ ಋಣವನ್ನು ಜಿ. ಕೆ ವೆಂಕಟೇಶ ಮೂರ್ತಿ ಅವರು ತೀರಿಸಿದ್ದಾರೆ. ಇಂಥ ಪುಸ್ತಕದ ಓದು ನಮ್ಮ ಅರಿವನ್ನು ಹೆಚ್ಚಿ ಸಿದೆ ಎಂದು ಹೇಳಿದರೆ ಯಾವ ಅತಿಶಯೋ ಕ್ತಿಯೂ ಇಲ್ಲ! (ಮುನ್ನುಡಿಯ ಆಯ್ದ ಭಾಗಗಳು.)

ಮಹಿಳಾ ಲೋಕದ ಕಥೆಗಳು

» ಸಾವಿತ್ರಿ ಶ್ಯಾನಭಾಗ್

ಮನೆಯ ಜವಾಬ್ದಾರಿ ಹೊತ್ತು ಮನೆಯವರಿಗಾಗಿ ದುಡಿದು ಮಕ್ಕಳೆಲ್ಲ ಓದಿ ಹುದ್ದೆಗೆ ಸೇರಿದ ಮೇಲೆ, ಮನೆಗೆ ಸೊಸೆ ಮೊಮ್ಮಕ್ಕಳು ಬಂದ ಮೇಲೆ ತಂದೆತಾಯಿಗಳು ಮಕ್ಕಳಿಗೆ ಹೊರೆಯೇ? ನಿವೃತ್ತಿ ಆದ ಮೇಲೆ ಅವರಿಗೂ ಒಂದು ಬದುಕಿದೆ ಅಲ್ಲವೇ? ಎಷ್ಟು ಜನ ಮಕ್ಕಳು ಈ ಬಗ್ಗೆ ಯೋಚಿಸಿ ದ್ದೇವೆ. ತಮ್ಮ ಕೆಲಸದಲ್ಲಿ ತುಂಬಾ ಬ್ಯುಸಿ ಎಂದು ಹೆತ್ತವರೊಂದಿಗೆ ಒಂದೈದು ನಿಮಿಷ ಮಾತನಾಡ ಲಾಗದಿರೆ ಎಷ್ಟು ಸರಿ, ಯೋಚಿಸಲೇ ಬೇಕಾದ ವಿಷಯ. ನಿವೃತ್ತಿಯ ನಂತರ ಷಷ್ಠಿ ಪೂರ್ತಿ ಶಾಂತಿ ಮಾಡುವಂತೆ ತಂದೆತಾಯಿಗಳು ಆ ಹೊತ್ತಿನಲ್ಲಿ ಶಾಸ್ತ್ರೋಕ್ತವಾಗಿ ಮದುವೆಯಾಗಲು ಬಯಸಿದರೆ ಅದು ತಪ್ಪೇ? ಹೀಗೆ ನಮ್ಮನ್ನು ನಮ್ಮ ಹಿರಿಯರನ್ನು ಪ್ರೀತಿಸಲು ಪ್ರಶ್ನಿಸುವಂತೆಯೂ, ಆ ಬಗ್ಗೆ ನಮಗೆ ತಿಳುವಳಿಕೆ ನೀಡಿ ಎಚ್ಚರಿಸುವಂತಹ ಕಥೆಯನ್ನೂ ಹೊಂದಿರುವ ಹೊಂದಿರುವ ಕಥಾ ಸಂಕಲನವೇ 'ಆತ್ಮಸಖಿ'. ಅರುಂಧತಿ, ನೀರುದೋಸೆ ಕೃತಿಗಳ ಮೂಲಕ ನಮಗೆ ಚಿರಪರಿಚಿತರಾಗಿರುವ ಲೇಖಕಿ ಸವಿತಾ ಮಾಧವ ಶಾಸ್ತ್ರಿಯವರು ಹೊಸ ಹೊಸ ಕಥಾವಸ್ತುವನ್ನು ಹುಡುಕಿ, ನಿತ್ಯ ಬದುಕಿನಲ್ಲಿ ನಡೆ ಯುವಂತೆ ಕಥೆಗಳನ್ನು ಹೆಣೆದು ಕನ್ನಡ ಸಾಹಿತ್ಯಕ್ಕೆ ಉತ್ತಮ ಉಡುಗೊರೆ ನೀಡಿದ್ದಾರೆ. ಅವರ ಕಥೆ ಗಳಲ್ಲಿ ಸಾಫ್ಟ್‌ವೇರ್ ಹುಡುಗಿಯಿದ್ದಾಳೆ, ರೀಲ್ಸ್ ಮಾಡುವ ಮನೆಕೆಲಸದವಳಿದ್ದಾಳೆ, ಮನೆಕೆಲಸ ಮಾಡುತ್ತಾ ಮಕ್ಕಳನ್ನು ಸಲಹಿದ ಮಹಿಳೆಯ ಮಗ ಳೊಬ್ಬಳು ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಪಡೆಯುವವರಿದ್ದಾರೆ, ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯಿದ್ದಾಳೆ, ಪ್ರೀತಿಗಾಗಿ ಓಡಿ ಹೋಗಿ ಮದುವೆಯಾಗಿ ಬದುಕನ್ನು ಗೆದ್ದವರು, ಇನ್ನೊಂದು ಹೆಣ್ಣಿನ ಸಹವಾಸ ಮಾಡಿ ಹೆರಿಗೆಯ ನಂತರ ಹೆಂಡತಿಯನ್ನು ಕಡೆಗಣಿಸಿ ಈಗಿನ ಕಾಲ ದಲ್ಲಿ ಇದೆಲ್ಲ ಕಾಮನ್ ಎಂದು ಹೇಳುವ ಗಂಡ ನಿಂದ ಬಿಡುಗಡೆ ಪಡೆದು ಬದುಕು ಜಯಿಸುವ ಛಲಗಾತಿಯೂ ಇದ್ದಾಳೆ. ಕಾಲಕ್ಕೆ ತಕ್ಕಂತೆ ಮಾಡ್ರನ್ ಹೆಸರುಗಳು, ಹೆಸರುಗಳಲ್ಲೂ ಹೊಸ ಆವಿಷ್ಕಾರ ಮಾಡಿದ್ದಾರೆ. ಹೀಗೆ ನವರಸಗಳಿಂದ ತುಂಬಿದ ಬದುಕಿನಲ್ಲಿ ಆಶಾಕಿರಣ ತುಂಬುವ, ಸೋಲು ಬಂದಾಗ ಹೆದರಿ ಕುಳಿತುಕೊಳ್ಳದೇ ಗೆಲುವ ಛಲ ತುಂಬುವ ಹೊಸಹೊಸ 15 ಕಥೆ ಗಳೊಂದಿಗೆ 'ಆತ್ಮಸಖಿ' ಆಪ್ತ ಎನಿಸುತ್ತದೆ.

ಆತ್ಮಸಖಿ
ಸವಿತಾ ಮಾಧವ ಶಾಸ್ತ್ರಿ
ಪ್ರ: ನ್ಯೂವೇವ್ ಬುಕ್ಸ್
ಬೆಲೆ ರು.170/-

ತೀವ್ರ ಸಂವೇದನೆಯ ಕಥೆಗಳು



ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ
ಲೇ: ಪ್ರತಿಭಾ ನಂದಕುಮಾರ್
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಬೆಲೆ ರು.195/-

ನಾವು ಹುಡುಗಿಯರೇ ಹೀಗೆ' ಎಂಬ ಕವನ ಸಂಕಲನದ ಮೂಲಕ ಕನ್ನಡ ಕಾವ್ಯಜಗತ್ತನ್ನು ಪ್ರವೇಶಿಸಿದ ಪ್ರತಿಭಾ ನಂದಕುಮಾರ್ ಅವರು, ಪ್ರಧಾನವಾಗಿ ಕಾವ್ಯವನ್ನೇ ಬರೆಯುತ್ತಾ ಬಂದಿರುವ ಸಾಹಿತಿ; ಆಗೊಮ್ಮೆ ಈಗೊಮ್ಮೆ ಸಣ್ಣ ಕಥೆಗಳನ್ನೂ ಇವರು ಬರೆದಿದ್ದು, ಅಂತಹ ಕಥೆಗಳ ಸಂಕಲನ ಇದೀಗ ಪ್ರಕಟವಾಗಿದೆ. ಇಲ್ಲಿ ಹದಿನೈದು ಕಥೆಗಳಿವೆ; ವಿಶಿಷ್ಟ ಮುಖಪುಟದೊಂದಿಗೆ ಪ್ರಕಟಗೊಂಡ ಈ ಕಥಾ ಸಂಕಲನದ ಬೆನ್ನುಡಿಯಲ್ಲಿ ಲೇಖಕಿ ಸಂಧ್ಯಾರಾಣಿಯವರು ಹೀಗೆ ಬರೆದಿದ್ದಾರೆ :

''ಬೆಕ್ಕೇ ಬೆಕ್ಕೇ ಮುದ್ದಿನ ಸೊಳ್ಳೇ' ಇದು ಪ್ರತಿಭಾ ನಂದಕುಮಾರ್ ಅವರ ಎರಡನೆಯ ಕಥಾಸಂಕಲನ, ಒಂದು ಹುಚ್ಚಿನಂತೆ, ತಪಸ್ಸಿನಂತೆ, ಏರುತ್ತಲೇ ಇರುವ ಜ್ವರದಂತೆ ಅತ್ಯಂತ ತೀವ್ರಭಾವದ ಕವಿತೆಗಳನ್ನು ಬರೆಯುವ ಪ್ರತಿಭಾ ಅವರು ಎರಡನೆಯ ಕಥಾಸಂಕಲನಕ್ಕೆ ಇಷ್ಟು ಸಮಯ ಏಕೆ ತೆಗೆದುಕೊಂಡರೋ ಗೊತ್ತಿಲ್ಲ. ಅವರ ಕವಿತೆಗಳು ಜಳಜಳನೆ ಉರಿಯುವ ಸುರುಸುರು ಬತ್ತಿ ಕಡ್ಡಿಯ ಬೆಳಕಲ್ಲಿ, ಜಗವನ್ನು, ಅವರ ಒಳಜಗತ್ತನ್ನೂ 'ಕಾಣಿಸು'ವಂಥವು. ಇಲ್ಲಿರುವ ಹದಿನೈದು ಕಥೆಗಳೂ ಸಹ ಅವರ ಕವಿತೆಗಳ ವಿಸ್ತರಣೆಯೇ ಆಗಿವೆ. ಅಂದರೆ ಇವೆಲ್ಲವೂ ಪ್ರತಿಭಾರ ಅತ್ಯಂತ ಖಾಸಗಿ ಜಗತ್ತಿಗೆ ಸೇರಿದವುಗಳೇನೋ ಎನ್ನಿಸುವಷ್ಟು ತೀವ್ರ ಸೂಕ್ಷ್ಮ ಸಂವೇದನೆಗಳನ್ನು ಹಿಡಿದಿಟ್ಟಿವೆ. ಮೇಲುನೋಟಕ್ಕೆ ಇವೆಲ್ಲವನ್ನೂ ನಗರ ಪ್ರಜ್ಞೆಯ ಕಥೆಗಳು ಎಂದು ಹೇಳಬಹುದಾದರೂ ಇವು ಅದಷ್ಟೇ ಅಲ್ಲ, ನಗರಗಳು ಕೊಡುವ ಅನಾಮಿಕತೆ ಮತ್ತು ಅನಾಥಪ್ರಜ್ಞೆಯಲ್ಲಿ ಹೆಣ್ಣೊಬ್ಬಳು ಹೇಗೆ ನಲುಗುತ್ತಾಳೆ, ಹೋರಾಡುತ್ತಾಳೆ, ಖುಷಿಯನ್ನು ಕಿತ್ತುಕೊಳ್ಳುತ್ತಾಳೆ ಮತ್ತು ಎಲ್ಲದರ ನಡುವೆಯೂ, ಎಲ್ಲದರ ನಂತರವೂ ಬತ್ತದ, ಸೋಲೊಪ್ಪದ ಮತ್ತು ಎಲ್ಲಕ್ಕಿಂತಲೂ ಮುಖ್ಯವಾಗಿ ಆದ್ರ್ರತೆ ಕಳೆದುಕೊಳ್ಳದ ಹೆಣ್ಣು ಇಲ್ಲಿ ಮತ್ತೆ ಮತ್ತೆ ನಮಗೆ ಎದುರಾಗುತ್ತಾಳೆ. ಆ ಮಟ್ಟಿಗೆ 'ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ' ಎನ್ನುವುದು ಇಲ್ಲಿ ಕೇವಲ ಮುಖಪುಟದ ಸೂಟುಧಾರಿಗಷ್ಟೇ ಅಲ್ಲ, ಕಥಾ ನಾಯಕಿಯರಿಗೂ ಒಪ್ಪುವ ಮಾತು! ಬೆಕ್ಕಿಗೆ ಒಂಬತ್ತು ಜೀವಗಳಂತೆ! ಬೆಕ್ಕು is a survivor! ಕಥೆಯ ದೃಷ್ಟಿಯಿಂದ ಓದುಗರು ಮತ್ತು ತಂತ್ರದ ದೃಷ್ಟಿಯಿಂದ ಬರಹಗಾರರು ಸಹ ಓದಬೇಕಾದ ಪುಸ್ತಕ ಇದು. ಈ ಕಥೆಗಳ ಚಿತ್ರಕಶಕ್ತಿ ಅನನ್ಯವಾದದ್ದು, ಅದು ಕಥೆಗಳನ್ನು ನೇರವಾಗಿ ಮನದಂಗಳಕ್ಕೆ ತಂದು ನಿಲ್ಲಿಸುತ್ತದೆ. ಈ ಕಥೆಗಳು ನಿಮ್ಮನ್ನೂ ಕಾಡಲಿ.''

(ಬೆನ್ನುಡಿಯಲ್ಲಿ ಸಂಧ್ಯಾರಾಣಿ)

ಕನ್ನಡಪರ ಕೃತಿಯೊಂದರ ಜಯಭೇರಿ

» ರಾ ನಂ ಚಂದ್ರಶೇಖರ

17ನೆಯ ಮುದ್ರಣ ಕಾಣುತ್ತಿರುವ ಈ ಪುಸ್ತಕವು, ಕರ್ನಾಟಕದ ಸಮಗ್ರ ಮಾಹಿತಿ ಒದಗಿಸುತ್ತದೆ. ಇದರಿಂದ ಬರುವ ಹಣದಲ್ಲಿ ಎಸ್.ಎಸ್. ಎಲ್.ಸಿ. ಕನ್ನಡ ಮಾಧ್ಯಮದಲ್ಲಿ ಹೆಚ್ಚು ಅಂಕ ಪಡೆದ 10 ಮಕ್ಕಳಿಗೆ ನಗದು ಬಹುಮಾನ ಮತ್ತು ಪುಸ್ತಕ ನೀಡಿ ಸನ್ಮಾನಿಸಲಾಗುತ್ತಿದೆ.

ಕನ್ನಡ ಶಕ್ತಿ ಕೇಂದ್ರವು 1990-91ರಲ್ಲಿ 'ಕನ್ನಡ ಉಳಿಸಿ ವರ್ಷ' ಆಚರಿಸಿತು. ಆಗ ಕನ್ನಡಾ ಭಿಮಾನಿಗಳಿಗೆ ಮಾರ್ಗದರ್ಶಿ ಕೈ ಹೊತ್ತಗೆಯಾಗಿ ಪ್ರಕಟಿಸಿದ 'ಕನ್ನಡ-ಕನ್ನಡಿಗ-ಕರ್ನಾಟಕ'ಪುಸ್ತಕದ 17ನೆಯ ಮುದ್ರಣವು ಇಂದು ಲೋಕಾ ರ್ಪಣೆ ಆಗುತ್ತಿದೆ. ಈ ಪುಸ್ತಕವು 35 ವರ್ಷಗಳ ನಂತರವೂ ಪ್ರಸ್ತುತತೆ ಮತ್ತು ಜನಪ್ರಿಯತೆ ಉಳಿಸಿಕೊಂಡಿರುವುದು ಅಸಾಮಾನ್ಯ ಸಂಗತಿ. ಚಿದಾನಂದ ಮೂರ್ತಿ, ಚನ್ನವೀರ ಕಣವಿ, ಕಯ್ಯಾರ ಕಿಞ್ಞಣ್ಣ ರೈ, ನಟ ಅಶೋಕ್, ಕಲಾ ವಿದ ಜಿ.ಕೆ. ಸತ್ಯ ಅವರಂಥವರು ಪದಾಧಿಕಾರಿ ಗಳಾಗಿದ್ದ, ಕುವೆಂಪು, ಶಿವರಾಮ ಕಾರಂತ ರಂಥವರು ಸಲಹೆಗಾರರಾಗಿದ್ದ 'ಕನ್ನಡ ಶಕ್ತಿ ಕೇಂದ್ರ'ದ 2ನೇ ವಾರ್ಷಿಕೋತ್ಸವ 1989ರಲ್ಲಿ ನಡೆಯಿತು. ಅಂದು ಎಂ. ಚಿದಾನಂದಮೂರ್ತಿ ಅಧ್ಯಕ್ಷತೆಯಲ್ಲಿ ಕನ್ನಡ ಚಳವಳಿ ಸಾಗಬೇಕಾದ ದಾರಿ ಎಂಬ ವಿಚಾರ ಸಂಕಿರಣ ನಡೆಯಿತು. ಕೆ. ಗೋಪಾಲಕೃಷ್ಣ ಅಡಿಗ, ಎಲ್.ಎಸ್. ಶೇಷಗಿರಿ ರಾವ್, ಐ.ಕೆ ಜಾಗೀರ್‌ದಾರ್ ಅವರಂಥ ವಿವಿಧ ಕ್ಷೇತ್ರಗಳ ಗಣ್ಯರು ಅದರಲ್ಲಿ ಪಾಲ್ಗೊಂಡಿದ್ದರು. ವಿಚಾರ ಮಂಡಿಸಿದ ಶೇಷಗಿರಿರಾಯರು, ಕನ್ನಡ ಜಾಗೃತಿಗೆ ಇಡೀ ವರ್ಷ ಕನ್ನಡ ಕಾರ್ಯಕ್ರಮ ನಡೆಯಬೇಕೆಂದರು. ಮಾತನಾಡಿದ ಎಲ್ಲರೂ ಕನ್ನಡ ಹೋರಾಟ ಬೆಂಗಳೂರು ದಾಟಿ ರಾಜ್ಯಾದ್ಯಂತ ನಡೆಯುವಂತೆ, ಇದಕ್ಕೆ ನಿರಂತರ ಕಾರ್ಯಕ್ರಮ ರೂಪಿಸುವ ಅಗತ್ಯವನ್ನು ಪ್ರತಿಪಾದಿಸಿದರು. ಇದರ ಫಲವಾಗಿಯಾಗಿ ಕನ್ನಡ ಶಕ್ತಿ ಕೇಂದ್ರವು 1990 ನವೆಂಬರಿನಿಂದ 1991ರ ಅಕ್ಟೋಬರ್‌ವರೆಗೆ 'ಕನ್ನಡ ಉಳಿಸಿ' ವರ್ಷ ವನ್ನಾಚರಿಸಿತು. ಇದರ ಭಾಗವಾಗಿ ರಾಜ್ಯಾದ್ಯಂತ ಸಾವಿರಕ್ಕೂ ಹೆಚ್ಚು ಕಾರ್ಯಕ್ರಮ ನಡೆದವು.

'ಕನ್ನಡ ಉಳಿಸಿ' ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಲು ಮುದ್ರಿತ ಸಾಹಿತ್ಯ ಪ್ರಕಟಿಸಲಾಯಿತು. ಕನ್ನಡ ಉಳಿಸಿ ವರ್ಷ ಏಕೆ? ಹೇಗೆ? ಎಂಬ ಫೋಲ್ಡರ್ ಮತ್ತು ಮಾಹಿತಿ ನೀಡುವ ಕೈ ಹೊತ್ತಿಗೆಯೇ ಕನ್ನಡ-ಕನ್ನಡಿಗ-ಕರ್ನಾಟಕ. ಈ ಹೊತ್ತಿಗೆ ಸಿದ್ಧಪಡಿಸಲು ಎಂ. ಚಿದಾನಂದಮೂರ್ತಿ, ಸೂರ್ಯನಾಥ ಕಾಮತ್, ಪಿ.ವಿ. ನಾರಾಯಣರ ಸಲಹಾ ಮಂಡಳಿ ಮತ್ತು ಶೇಷಗಿರಿರಾವ್, ಗೊ.ರು. ಚನ್ನಬಸಪ್ಪ, ರಾ.ನಂ.ಚಂದ್ರಶೇಖರ ಇದ್ದ ಸಂಪಾದಕ ಮಂಡಲಿ ಬಂತು. ಮಂಡಲಿಯು ಸಿದ್ಧಪಡಿಸಿದ ಕೈಹೊತ್ತಿಗೆ ಕನ್ನಡ-ಕನ್ನಡಿಗ-ಕರ್ನಾಟಕದ ಮೊದಲ ಭಾಗದಲ್ಲಿ ಕನ್ನಡಾಭಿಮಾನದ 21 ಗೀತೆಗಳಿವೆ. 2ನೇ ಭಾಗದಲ್ಲಿ ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಕನ್ನಡದ ಸಮಸ್ಯೆಗಳು, ಪರಿಹಾರ ಮಾರ್ಗ, ಇಂದಿನ ಕರ್ನಾಟಕದ ಬಗ್ಗೆ ಅಧಿಕೃತ ಅಂಕಿ-ಅಂಶಗಳು, ಕನ್ನಡಪರ ಸಂಘಟನೆ/ ವ್ಯಕ್ತಿಗಳು ನಾಡು-ನುಡಿಗೆ ಏನು ಮಾಡಬಹುದು ಮುಂತಾದ ಎಲ್ಲ ವಿವರಗಳನ್ನು ಒಳಗೊಂಡಿತ್ತು.

ಕೃತಿಯನ್ನು ಲೋಕಾರ್ಪಣೆ ಮಾಡಿದ ಎಸ್. ಎಲ್. ಭೈರಪ್ಪ, 'ಈ ಕೃತಿ ಕನ್ನಡಿಗರ ಅನಧಿಕೃತ ಸಂವಿಧಾನ. ಕರ್ನಾಟಕ ಹೇಗೆ ರೂಪುಗೊಳ್ಳಬೇಕು ಎಂಬುದರ ಬಗ್ಗೆ ಈ ಪುಸ್ತಕ ಚಿಂತನೆಗೆ ಎಡೆ ಮಾಡುತ್ತದೆ; ಕರ್ನಾಟಕದ ಬಗ್ಗೆ, ಅದರ ಭವಿಷ್ಯದ ಬಗ್ಗೆ ಚಿಂತೆಗೂ ಎಡೆ ಮಾಡಿಕೊಡುತ್ತದೆ' ಎಂದರು. ಅಧ್ಯಕ್ಷತೆ ವಹಿಸಿದ್ದ ಅಂದಿನ ವಿಧಾನಸಭಾಧ್ಯಕ್ಷ ಡಿ.ಬಿ. ಚಂದ್ರೇಗೌಡರ, 'ನಮ್ಮ ಶಾಸಕರೆಲ್ಲ ಓದಲೇ ಬೇಕಾದ ಪುಸ್ತಕ' ಎಂದು 250 ಪ್ರತಿಗಳಿಗೆ ಹಣ ನೀಡಿ ಎಲ್ಲ ಶಾಸಕರಿಗೆ ತಲುಪಿಸಲು ಮನವಿ ಮಾಡಿದರು.

ಗಣ್ಯರ ಈ ಮಾತುಗಳ ಪರಿಣಾಮವಾಗಿ ಪುಸ್ತಕಕ್ಕೆ ಎಲ್ಲಿಲ್ಲದ ಬೇಡಿಕೆ ಬಂದಿತು. ಮೊದಲ ಮುದ್ರಣದ 10 ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಖರ್ಚಾದವು. ಅದೇ ಸಮಯದಲ್ಲಿ ಮೈಸೂರಿನಲ್ಲಿ ನಡೆದ ಸಾಹಿತ್ಯ 1,386 ಪ್ರತಿಗಳೂ ಖರ್ಚಾದವು. ಮತ್ತೆ 5,000 ಪ್ರತಿಗಳನ್ನು ಶಕ್ತಿ ಕೇಂದ್ರ ಅಚ್ಚು ಹಾಕಿಸಿತು. ಈ ಹೊತ್ತಿಗೆ ಕನ್ನಡಿಗರ ಬುದ್ಧಿ-ಭಾವಕೋಶ ಎರಡನ್ನೂ ತಟ್ಟಿದ್ದರಿಂದ ತುಂಬಾ ಬೇಡಿಕೆಯಿತ್ತು. ಕರ್ನಾಟಕವನ್ನು ಪ್ರೀತಿಸುವ ಎಲ್ಲ ಕಾರ್ಮಿಕರ, ಕಾರ್ಯಕರ್ತರ, ವಿದ್ಯಾರ್ಥಿಗಳ, ರಾಜಕೀಯ ಮುಖಂಡರ ಕೈಯಲ್ಲಿ ಇರಲೇಬೇಕಾದ, ಒಟ್ಟಾರೆಯಾಗಿ ಕನ್ನಡ ಕಾಳಜಿಯಿರುವ ಎಲ್ಲರೂ ಇಟ್ಟುಕೊಳ್ಳಬೇಕಾದ ಪುಸ್ತಕ ಎಂಬ ಮಾತು ವ್ಯಾಪಕವಾಗಿ ಕೇಳಿಬಂತು. ಈ ಕೃತಿಯ ಮಹತ್ವವನ್ನು ಗಮನಿಸಿ 1996ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ನೆಲಮನೆ ದೇವೇಗೌಡರು, ಇದನ್ನು ಪರಿಷ್ಕರಿಸಿ ಕೊಟ್ಟರೆ ಮುದ್ರಿಸುತ್ತೇವೆಂದರು. ಆಗ ಹೆಚ್ಚಿನ ಮಾಹಿತಿ/ ವಿವರಗಳೊಂದಿಗೆ ಇಮ್ಮಡಿ ಗಾತ್ರದೊಂದಿಗೆ 5,000 ಪ್ರತಿ ಅಚ್ಚಾಯಿತು. ನಂತರ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಜಿ. ಸಿದ್ದರಾಮಯ್ಯ ಇನ್ನೆರಡು ಮುದ್ರಣ ಮಾಡಿದರು. ಚಿಕ್ಕೋಡಿಯ ಅಲ್ಲಮಪ್ರಭು ಸಿದ್ಧ ಸಂಸ್ಥಾನದ ಮಠವೂ ಇದನ್ನು ಮುದ್ರಿಸಿತು.

ಕನ್ನಡ ಕನ್ನಡಿಗ ಕರ್ನಾಟಕ
ಪ್ರ: ಸಪ್ನ ಬುಕ್ ಹೌಸ್
ಬೆಂಗಳೂರು

ಅಂದಿನಿಂದಲೂ ಈ ಕೃತಿಗೆ ಎಲ್ಲಿಲ್ಲದ ಬೇಡಿಕೆ! ಈಗಿನ ಹೊಸ ಆವೃತ್ತಿ ಮೊದಲ ಆವೃತ್ತಿಯ ಪುನರ್ಮುದ್ರಣವಲ್ಲ. ಇದರಲ್ಲಿ ಹಿಂದಿನ ಅಂಕಿ ಅಂಶಗಳು ನವೀಕೃತಗೊಂಡಿವೆ; ಎಷ್ಟೋ ಹೊಸ ವಿಷಯಗಳ ಅಂಕಿ ಅಂಶಗಳು ಸೇರ್ಪಡೆಯಾಗಿವೆ; ಅಖಿಲ ಭಾರತ ಸೇವಾ ಸ್ಪರ್ಧಾತ್ಮಕ ಪರೀಕ್ಷೆಗಳ ವಿವರಗಳಂಥ ಉಪಯುಕ್ತ ಮಾಹಿತಿಯೂ ಇದೆ. ಈ ಬಗೆಯ ಕೃತಿ ಬಹುಶಃ ಇನ್ನೊಂದಿಲ್ಲ. ಪ್ರತಿ ಆವೃತ್ತಿ ಪ್ರಕಟಿಸುವಾಗಲೂ ಅಂಕಿ-ಅಂಶಗಳ ಪರಿಷ್ಕರಣದ ಜೊತೆಗೆ ಹೊಸ ವಿಷಯಗಳು ಸೇರ್ಪಡೆಯಾಗಿವೆ. ಸ್ಪರ್ಧಾತ್ಮಕ ಪರೀಕ್ಷಗಳಿಗೆ ಉಪಯುಕ್ತ ಮಾಹಿತಿಯೂ ಸೇರಿವೆ. ಇಲ್ಲಿಯವರೆಗೆ 50 ಸಾವಿರ ಪ್ರತಿಗಳು ಮುದ್ರಣವಾಗಿದೆ. ಈ ರೀತಿಯ ನಿರಂತರ ಪರಿಷ್ಕಾರವೇ ಈ ಕೃತಿಗೆ ಸಿಕ್ಕಿರುವ ಜನಾದರಣೆಗೆ ಮುಖ್ಯ ಕಾರಣವಾಗಿದೆ. 6ನೆಯ ಮುದ್ರಣದಿಂದ ಈ ಪುಸ್ತಕವನ್ನು ಪ್ರಕಟಿಸಿ, ಕಡಿಮೆ ಬೆಲೆಗೆ ನೀಡುತ್ತಿರುವ ಸಪ್ನ ಬುಕ್ ಹೌಸ್‌ನವರು, ಈ ಪುಸ್ತಕ ನಿರಂತರವಾಗಿ ಜನಪ್ರಿಯತೆ ಉಳಿಸಿಕೊಳ್ಳಲು ಕಾರಣರಾಗಿದ್ದಾರೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1
ದಕ್ಷಿಣಾಯನ
(ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ, ರಾಜಕೀಯ ಇತ್ಯಾದಿ ಹಿನ್ನೆಲೆಯ ವಿಶಿಷ್ಟ ಕಾದಂಬರಿ.)
ಲೇ: ಜೋಗಿ,
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ: ರೂ 495/-



2
ರಕ್ಕಸಗಿ - ತಂಗಡಗಿ ಸಮರವಾದರೆ!
(ವಿಜಯನಗರ ಸಾಮ್ರಾಜ್ಯವನ್ನೇ ಬುಡಮೇಲು ಮಾಡಿದ ಯುದ್ಧದ ಕತೆ. ವಿಜಯನಗರ ಇತಿಹಾಸದ ನರವಿಂಧ್ಯದೊಳಗೆ ಚಾರಣ)
ತೆಲುಗು ಮೂಲ: ಮಾರುತಿ ಪೌರೋಹಿತಂ
ಸೃಜನಾನುವಾದ: ಕುಂವೀ
ಪ್ರ: ಲಡಾಯಿ ಪ್ರಕಾಶನ, ಗದಗ
ಬೆಲೆ: ರೂ 320/-



3
ಬದುಕುಳಿದವರು ಕಂಡಂತೆ
(2023ರ ಅಕ್ಟೋಬರ್ 7 ರಂದು ಭಯೋತ್ಪಾದಕರು ಇಸ್ರೇಲ್ ಮೇಲೆ ನಡೆಸಿದ ಭಯಾನಕ ಹತ್ಯಾಕಾಂಡದಲ್ಲಿ ಬದುಕುಳಿದವರು ಹೇಳಿದ ಕಥನ)
ಮೂಲ: ಯೇರ್ ಆಗಮೋನ್, ಒರಿಯಾ ಮೇವೊರೊಚ್
ಅನು: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ: ರೂ 500/-



4
ಅವಳು ಬದುಕ ಕಲಿಸಿದವಳು
(ಯುವ ಜನತೆಯಲ್ಲಿ ಸಂಚಲನ ಮೂಡಿಸಿದ ಸತ್ಯಘಟನೆಯಾಧಾರಿತ ಹತ್ತು ಮುದ್ರಣ ಕಂಡ ಪ್ರೇಮ ಕಥೆ)
ಲೇ: ಅರ್ಜುನ್ ದೇವಾಲದಕೆರೆ
ಪ್ರ: ದೇವಾಲದಕೆರೆ ಪ್ರಕಾಶನ, ಸಕಲೇಶಪುರ
ಬೆಲೆ: ರೂ 250/-



5
ದಾದಾಭಾಯಿ ನವರೋಜಿ
(200 ವರ್ಷಗಳ ಹಿಂದೆ ಜನಿಸಿದ ದಾದಾಬಾಯಿ ನವರೋಜಿ ಭಾರತದ ಸ್ವಾತಂತ್ರ ಹೋರಾಟಕ್ಕೆ ಪ್ರೇರಣೆ ನೀಡಿದವರು. ಅವರ ಜೀವನ ಚರಿತ್ರೆಯಿದು)
ಲೇ: ಕೆ. ಸತ್ಯನಾರಾಯಣ
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು, ಬೆಲೆ: ರೂ 160/-



6
ಡಾ. ಜಾನಕಿ ಅಮ್ಮಾಳ್
(ಕಬ್ಬಿನ ಸಿಹಿ ವರ್ಧಿಸಿದ ಅಮ್ಮ - ವಿಜ್ಞಾನಿ ಜಾನಕಿ ಅಮ್ಮಾಳ್ ಅವರ ಜೀವನ ಮತ್ತು ಕಾರ್ಯಗಳ ಸಮಗ್ರ ಚಿತ್ರಣ)
ಲೇ: ಡಾ। ಸುಕನ್ಯಾ ಸೂನಗಹಳ್ಳಿ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು, ಬೆಲೆ: ರೂ 560/-



7
ಜುಗಾರಿ ಕ್ರಾಸ್
(ತೇಜಸ್ವಿಯವರ ಸುಪ್ರಸಿದ್ಧ ರೊಮ್ಯಾಂಟಿಕ್ ಥ್ರಿಲ್ಲರ್ ಇದು. ಸಹ್ಯಾದ್ರಿಯ ಸಾಮಾಜಿಕ ಸ್ಥಿತ್ಯಂತರಗಳನ್ನು ತೋರಿಸುತ್ತದೆ)
ಲೇ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ
ಪ್ರ: ಪುಸ್ತಕ ಪ್ರಕಾಶನ, ಮೂಡಿಗೆರೆ
ಬೆಲೆ: ರೂ 246/-

8
ಹಂಗರ್
(ನಾರ್ವೆ ದೇಶದ ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕ ನಟ್ ಹಾಮ್ಸನ್ ಅವರ ಪ್ರಸಿದ್ಧ ಕೃತಿ 'ಹಂಗರ್'ನ ಕನ್ನಡಾನುವಾದ)
ಮೂಲ: ನಟ್ ಹಾಮ್ಸನ್
ಅನು: ಟಿ.ಡಿ. ರಾಜಣ್ಣ ತಗ್ಗಿ
ಪ್ರ: ದೇಸಿ ಪುಸ್ತಕ, ಬೆಂಗಳೂರು
ಬೆಲೆ: ರೂ 260/-



9
ಮುತ್ತುಪ್ಪಾಡಿಯ ಮಾಟಗಾತಿ
(ಸಣ್ಣ ಕಥಾ ಪ್ರಕಾರದಲ್ಲಿ ಬೊಳುವಾರು ಅವರದು ಪ್ರಸಿದ್ಧ ಹೆಸರು. ಅವರ ಹನ್ನೆರಡು ಕಥೆಗಳು ಇಲ್ಲಿವೆ)
ಲೇ: ಬೊಳುವಾರು, ಪ್ರ: ವೀರಲೋಕ ಪ್ರತಿಷ್ಠಾನ, ಬೆಂಗಳೂರು
ಬೆಲೆ: ರೂ 300/-



10
ಮಿಸ್ಟರಿ ಆಫ್ ಮಾರಿಕಟ್ಟೆ
(ಕಳೆದ ಐದಾರು ವರ್ಷಗಳಿಂದ ಹಲವು ಪತ್ತೇದಾರಿ ಕಥೆ-ಕಾದಂಬರಿಗಳು ಪ್ರಕಟವಾಗಿವೆ. ಇದು ಕೌಶಿಕ್ ಕೂಡುರಸ್ತೆಯವರ ಹೊಸ ಪತ್ತೇದಾರಿ)
ಲೇ: ಕೌಶಿಕ್ ಕೂಡುರಸ್ತೆ
ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು
ಬೆಲೆ: ರೂ 275/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಇಂದು ಲೇಖಕನಾಗಲು ಟೈಪಿಂಗ್ ಗೊತ್ತಿರಬೇಕೆಂದಿಲ್ಲ! ಮೊಬೈಲ್‌ನಲ್ಲೋ, ಕಂಪ್ಯೂಟರ್‌ನಲ್ಲೋ ಸ್ಲೈಡಿಂಗ್ ಮಾಡಿ ಬರೆಯಬಹುದು, ವಾಯ್ಸ್ ಟೈಪ್ ಮಾಡಬಹುದು. ಜತೆಗೆ, ಈಗ 'ಐನಾತಿ'ಯ ಸಹಾಯವನ್ನೂ ಪಡೆಯಬಹುದು! ಯಾರು ಈ ಐನಾತಿ? ಓದಿ ನೋಡಿ.

ಟೈಪಿಂಗ್ ಕಲಿಯದೇ ಲೇಖಕನಾದ ಕಥೆ

ಸುಲಲಿತ ಪ್ರಬಂಧ

» ಡಾ. ಶಶಿಕಿರಣ್ ಉಮಾಕಾಂತ್ ಉಡುಪಿ

ಅದು 1986ನೆಯ ಇಸವಿ. ನಾನಾಗ ಮೈಸೂರಿನಲ್ಲಿ 8ನೇ ಕ್ಲಾಸ್ ಹುಡುಗ. ಮನೆಯಲ್ಲಿ ದೊಡ್ಡವರೆಲ್ಲರದ್ದೂ ಒಂದೇ ಮಾತು – 'ಭವಿಷ್ಯದಲ್ಲಿ ಚೆನ್ನಾಗಿ ಮುಂದೆ ಬರಬೇಕು ಅಂದ್ರೆ, ಟೈಪಿಂಗ್ ಕಲಿಲೇಬೇಕು ಕಣೋ.'

ಸರಿ ಅಂತ ಟೈಪಿಂಗ್ ಕ್ಲಾಸಿಗೆ ಸೇರಿದೆ. ಕ್ಲಾಸ್ ರೂಮ್ ಒಳಗೆ ಹೋದ್ರೆ, ಸಾಕು, ಟಕ-ಟಕ ಅಂತ ಕಿವಿಗಡಚಿಕ್ಕುವ ಶಬ್ದ. ನನ್ನ ಮುಂದೆ ಒಂದು ಟೈಪ್‌ರೈಟರ್ ಮಷೀನ್ ಇತ್ತು. ಅದು ಮಷೀನ್ ತರ ಕಾಣ್ತಿರ್ಲಿಲ್ಲ, ಯಾವುದೋ ಕಬ್ಬಿಣದ ರಾಕ್ಷಸನ ತರ ಕಾಣ್ತಿತ್ತು! ಆದ್ರೆ, ಕೀಗಳ ಜೋಡಣೆ ನೋಡಿದ್ರೆ, ನಗುನೂ ಬರ್ತಿತ್ತು. ಕ್ಯು-ಡಬ್ಲ್ಯು-ಇ-ಆರ್-ಟಿ-ವೈ! ಇದ್ಯಾವ ಸೀಮೆ ಜೋಡಣೆ ಸ್ವಾಮಿ?

ಅದಕ್ಕಿಂತ ಹೆಚ್ಚಾಗಿ, ನನ್ನ ಕಿರುಬೆರಳುಗಳಲ್ಲಿ ಆ ಬಟನ್ ಒತ್ತೋಕೆ ಶಕ್ತಿನೇ ಇರ್ಲಿಲ್ಲ. ಮೆಲ್ಲಗೆ ಒತ್ತಿದ್ರೆ ಪೇಪರ್ ಮೇಲೆ ಅಕ್ಷರಾನೇ ಬೀಳ್ತಿರ್ಲಿಲ್ಲ; ಇನ್ನು ಜೋರಾಗಿ ಒತ್ತಿದ್ರೆ ಅಕ್ಷರಗಳು ಒಂದಕ್ಕೊಂದು ಸಿಕ್ಕಿಹಾಕ್ಕೊಂಡು ಜ್ಯಾಮ್ ಆಗ್ತಿತ್ತು. ಇದೇನಪ್ಪಾ ಟೈಪಿಂಗ್ ಮಾಡ್ತಿದೀನೋ ಅಥವಾ ಮಷೀನ್ ಜೊತೆ ಫೈಟಿಂಗ್ ಆಡ್ತಿದೀನೋ ಅಂತ ಅನ್ನಿಸ್ತಿತ್ತು. ನನ್ನ ಕೈಲಿ ಇದಾಗಲ್ಲಪ್ಪಾ ಅಂತ ಸೋಲೊಪ್ಪಿಕೊಂಡು ಆ ಕ್ಲಾಸಿಗೆ ಹೋಗೋದನ್ನೇ ನಿಲ್ಲಿಸಿಬಿಟ್ಟೆ.

ಮಾಯಾ ಬಟನ್' ಮೇಲೆ ಕಣ್ಣು!

ಹನ್ನೊಂದು ವರ್ಷ ಕಳೀತು. ವೈದ್ಯಕೀಯ ಪದವಿ ಪಡೆದು, 1997ರಲ್ಲಿ ನಾನು ಎಂ.ಡಿ. ಮಾಡ್ತಿದ್ದೆ. ಥೀಸಿಸ್ ಬರೀಬೇಕಿತ್ತು. ಪ್ರಪಂಚ ಆಗಲೇ 'ವರ್ಡ್ ಪ್ರೊಸೆಸರ್' (ಕಂಪ್ಯೂಟರ್ ಟೈಪಿಂಗ್) ಕಡೆಗೆ ಹೊರಟಿತ್ತು. ಆದ್ರೆ, ನಮ್ಮಲ್ಲಿ ಇನ್ನೂ ಕಂಪ್ಯೂಟರ್ ಎಲ್ಲಾ ಕಡೆ ಇರ್ಲಿಲ್ಲ. ನನ್ನ ನೋಟ್ಸ್ ತಗೊಂಡು ಅಂಗಡಿಗೆ ಹೋಗಿ, ಒಬ್ಬ ಟೈಪಿಸ್ಟ್ ಪಕ್ಕ ಕೂತು ಅವನು, ಆಗಿನ ಕಾಲದ ಹಳೆಯ ಕಂಪ್ಯೂಟರ್‌ನಲ್ಲಿ ಟೈಪ್ ಮಾಡೋದನ್ನ ನೋಡ್ತಿದ್ದೆ. ಅವನ ಸೂಪರ್ ಟೈಪಿಂಗ್ ಸ್ಪೀಡ್ ನೋಡಿ ನನಗೇನೂ ಅನ್ನಿಸ್ಲಿಲ್ಲ. ಆದ್ರೆ ಆತನ ಕೀಬೋರ್ಡ್‌ನಲ್ಲಿ ಇದ್ದ ಆ ಒಂದು ಬಟನ್ ಇದ್ಯಲ್ಲ... ಅದೇ 'ಬ್ಯಾಕ್ ಸ್ಪೇಸ್ ಬಟನ್' ಅದನ್ನ ನೋಡಿ ಸಿಕ್ಕಾಪಟ್ಟೆ ಹೊಟ್ಟೆಕಿಚ್ಚಾಯ್ತು!

ಹಳೆ ಟೈಪ್‌ರೈಟರ್‌ನಲ್ಲಿ ಒಂದು ಅಕ್ಷರ ತಪ್ಪಾದ್ರೂ, ಅದೊಂದು ಕ್ರೈಮ್ ಸೀನ್ ತರ ಇರ್ತಿತ್ತು! ವೈಟ್ನರ್ ಬಳಿದು, ಊದಿ ಒಣಗಿಸಬೇಕಿತ್ತು. ಅದರ ಮೇಲೆ ಮತ್ತೆ ಟೈಪ್ ಮಾಡಬೇಕಿತ್ತು. ಆದ್ರೆ ಇಲ್ಲಿ? 'ಟಕ್' ಅಂತ ಒಂದು ಬಟನ್ ಒತ್ತಿದ್ರೆ ಸಾಕು, ತಪ್ಪು ಮಾಯ! ಮ್ಯಾಜಿಕ್ ಅದು! ಛೇ, ಎಂತಾ ಸುಖ ಅಲ್ವಾ ಇವನದ್ದು ಅಂತ ಅನ್ಕೋತಿದ್ದೆ. ಆದ್ರೆ ಅನಿವಾರ್ಯ, ಕಾಸು ಕೊಟ್ಟು ಟೈಪ್ ಮಾಡಿಸಬೇಕಿತ್ತು.

ಬ್ಯಾಂಕ್ ಲೋನ್ ಮತ್ತು ಅದೇ ಹಳೆ ಕಥೆ!

2002 ಬಂತು. ಬ್ಯಾಂಕ್ ಲೋನ್ ಮಾಡಿ, ಉಡುಪಿಯಲ್ಲಿ ನಾನೇ ಒಂದು ಕಂಪ್ಯೂಟರ್ ತಗೊಂಡೆ; ಆಗೆಲ್ಲಾ ಒಂದು ಕಂಪ್ಯೂಟರ್ ಬೆಲೆ ಬಲು ದುಬಾರಿ! ಈಗಾದ್ರೂ ಸರಿ, ಆ ಟೈಪಿಂಗ್ ಕಲಿತೇ ತೀರಬೇಕು ಅಂತ ಮನಸ್ಸು ಮಾಡಿದೆ.

ಒಂದು 'ಟೈಪಿಂಗ್ ಟ್ಯೂಟರ್' ಸಾಫ್ಟ್‌ವೇರ್ ಹಾಕ್ಕೊಂಡೆ. ಆದ್ರೆ, ನನ್ನ ಹಣೆಬರಹ ಬದಲಾಗಿರಲಿಲ್ಲ. ಆ ಸಾಫ್ಟ್‌ವೇರ್ ಏನ್ ನೋಡಿದ್ರೂ, ಕೆಂಪು ಬಣ್ಣ ತೋರಿಸಿ ಬೈಯ್ಯೋದು! ನಿಮಿಷಕ್ಕೆ ಇಷ್ಟು ಪದ ಟೈಪ್ ಮಾಡ್ಬೇಕು ಅಂತ ರೂಲ್ಸ್ ಬೇರೆ. ನಾನೇನೋ ಎರಡು ಬೆರಳ್ ಬಳಸಿ, ಗುಬ್ಬಚ್ಚಿ ಕಾಳು ಕುಕ್ಕಿದ ಹಾಗೆ ಕೀಬೋರ್ಡ್ ಮೇಲೆ ಅಕ್ಷರ ಹುಡುಕಿ ಟೈಪ್ ಮಾಡ್ತಿದ್ದೆ.

ಒಂದು ಸತ್ಯ ಹೇಳ್ತೀನಿ ಕೇಳಿ: ನಾನು ಆ ಟೈಪಿಂಗ್ ಸಾಫ್ಟ್‌ವೇರ್‌ನಲ್ಲಿ ಎರಡನೇ ಪಾಠವನ್ನು ದಾಟಲೇ ಇಲ್ಲ! ನನ್ನ ಕೈಲಿ ಇಷ್ಟೇ ಆಗೋದು ಅಂತ ನಿರ್ಧಾರ ಮಾಡ್ಬಿಟ್ಟೆ.

ಸ್ಮಾರ್ಟ್‌ಫೋನ್ ಜಮಾನದ ಮ್ಯಾಜಿಕ್

ಆ ಮೇಲೆ ಬಂತು ನೋಡಿ ಸ್ಮಾರ್ಟ್‌ಫೋನ್. ಅಬ್ಬಬ್ಬಾ! ಪ್ರಪಂಚಾನೇ ಬದಲಾಯ್ತು. ಈಗ ನಾನು ಬಟನ್ ಒತ್ತಬೇಕಿಲ್ಲ. ಗಾಜಿನ ಸ್ಕ್ರೀನ್ ಮೇಲೆ ಬೆರಳು ಓಡಿಸಿದ್ರೆ ಸಾಕು (ಸ್ಲೈಡಿಂಗ್, ಸ್ವೈಪಿಂಗ್), ಅಕ್ಷರಗಳು ತಾನಾಗೇ ಕೂಡಿಕೊಳ್ಳತ್ವೆ. ಜನ ಕೇಳ್ತಿದ್ರು, ಹೇಗ್ ಸಾರ್ ಇಷ್ಟು ಫಾಸ್ಟ್ ಆಗಿ ಟೈಪ್ ಮಾಡ್ತೀರಾ? ಅಂತ. 'ಇದು ಟೈಪಿಂಗ್ ಅಲ್ಲಾ ಸ್ವೈಪಿಂಗ್' ಅಂತ ಹೇಳ್ತಾ ಇದ್ದೆ. ಇದೇನು ಪೂರ್ವ ಜನ್ಮದ ಅಭ್ಯಾಸ ಅಲ್ಲ ಬಿಡಿ, ಅವಾಗ ಪ್ರಾಕ್ಟಿಸ್ ಮಾಡಕ್ಕೆ ಸ್ಮಾರ್ಟ್‌ಫೋನ್ ಇರ್ತಿರಲಿಲ್ಲ. ಸ್ಕ್ರೀನ್ ಮೇಲೆ ಬೆರಳು ಜಾರಿಸೋದು ಸುಲಭ ಅಷ್ಟೇ! ಮೊದಲ ಬಾರಿಗೆ, ನನ್ನ ಯೋಚನೆಯ ವೇಗಕ್ಕೆ ತಕ್ಕ ಹಾಗೆ ಬೆರಳುಗಳು ಕೆಲಸ ಮಾಡೋಕೆ ಶುರು ಮಾಡಿದ್ವು.

ಇಂದು: ನನ್ನ ಜೊತೆಗೊಬ್ಬ ಅದೃಶ್ಯ 'ಐನಾತಿ'

ಇವತ್ತು ನಾನು ಆಗಾಗ ಲೇಖನ ಬರೀತೀನಿ, ನನ್ನ ವೆಬ್ಸೈಟ್ ನಲ್ಲಿ ಪೋಸ್ಟ್ ಮಾಡ್ತೀನಿ, ಸೋಶಿಯಲ್ ಮೀಡಿಯಾದಲ್ಲಿ ಆಗಾಗ ಬರೀತೀನಿ; ಎಲ್ಲವೂ ಒಂದು ರೀತಿಯಲ್ಲಿ ಟೈಪಿಂಗ್‌ನಲ್ಲೇ ಬರೆಯುವುದು! 1986ರಲ್ಲಿ ಆ ಟೈಪಿಂಗ್ ಕ್ಲಾಸ್ ಬಿಟ್ಟ ಹುಡುಗ ಇವತ್ತು ಇಷ್ಟೆಲ್ಲ ಟೈಪ್ ಮಾಡ್ತಾನೆ ಅಂದ್ರೆ ನಂಬೋಕೆ ಆಗಲ್ಲ.

ಇದು ಹೇಗೆ ಸಾಧ್ಯ ಆಯ್ತು? ಈಗೆಲ್ಲಾ ವಾಯ್ಸ್ ಟೈಪಿಂಗ್ ಮತ್ತು ಐನಾತಿ ಮಹಿಮೆ. ನಾನು ಮನಸ್ಸಿನಲ್ಲಿದ್ದದ್ದನ್ನ ಮಾತಾಡಿದ್ರೆ, ಸಾಕು, ಸ್ಕ್ರೀನ್ ಮೇಲೆ ಅಕ್ಷರಗಳು ಸರಸರನೆ ಮೂಡುತ್ತೆ.

ಆದ್ರೆ, ಒಂದು ವಿಷ್ಯ ಕ್ಲಿಯರ್ ಆಗಿ ಹೇಳ್ತೀನಿ: ನಾನು ಐನಾತಿ ಅನ್ನುವ ಈ ಎ.ಐ. (ಕೃತಕ ಬುದ್ಧಿಮತ್ತೆ) ಕೂಡ ಒಂದು 'ಟೂಲ್' (ಉಪಕರಣ) ಅಷ್ಟೇ. ಹೇಗೆ ಟೈಪ್‌ರೈಟರ್ ಹೋಗಿ ಕಂಪ್ಯೂಟರ್ ಬಂತೋ, ಹಾಗೆ ಈಗ ಕಂಪ್ಯೂಟರ್ ಒಳಗೇ ಒಬ್ಬ 'ಅದೃಶ್ಯ ಐನಾತಿ' (ಎಐ) ಕೂತಿದ್ದಾನೆ.

- ಟೈಪ್‌ರೈಟರ್‌ಗೆ 'ಬೆರಳಿನ ಶಕ್ತಿ' ಬೇಕಿತ್ತು.
- ಕಂಪ್ಯೂಟರ್‌ಗೆ 'ಟೈಪಿಂಗ್ ಸ್ಕಿಲ್' ಬೇಕಿತ್ತು.
- ಈ ಐನಾತಿಗೆ 'ನಮ್ಮ ಭಾವನೆ ಮತ್ತು ಉದ್ದೇಶ' ಬೇಕು.

ಥೀಸಿಸ್ ಬರೆಯುವಾಗ ನನಗೆ ಸುಲಭವಾಗಿ ಎಟುಕದ ಆ ಟೈಪಿಸ್ಟ್ ಈಗ 'ಐನಾತಿ' ರೂಪದಲ್ಲಿ ನನ್ನ ಜೊತೆಗಿದ್ದಾನೆ. 8ನೇ ಕ್ಲಾಸಿನಲ್ಲಿ ನನ್ನ ಪುಟ್ಟ ಬೆರಳಿಗೆ ಇಲ್ಲದ ಶಕ್ತಿ ಈಗ 'ಐನಾತಿ' ರೂಪದಲ್ಲಿ ಬಂದಿದೆ.

ಆದ್ರೆ, ನಾವಿಲ್ಲದೆ ಈ ಐನಾತಿ ಸುಮ್ನೆ ಒಂದು ಕ್ಯಾಲ್ಕುಲೇಟರ್ ನಾವೇ ನಂಬರ್ ಬರೆಯಲು ಕಾಯ್ತಾ ಇದ್ದ ಹಾಗೆ ಸುಮ್ನೇ ಇರುತ್ತೆ. ಅದಕ್ಕೆ ಅಕ್ಷರ ಜೋಡಿಸೋಕೆ ಬರುತ್ತೆ, ಆದ್ರೆ ವಿಷಯದ ಆಳ, ಸತ್ಯಾಸತ್ಯತೆ, ಮತ್ತು ಒಬ್ಬ ವೈದ್ಯನ ಅನುಭವ ಅದಕ್ಕಿರಲ್ಲ. ಅದೆಲ್ಲ ನನ್ನದೇ ಆಗಬೇಕು.

ಅಷ್ಟೇ ಅಲ್ಲ, ಅದು ಎಲ್ಲೆಲ್ಲಿ ಎಡವಿದೆಯೋ ಹುಡುಕಿ, ಮೂಲೆ ಮೂಲೆಯಲ್ಲಿರೋ ತಪ್ಪನ್ನ ಸರಿಪಡಿಸಿ ರಿಪೇರಿ ಮಾಡೋ ಕೆಲ್ಸನೂ ಆಮೇಲೆ ನಾನೇ ಮಾಡ್ಬೇಕಲ್ವೇ?

ಒಟ್ಟಿನಲ್ಲಿ – ವಿಷಯ ನಂದು, ಟೈಪಿಂಗ್ ಈ ಐನಾತಿದ್ದು. ಭಾವನೆ ನಂದು, ಜೋಡಣೆ ಅದರದ್ದು. ಅಷ್ಟೇ ಯಾಕೆ, ಈಗೀಗ ಈ ಐನಾತಿ ಕೇಳಿದ್ರೆ ಬಣ್ಣ ಬಣ್ಣದ ಚಿತ್ರಾನೂ ಬಿಡಿಸ್ತಾನೆ! ಬೇಕಿದ್ದರೆ ವಿಡಿಯೋ ಸೃಷ್ಟಿ ಮಾಡ್ತಾನೆ! 'ಐನಾತಿ' ಬಂದು ಜಗತ್ತೇ ಬದಲಾಯಿತು ಅಂತಿದ್ದಾರೆ! ನನಗಂತೂ ಆ ಹಳೆ ಟೈಪ್‌ರೈಟರ್ ಮಷೀನ್ ಸ್ವಲ್ಪನೂ ನೆನಪಾಗಲ್ಲ ಬಿಡಿ! ಅಷ್ಟೂ ಅಲ್ಲದೇ, ಇದರಲ್ಲಿ 'ಬ್ಯಾಕ್‌ಸ್ಪೇಸ್' ಬಟನ್ನೂ ಇದ್ದೇ ಇದೆಯಲ್ವಾ!

ಕವಿ ಕಣ

ಗದುಗಿನ ಬೀದಿಯಲ್ಲಿ

ಈ ಭಾಮಿನಿ ಸೆರಗಿನಲ್ಲಿ ಭಾರತವನು ಕಟ್ಟಿಕೊಂಡ ಕತೆ
ಕಂಬಕ್ಕೊರಗಿಕೊಂಡ ಜೀವ ದ್ವಾಪರವನ್ನು ಹಡೆಯಿತು
ಇದೇ ಬೀದಿಯಲ್ಲಿ ಗಾಂಧಾರಿ ಮಕ್ಕಳ ಕೈ ಹಿಡಿದು ಹೊರಟವು
ಕುಂತಿಯ ಕೈತುತ್ತಿಗಾಗೇ ಭೀಮನ ಕದನ ಕಹಳೆ
ವಿದುರನ ಹೆಗಲ ಮೇಲೆ ವಾಸುದೇವನ ಕೈ ಚಾಚು
ಪಾಂಚಾಲಿಯ ವರಿಸಲು ಭೂಮಿಯೇ ನೂಕು ನುಗ್ಗಲು
ಭೀಷ್ಮನ ಕಣ್ಣಂಚಿನ ನೀರು ರುಧಿರ ಕಡಲನ್ನು ನಿಲ್ಲಿಸಲಿಲ್ಲ

ಈ ಭಾಮಿನಿ ತನ್ನ ಸೆರಗಿನಲ್ಲಿ ಭಾರತವನ್ನು ಕಟ್ಟಿಕೊಂಡು ಹೊರಟಳು
ಲಲನೆ ಪಡೆದೀದ್ದೈದು ಮಂತ್ರಗಳಲ್ಲಿ ಕರ್ಣ ಉಳಿಯಲಾರ
ಬವರ ವಾದರೆ ಹರನ ವದನೆಕ್ಕೆ ಬೆವರು ಬರುವುದೂ ತಪ್ಪಲಿಲ್ಲ
ಮಾರಿಗೌತಣವಾದ ಭಾರತದಲ್ಲಿ ದ್ರೋಣ ವಿದ್ಯೆ ಅನಾಥ
ಕವಿ ವೀರನಾರಾಯನ ಲಿಪಿಕಾರ ನಾರಾಣಪ್ಪ ಮುಖಾಮುಖಿ
ಧುತ್ತನೆ ದ್ವಾಪರ ಮತ್ತೆ ಗದುಗಿನ ಬೀದಿಯಲ್ಲಿ ಮೆರವಣಿಗೆ
ನೋವು ನಲಿವು ಪ್ರಣಯ ಒಲವು ಪ್ರಳಯಗಳ ನೂಕಾಟ

ಈ ಭಾಮಿನಿ ತನ್ನ ಸೆರಗಿನಲ್ಲಿ ಭಾರತವನ್ನು ಹೊತ್ತು ತಿರುಗಿದಳು
ತಿಳಿಯ ಹೇಳಿದ್ದು ಕೃಷ್ಣ ಕತೆಯೋ ರಾಜರ ಅರಾಜಕತೆ
ಎಲ್ಲರೂ ಬೆತ್ತಲಾಗಲೇ ಬೇಕಲ್ಲ ಬಯಲ ಸೇರಲು
ವ್ಯಾಸ ಮುನೀಂದ್ರನು ಈಜಿದ ಸಮುದ್ರದಲ್ಲಿ ನಾರಾಣಪ್ಪನ ನಾವೆ
ಬೊಗಸೆಗೆ ದಕ್ಕಿದೆಲ್ಲವೂ ಕರುಣಾದ್ರ್ರ ಕಿರಣ
ಕವಿ ಕಣ್ಣೀರಾದ ನಕ್ಕ ಲೊಚಗುಟ್ಟಿದ ತತ್ತರಿಸಿಹೋದ
ಕುಂತೀ ಸೂನು ಗಾಂಧಾರಿ ಮಕ್ಕಳು ಬಾಳಲೇ ಇಲ್ಲ

ಈ ಭಾಮಿನಿ ತನ್ನ ಸೆರಗಿನಿಂದ ಅದೆಷ್ಟೋ
ತೇವಗಳನ್ನು ಒರೆಸಿದಳು

» ವಾಸುದೇವ ನಾಡಿಗ್

» ಸಿ.ಎ.ವಿಲಾಸ ನಾ ಹುದ್ದಾರ

ಗಂಗಾವತಿ ತಾಲೂಕಿನ ಹಿರೇಬೆಣಕಲ್ ಗ್ರಾಮದ ಹತ್ತಿರ ಇರುವ ಮೋರೇರ್ ಗುಡ್ಡದಲ್ಲಿ ಸುಮಾರು 2000 ವರ್ಷಗಳ ಹಿಂದಿನ (ಸಾ.ಶ.ಪೂ. 1200 ರಿಂದ ಸಾಶ.ಪೂ. 200) ಶಿಲಾ ನಿರ್ಮಿತಿಗಳು ಕಂಡುಬರುತ್ತವೆ. ಈಗ ಆ ತಾಣವು ವಿಶ್ವಪಾರಂಪರಿಕ ತಾತ್ಕಾಲಿಕ ಪಟ್ಟಿಯಲ್ಲಿದೆ.

ಈ ಗುಡ್ಡದಲ್ಲಿ ಲಭ್ಯವಿರುವ ದೊಡ್ಡ ದೊಡ್ಡ ಬಂಡೆಗಳನ್ನು ಚಪ್ಪಡಿಯಾಗಿ ಕತ್ತರಿಸಿ ಮೊದಲಿನ ಹಂತದಲ್ಲಿ ನೆಲದ ಮೇಲೆ ಪೆಟ್ಟಿಗೆ ಆಕಾರವಾಗಿ (ಆಯತಾಕಾರದಲ್ಲಿ) ಮತ್ತು ನಂತರದ ಹಂತದಲ್ಲಿ ಬಂಡೆಗಳ ಮೇಲೆ ಕೋಣೆಯ ಆಕಾರದಲ್ಲಿ ಸಮಾಧಿಗಳನ್ನು ನಿರ್ಮಿಸುತ್ತಿದ್ದರು. ಕೆಲವು ಸಮಾಧಿಗಳಲ್ಲಿ ವೃತ್ತಾಕಾರದ ಕಿಂಡಿಯೂ ಕಂಡುಬರುತ್ತದೆ. ಮೊದಲನೆ ಹಂತದಲ್ಲಿ ಶವಗಳನ್ನು ಇಟ್ಟು ಅದರ ಸುತ್ತಲೂ ಆಯತಾಕಾರದಲ್ಲಿ ಕಲ್ಲಿನ ಚಪ್ಪಡಿಗಳನ್ನು ನಿಲ್ಲಿಸಿ ಮೇಲೆ ಮತ್ತೊಂದು ಕಲ್ಲಿನ ಚಪ್ಪಡಿಯಿಂದ ಮುಚ್ಚುತ್ತಿದ್ದರು. ಶವದ ಜೊತೆಗೆ ಆಹಾರ, ಪಾನೀಯದ ಮಡಕೆಗಳು, ಚೂರಿ, ಬಳೆ, ಕಬ್ಬಿಣದ ಚಾಕು, ಆಭರಣಗಳನ್ನು ಇಡುತ್ತಿದ್ದರು. ಕೆಲವು ತಿಂಗಳುಗಳ ನಂತರ ಅಲ್ಲಿ ಉಳಿದ ಅಸ್ಥಿ, ಎಲುಬು,ಅವಶೇಷಗಳನ್ನು ಒಂದು ಗಡಿಗೆಯಲ್ಲಿ ಶೇಖರಿಸಿ ಎರಡನೇ ಹಂತದಲ್ಲಿ ಗಡಿಗೆ ಇಟ್ಟು ಅದರ ಮೇಲೆ ಶಿಲಾಕೋಣೆಗಳನ್ನು ನಿರ್ಮಿಸುತ್ತಿದ್ದರು.

ಗಂಗಾವತಿಯ ಹಿರೇಬೆಣಕಲ್ ಗುಡ್ಡವನ್ನು ಹತ್ತಲು ಪ್ರಾರಂಭಿಸಿ ಸುಮಾರು 40 ನಿಮಿಷ ಮೇಲೆ ಏರಿದ ಮೇಲೆ ಅಲ್ಲಿರುವ ದೊಡ್ಡ ಬಂಡೆಗಳ ಮೇಲೆ ವಿವಿಧ ಚಿತ್ರಗಳು ಕಂಡುಬಂದವು. ಕಾವಿ ಬಣ್ಣದಿಂದ ಬಂಡೆಗಳ ಮೇಲೆ ಸಮೂಹ ನೃತ್ಯ ಮಾಡುತ್ತಿರುವ ಮಾನವರು, ಕುದುರೆ ಮತ್ತು ಸವಾರ, ಜಿಂಕೆ ಮುಂತಾದ ಪ್ರಾಕೃತಿಕ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅಲ್ಲದೇ ಅಲ್ಲಿ ಒಂದೇ ಚಿತ್ರದಲ್ಲಿ ಚೀತಾ, ಹಸು ಮತ್ತು ಹೋರಿ ಚಿತ್ರಿಸಿದ್ದಾರೆ. ಸುಮಾರು 75 ಅಡಿ ಉದ್ದ ಇರುವ ಕಲಾಕೃತಿಯು ನಮ್ಮ ಎದುರಿಗೆ ಕಾಣುತ್ತಿರುವ ಇನ್ನೊಂದು ಗುಡ್ಡದಲ್ಲಿ ಇರುವುದಾಗಿ ತಿಳಿದು ಬಂದಿತು. ಈ ಗುಡ್ಡದಲ್ಲಿರವಂತೆಯೇ ಇನ್ನೂ ಎರಡು ಗುಡ್ಡಗಳಲ್ಲಿ ಇಂತಹ ಪುರಾತನ ಅವಶೇಷಗಳು ಇದ್ದರೂ ಅಲ್ಲಿಗೆ ಚಾರಣ ಮಾಡಲು ಕಠಿಣವೆಂದು ತಿಳಿದುಬಂದಿತು.

ಮತ್ತಷ್ಟು ಮೇಲಕ್ಕೆ ಏರುತ್ತಿದ್ದಂತೆಯೇ ಕಲ್ಲಿನಲ್ಲಿ ಮೂಡಿದ ಹಸುವಿನ ಪಾದ, ಕಲ್ಲಿನ ನಗಾರಿಗಳಿವೆ. ಆಮೇಲೆ ಸ್ವಲ್ಪ ಸಮತಟ್ಟಾದ ಪ್ರದೇಶವನ್ನು ಪ್ರವೇಶ ಮಾಡುತ್ತೇವೆ. ಅಲ್ಲಿ ಮೊದಲನೇ ಹಂತದ ಶಿಲಾ ಸಮಾಧಿಗಳು ಇವೆ. ಸುತ್ತಲೂ ಕಲ್ಲಿನ ಚಪ್ಪಡಿಗಳು ಮತ್ತು ಮೇಲೆ ಮುಚ್ಚಲೂ ಕಲ್ಲಿನ ಚಪ್ಪಡಿಗಳು ಇದ್ದವು. ಶಿಥಿಲಾವಸ್ಥೆಯಲ್ಲಿದ್ದ ಇಂತಹ ಸಮಾಧಿಗಳು ನಮಗೆ ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬಂದವು. ಮುಂದಕ್ಕೆ ಸಾಗುತ್ತಿದ್ದಂತೆಯೇ ಅಲ್ಲಲ್ಲಿ ಗುಹೆಗಳು ಕಂಡು ಬಂದವು. ಬಹುಶಃ ಅಲ್ಲಿ ಅಂದು ಜನರು ವಾಸಿಸುತ್ತಿರಬಹುದು. ಅಲ್ಲಿಯೇ ಅವರು ಬಳಸುತ್ತಿರಬಹುದಾದ ಕಲ್ಲಿನ ಸುತ್ತಿಗೆಯೂ ಕಂಡಿತು. ಕೆಲವು ಕಡೆ ತೆರೆದ ಶಿಲಾ ಸಮಾಧಿಗಳು ಇದ್ದವು.

ಹಾಗೆಯೇ ಮುಂದುವರೆದಾಗ ಒಂದು ವಿಶಿಷ್ಟ ಶಿಲಾಕೃತಿ ಕಾಣಿಸಿತು: ಅದು ಇಂದಿನ ಕಾರಿನ ತದ್ರೂಪದಂತೆಯೇ ಕಂಡು ಬರುತ್ತಿತ್ತು. ಸ್ವಲ್ಪ ಮೇಲೆ ಏರುತ್ತಿದ್ದಂತೆಯೇ ಶಿಲಾ ಕೋಣೆಳ ಸಮೂಹ ಕಂಡುಬಂದಿತು. ಆ ಶಿಲಾ ಕೋಣೆಗಳು ಸುಮಾರು 5 ರಿಂದ 13 ಅಡಿಗಳವರೆಗೆ ಎತ್ತರವಾಗಿವೆ. ನೆಲದಮೇಲೆ ಕಲ್ಲಿನ ಚಪ್ಪಡಿ ಇರಿಸಿ, ಸುತ್ತಲೂ ಕಲ್ಲಿನ ಚಪ್ಪಡಿಗಳನ್ನು ನಿಲ್ಲಿಸಿದ್ದಾರೆ. ವೃತ್ತಾಕಾರದ ಕಲ್ಲಿನ ಚಪ್ಪಡಿಯನ್ನು ಮೇಲ್ಭಾಗದಲ್ಲಿ ಇರಿಸಿ ಕೋಣೆಯನ್ನು ಮುಚ್ಚಿದ್ದಾರೆ. ಕೆಳಗಿನ ಒಂದು ಭಾಗದಲ್ಲಿ ವೃತ್ತಾಕಾರದ ರಂಧ್ರವಿದೆ.

ವೃತ್ತಾಕಾರದ ಮೇಲ್ಛಾವಣಿಗೆ ಮೋರೇರ್ ತಟ್ಟೆ ಎನ್ನುತ್ತಾರೆ. ಶಿಲಾ ಸಮಾಧಿಯ ಸುತ್ತಲೂ ಸಣ್ಣ ಕಲ್ಲುಗಳನ್ನು ಇಟ್ಟಿರುತ್ತಾರೆ. ಎಷ್ಟೋ ಇಂತಹ ಪುರಾತನ ರಚನೆಗಳು ನಾಶವಾಗಿವೆ; ಕೆಲವನ್ನು ಜನರು ನಿಧಿಯ ಆಸೆಗೆ ಒಡೆದು ಹಾಕಿದ್ದಾರೆ. ಈಗ ಸುಮಾರು 200 ಶಿಲಾ ಸಮಾಧಿಗಳು ಮಾತ್ರ ನೋಡಲು ಸಿಗುತ್ತವೆ. ಅಲ್ಲಿಯೇ ಒಂದು ಕಡೆ ಬಹು ಕೋಣೆಗಳ ಶಿಲಾಸಮಾಧಿಯೂ ಇರುತ್ತದೆ.



ಸುಮಾರು 3,000 ವರ್ಷಕ್ಕೂ ಹಿಂದಿನ ಈ ಶಿಲಾ ರಚನೆಗಳು, ಬಂಡೆಗಳ ಮೇಲಿನ ಚಿತ್ರಗಳು ಆದಿ ಮಾನವನ ಕೌಶಲಕ್ಕೆ ಸಾಕ್ಷಿಯಾಗಿವೆ.

ಆದಿ ಮಾನವನ ಕೌಶಲ!





ಶಿಲಾ ಸಮಾಧಿಗಳ ಪಕ್ಕದಲ್ಲಿಯೇ ಒಂದು ಪುಟ್ಟ ಕೆರೆ ಇರುತ್ತದೆ. ಆ ಕೆರೆಯಲ್ಲಿ ಅರಳಿದ ಕಮಲಗಳು ನಯನ ಮನೋಹರವಾಗಿದ್ದವು. ಆ ಸುಂದರ ದೃಶ್ಯ ಮತ್ತು ಸರೋವರದ ತಂಪಾದ ವಾತಾವರಣ ಎತ್ತರದ ಗುಡ್ಡವನ್ನು ಹತ್ತಿದ ಆಯಾಸವನ್ನು ಕ್ಷಣ ಮಾತ್ರದಲ್ಲಿ ಮರೆಯುವಂತೆ ಮಾಡಿತು. ಸರೋವರದ ಪಕ್ಕದಲ್ಲಿ ಮೈದಾನವಿದ್ದು, ಅಲ್ಲಿನ ಬಂಡೆಗಳ ಮೇಲೆ ಕೆಲವು ವರ್ಣ ಚಿತ್ರಗಳು ಇರುತ್ತವೆ.

ಹಿರೇ ಬೆಣಕಲ್‌ನ ಈ ರಚನೆಗಳು ಬಹಳ ಕುತೂಹಲಕಾರಿ. ಇಂತಹ ರಚನೆಗಳು ಜಗತ್ತಿನ ಬೇರೆ ಬೇರೆ ಕಡೆಗಳಲ್ಲೂ ಕಂಡುಬಂದಿವೆ. ಕೆಲವು ವರ್ಷಗಳ ಹಿಂದೆ ಇದ್ದ ನೂರಾರು ಇಂತಹ ರಚನೆಗಳನ್ನು ದುರುಳರು ನಾಶ ಮಾಡಿದ್ದಾಗಿ ತಿಳಿದುಬಂದಿದತು. ಇದೀಗ ವಿಶ್ವ ಪರಂಪರೆ ತಾಣವಾಗಿರುವ ಈ ಜಾಗವನ್ನು, ಇಲ್ಲಿನ ಅವಶೇಷಗಳನ್ನು ಇನ್ನೂ ಜತನದಿಂದ ಕಾಪಾಡಬೇಕಾಗಿದೆ.

ಬೆಟ್ಟದ ತುದಿಯಲ್ಲಿ, ದಟ್ಟ ಕಾಡಿನ ನಡುವೆ ಪುಸ್ತಕವೊಂದು ಬಿಡುಗಡೆಯಾಗಿದ್ದು ಇದೇ ಮೊದಲಿರಬಹುದು; ಆ ಪುಸ್ತಕದಲ್ಲಿರುವುದು ಚಾರಣದ ಅನುಭವಗಳು! ಪುಸ್ತಕ ಬಿಡುಗಡೆಗೆ ಬೈಂದೂರು ಕ್ಷೇತ್ರದ ಶಾಸಕರು ಸಹ ಬೆಟ್ಟ ಹತ್ತಿ ಬಂದದ್ದು ಮತ್ತೊಂದು ವಿಶೇಷ!

ಬೆಟ್ಟದ ಮೇಲೆ ಪುಸ್ತಕ ಬಿಡುಗಡೆ!

» ಪೂರ್ಣಿಮಾ ಕಮಲಶಿಲೆ

ನಮ್ಮೂರ ಮಗ್ಗುಲಲ್ಲೇ ಗುಡ್ಡದ ತುದಿಯಲ್ಲಿ ಒಬ್ಬ ಗಣಪನಿದ್ದಾನೆ. ಅಲ್ಲೊಂದು ಬತ್ತದ ನೀರ ಕೆರೆಯ ಮೇಲೆ ಚೂರೇ ಚೂರು ಮಟ್ಟಸವಾಗಿರುವ ಜಾಗ ಹುಡುಕಿ ಕೂತಿದ್ದಾನೆ. ಮೊಬೈಲ್‌ನಲ್ಲಿ ಹುಡುಕೋದಾದರೆ 'ಹೊಸಂಗಡಿ ಮೆಟ್ಕಲ್ ಗುಡ್ಡೆ ಗಣಪತಿ ದೇವಸ್ಥಾನ' ಅಂತ ಟೈಪಿಸಿದ್ರೆ ಅವನ ದರ್ಶನ ಮಾಡಬಹುದು.

ನಲವತ್ತಕ್ಕೂ ಅಧಿಕ ಮಳೆಗಾಲ ಕಂಡ ನನಗೆ ಈ ಗಣಪತಿನ ನೋಡ್ಲಿಕ್ಕೆ ಆಗ್ಲಿಲ್ವಲ್ಲ ಎಂಬ ಕೊರಗು ಅನುದಿನವೂ ಇತ್ತು.

ಆದರೆ ಅವನನ್ನು ಹೇಗೆ ಹೋಗಿ ನೋಡಬೇಕೆಂದುಕೊಂಡಿದ್ದೆನೊ ಆ ಇಷ್ಟಾರ್ಥವನ್ನು ಅವ ಪೂರೈಸಿದ್ದು ಹೀಗೆ. ಪುಸ್ತಕ ಬಿಡುಗಡೆ ಎಂಬ ನೆಪದಲ್ಲಿ, ಆ ಬೆಟ್ಟದ ತುದಿಗೆ ಚಾರಣ ಮಾಡಿ ಅವನೆಡೆಗೆ ಸಾಗಬೇಕು. ಅದೊಂದು ಸವಿ ನೆನಪಿನ ದಿನ ನನ್ನ ಪಾಲಿಗೆ ಆಗಬೇಕೆಂದು ಆ ಗಣಪ ಬರೆದಿಟ್ಟಿದ್ದ! ನಮ್ಮೂರ ಶಿಕ್ಷಕರಾದ ಶ್ರೀಧರ್ ಎಸ್ ಇವರ 'ಅಲೆಮಾರಿಯ ಅಂತರಂಗ' ಎಂಬ ಪುಸ್ತಕ ಇತ್ತೀಚೆಗೆ ಬಿಡುಗಡೆಯಾಗಿದ್ದು ಇದೇ ಬೆಟ್ಟದ ತುದಿಯಲ್ಲಿ!

ಅದನ್ನು ಲೋಕಾರ್ಪಣೆಗೊಳಿಸಿದ ಘಳಿಗೆಯ ಕಥೆ ಇದು.

ಸದಾ ವಿಭಿನ್ನವಾಗಿ ಚಿಂತಿಸುತ್ತಾ, ವಿಶಿಷ್ಠವಾಗಿ ಬರೆಯುವ ಶ್ರೀಧರ್ ಅವರು ಪ್ರಕೃತಿ ಪ್ರಿಯರು. ಇವರು ಪ್ರವಾಸ ಹೋಗುವವರೆನ್ನುವುದಕ್ಕಿಂತ ಚಾರಣಿಗರು ಎಂಬುದೇ ಇವರಿಗೆ ಅನ್ವರ್ಥ. ದೇಶದ ಉದ್ದಗಲಕ್ಕೂ ಚಾರಣ ಹೋದಾಗ ಕಂಡುಂಡ ಅನುಭವಗಳನ್ನು, ಸಣ್ಣ ಸಣ್ಣ ವಾಕ್ಯಗಳಿಂದ ಬರೆದು, ಓದುಗರು ರಸಾಸ್ವಾದನೆಯಲ್ಲಿ ಮುಳುಗೇಳುತ್ತಾ ಓದಿನ ಚಾರಣ ಮಾಡುವಂತೆ ಬರೆದ ಲೇಖನಗಳ ಗುಚ್ಛವೇ 'ಅಲೆಮಾರಿಯ ಅಂತರಂಗ'

ಈ ಕೃತಿಯನ್ನು ಕುಂದಾಪುರ ತಾಲೋಕು ಕೇಂದ್ರದಿಂದ ಪೂರ್ವಕ್ಕಿರುವ ಕೊನೆಯ ಊರು ಹೊಸಂಗಡಿ ಬಳಿಯ ಮೆಟ್ಕಲ್ ಗುಡ್ಡೆ ಗಣಪತಿ ದೇಗುಲದ ಆವರಣದಲ್ಲಿ ಅನಾವರಣಗೊಳಿಸಲಾಯಿತು.

ಮೆಟ್ಕಲ್ ಗುಡ್ಡೆ ಬೆಟ್ಟವು ಸಮುದ್ರ ಮಟ್ಟದಿಂದ ಎರಡು ಸಾವಿರ ಅಡಿಗಳಷ್ಟು ಎತ್ತರದಲ್ಲಿದೆ. ಗುಡ್ಡವೇರಲು ರಸ್ತೆ ವ್ಯವಸ್ಥೆ ಇದೆ. ವಾಹನದ ಮೂಲಕವೂ ಹೋಗಬಹುದು. ಗುಡ್ಡದ ಮೇಲೆ ಸುಮಾರು ಒಂದು ಎಕರೆಯಷ್ಟು ಮಟ್ಟಸ ಜಾಗ, ಸುತ್ತೆಲ್ಲ ಇಳಿಜಾರು ಕೆಳಗೆ ಪ್ರಪಾತ. ಅಲ್ಲೊಂದು ಗಣಪನ ಗುಡಿ; ನಗರದ ಅರಸರ ಕಾಲದ ಶಿಥಿಲಗೊಂಡ ಕಾವಲು ಬುರುಜು, ಬಂಡೆಕಲ್ಲಿನೊಳಗೊಂದು ಕೊಳ. ಅದರಲ್ಲಿ ವರ್ಷವಿಡೀ ನೀರು!

ಇಂತಹ ಶಿಖರದ ತುದಿಗೆ ಶ್ರೀಧರ್ ಎಸ್ ಅವರು ಒಂದಿಪ್ಪತ್ತು ಜನ ವಿಭಿನ್ನ ಆಸಕ್ತರನ್ನು ಆಹ್ವಾನಿಸಿ, ಅವರ 'ಅಲೆಮಾರಿಯ ಅಂತರಂಗ' ಕೃತಿಯನ್ನು ಅನಾವರಣಗೊಳಿಸಿದ್ದು ನಿಜಕ್ಕೂ ಬಹಳ ವಿಶೇಷವಾಗಿತ್ತು. ಹೊಸಂಗಡಿಯಿಂದ ಮೆಟ್ಕಲ್ ಗುಡ್ಡೆಯ ಕಾಲಿನವರೆಗೆ ನಾವು ಇಪ್ಪತ್ತು ಮಂದಿ ವಾಹನದಲ್ಲಿ ತೆರಳಿ, ಅಲ್ಲಿ ಬೆಳಗಿನ ತಿಂಡಿ ಕೊಟ್ಟೆ ಕಡುಬು, ಚಟ್ನಿ, ಸಾಂಬಾರ್ ಅನ್ನು ಕಾಡಿನೊಳಗೆ ಕುಳಿತು ತಿಂದು, ಚಹಾ,ಕಾಫಿ ಕುಡಿದು, ಈ ತಿಂಡಿ ತಿನಿಸಿನ ಪಾತ್ರೆ, ಪಗಡಿ, ಕಸಮುಸುರೆಯ ಚೀಲವನ್ನೆಲ್ಲ ವಾಹನದೊಳಗೆ ತುಂಬಿಸಿಟ್ಟು, ನಡೆದುಕೊಂಡು ಬೆಟ್ಟವೇರಲು ಅಣಿಯಾಗುವಾಗ ಸೂರ್ಯನೂ ಬೆಳಗಾಯ್ತೆಂದು ಸಾರಿದ್ದ.

ನಮ್ಮ ಮುಂದೆ ಪಲ್ಲಕ್ಕಿಯಲ್ಲಿ ಮದುವಣಗಿತ್ತಿ ಹೊರಟಿದ್ದಳು. ನಾವೆಲ್ಲ ದಿಬ್ಬಣಿಗರಾಗಿ ಚಾರಣ ಹೊರಟೆವು. ಬೆತ್ತದ ಬುಟ್ಟಿಗೆ, ತೆಂಗಿನ ಓಲಿಯ ಗರಿಯನ್ನಿಳಿಬಿಟ್ಟು, ಮಾವಿನೆಲೆಯ ತೋರಣ ಕಟ್ಟಿ, ಸೇವಂತಿಯಿಂದ ಸಿಂಗರಿಸಿ, ಆ ಬುಟ್ಟಿಯ ಹಿಡಿಯೊಳಗೆ ಉದ್ದನೆಯ ಮರದ ಒನಕೆಯಂತಹ ಕಾವು (ಕೋಲು) ಸುರಿದು ಅದಕ್ಕೂ ಹಸಿರು ಸೀರೆ ಸುತ್ತಿ ಅಲಂಕರಿಸಿದ್ದರು. ಇದರೊಳಗೆ ಅನಾವರಣಗೊಳ್ಳುವ ಪುಸ್ತಕವನ್ನು ಕೆಸುವಿನ ಎಲೆಯಲ್ಲಿ ಸುತ್ತಿ ಇಡಲಾಗಿತ್ತು. ಈ ಮದುವಣಗಿತ್ತಿ ಪುಸ್ತಕವನ್ನು ಆ ಬೆತ್ತದ ಬುಟ್ಟಿಯ ಪಲ್ಲಕ್ಕಿಯಲ್ಲಿ ಮೆಟ್ಕಲ್ ಗುಡ್ಡೆಯ ತುದಿಗೆ ಹೊತ್ತು ಸಾಗಿದವರು ಮಾಸ್ಟರ್ ಶುಭನ್ ಅಕ್ಷರ ಮತ್ತು ಬೇಬಿ ಅದ್ವಿಕಾ.

ಪಶ್ಚಿಮ ಘಟ್ಟ ಉಳಿಸಿ ಎಂದು ಹೋರಾಡುತ್ತಲೇ ಇರುವ ದಿನೇಶ್ ಹೊಳ್ಳರು, ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನೀಲಾವರ ಸುರೇಂದ್ರ ಅಡಿಗರು, ಮತ್ತೊಬ್ಬ ಚಾರಣಿಗ ರಾಜೇಶ್ ನಾಯಕ್ ಹಾಗೂ ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಗುರುರಾಜ್ ಗಂಟಿಹೊಳೆ ದಂಪತಿಗಳು ಈ ಬೆಟ್ಟ ಏರಲು ಆ ಬೆಳಗ್ಗೆ ಬಂದಿದ್ದರೆಂಬುದು ವಿಶೇಷ.

ನಡೆದು ಗುಡ್ಡೆಯ ತುದಿ ತಲುಪಿ ಅಲ್ಲೊಂದು ಕಾಡ ಸುರಗಿ ಗಿಡವನ್ನು ನೆಡುವ ಮೂಲಕ ಪುಸ್ತಕ ಅನಾವರಣದ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಈಗ ಗುಡ್ಡದ ತುದಿಯ ಸಣ್ಣ ಜಾಗದಲ್ಲಿ ನಾವೆಲ್ಲ ನಿಂತೆವು. ಪಲ್ಲಕ್ಕಿಯೊಳಗಿನ ಕೆಸವಿನೆಲೆಯ ಕಟ್ಟಿಂದ ಅಲೆಮಾರಿಯ ಅಂತರಂಗವನ್ನು ದಿನೇಶ್ ಹೊಳ್ಳರು ಲೋಕಾರ್ಪಣೆ ಮಾಡಿ, ಇಂದು ಶ್ರೀಧರ ಎಸ್ ಅವರು ಪ್ರಕೃತಿಯ ಋಣ ತೀರಿಸಿದಂತಾಯ್ತೆಂದು ನುಡಿದರು.

ಕೆಸುವಿನೆಲೆ ಅಂದರೆ ಅಂಟಿಯೂ ಅಂಟದ ಗುಣವುಳ್ಳ ಪತ್ರೆ. ಸಾಹಿತ್ಯ, ಚಾರಣ, ಶಿಕ್ಷಕ, ಸಂಸಾರ ಇವನ್ನೆಲ್ಲ ಒಂದೇ ಹದದಲ್ಲಿ ಸರಿದೂಗಿಸಿಕೊಂಡು ಹೋಗುವುದೆಂದರೆ ಹೀಗೆ ಅಂಟಿಯೂ ಅಂಟದಂತಿದ್ದಾಗ ಮಾತ್ರ ಸಾಧ್ಯ ಎಂದು ದಿನೇಶ್ ಹೊಳ್ಳರು ಹೇಳಿದ ಮಾತು ಚಿಂತನೆಗೆ ಹಚ್ಚಿತು. ಕಸಾಪ ಜಿಲ್ಲಾಧ್ಯಕ್ಷರು ಕೃತಿಕಾರರನ್ನು ಅಭಿನಂದಿಸಿ ಗೌರವ ಸಮರ್ಪಿಸಿದರೆ, ಶಾಸಕರು ಈ ವಿಭಿನ್ನ ರೀತಿಯ ಅನೌಪಚಾರಿಕ ಕಾರ್ಯಕ್ರಮದ ಕುರಿತು ಪ್ರಶಂಶಿಸಿ ಅಭಿನಂದಿಸಿದರು.

ಅನಾವರಣದ ಆ ಹೊತ್ತು ಗಿರಿಯ ನೆತ್ತಿಯ ತಂಗಾಳಿ, ಎಳೆಬಿಸಿಲ ಸಣ್ಣ ಬಿಸಿ, ಮತ್ತು ನಮ್ಮೆಲ್ಲರ ಮೌನ ಆಸ್ವಾದನೆಯೇ ಮಹಾ ಸಂಭ್ರಮವಾಗಿ ಮಾರ್ಪಟ್ಟಿತು. ಮಾತು ಮೈಲಿಗೆಯಾಗಿತ್ತು ಮೌನ ಪೂಜೆಯಂತಾಯ್ತು.

ಅಲೆಮಾರಿಯ ಅಂತರಂಗ ಹೀಗೆ ಚಾರಣದ ಮೂಲಕ ಲೋಕಾರ್ಪಣೆಯಾದ ಬೆನ್ನಿಗೆ ನಾವೆಲ್ಲ ಮೆಟ್ಕಲ್ ಗುಡ್ಡೆಯಿಂದಿಳಿದೆವು; ಆಗ ಮತ್ತೊಂದು ಚಾರಣ! ಚಾರಣಿಗರೊಬ್ಬರ ಅನುಭವದ ಪುಸ್ತಕವೊಂದು ಚಾರಣದೊಂದಿಗೆ, ಬೆಟ್ಟದ ತುದಿಯಲ್ಲಿ, ಮರಗಿಡಗಳ ನಡುವೆ ಬಿಡುಗಡೆಯಾಗಿದ್ದು ಬಹು ವಿಶೇಷ; ಬಹುಷಃ ಕನ್ನಡದ ಪುಸ್ತಕವೊಂದು ಈ ರೀತಿ ಬೆಟ್ಟದ ತುದಿಯಲ್ಲಿ ಲೋಕಾರ್ಪಣೆಗೊಂಡದ್ದು ಇದೇ ಮೊದಲು!

ಡಿಜಿಟಲ್ ಉಪವಾಸ ಎಂದರೇನು? ಅದನ್ನು ಮಾಡುವುದು ಹೇಗೆ?

ಕೆ.ಕೆ.ವಿ. (ಇಮೇಲ್ ಮೂಲಕ)

- **ಸಂಪಾದಕರೇ, ನಾನು ಕಳೆದ ಏಳೆಂಟು ವರ್ಷಗಳಿಂದ ಫೇಸ್‌ಬುಕ್‌ನಲ್ಲಿ ಕ್ರಿಯಾಶೀಲನಾಗಿದ್ದೇನೆ. ಇತ್ತೀಚಿನ ದಿನಗಳಲ್ಲಿ ಅದು ಬಹಳ ಟಾಕ್ಸಿಕ್ ಅಂತ ಅನಿಸಲಾರಂಭಿಸಿದೆ. ಆದರೆ ನಾನು ಅಲ್ಲಿಂದ ಹೊರಬರಲಾಗದಷ್ಟು ಅಡಿಕ್ಟ್ ಆಗಿದ್ದೇನೆ ಎನಿಸುತ್ತಿದೆ. ಈ ವಿಷಯದಲ್ಲಿ ನನಗೆ ನಿಮ್ಮ ಸಲಹೆ ಬೇಕು.**

– ಕೆ.ಕೆ.ವಿ. ಅವರೇ, ಅಬ್ಬಾ... ಎಂಟು ವರ್ಷಗಳ ಫೇಸ್‌ಬುಕ್ ವಾಸ ಅಂದ್ರೆ ಸಾಮಾನ್ಯನಾ? ನೀವು ವನವಾಸಕ್ಕೆ ಹೋದ ರಾಮನೂ ಅಲ್ಲ, ಅಜ್ಞಾತವಾಸಕ್ಕೆ ಹೋದ ಪಾಂಡವರೂ ಅಲ್ಲ. ನೀವು ಮಾರ್ಕ್ ಜುಕರ್‌ಬರ್ಗ್‌ನ 'ಡಿಜಿಟಲ್ ಜೈಲಿನಲ್ಲಿ' ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಕೈದಿ!

ಫೇಸ್‌ಬುಕ್ ಈಗ ಹೇಗಾಗಿದೆ ಅಂದ್ರೆ, 'ಒಳಗೆ ಹೋದವರಿಗೆ ಹೊರಬರಲು ದಾರಿಯಿಲ್ಲ, ಹೊರಗಿದ್ದವರಿಗೆ ಅಲ್ಲಿ ಏನ್ ನಡೀತಿದೆ ಅನ್ನೋ ಕುತೂಹಲ ಸಾಯಲ್ಲ.' ಈ 'ಟಾಕ್ಸಿಕ್' ಲೋಕದಿಂದ ನಿಮ್ಮನ್ನು ಬಿಡಿಸಲು ಕೆಲವು ಚಿಕಿತ್ಸೆಗಳಿವೆ. ಮೊದಲನೆಯದಾಗಿ, 'ಅನ್-ಫ್ರೆಂಡ್' ಸರ್ಜರಿ ಮಾಡಿ! ನಿಮ್ಮ ಫ್ರೆಂಡ್ ಲಿಸ್ಟ್‌ನಲ್ಲಿ ಅರ್ಧ ಜನ ಯಾರು ಅಂತ ನಿಮಗೇ ಗೊತ್ತಿರಲ್ಲ. ಯಾರೋ ಹಾಕಿರುವ ಅಡುಗೆ ಫೋಟೋಗೆ, ಎಲ್ಲಿಯೋ ಹೋದ ಟ್ರಿಪ್ ಫೋಟೋಗೆ ಸೂಪರ್ ಅಂತ ಕಾಮೆಂಟ್ ಹಾಕೋದ್ರಲ್ಲೇ ಅರ್ಧ ಜೀವನ ಮುಗಿದು ಹೋಗ್ತಿದೆ. ಇವತ್ತೇ ಕುಳಿತುಕೊಂಡು, ಯಾರ ಮುಖ ನೋಡಿದ್ರೆ ನಿಮಗೆ ಕಿರಿಕಿರಿ ಆಗುತ್ತೋ ಅಂಥವರನ್ನೆಲ್ಲ ಅನ್‌ಫ್ರೆಂಡ್ ಅಥವಾ ಅನ್‌ಫಾಲೋ ಮಾಡಿಬಿಡಿ. ಲಿಸ್ಟ್ 5000ದಿಂದ 50 ಕ್ಕೆ ಇಳಿಯಲಿ, ಆಗ ಫೇಸ್‌ಬುಕ್ ಸ್ಮಶಾನದ ತರಹ ಶಾಂತವಾಗಿರುತ್ತದೆ!

ಎರಡನೆಯದಾಗಿ, 'ಲೋ ಬಿಪಿ' ಚಿಕಿತ್ಸೆ (Notification Mute). ಆ ಕೆಂಪು ಬಣ್ಣದ ನೋಟಿಫಿಕೇಶನ್ ಇದೆಯಲ್ಲ, ಅದು ಒಂಥರಾ 'ಜೇನುಗೂಡಿಗೆ ಕಲ್ಲು ಹೊಡೆದ ಹಾಗೆ'. ಯಾರೋ ಲೈಕ್ ಮಾಡಿದರೂ, ಯಾರೋ ಬೈದರು ಅಂತ ಪದೇ ಪದೆ ಚೆಕ್ ಮಾಡೋದನ್ನು ಬಿಟ್ಟುಬಿಡಿ. ಆ ನೋಟಿಫಿಕೇಶನ್ ಸೌಂಡ್ ಅನ್ನೇ ಮ್ಯೂಟ್ ಮಾಡಿ. ಫೋನ್ ಎಲ್ಲೋ ಬಿದ್ದಿರಲಿ, ನೀವು ನೆಮ್ಮದಿಯಾಗಿರಿ. ಮೂರನೆಯದಾಗಿ, ನಿಮ್ಮ ಪ್ರೊಫೈಲ್ ಫೋಟೋ ಬದಲಿಸಬೇಡಿ! ನೀವು ಹೊಸ ಫೋಟೋ ಹಾಕಿದರೆ ತಾನೇ ಯಾರಾದ್ರೂ ಲೈಕ್ ಮಾಡೋದು? ನೀವೂ ಲೈಕ್ ಎಣಿಸೋದು? ಒಂದು ಕೆಲಸ ಮಾಡಿ, ಯಾವುದಾದರೂ ಹಳೆ ಕಾಲದ ಬಾಬಾನ ಫೋಟೋ ಅಥವಾ 'ಕಮಿಂಗ್ ಸೂನ್' ಅನ್ನೋ ಪೋಸ್ಟರ್ ಹಾಕಿ ಸುಮ್ಮನಾಗಿಬಿಡಿ. ಲೈಕ್ಸ್ ಬರಲ್ಲ, ನಿಮಗೆ ಕ್ರೇಜ್ ಇರಲ್ಲ!

ನಾಲ್ಕನೆಯದು, 'ಡಿಜಿಟಲ್ ಉಪವಾಸ'. ವಾರದಲ್ಲಿ ಒಂದು ದಿನ, ಅಂದ್ರೆ ಭಾನುವಾರ 'ಫೇಸ್‌ಬುಕ್ ಮುಕ್ತಿ ದಿನ' ಅಂತ ಘೋಷಿಸಿ. ಅಂದು ಫೋನ್‌ನಲ್ಲಿ ಫೇಸ್‌ಬುಕ್ ಆ್ಯಪ್ ಅನ್ನೇ ಅನ್-ಇನ್ಸ್ಟಾಲ್ ಮಾಡಿಬಿಡಿ. ಅವತ್ತು ನಿಮ್ಮ ಆ ಪುಸ್ತಕಗಳನ್ನು ಹಾಳೆ ಮಡಚದ ಹಾಗೆ ಓದಿ. ನಂಬಿ, ಒಂದು ದಿನ ಫೇಸ್‌ಬುಕ್ ಇಲ್ಲದಿದ್ರೂ ಪ್ರಪಂಚ ಮುಳುಗಿ ಹೋಗಲ್ಲ! ಐದನೆಯದಾಗಿ, 'ಟಾಕ್ಸಿಕ್' ಜನರಿಗೆ ಪ್ರೀತಿಯ ಪ್ರಸಾದ ಕೊಡಿ. ಯಾರಾದರೂ ರಾಜಕೀಯ ಅಥವಾ ಧರ್ಮದ ಬಗ್ಗೆ ಕಿತ್ತಾಡುತ್ತಿದ್ದರೆ, ಅಲ್ಲಿ ಹೋಗಿ 'ಓಹೋ... ತುಂಬಾ ಚೆನ್ನಾಗಿ ಹೇಳಿದ್ರಿ, ಇವತ್ತಿನ ಅಡುಗೆ ಏನ್ ಮಾಡಿದ್ರಿ?' ಅಂತ ಸಂಬಂಧವೇ ಇರದ ಪ್ರಶ್ನೆ ಕೇಳಿ. ಅವರು ಕನ್‌ಫ್ಯೂಸ್ ಆಗಿ ಜಗಳ ನಿಲ್ಲಿಸ್ತಾರೆ, ನಿಮಗೂ ಎಂಟರ್‌ಟೈನ್‌ಮೆಂಟ್ ಸಿಗುತ್ತೆ!

ಕೊನೆಯದಾಗಿ, ಫೇಸ್‌ಬುಕ್‌ನಲ್ಲಿ 'ಸ್ಟೇಟಸ್' ಅಪ್‌ಡೇಟ್ ಮಾಡೋದ್ರಲ್ಲಿ ನಾವು ಬ್ಯುಸಿಯಾಗಿದ್ದೀವಿ, ಆದ್ರೆ ನಮ್ಮ ಲೈಫ್ 'ಸ್ಟೇಟಸ್' ಏನಾಗಿದೆ ಅಂತ ನಮಗೇ ಗೊತ್ತಿಲ್ಲ. ಎಂಟು ವರ್ಷದ ಫೇಸ್‌ಬುಕ್ ನಂಟನ್ನು ಬಿಟ್ಟರೆ ನೀವು 'ಡಿಜಿಟಲ್ ಸನ್ಯಾಸಿ' ಆಗೋದು ಗ್ಯಾರಂಟಿ! ಫೇಸ್‌ಬುಕ್ ಆ್ಯಪ್ ಅನ್ನು ಫೋನ್‌ನ ಮೊದಲ ಪೇಜ್‌ನಿಂದ ಕಿತ್ತು ಕೊನೆಯ ಪೇಜ್‌ಗೆ, ಯಾವುದೋ ಒಂದು ಕಷ್ಟದ ಫೋಲ್ಡರ್ ಒಳಗೆ ಹಾಕಿಡಿ. ಅದು ಕಣ್ಣಿಗೆ ಕಾಣದಿದ್ರೆ, ಮನಸ್ಸಿಗೆ ಬರಲ್ಲ. ಇವತ್ತೇ ಕನಿಷ್ಠ ಹತ್ತು ಜನ ಟಾಕ್ಸಿಕ್ ವ್ಯಕ್ತಿಗಳನ್ನ ಬ್ಲಾಕ್ ಮಾಡಿ ಒಂದು 'ವಿಜಯೋತ್ಸವ' ಆಚರಿಸಿ. ಅಂದ ಹಾಗೆ, ಇದನ್ನೆಲ್ಲ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಬೇಡಿ ಮತ್ತೆ!



ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಸಿ.ಪಿ.ಶೇಷಾದ್ರಿ, (ಇಮೇಲ್ ಮೂಲಕ)

- **ಭಟ್ರೇ, ಕಳೆದ ವಾರ ನಾನು ಆತ್ಮೀಯ ಸ್ನೇಹಿತನೊಬ್ಬನನ್ನು ಸಂದೇಹಿಸಿ, ಅವನ ಜತೆ ಜಗಳ ಮಾಡಿಬಿಟ್ಟೆ. ಈಗ ನಾನು ಮಾಡಿದ್ದು ಸರಿ ಅಲ್ಲ ಎಂದು ಅನಿಸುತ್ತಿದೆ. ನಮ್ಮ ಇಪ್ಪತ್ತೊಂದು ವರ್ಷಗಳ ಸ್ನೇಹಕ್ಕೆ ನಾನೇ ಮುಳುವಾದೆ ಎಂದೆನಿಸುತ್ತಿದೆ. ಆದರೆ ಅವನ ಬಳಿ ಹೋಗಿ ಕ್ಷಮೆಯಾಚಿಸಲು ಮನಸ್ಸಿಲ್ಲ. ಕಾರಣ ಆ ರೀತಿ ನಾನು ಭಾವಿಸಲು ಅವನ ನಡೆವಳಿಕೆಯೂ ಕಾರಣವಾಗಿತ್ತು. ನಮ್ಮ ಸಂಬಂಧವನ್ನು ಸುಧಾರಿಸಿಕೊಳ್ಳಲು ಮಾರ್ಗಗಳಿದ್ದರೆ ಸೂಚಿಸಿ.**

– ಶೇಷಾದ್ರಿ ಅವರೇ, ಇಪ್ಪತ್ತೊಂದು ವರ್ಷಗಳ ಸ್ನೇಹ ಎನ್ನುವುದು ಕೇವಲ ಕಾಲವಲ್ಲ, ಅದೊಂದು ದೊಡ್ಡ ಭಾವನಾತ್ಮಕ ಹೂಡಿಕೆ. ಇಷ್ಟು ಸುದೀರ್ಘ ಸಂಬಂಧದಲ್ಲಿ ಇಂಥ ಏರಿಳಿತಗಳು ಸಹಜ. ನಿಮ್ಮ ಪರಿಸ್ಥಿತಿಯನ್ನು ಗಮನಿಸಿದಾಗ, ನಿಮಗೆ ಪಶ್ಚಾತ್ತಾಪವೂ ಇದೆ ಮತ್ತು ಅದೇ ಸಮಯದಲ್ಲಿ ನಿಮ್ಮ ಆತ್ಮಗೌರವ ಹಾಗೂ ಅವನ ತಪ್ಪುಗಳ ನೆನಪು ನಿಮ್ಮನ್ನು ತಡೆಯುತ್ತಿದೆ. ಈ ಸಂಬಂಧವನ್ನು ಸುಧಾರಿಸಿಕೊಳ್ಳಲು ಕೆಲವು ಮಾರ್ಗಗಳಿವೆ.

ಯಾವುದೇ ಜಗಳದಲ್ಲಿ ಒಬ್ಬರೇ ನೂರಕ್ಕೆ ನೂರು ತಪ್ಪಿತಸ್ಥರಿರುವುದಿಲ್ಲ. ಅವನ ನಡೆವಳಿಕೆಯಿಂದ ನೀವು ಸಂದೇಹಪಟ್ಟಿರಬಹುದು, ಆದರೆ ಅದನ್ನು ವ್ಯಕ್ತಪಡಿಸಿದ ರೀತಿ ತಪ್ಪಾಗಿರಬಹುದು. 'ಯಾರು ಮೊದಲು ಕ್ಷಮೆ ಕೇಳಬೇಕು?' ಎನ್ನುವುದಕ್ಕಿಂತ 'ನಮಗೆ ಈ ಸ್ನೇಹ ಮುಖ್ಯವೇ?' ಎಂದು ಯೋಚಿಸಿ. ಸ್ನೇಹ ದೊಡ್ಡದಾದಾಗ ಅಹಂಕಾರ ಸಣ್ಣದಾಗಬೇಕು. 'ನನ್ನನ್ನು ಕ್ಷಮಿಸು' ಎಂದು ಹೇಳಲು ಮನಸ್ಸಿಲ್ಲದಿದ್ದರೆ, ಕನಿಷ್ಠ ಪಕ್ಷ ಸಂವಾದವನ್ನು ಆರಂಭಿಸಿ. 'ಕಳೆದ ವಾರ ನಡೆದ ಘಟನೆ ಬಗ್ಗೆ ನನಗೆ ವಿಷಾದವಿದೆ, ನಾವು ಕೂತು ಮಾತನಾಡಬಹುದೇ?' ಎಂದು ಕೇಳಿ. ಇದು ನಿಮ್ಮನ್ನು ಸಣ್ಣವರನ್ನಾಗಿ ಮಾಡುವುದಿಲ್ಲ, ಬದಲಾಗಿ ನಿಮ್ಮ ಬೌದ್ಧಿಕ ಪ್ರಬುದ್ಧತೆಯನ್ನು ತೋರಿಸುತ್ತದೆ.

ಸ್ನೇಹಿತನನ್ನು ಭೇಟಿಯಾದಾಗ, 'ನೀನು ಹಾಗೆ ಮಾಡಿದ್ದಕ್ಕೆ ನಾನು ಹೀಗೆ ಮಾಡಿದೆ' ಎಂದು ಆರೋಪ ಮಾಡುವ ಬದಲು, 'ನೀನು ಆ ರೀತಿ ನಡೆದುಕೊಂಡಾಗ ನನಗೆ ತುಂಬಾ ನೋವಾಯಿತು ಮತ್ತು ಸಂದೇಹ ಮೂಡಿತು, ಅದಕ್ಕೆ ನಾನು ಹಾಗೆ ಪ್ರತಿಕ್ರಿಯಿಸಿದೆ' ಎಂದು ನಿಮ್ಮ ಮನಸ್ಥಿತಿಯನ್ನು ವಿವರಿಸಿ. ಕಳೆದ ವಾರದ ಒಂದು ಕಹಿ ಘಟನೆಗಿಂತ 21 ವರ್ಷಗಳ ಸಿಹಿ ನೆನಪುಗಳು ಶಕ್ತಿಯುತವಾಗಿರುತ್ತವೆ. ಹಳೆಯ ಯಾವುದಾದರೂ ತಮಾಷೆಯ ಪ್ರಸಂಗ ಅಥವಾ ನೀವು ಜತೆಯಾಗಿ ಕಳೆದ ಕಷ್ಟದ ದಿನಗಳನ್ನು ನೆನಪಿಸಿ. 'ನಮ್ಮಿಬ್ಬರ ಇಷ್ಟು ವರ್ಷದ ಬಾಂಧವ್ಯ ಒಂದು ಸಣ್ಣ ತಪ್ಪು ತಿಳಿವಳಿಕೆಗೆ ಬಲಿಯಾಗುವುದು ಬೇಡ' ಎಂದು ಹೇಳಿ.

ನೀವು ಮಾತನಾಡಲು ಹೋದ ತಕ್ಷಣ ಅವನು ಸಹಜವಾಗಿ ವರ್ತಿಸದೇ ಇರಬಹುದು. ಅವನಿಗೂ ನೋವಾಗಿರಬಹುದು. ಅವನಿಗೆ ತನ್ನ ತಪ್ಪಿನ ಅರಿವಾಗಲು ಸ್ವಲ್ಪ ಸಮಯ ಕೊಡಿ. ಸಂಬಂಧಗಳನ್ನು ಸರಿಪಡಿಸಲು ತಾಳ್ಮೆ ಬಹಳ ಮುಖ್ಯ. ನಿಮ್ಮಿಬ್ಬರ ನಡುವಿನ ವಿಷಯವನ್ನು ನೀವಿಬ್ಬರೇ ಬಗೆಹರಿಸಿಕೊಳ್ಳಿ. ಬೇರೆಯವರನ್ನು ಈ ಜಗಳಕ್ಕೆ ಎಳೆತಂದರೆ ವಿಷಯ ಮತ್ತಷ್ಟು ಸಂಕೀರ್ಣವಾಗಬಹುದು.

ಸ್ನೇಹದಲ್ಲಿ ಸೋಲುವುದು ಎಂದರೆ ಗೆದ್ದಂತೆ. 21 ವರ್ಷಗಳ ಕಾಲ ನಿಮ್ಮ ಜತೆಗಿದ್ದ ಸ್ನೇಹಿತನನ್ನು ಕಳೆದುಕೊಳ್ಳುವುದು, ನಿಮ್ಮ ಜೀವನದ ಒಂದು ಭಾಗವನ್ನೇ ಕಳೆದುಕೊಂಡಂತೆ. ಅವನ ನಡೆವಳಿಕೆ ಬಗ್ಗೆ ನಿಮಗೆ ಅಸಮಾಧಾನವಿದ್ದರೂ, ಅದನ್ನು ಸ್ನೇಹದಿಂದಲೇ ತಿದ್ದಲು ಪ್ರಯತ್ನಿಸಿ. ಇವತ್ತೇ ಅವನಿಗೆ ಒಂದು ಮೆಸೇಜ್ ಮಾಡಿ ನೋಡಿ, 'ನಮ್ಮ ಸ್ನೇಹ ಇಷ್ಟಕ್ಕೇ ಮುಗಿಯುವಂಥದ್ದಲ್ಲ, ಸಿಗೋಣವಾ?' ಎಂದು ಕೇಳಿ. ಖಂಡಿತವಾಗಿಯೂ ಪರಿಸ್ಥಿತಿ ತಿಳಿಯಾಗುತ್ತದೆ.

ಭಾರ್ಗವ, (ಇಮೇಲ್ ಮೂಲಕ)

- **ಸಂಪಾದಕರೇ, ಕಳೆದ ಒಂದು ತಿಂಗಳಿನಿಂದ ನನ್ನ ಪತ್ನಿ ಒಂದು ನಾಯಿಮರಿಯನ್ನು ಮನೆಗೆ ತಂದಿದ್ದಾಳೆ. ಅದಕ್ಕೆ ನನ್ನ ವಿರೋಧವಿಲ್ಲ. ಆದರೆ ಒಂದು ವಾರದಿಂದ ನಮ್ಮ ಹಾಸಿಗೆಯಲ್ಲಿ ಮಲಗಿಸಿಕೊಳ್ಳುತ್ತಿದ್ದಾಳೆ. ಈ ಕಾರಣದಿಂದ ನಮ್ಮಿಬ್ಬರ ಮಧ್ಯೆ ಜಗಳವಾಗುತ್ತಿದೆ. 'ನೀವು ಬೇಕಾದರೆ ಬೇರೆ ಕಡೆಗೆ ಹೋಗಿ, ನಾನು ಮಾತ್ರ ನಾಯಿಮರಿಯನ್ನು ಬಿಟ್ಟಿರಲಾರೆ' ಅಂತ ಹೇಳುತ್ತಿದ್ದಾಳೆ. ಈ ಹೊಸ ತಲೆನೋವಿಗೆ ಪರಿಹಾರವೇನು?**

– ಭಾರ್ಗವ ಅವರೇ, ಅಯ್ಯೋ ಶಿವನೇ... ನಿಮ್ಮ ಪರಿಸ್ಥಿತಿ ನೋಡಿದರೆ 'ಮನೆಯಲ್ಲಿ ನಾಯಿಗೆ ಬೆಲೆ, ಯಜಮಾನನಿಗೆ ಚಾಪೆ ಮೇಲೆ' ಅಂದ ಹಾಗಿದೆಯಲ್ಲ! ನಿಮ್ಮ ಪರಿಸ್ಥಿತಿ ನೋಡಿದರೆ ಸದ್ಯಕ್ಕೆ ನಿಮ್ಮ ಮನೆಯಲ್ಲಿ ನಿಮ್ಮ ಸ್ಥಾನಮಾನ 'ಪ್ರಧಾನ ಮಂತ್ರಿ'ಯಿಂದ 'ವಿರೋಧ ಪಕ್ಷದ ನಾಯಕ'ನ ಮಟ್ಟಕ್ಕೆ ಇಳಿದಂತಿದೆ! ಹೆಂಡತಿಯ ಪ್ರೀತಿಯಲ್ಲಿ ನಿಮಗೆ ಈಗ ನಾಯಿಮರಿಯೇ ಪ್ರತಿಸ್ಪರ್ಧಿ.

ಮೊದಲನೆಯದಾಗಿ ರಿವರ್ಸ್ ಸೈಕಾಲಜಿ ಪ್ರಯೋಗಿಸಿ. 'ನಾಯಿ ಹಾಸಿಗೆ ಮೇಲೆ ಮಲಗುವುದು ನನಗಿಷ್ಟವಿಲ್ಲ' ಎನ್ನುವ ಬದಲು, 'ನಾಯಿಮರಿ ಪಕ್ಕದಲ್ಲಿದ್ದರೆ ನನಗೆ ಸರಿಯಾಗಿ ನಿದ್ದೆ ಬರಲ್ಲ, ನಾನು ಬದಲಿ ಹಾಸಿಗೆ ಮಾಡಿಕೊಳ್ಳುತ್ತೇನೆ' ಎಂದು ಹೇಳಿ ಸೋಫಾ ಮೇಲೆ ಮಲಗಿ. ಒಂದೆರಡು ದಿನ ನಿಮ್ಮ ಮುಖ ನೋಡದಿದ್ದರೆ ಅವರೇ ಸುಧಾರಿಸಿಕೊಳ್ಳಬಹುದು. ನಾಯಿಮರಿಗೆಂದೇ ಒಂದು ಐಷಾರಾಮಿ 'ಡಾಗ್ ಬೆಡ್' ತಂದುಕೊಡಿ. 'ನೋಡು, ನಮ್ಮ 'ರಾಜ'ನಿಗೆ ಅರಮನೆಯಂಥ ಬೆಡ್ ತಂದಿದ್ದೇನೆ' ಎಂದು ಬಿಲ್ಡಪ್ ಕೊಟ್ಟು ಅದನ್ನು ಕೆಳಗೆ ಮಲಗಿಸುವ ಅಭ್ಯಾಸ ಮಾಡಿಸಿ. ನೀವು ಆ ನಾಯಿಮರಿಯನ್ನು ಅತಿಯಾಗಿ ಪ್ರೀತಿಸಲು ಶುರು ಮಾಡಿ. ಎಷ್ಟು ಅಂದರೆ, ಹೆಂಡತಿಗಿಂತ ನೀವೇ ಅದರ ಜತೆ ಜಾಸ್ತಿ ಕಾಲ ಕಳೆಯಿರಿ. ಆಗ ಪತ್ನಿಗೆ 'ನನ್ನ ಗಂಡ ನನಗಿಂತ ನಾಯಿಯನ್ನೇ ಹೆಚ್ಚು ಪ್ರೀತಿಸುತ್ತಿದ್ದಾನೆ' ಎಂದು ಹೊಟ್ಟೆಕಿಚ್ಚು ಶುರುವಾಗಿ, ತಾನಾಗಿಯೇ ಅದನ್ನು ನಿಮ್ಮಿಂದ (ಮತ್ತು ಹಾಸಿಗೆಯಿಂದ) ದೂರ ಇಡಬಹುದು!

ರವಿ, ಶಿವಮೊಗ್ಗ

- **ಸಂಪಾದಕರೇ, ನಾನು ಪುಸ್ತಕಪ್ರೇಮಿ. ನಾನು ಪ್ರತಿ ತಿಂಗಳು ಮೂರ್ನಾಲ್ಕು ಪುಸ್ತಕಗಳನ್ನು ಖರೀದಿಸಿ, ಓದುತ್ತೇನೆ. ನನ್ನ ಸಂಗ್ರಹದಲ್ಲಿರುವ ಕೆಲವು ಪುಸ್ತಕಗಳನ್ನು ನನ್ನ ಸ್ನೇಹಿತ ತೆಗೆದುಕೊಂಡು ಹೋಗುತ್ತಾನೆ. ಆದರೆ ಆತ ಹೊಸ ಪುಸ್ತಕಗಳನ್ನು ಖರೀದಿಸುವುದಿಲ್ಲ. ನನ್ನ ಸಂಗ್ರಹದಲ್ಲಿರುವ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಾನೆ. ಇದಕ್ಕೆ ಬೇಸರವಿಲ್ಲ. ಆದರೆ ಸಮಸ್ಯೆ ಏನೆಂದರೆ, ಆತ ಪುಸ್ತಕಗಳನ್ನು ಕೊಳೆ ಮಾಡುತ್ತಾನೆ, ಹಾಳೆಗಳನ್ನು ಮಡಚುತ್ತಾನೆ. ಕೆಲವೊಮ್ಮೆ ಪುಸ್ತಕಗಳನ್ನು ವಾಪಸ್ ಮಾಡುವುದಿಲ್ಲ. ಈಗ ಅವನಿಂದ ಪುಸ್ತಕಗಳನ್ನು ಕದ್ದು ಮುಚ್ಚಿ ಅಥವಾ ಅಡಗಿಸಿ ಓದುವಂತಾಗಿದೆ. ಇದು ನಮ್ಮ ಸ್ನೇಹಕ್ಕೂ ಮುಳುವಾಗಬಹುದು ಎಂದೆನಿಸುತ್ತಿದೆ. ಈ ಸ್ನೇಹಿತನನ್ನು ಹೇಗೆ ನಿಭಾಯಿಸಬೇಕು?**

– ರವಿ ಅವರೇ, ಪುಸ್ತಕ ಪ್ರೇಮಿಗಳಿಗೆ ತಮ್ಮ ಪುಸ್ತಕಗಳು ಮಕ್ಕಳಿದ್ದಂತೆ. ಅವುಗಳ ಮೇಲೆ ಸಣ್ಣ ಕಲೆಯಾದರೂ ಅಥವಾ ಹಾಳೆ ಮಡಚಿದರೂ ಮನಸ್ಸಿಗೆ ತುಂಬಾ ನೋವಾಗುವುದು ಸಹಜ. ನಿಮ್ಮ ಸ್ನೇಹಿತನಿಗೆ ಪುಸ್ತಕಗಳ ಮೇಲೆ ಪ್ರೀತಿ ಇರಬಹುದು, ಆದರೆ ಅವುಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುವ ಸಂಸ್ಕಾರ ಅಥವಾ ಬೇರೆಯವರ ವಸ್ತುವನ್ನು ಜವಾಬ್ದಾರಿಯಿಂದ ನೋಡಿಕೊಳ್ಳುವ ಜ್ಞಾನದ ಕೊರತೆ ಇರುವುದು ಎದ್ದು ಕಾಣುತ್ತಿದೆ. ಈ ಸಮಸ್ಯೆಯನ್ನು ಸ್ನೇಹಕ್ಕೆ ಧಕ್ಕೆಯಾಗದಂತೆ ನಿಭಾಯಿಸಬಹುದು.

ನಿಮ್ಮ ಸ್ನೇಹಿತ ಪುಸ್ತಕ ಕೇಳಿದಾಗ ಮುಜುಗರ ಬಿಟ್ಟು ನೇರವಾಗಿ ವಿಷಯ ತಿಳಿಸಿ. 'ನೋಡು, ಈ ಪುಸ್ತಕಗಳನ್ನು ನಾನು ತುಂಬಾ ಪ್ರೀತಿಯಿಂದ ಸಂಗ್ರಹಿಸಿದ್ದೇನೆ. ನಿನಗೆ ಓದಲು ಕೊಡಲು ನನಗೆ ಸಂತೋಷವೇ. ಆದರೆ ಈ ಹಿಂದಿನ ಪುಸ್ತಕಗಳು ಸ್ವಲ್ಪ ಕೊಳೆಯಾಗಿದ್ದವು ಅಥವಾ ಹಾಳೆ ಮಡಚಲಾಗಿತ್ತು. ಇದು ನನಗೆ ತುಂಬಾ ಬೇಸರ ತಂದಿದೆ. ಹೀಗಾಗಿ ಈ ಪುಸ್ತಕವನ್ನು ನೀನು ಮಗುವಿನಂತೆ ಜೋಪಾನವಾಗಿ ನೋಡಿಕೊಳ್ಳುವುದಾದರೆ ಮಾತ್ರ ತೆಗೆದುಕೊಂಡು ಹೋಗು' ಎಂದು ಸ್ಪಷ್ಟವಾಗಿ ಹೇಳಿ. ಪುಸ್ತಕ ಕೊಡುವಾಗಲೇ ಅವನಿಗೆ ಒಂದು 'ಬುಕ್ ಮಾರ್ಕ್' ಉಡುಗೊರೆಯಾಗಿ ಕೊಡಿ. 'ಪುಟಗಳನ್ನು ಮಡಚಬೇಡ, ಈ ಬುಕ್ ಮಾರ್ಕ್ ಬಳಸು. ಓದುವಾಗ ಕಾಫಿ-ಚಹಾದಿಂದ ದೂರ ಇಡು' ಎಂದು ನಗುನಗುತ್ತಲೇ ಸೂಚನೆ ನೀಡಿ. ಇದು ಅವನಿಗೆ ತನ್ನ ಜವಾಬ್ದಾರಿಯನ್ನು ನೆನಪಿಸುತ್ತದೆ.

ಹಳೆಯ ಪುಸ್ತಕ ವಾಪಸ್ ಮಾಡುವವರೆಗೂ ಹೊಸ ಪುಸ್ತಕವನ್ನು ಕೊಡಬೇಡಿ. ಅವನು ಹೊಸ ಪುಸ್ತಕ ಕೇಳಿದಾಗ, 'ಹಳೆಯ ಪುಸ್ತಕ ಏನಾಯ್ತು? ಅದು ವಾಪಸ್ ಬಂದ ಮೇಲೆ ಇದನ್ನು ತೆಗೆದುಕೊಂಡು ಹೋಗು' ಎಂದು ಹೇಳಿ. ಇದರಿಂದ ಕಳೆದುಹೋಗುವ ಭಯ ಇರುವುದಿಲ್ಲ. ಅವನ ಎದುರೇ ಒಂದು ಡೈರಿಯಲ್ಲಿ 'ಪುಸ್ತಕದ ಹೆಸರು – ಕೊಟ್ಟ ದಿನಾಂಕ' ಎಂದು ಬರೆದಿಟ್ಟುಕೊಳ್ಳಿ. 'ಯಾರ್ಯಾರಿಗೆ ಪುಸ್ತಕ ಕೊಟ್ಟಿದ್ದೇನೆ ಅಂತ ಮರೆತು ಹೋಗುತ್ತೆ, ಅದಕ್ಕೆ ಬರೆದಿಡ್ತೀನಿ' ಎಂದು ಹೇಳಿ. ಇದು ಅವನಿಗೆ ಪುಸ್ತಕವನ್ನು ವಾಪಸ್ ಮಾಡಲೇಬೇಕು ಎಂಬ ನೈತಿಕ ಒತ್ತಡ ಹೇರುತ್ತದೆ.

ಕದ್ದು ಮುಚ್ಚಿ ಓದುವುದು ನಿಮ್ಮ ನೆಮ್ಮದಿಯನ್ನು ಹಾಳುಮಾಡುತ್ತದೆ. ಬದಲಿಗೆ, ನಿಮಗೆ ಅತಿ ಪ್ರಿಯವಾದ ಅಥವಾ ದುಬಾರಿ ಪುಸ್ತಕಗಳನ್ನು 'ಇಲ್ಲ, ಇದು ಕಲೆಕ್ಷನ್ ಐಟಂ, ಇದನ್ನು ನಾನು ಯಾರಿಗೂ ಕೊಡಲ್ಲ' ಎಂದು ನೇರವಾದ ನಿರಾಕರಣೆಯ ಮೂಲಕ ರಕ್ಷಿಸಿಕೊಳ್ಳಿ. ಅವನು ಹೊಸ ಪುಸ್ತಕ ಖರೀದಿಸುವುದಿಲ್ಲ ಎಂದ ಮೇಲೆ, ಅವನಿಗೆ ಯಾವುದಾದರೂ ಹತ್ತಿರದ ಲೈಬ್ರರಿ ಮೆಂಬರ್ ಶಿಪ್ ತೆಗೆದುಕೊಳ್ಳಲು ಪ್ರೇರೇಪಿಸಿ ಅಥವಾ ಇ-ಬುಕ್ಸ್ ಬಗ್ಗೆ ತಿಳಿಸಿ. ಸುದೀರ್ಘ ಸ್ನೇಹ ಇರುವಾಗ, ಪುಸ್ತಕದ ವಿಷಯದಲ್ಲಿ ಸಣ್ಣ ಮನಸ್ತಾಪ ಮಾಡಿಕೊಳ್ಳುವುದು ಬೇಡ. ಆದರೆ, ಅವನಿಗೆ ನಿಮ್ಮ ಭಾವನೆಗಳನ್ನು ಅರ್ಥ ಮಾಡಿಸುವುದು ಕೂಡ ನಿಮ್ಮದೇ ಜವಾಬ್ದಾರಿ. ನಿಜವಾದ ಸ್ನೇಹಿತ ನಿಮ್ಮ ಈ ಕಾಳಜಿಯನ್ನು ಖಂಡಿತವಾಗಿ ಗೌರವಿಸುತ್ತಾನೆ.

ವಿಕಾಸ ಪಟೇಲ್, (ಮೂಲಕ)

- **ಸಂಪಾದಕರೇ, ನಾನು ಕಳೆದ ಮೂರು ವರ್ಷಗಳಿಂದ ಇಪ್ಪತ್ತೆಂಟು ವಾಟ್ಸಾಪ್ ಗ್ರುಪ್‌ಗಳಿಗೆ ಅಡ್ಮಿನ್ ಆಗಿದ್ದೇನೆ. ಫೇಸ್‌ಬುಕ್ ಪೇಜ್‌ಗಳನ್ನೂ ನಿರ್ವಹಿಸುತ್ತಿದ್ದೇನೆ. ಇತ್ತೀಚೆಗೆ ದಿನದಲ್ಲಿ ಎರಡು-ಮೂರು ಗಂಟೆ ಜಂಕ್ ಮೆಸೇಜುಗಳನ್ನು ಓದುವುದರಲ್ಲಿಯೇ ಕಳೆದು ಹೋಗುತ್ತಿದೆ. ಈ ಗ್ರುಪ್ ಮತ್ತು ಪೇಜ್‌ಗಳನ್ನು ಡಿಲೀಟ್ ಮಾಡಬೇಕು ಎಂದು ಕೆಲವೊಮ್ಮೆ ಅನಿಸಿದ್ದುಂಟು. ಆದರೆ ನಾನೇ ಅಡ್ಮಿನ್ ಆಗಿ ಡಿಲೀಟ್ ಮಾಡುವುದು ಸರಿ ಅಲ್ಲ ಎಂದು ಮನಸ್ಸಿಲ್ಲದ ಮನಸ್ಸಿನಿಂದ ಸುಮ್ಮನಿದ್ದೇನೆ. ನನಗೆ ನಿಮ್ಮ ಸಲಹೆ, ಮಾರ್ಗದರ್ಶನ ಬೇಕು.**

– ವಿಕಾಸ ಅವರೇ, ಅಬ್ಬಬ್ಬಾ... ಇಪ್ಪತ್ತೆಂಟು ಗ್ರುಪ್‌ಗಳಿಗೆ ಅಡ್ಮಿನ್ ಅಂದರೆ, ನೀವು ಒಂದು ಪುಟ್ಟ ದೇಶದ ಪ್ರಧಾನಮಂತ್ರಿಯೇ ಸರಿ! 28 ರಾಜ್ಯಗಳ ಮುಖ್ಯಮಂತ್ರಿಗಳಿಗೂ ಇರದಷ್ಟು ತಲೆನೋವು ನಿಮ್ಮದಾಗಿದೆ. ದಿನಕ್ಕೆ ಎರಡು-ಮೂರು ಗಂಟೆ 'ಜಂಕ್' ಓದುವುದು ಎಂದರೆ, ನೀವು ವರ್ಷಕ್ಕೆ ಸುಮಾರು 45 ದಿನಗಳನ್ನು ಬರಿ 'ಗುಡ್ ಮಾರ್ನಿಂಗ್' ಹೂವುಗಳು ಮತ್ತು 'ಇದನ್ನು ಹತ್ತು ಜನಕ್ಕೆ ಕಳಿಸಿ' ಎಂಬ ಉಸಾಬರಿಯಲ್ಲೇ ಕಳೆಯುತ್ತಿದ್ದೀರಿ!

ಮೊದಲು ಈ 'ಅಡ್ಮಿನ್' ಪಟ್ಟಕ್ಕೆ ರಾಜೀನಾಮೆ ಕೊಡಿ. ಯಾರೋ ಅನಾಮಧೇಯ ವ್ಯಕ್ತಿ ಅಡ್ಮಿನ್ ಆಗಿ ಡಿಲೀಟ್ ಮಾಡಿದರೆ ಅಸಹ್ಯ. ನೀವೇ ಯಾಕೆ ಎಲ್ಲವನ್ನೂ ಹೊತ್ತುಕೊಳ್ಳಬೇಕು? ಗ್ರುಪ್‌ನಲ್ಲಿ ಅತ್ಯಂತ ಹೆಚ್ಚು ಆಕ್ಟಿವ್ ಇರುವ (ಅಂದರೆ ಹೆಚ್ಚು ಜಂಕ್ ಕಳಿಸುವ) ವ್ಯಕ್ತಿಯನ್ನೇ ಹಿಡಿದು ಅಡ್ಮಿನ್ ಮಾಡಿಬಿಡಿ. 'ನಿಮ್ಮ ಉತ್ಸಾಹ ನೋಡಿ ಖುಷಿಯಾಯ್ತು, ಇವತ್ತಿನಿಂದ ನೀವೇ ಅಡ್ಮಿನ್' ಎಂದು ಪಟ್ಟಾಭಿಷೇಕ ಮಾಡಿ ನೀವು 'ಎಕ್ಸಿಟ್' ಆಗಿಬಿಡಿ. ಅಡ್ಮಿನ್ ಪಟ್ಟ ಸಿಕ್ಕ ಖುಷಿಯಲ್ಲಿ ಅವರೂ ಸುಮ್ಮನಾಗುತ್ತಾರೆ, ನಿಮಗೂ ಮುಕ್ತಿ ಸಿಗುತ್ತದೆ!

ನಂತರ 'ಮೌನ ವ್ರತ' ಘೋಷಿಸಿ (Mute is Bliss). ಗ್ರುಪ್ ಡಿಲೀಟ್ ಮಾಡೋದು ಬೇಡ, ಆದರೆ ನೋಟಿಫಿಕೇಶನ್ ನಿಮ್ಮ ನೆಮ್ಮದಿ ಕೆಡಿಸುವುದು ಬೇಡ. ಎಲ್ಲ ಇಪ್ಪತ್ತೆಂಟು ಗ್ರುಪ್‌ಗಳನ್ನು Mute for Always ಮಾಡಿಬಿಡಿ. ಗ್ರುಪ್ ಇರುತ್ತದೆ, ನೀವೂ ಅಡ್ಮಿನ್ ಆಗಿರುತ್ತೀರಿ, ಆದರೆ ಅಲ್ಲಿ ಯಾರು ಕಚ್ಚಾಡಿದರೂ, ಯಾರು ಹೂವು ಅರಳಿದರೂ ನಿಮಗೆ ಸದ್ದು ಕೇಳಿಸುವುದಿಲ್ಲ. ವಾರಕ್ಕೊಮ್ಮೆ 'ಡಿಜಿಟಲ್ ಕಸ' ಗುಡಿಸಲು ಮಾತ್ರ ಆ ಕಡೆ ಹೋಗಿಬನ್ನಿ.

'ಗ್ರುಪ್ ಮರ್ಜರ್' ಆಫರ್ ಅಥವಾ ಗ್ರುಪ್ ವಿಲೀನ ಮಾಡಿ. ಬ್ಯಾಂಕುಗಳು ವಿಲೀನವಾದಂತೆ ನಿಮ್ಮ ಗ್ರುಪ್‌ಗಳನ್ನೂ ವಿಲೀನ ಮಾಡಿ. 'ಗ್ರುಪ್ ನ್ನು ಸದ್ಯದಲ್ಲೇ ಬಂದ್ ಮಾಡಲಾಗುವುದು, ಆಸಕ್ತಿ ಇರುವವರು ಈ ಕೆಳಗಿನ ಲಿಂಕ್ ಬಳಸಿ ಇನ್ನೊಂದು ಗ್ರುಪ್ ಸೇರಿ' ಎಂದು ಮೆಸೇಜ್ ಹಾಕಿ. ಇಪ್ಪತ್ತೆಂಟನ್ನು ಎಂಟಕ್ಕೆ ಇಳಿಸಿ. ಅರ್ಧ ಜನ ಅಲ್ಲಿಗೆ ಬರುವುದೇ ಇಲ್ಲ, ನಿಮ್ಮ ಕೆಲಸ ಅರ್ಧ ಹಗುರವಾಗುತ್ತದೆ.

ಕಠಿಣ 'ಡಯಟ್' ರೂಲ್ಸ್ ಹಾಕಿ. 'ಇನ್ನು ಮುಂದೆ ಈ ಗ್ರುಪ್‌ನಲ್ಲಿ ಕೇವಲ ಸಾಹಿತ್ಯ/ಸುದ್ದಿ ಮಾತ್ರ ಇರಬೇಕು. ಫಾರ್ವರ್ಡ್ ಮೆಸೇಜ್ ಹಾಕುವವರನ್ನು ದಯದಾಕ್ಷಿಣ್ಯವಿಲ್ಲದೇ ಕಿತ್ತು ಹಾಕಲಾಗುವುದು' ಎಂದು ಒಂದು ವಾರ್ನಿಂಗ್ ಕೊಡಿ. ಹತ್ತು ಜನ ತಾವಾಗಿಯೇ ಹೊರಗೆ ಹೋಗುತ್ತಾರೆ, ಹತ್ತು ಜನರನ್ನು ನೀವೇ ತೆಗೆದು ಹಾಕಬಹುದು. ಕೊನೆಗೆ ಉಳಿಯುವುದು ನಾಲ್ಕೇ ಜನ, ಅಲ್ಲಿ ಜಂಕ್ ಇರುವುದಿಲ್ಲ! ಹಾಗೆ ಫೇಸ್‌ಬುಕ್ ಪೇಜ್‌ಗೆ 'ವಿಶ್ರಾಂತಿ' ನೀಡಿ. ಪೇಜ್ ಡಿಲೀಟ್ ಮಾಡಬೇಡಿ, ಬದಲಿಗೆ 'ಈ ಪೇಜ್ ನಿರ್ವಾಹಕರು ಸ್ವಲ್ಪ ದಿನಗಳ ಕಾಲ ಹಿಮಾಲಯಕ್ಕೆ ಹೋಗಿದ್ದಾರೆ' ಎಂದು ಒಂದು ಪೋಸ್ಟ್ ಹಾಕಿ ಸುಮ್ಮನಾಗಿಬಿಡಿ. ಅಪ್ಪಿತಪ್ಪಿಯೂ ಅತ್ತ ಸುಳಿಯಬೇಡಿ.

ಕೊನೆಯದಾಗಿ ಒಂದು ಮಾತು. ನಿಮ್ಮ ಅಮೂಲ್ಯವಾದ ಎರಡು ಗಂಟೆಗಳನ್ನು ಜಂಕ್ ಮೆಸೇಜ್ ಓದುವ ಬದಲು, ನಿಮ್ಮ ಸಮಯವನ್ನು ಉಪಯುಕ್ತವಾಗಿ ಕಳೆಯಿರಿ. ನಿಮ್ಮ ಫೋನ್ ಮೆಮೊರಿಗಿಂತ ನಿಮ್ಮ ಮಿದುಳಿನ ನೆಮ್ಮದಿ ಮುಖ್ಯ. ಅಡ್ಮಿನ್ ಕೆಲಸ ಅನ್ನೋದು 'ಸಂಬಳವಿಲ್ಲದ ಜೀತ' ಇದ್ದ ಹಾಗೆ, ಅದರಿಂದ ಬಿಡುಗಡೆ ಹೊಂದಲು ಸಂಕೋಚ ಬೇಡ! ಇವತ್ತೇ ಕನಿಷ್ಠ ಐದು ಗ್ರುಪ್‌ಗಳಿಂದ 'ಅಡ್ಮಿನ್ ಎಕ್ಸಿಟ್' ಆಗಿ ನೋಡಿ, ಆ ಫೀಲಿಂಗೇ ಬೇರೆ!

ಅಪರೂಪದ ವಸ್ತುಗಳ ಪ್ರದರ್ಶನ!

» ಸುರೇಂದ್ರ ಪೈ ಭಟ್ಕಳ



ಭಗವಾನ್ ಬುದ್ಧನಿಗೆ ನೇರವಾಗಿ ಸಂಬಂಧಿಸಿದ ಕೆಲವು ವಸ್ತುಗಳು, ಮೂಳೆಯ ಚೂರುಗಳು ಮತ್ತು ಅಪರೂಪದ ಬ್ರಾಹ್ಮಿ ಲಿಪಿಯ ಶಾಸನವನ್ನು, ಬ್ರಿಟಿಷ್ ವ್ಯಕ್ತಿ ಪೆಪ್ಪೆ ಎಂಬಾತನು 1898ರಲ್ಲಿ ನಮ್ಮ ದೇಶದ ಒಂದು ಗ್ರಾಮದಲ್ಲಿದ್ದ ಸ್ತೂಪದಿಂದ ಅಗೆದು ತೆಗೆದು, ಇಂಗ್ಲೆಂಡಿಗೆ ಸಾಗಿಸಿದ್ದ. ಅದನ್ನು ಆತನ ವಂಶಸ್ತರು ಇತ್ತೀಚೆಗೆ ಹರಾಜು ಮಾಡಲು ನಿರ್ಧರಿಸಿದಾಗ, ಅದನ್ನು ತಡೆಯಲು ನಮ್ಮ ದೇಶ ಪ್ರಯತ್ನಿಸಿತ್ತು. ಈಗ ಆ ಅಮೂಲ್ಯ ವಸ್ತುಗಳನ್ನು, ಮುತ್ತು ರತ್ನಗಳನ್ನು ದೆಹಲಿಯಲ್ಲಿ ಸಾರ್ವಜನಿಕ ಪ್ರದರ್ಶನಕ್ಕೆ ಇರಿಸಲಾಗಿದೆ.

ಜನವರಿ 3 ರಂದು ನವದೆಹಲಿಯಲ್ಲಿ ಆಧ್ಯಾತ್ಮಿಕ ಶುದ್ಧತೆ ಮತ್ತು ಪರಿಪೂರ್ಣತೆ ಸಾರುವ 'ದಿ ಲೈಟ್ ದಿ ಲೋಟಸ್: ರೆಲಿಕ್ಸ್ ಆಫ್ ದಿ ಅವೇಕನ್ಡ್ ಒನ್' ('ಬೆಳಕು ಮತ್ತು ಕಮಲ : ಜ್ಞಾನೋದಯ ಪಡೆದವರ ಅವಶೇಷ') ಎಂಬ ಶೀರ್ಷಿಕೆಯಡಿಯಲ್ಲಿ ಭಗವಾನ್ ಬುದ್ಧನಿಗೆ ಸಂಬಂಧಿಸಿದ ಪವಿತ್ರ ಪಿಪ್ರಹ್ವಾ ಅವಶೇಷಗಳ ಅಂತಾರಾಷ್ಟ್ರೀಯ ಪ್ರದರ್ಶನವನ್ನು ಪ್ರಧಾನಮಂತ್ರಿಗಳು ಉದ್ಘಾಟಿಸಿದರು. 127 ವರ್ಷಗಳ ನಂತರ ಭಾರತಕ್ಕೆ ತರಲಾದ ಭಗವಾನ್ ಬುದ್ಧನ ಪಿಪ್ರಹ್ವಾ ರತ್ನದ ಅವಶೇಷಗಳ ಬಗ್ಗೆ ದೇಶಕ್ಕೆ ತಿಳಿಸುವ ಉದ್ದೇಶದಿಂದ ಈ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಒಂದು ಶತಮಾನಕ್ಕೂ ಹೆಚ್ಚು ಅವಧಿಯ (127 ವರ್ಷಗಳ ಬಳಿಕ) ಜುಲೈ 30, 2025ರಂದು ಸ್ವದೇಶಕ್ಕೆ ಮರಳಿ ತರಲಾದ ಪಿಪ್ರಹ್ವಾದ ಅಧಿಕೃತ ಅವಶೇಷಗಳು ಮತ್ತು ಪುರಾತತ್ತ್ವ ವಸ್ತುಗಳನ್ನು ಇದೇ ಮೊದಲ ಬಾರಿ ನಮ್ಮ ದೇಶದಲ್ಲಿ ಪ್ರದರ್ಶಿಸಲಾಗುತ್ತಿದೆ.

ಪಿಪ್ರಾಹ್ವಾ ಅವಶೇಷಗಳ ಮಹತ್ವ: 1898 ರಲ್ಲಿ ಪತ್ತೆಯಾದ ಪಿಪ್ರಾಹ್ವಾ ಅವಶೇಷಗಳು ಆರಂಭಿಕ ಬೌದ್ಧಧರ್ಮದ ಅಧ್ಯಯನದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿವೆ. ಇವು ಭಗವಾನ್ ಬುದ್ಧನಿಗೆ ನೇರವಾಗಿ ಸಂಬಂಧಿಸಿದ ಮತ್ತು ಅತ್ಯಂತ ಐತಿಹಾಸಿಕ ಮಹತ್ವದ ಅವಶೇಷಗಳು. ಭಗವಾನ್ ಬುದ್ಧನು ಅರಮನೆ ತ್ಯಜಿಸುವ ಮೊದಲು ತನ್ನ ಆರಂಭಿಕ ಜೀವನವನ್ನು ಕಳೆದ ಸ್ಥಳ ಎಂದು ವ್ಯಾಪಕವಾಗಿ ಗುರುತಿಸಲಾದ ಕಪಿಲವಸ್ತುವಿನೊಂದಿಗೆ ಪ್ರಾಚೀನ ಪಿಪ್ರಾಹ್ವಾಗಳನ್ನು ಪುರಾತತ್ತ್ವ ಶಾಸ್ತ್ರದ ಪುರಾವೆಗಳು ಸಂಯೋಜಿಸುತ್ತವೆ. ಸರ್ಕಾರದ ನಿರಂತರ ಪ್ರಯತ್ನ, ಸಾಂಸ್ಥಿಕ ಸಹಕಾರ ಮತ್ತು ನವೀನ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಮೂಲಕ ಇತ್ತೀಚೆಗೆ ಈ ಅವಶೇಷಗಳನ್ನು ತವರಿಗೆ ಮರಳಿ ತರಲು ಸಾಧ್ಯವಾಗಿದೆ.

ಈ ಪ್ರದರ್ಶನವನ್ನು ವಿಷಯಾಧಾರಿತವಾಗಿ ಆಯೋಜಿಸಲಾಗಿದೆ. ಸಾಂಚಿ ಸ್ತೂಪದಿಂದ ಪ್ರೇರಣೆ ಪಡೆದು ಪುನರ್ ನಿರ್ಮಿಸಲಾದ ಹಾಗೂ ರಾಷ್ಟ್ರೀಯ ಸಂಗ್ರಹಗಳಿಂದ ಅಧಿಕೃತ ಅವಶೇಷಗಳು ಮತ್ತು ಸ್ವದೇಶಕ್ಕೆ ಮರಳಿ ತಂದ ರತ್ನಗಳನ್ನು ಒಟ್ಟುಗೂಡಿಸಿದ ನಿರೂಪಣಾ ಮಾದರಿಯನ್ನು ಪ್ರದರ್ಶನದ ಮಧ್ಯಭಾಗದಲ್ಲಿ ನೋಡಬಹುದು. ಪಿಪ್ರಾಹ್ವಾ ರಿವಿಸಿಟೆಡ್ (ಮರಳಿ ತಂದ ಅವಶೇಷ), ವಿಗ್ನೆಟ್ಸ್ ಆಫ್ ದಿ ಲೈಫ್ ಆಫ್ ಬುದ್ಧ (ಬುದ್ಧನ ಜೀವನ ಪಯಣ), ಇಂಟ್ಯಾಂಜಿಬಲ್ ಇನ್ ದಿ ಟಾಂಜಿಬಲ್: ದಿ ಏಸ್ಥೆಟಿಕ್ ಲ್ಯಾಂಗ್ವೇಜ್ ಆಫ್ ಬುದ್ದಿಸ್ಟ್ ಟೀಚಿಂಗ್ಸ್ (ಅಮೂರ್ತದಲ್ಲಿ ವಾಸ್ತವ: ಬುದ್ಧನ ಬೋಧನೆಗಳ ಸೌಂದರ್ಯ), ಎಕ್ಸ್‌ಪ್ಯಾನ್ಶನ್ ಆಫ್ ಬುದ್ದಿಸ್ಟ್ ಆರ್ಟ್ ಅಂಡ್ ಐಡಿಯಲ್ಸ್ ಬಿಯಾಂಡ್ ಬಾರ್ಡರ್ಸ್ (ಎಲ್ಲೆ ಮೀರಿ ಬೌದ್ಧ ಕಲೆ ಮತ್ತು ಆದರ್ಶಗಳ ವಿಸ್ತರಣೆ) ಹಾಗೂ ರಿಪ್ಯಾಟ್ರಿಯೇಶನ್ ಆಫ್ ಕಲ್ಚರಲ್ ಆರ್ಟಿಫ್ಯಾಕ್ಟ್ಸ್: ದಿ ಕಂಟಿನ್ಯೂಯಿಂಗ್ ಎಂಡೀವರ್ (ಸಾಂಸ್ಕೃತಿಕ ಕರಕುಶಲತಾ ವಸ್ತುಗಳು ತವರಿಗೆ ವಾಪಸ್ ಮುಂದುವರಿದ ಪ್ರಯತ್ನ) ಇತರ ವಿಭಾಗಗಳಾಗಿವೆ.

ಈ ಪ್ರದರ್ಶನದಲ್ಲಿ ಸಮಗ್ರ, ಶ್ರವ್ಯ-ದೃಶ್ಯ ವಿವರಣೆಯೂ ಇದೆ ಮತ್ತು ಇವು ಭಗವಾನ್ ಬುದ್ಧನ ಜೀವನ, ಪಿಪ್ರಾಹ್ವಾ ಅವಶೇಷಗಳ ಆವಿಷ್ಕಾರ, ವಿವಿಧ ಪ್ರದೇಶಗಳಲ್ಲಿ ಅವುಗಳ ಚಲನೆ ಮತ್ತು ಅವುಗಳಿಗೆ ಸಂಬಂಧಿಸಿದ ಕಲಾತ್ಮಕ ಸಂಪ್ರದಾಯಗಳ ಬಗ್ಗೆ ಆಳವಾದ ಮಾಹಿತಿಯನ್ನು ಒದಗಿಸುತ್ತವೆ.



ಏನಿದು ಪಿಪ್ರಾಹ್ವಾ ರತ್ನ?: ಈ ಅವಶೇಷಗಳಲ್ಲಿ 349 ರತ್ನಗಳ ಸಂಗ್ರಹವೂ ಸೇರಿದೆ. ಇವುಗಳನ್ನು 1898ರಲ್ಲಿ ಇಂಗ್ಲೆಂಡಿನ ಎಸ್ಟೇಟ್ ಮ್ಯಾನೇಜರ್ ವಿಲಿಯಂ ಕ್ಲಾಕ್ಸ್ಟನ್ ಪೆಪ್ಪೆ ಎಂಬಾತನು ಭಾರತ-ನೇಪಾಳದ ಗಡಿಯ ಬಳಿ ಉತ್ತರ ಪ್ರದೇಶ ಸಿದ್ಧಾರ್ಥನಗರ ಜಿಲ್ಲೆಯ ಪಿಪ್ರಾಹ್ವಾ ಎಂಬ ಹಳ್ಳಿಯಲ್ಲಿರುವ ಬೌದ್ಧ ಸ್ತೂಪದಿಂದ ಸಂಗ್ರಹಿಸಿದ. ಪೆಪ್ಪೆ 1852ರಲ್ಲಿ ಭಾರತದಲ್ಲಿ ಜನಿಸಿದ. ಅವನ ತಂದೆ ಉತ್ತರ ಭಾರತದಲ್ಲಿ ಎಸ್ಟೇಟ್ ಮ್ಯಾನೇಜರ್ ಆಗಿದ್ದರು. 1897ರಲ್ಲಿ ಪೆಪ್ಪೆ ಪಿಪ್ರಾಹ್ವಾ ಗ್ರಾಮದ ಬಳಿ ಕಂಡುಬಂದ ಸ್ತೂಪದಲ್ಲಿ ಉತ್ಖನನ ಕೆಲಸ ಆರಂಭಿಸಿದ. 18 ಅಡಿ ಅಗೆದಾಗ ಅವರಿಗೆ ದೊಡ್ಡ ಕಲ್ಲಿನ ಚಪ್ಪಡಿ ಸಿಕ್ಕಿತು. ಅದರ ಅಡಿಯಲ್ಲಿ ಐದು ಲೋಹದ ಪಾತ್ರೆಗಳಿದ್ದವು. ಅದರಲ್ಲಿ ಬೆಳ್ಳಿ ಮತ್ತು ಚಿನ್ನದ ನಕ್ಷತ್ರಗಳ ಗುರುತಿತ್ತು. ಬೌದ್ಧ ಚಿಹ್ನೆಗಳನ್ನು ಕೆತ್ತಿದ ಚಿನ್ನದ ಎಲೆಯ ಡಿಸ್ಕ್‌ಗಳು, ಹಲವಾರು ಮುತ್ತುಗಳು, ಮಣಿಗಳು, ರತ್ನಗಳು, ನೀಲಮಣಿ, ಹವಳ ಮತ್ತು ಸ್ಫಟಿಕಗಳಿದ್ದವು. ಪಾತ್ರೆಗಳ ಒಳಗೆ ಮೂಳೆ ಮತ್ತು ಬೂದಿಯ ಸಣ್ಣ ತುಂಡುಗಳು ಸಹ ಕಂಡುಬಂದಿತ್ತು. ಇವುಗಳಲ್ಲಿ ಚಿನ್ನಾಭರಣ, ರತ್ನಗಳು ಸೇರಿವೆ. ಬ್ರಾಹ್ಮಿ ಲಿಪಿಯಲ್ಲಿ ಬರೆದಿದ್ದ ಅಕ್ಷರಗಳೂ ಇದ್ದವು. ಸುಮಾರು ಕ್ರಿಪೂ 6ನೆಯ ಶತಮಾನದ ಆ ಬರಹದಲ್ಲಿ, ಅಲ್ಲಿರುವ ಮೂಳೆಯ ಚೂರುಗಳು ಭಗವಾನ್ ಬುದ್ಧನದ್ದು ಎಂದು ಖಚಿತಪಡಿಸಿವೆ. ಬುದ್ಧನ ವಂಶದವರೇ ಆದ ಶಾಕ್ಯರು, ಆ ಸ್ತೂಪವನ್ನು ನಿರ್ಮಿಸಿ, ಅಲ್ಲಿ ಬುದ್ಧನ ದೇಹದ ಅವಶೇಷ ಮತ್ತು ಬೆಲೆಬಾಳುವ ಮುತ್ತು ರತ್ನಗಳನ್ನು ಇರಿಸಿದ್ದರು.



ಸರಕಾರದ ವಶಕ್ಕೆ!: ಪೆಪ್ಪೆ ಎಂಬಾತನು ಖಾಸಗಿಯಾಗಿ ಉತ್ಖನನ ನಡೆಸಿ, ಪತ್ತೆ ಹಚ್ಚಿದ್ದ ಈ ಅವಶೇಷಗಳನ್ನು 1878ರಲ್ಲಿ ಭಾರತೀಯ ನಿಧಿ ಕಾಯ್ದೆಯಡಿಯಲ್ಲಿ ಬ್ರಿಟಿಷ್ ಸರಕಾರ ತಮ್ಮದಾಗಿಸಿಕೊಂಡಿತ್ತು. ಸುಮಾರು 1,800 ಮುತ್ತುಗಳು, ಮಾಣಿಕ್ಯ, ನೀಲಮಣಿಗಳು (ಇಂದ್ರ ನೀಲಮಣಿ), ಚಿನ್ನದ ಹಾಳೆಗಳನ್ನು ಒಳಗೊಂಡಿರುವ ಅಮೂಲ್ಯ ಲೋಹಗಳು ಕೋಲ್ಕತ್ತಾದಲ್ಲಿರುವ ಭಾರತೀಯ ವಸ್ತುಸಂಗ್ರಹಾಲಯದಲ್ಲಿ ಪ್ರದರ್ಶನಕ್ಕೆ ಇರಿಸಲ್ಪಟ್ಟವು. ಮುಖ್ಯ ಸಂಗ್ರಹದ ನಕಲುಗಳನ್ನು ಒಳ ಗೊಂಡಂತೆ ಪತ್ತೆಯಾದ ವಸ್ತುಗಳ ಐದನೇ ಒಂದು ಭಾಗವನ್ನು ಪೆಪ್ಪೆಯು ತನ್ನಲ್ಲೇ ಇರಿಸಿಕೊಂಡಿದ್ದ.

ಈ ರತ್ನಗಳನ್ನು ಪೆಪ್ಪೆ ಕುಟುಂಬ ತಲೆಮಾರುಗಳಿಂದ ತಮ್ಮಲ್ಲೇ ಇರಿಸಿಕೊಂಡು ಬಂದಿದ್ದು 2013ರಲ್ಲಿ ಇದನ್ನು ಹರಾಜಿಗೆ ಇಟ್ಟಿದ್ದರು. ಕಳೆದ ಮೇ ತಿಂಗಳಲ್ಲಿ ಸೋಥೆಬಿಸ್ ಹಾಂಗ್ ಕಾಂಗ್ ನಲ್ಲಿ ರತ್ನಗಳನ್ನು ಹರಾಜಿಗಿಡಲಾಗಿತ್ತು. ಇದರ ಮಾರಾಟ ಬೆಲೆ 100 ಮಿಲಿಯನ್‌ಗಿಂತಲೂ ಹೆಚ್ಚು ಎಂದು ಅಂದಾಜಿಸಲಾಗಿತ್ತು. ಭಗವಾನ್ ಬುದ್ಧನದ್ದು ಎಂದು ನಂಬಲಾದ ಮೂಳೆಯ ತುಣುಕುಗಳು, ಬೂದಿ ಕೂಡ ಈ ಸಂಗ್ರಹದ ಭಾಗವಾಗಿದೆ. ಬ್ರಿಟಿಷರ ಅಂದಿನ ವೈಸ್‌ರಾಯ್ ಎಲ್ಜಿನ್ ಇವುಗಳನ್ನು ಸಿಯಾಮೀಸ್ ರಾಜ ರಾಮ ವಿ ಅವರಿಗೆ ಇದನ್ನು ದಾನ ಮಾಡಿದ್ದರು.

ಭಾರತ ಈ ಅವಶೇಷಗಳ ಮರಳಿ ಪಡೆದದ್ದು ಹೇಗೆ?: ಕಳೆದ ವರ್ಷದ ಮೇ ತಿಂಗಳಲ್ಲಿ ಹಾಂಗ್ ಕಾಂಗ್‌ನಲ್ಲಿ ಇವುಗಳನ್ನು ಹರಾಜು ಮಾಡಲು ದಿನಾಂಕ ನಿರ್ಧರಿಸಲಾಗಿತ್ತು. ಆದರೆ, ಇವು ಅಮೂಲ್ಯ ವಸ್ತುಗಳು ಎಂದು ಗುರುತಿಸಿದ ನಮ್ಮ ದೇಶದ ಸಂಸ್ಕೃತಿ ಸಚಿವಾಲಯ, ಮೇ 5, 2025ರಂದು ಸೋಥೆಬಿಸ್ ಮತ್ತು ಪೆಪ್ಪೆ ಕುಟುಂಬಕ್ಕೆ ಕಾನೂನು ನೋಟಿಸ್ ಕಳಿಸಿ, ಹರಾಜನ್ನು ತಕ್ಷಣ ನಿಲ್ಲಿಸಬೇಕು ಮತ್ತು ಅವಶೇಷಗಳನ್ನು ಭಾರತಕ್ಕೆ ಹಿಂದಿರುಗಿಸಬೇಕೆಂದು ಒತ್ತಾಯಿಸಿತ್ತು. ಭಾರತ ಮತ್ತು ಜಾಗತಿಕ ಬೌದ್ಧ ಸಮುದಾಯದ ಅಳಿಸಲಾಗದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಭಾಗವಾಗಿರುವ ಇವುಗಳನ್ನು ಹರಾಜು ಹಾಕಿದರೆ, ಭಾರತೀಯ ಮತ್ತು ಅಂತರರಾಷ್ಟ್ರೀಯ ಕಾನೂನುಗಳನ್ನು ಹಾಗೂ ವಿಶ್ವಸಂಸ್ಥೆಯ ಸಂಪ್ರದಾಯಗಳನ್ನು ಉಲ್ಲಂಘಿಸಿದಂತಾಗುದೆ ಎಂದು ಭಾರತ ಕಳುಹಿಸಿದ ನೋಟಿಸ್‌ನಲ್ಲಿ ಹೇಳಲಾಗಿತ್ತು

ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಹಾಂಗ್ ಕಾಂಗ್‌ನ ಕಾನ್ಸುಲೇಟ್ ಜನರಲ್ ಅವರಲ್ಲಿ ಹರಾಜನ್ನು ತಕ್ಷಣವೇ ನಿಲ್ಲಿಸುವಂತೆ ವಿನಂತಿಸಿತು. ಹರಾಜನ್ನು ಸ್ಥಗಿತಗೊಳಿಸಿದಾಗ, ಪಿಪ್ರಾಹ್ವಾ ರತ್ನಗಳ ಮೇಲಿನ ತನ್ನ ಹಕ್ಕುಗಳ ಕುರಿತು, ನಮ್ಮ ದೇಶವು ಹಿನ್ನಡೆ ಅನುಭವಿಸಬೇಕಾಗಿ ಬಂತು. ಏಕೆಂದರೆ ಪೆಪ್ಪೆ ಎಂಬಾತನು, ಬ್ರಿಟಿಷ್ ಸರ್ಕಾರ ನೀಡಿದ್ದ ಜಮೀನಿನಲ್ಲಿ ಈ ಅವಶೇಷಗಳನ್ನು ಸಂಗ್ರಹಿಸಿದ್ದನು ಎಂದು ಅವರು ವಾದಿಸಿದರು. ಇದಲ್ಲದೆ ಈ ಕುರಿತು ನಮ್ಮ ದೇಶವು 1972ರಲ್ಲಿ ಹೊರಡಿಸಿದ ಕಾನೂನು ಜಾರಿಗೆ ಬರುವ ಮೊದಲೇ ರತ್ನಗಳನ್ನು ಭಾರತದಿಂದ ಹೊರಗೆ ಕೊಂಡೊಯ್ಯಲಾಗಿತ್ತು ಎಂದು ವಾದಿಸಿದರು. ಕೊನೆಗೆ ಭಾರತೀಯ ಕೈಗಾರಿಕೋದ್ಯಮಿ ಪಿರೋಜ್‌ಶಾ ಗೋದ್ರೇಜ್ ಕೂಡ 349 ರತ್ನಗಳ ಸಂಪೂರ್ಣ ಸಂಗ್ರಹವನ್ನು ದೊಡ್ಡ ಮೊತ್ತಕ್ಕೆ ಖರೀದಿಸಿದರು. ಗೋದ್ರೇಜ್ ಸಂಗ್ರಹದ ದೊಡ್ಡ ಭಾಗವನ್ನು ಐದು ವರ್ಷಗಳ ಅವಧಿಗೆ ರಾಷ್ಟ್ರೀಯ ವಸ್ತುಸಂಗ್ರಹಾಲಯಕ್ಕೆ ಸಾಲವಾಗಿ ನೀಡಲು ಮತ್ತು ಅದು ಭಾರತಕ್ಕೆ ಬಂದ ನಂತರ ಮೂರು ತಿಂಗಳ ಕಾಲ ಸಂಪೂರ್ಣ ಸಂಗ್ರಹವನ್ನು ಪ್ರದರ್ಶಿಸಲು ಒಪ್ಪಿಕೊಂಡಿದ್ದಾರೆ.

ಪಿಪ್ರಹ್ವಾ ಗ್ರಾಮದಲ್ಲಿರುವ ಪುರಾತನ ಸ್ತೂಪವನ್ನು ಅಗೆದು, ಅದರಲ್ಲಿರುವ ವಸ್ತುಗಳನ್ನು ಸಂಗ್ರಹಿಸಿದ ಪ್ರಕ್ರಿಯೆಯೇ ಅಮಾನವೀಯ; ಜತೆಗೆ, ಅಲ್ಲಿದ್ದದ್ದು ಭಗವಾನ್ ಬುದ್ಧನಿಗೆ ನೇರವಾಗಿ ಸಂಬಂಧಿಸಿದ ವಸ್ತುಗಳು, ಆತನ ದೇಹದ ಅವಶೇಷಗಳು. ಅವುಗಳನ್ನು ಪಡೆಯಲು ನಮ್ಮ ದೇಶಕ್ಕೆ ನೈತಿಕ ಹಕ್ಕು ಇದೆ ಎಂದೇ ತಿಳಿಯಲಾಗಿದೆ. ಕಳೆದ ವಾರ ಈ ಅಮೂಲ್ಯ ಅವಶೇಷಗಳನ್ನು ಪ್ರದರ್ಶಿಸುವ ಮೂಲಕ, ಬೌದ್ಧ ಪರಂಪರೆಗೆ ನಮ್ಮ ಸರಕಾರವು ಅಪರೂಪದ ಗೌರವವನ್ನು ತೋರಿದಂತಾಗಿದೆ. ಪಿಪ್ರಾಹ್ವಾ ಅವಶೇಷಗಳನ್ನು ಪುನಃ ಭಾರತಕ್ಕೆ ತಂದಿರುವುದು ಒಂದು ಮಹತ್ವದ ಸಾಧನೆ ಎಂದು ಸಂಸ್ಕೃತಿ ಸಚಿವಾಲಯ ತಿಳಿಸಿದೆ. ಈ ಅಪರೂಪದ ಅವಶೇಷಗಳ ಪ್ರದರ್ಶನವು ಜನವರಿ 4ರಿಂದ ದೆಹಲಿಯಲ್ಲಿ ಸಾರ್ವಜನಿಕ ವೀಕ್ಷಣೆಗೆ ಮುಕ್ತವಾಗಿದೆ.

ಅಪರೂಪದ ಬೌದ್ಧ ಅವಶೇಷಗಳು

ಈ ಪ್ರದರ್ಶನವು ಶಿಲ್ಪಗಳು, ಹಸ್ತಪ್ರತಿಗಳು, ಥಂಗ್ಕಾಗಳು ಮತ್ತು ಧಾರ್ಮಿಕ ವಸ್ತುಗಳು ಸೇರಿದಂತೆ ಕ್ರಿ.ಪೂ.6ನೇ ಶತಮಾನದಿಂದ ಇತ್ತೀಚಿನ ತನಕದ, ಬೌದ್ಧ ಧರ್ಮಕ್ಕೆ ಸೇರಿದ 80ಕ್ಕೂ ಹೆಚ್ಚು ವಸ್ತುಗಳನ್ನು ಒಳಗೊಂಡಿದೆ. ಇದರಲ್ಲಿ 1898ರ ಕಪಿಲವಸ್ತು ಉತ್ಖನನದ ಅವಶೇಷಗಳು, 1972ರ ಉತ್ಖನನದ ನಿಧಿಗಳು, ಕೋಲ್ಕತ್ತಾದ ಇಂಡಿಯನ್ ಮ್ಯೂಸಿಯಂನಲ್ಲಿದ್ದ ಅವಶೇಷಗಳು, ಆಭರಣ ಸಂಪತ್ತುಗಳು, ಪೆಪ್ಪೆ ಕುಟುಂಬ ಸಂಗ್ರಹದಿಂದ ಇತ್ತೀಚೆಗೆ ವಾಪಸ್ ಪಡೆದ ಅವಶೇಷಗಳು, ರತ್ನದ ಅವಶೇಷಗಳು ಇವೆ.